"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

16ನೇ ಮಾರ್ಚ್ 2021
ಮಂಗಳವಾರ

## ವಿಷಯಾನುಕ್ರಮಣಿಕೆ

**1.ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1195 – ಬೆಂಗಳೂರು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದ ಖರ್ಚು ವೆಚ್ಚಗಳ ಬಗ್ಗೆ.**
– ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ
– ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)(ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರ ಪರವಾಗಿ)

**1413– ಚಪ್ಪಡಿ ಕಲ್ಲುಗಳನ್ನು ಹೊಡೆದು ಜೀವನ ನಡೆಸುತ್ತಿರುವ ಬಗ್ಗೆ.**
– ಶ್ರೀ ಗೋವಿಂದ ರಾಜು
– ಶ್ರೀ ಮುರುಗೇಶ್ ಆರ್.ನಿರಾಣಿ(ಗಣಿ ಮತ್ತು ಭೂ ವಿಜ್ಞಾನ ಸಚಿವರು)

**1224 – ಗಣಿಯಿಂದ ಸಂಗ್ರಹವಾದ ಅಭಿವೃದ್ಧಿ ನಿಧಿ ಬಳಕೆ ಮಾಡುವ ಬಗ್ಗೆ**
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಮುರುಗೇಶ್ ಆರ್.ನಿರಾಣಿ(ಗಣಿ ಮತ್ತು ಭೂ ವಿಜ್ಞಾನ ಸಚಿವರು)

**1377 – ಬೀದರ್ ಜಿಲ್ಲೆಯ ಕೈಗಾರಿಕಾ ಪ್ರದೇಶದಲ್ಲಿ ಮಹಿಳೆಯರಿಗಾಗಿ ಮೀಸಲಿಟ್ಟ ನಿವೇಶನಗಳ ಬಗ್ಗೆ.**
– ಶ್ರೀ ಅರವಿಂದ ಕುಮಾರ್ ಅರಳಿ
– ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

**1368 – ಕೊಡಗು ಜಿಲ್ಲೆಯ ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿನ ಮಳೆಹಾನಿ ಕಾಮಗಾರಿಗಳ ಬಗ್ಗೆ.**
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ
– ಶ್ರೀ ಎನ್.ನಾಗರಾಜ (ಎಂ.ಟಿ.ಬಿ)(ಪೌರಾಡಳಿತ ಹಾಗೂ ಸಕ್ಕರೆ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1395 – ಗದಗ–ಬೆಟಗೇರಿ ನಗರಕ್ಕೆ 24x7 ಕುಡಿಯುವ ನೀರಿನ ಸರಬರಾಜು ಬಗ್ಗೆ.**
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**1213 – ಪೌರಾಡಳಿತ ಇಲಾಖೆಯಡಿಯಲ್ಲಿ ಬರುವ ಸ್ಥಳೀಯ ಸಂಸ್ಥೆಗಳ ವಿವರದ ಬಗ್ಗೆ.**
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಎನ್.ನಾಗರಾಜ (ಎಂ.ಟಿ.ಬಿ)(ಪೌರಾಡಳಿತ ಹಾಗೂ ಸಕ್ಕರೆ ಸಚಿವರು)

**1196 – ಕರ್ನಾಟಕ ರಾಜ್ಯದ ನಗರಗಳ ವರ್ಗೀಕರಣ ಬಗ್ಗೆ ಮಾಹಿತಿ ಕೋರಿ**
- ಶ್ರೀ ಎಸ್.ರುದ್ರೇಗೌಡ
- ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**1222 – ಟೊಯೋಟೊ ಕಿರ್ಲೋಸ್ಕರ್ ಕಾರ್ಖಾನೆಯ ಬಗ್ಗೆ**
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

**1387 – ಸಹಕಾರ ಸಂಘಗಳ ಸದಸ್ಯತ್ವ ಅಭಿಯಾನದ ಬಗ್ಗೆ.**
- ಶ್ರೀ ಮರಿತಿಬ್ಬೇಗೌಡ
- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**ಅ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ**

**ಅ) ಮೈಸೂರು ಸಮಾರಂಭವೊಂದರಲ್ಲಿ ಹಿರಿಯ ಸಾಹಿತಿ ಶ್ರೀ ಎಸ್.ಎಲ್.ಭೈರಪ್ಪನವರು ತಿಗಳ(ವಹ್ನಿಕುಲ) ಸಮುದಾಯದ ಆರಾಧ್ಯ ದೇವತೆ ದ್ರೌಪದಿಯ ಕುರಿತು ಮಾತನಾಡಿರುವರೆನ್ನಲಾದ ಅವಹೇಳನಕಾರಿ ಮಾತುಗಳ ಬಗ್ಗೆ.**
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರ ಪರವಾಗಿ)

**ಆ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಕಾಲುವೆಗೆ ಘನತ್ಯಾಜ್ಯಗಳನ್ನು ಬಿಸಾಡಿ ಕಾಲುವೆ ಕಲುಷಿತಗೊಳ್ಳುತ್ತಿರುವ ಬಗ್ಗೆ.**
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪ್ರಾರಂಭಿಸಿದ ನಾಗರಿಕ ಸಹಾಯವಾಣಿ ಕೇಂದ್ರವನ್ನು ಸ್ಥಗಿತಗೊಳಿಸದೆ ಜನಸಾಮಾನ್ಯರ ಹಿತದೃಷ್ಟಿಯಿಂದ ಮುಂದುವರೆಸುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

**3.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸರ್ಕಾರದಿಂದ ಉತ್ತರ ನೀಡದಿರುವ ಬಗ್ಗೆ.**

– ಶ್ರೀ ಪಿ.ಆರ್.ರಮೇಶ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
– ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ

**4.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ಕಾಸರಗೋಡಿನಲ್ಲಿ ಕನ್ನಡ ಉಳಿವಿಗಾಗಿ ಅನುದಾನ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲು ಕೋರಿಕೆ ಬಗ್ಗೆ.**

– ಶ್ರೀ ಕೆ.ಹರೀಶ್‌ಕುಮಾರ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ಮೈಸೂರು ನಗರದಲ್ಲಿ ಚಲನಚಿತ್ರಗಳ ಚಿತ್ರೀಕರಣಕ್ಕೆ ಸುಸಜ್ಜಿತ ಫಿಲಂಸಿಟಿ ಸ್ಥಾಪನೆ ಬಗ್ಗೆ**

– ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಳ ಮಾಡುವ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಕಲ್ಯಾಣ ಕರ್ನಾಟಕ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸೌಲಭ್ಯ ದೊರಕದೇ ಇರುವ ಬಗ್ಗೆ.**

– ಶ್ರೀ ವಿಜಯಸಿಂಗ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಉ) ಬಾಲ್ಯ ವಿವಾಹ ತಡೆಗಟ್ಟುವ ಬಗ್ಗೆ**

– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಊ) ಗ್ರಾಮೀಣ ಪ್ರದೇಶಗಳಲ್ಲಿ ಮೈಕ್ರೋ ಫೈನಾನ್ಸ್‌ಗಳು ದುಬಾರಿ ಬಡ್ಡಿ ವಿಧಿಸಿ, ಲೇವಾದೇವಿ ನಡೆಸುತ್ತಿರುವ ಬಗ್ಗೆ.**

– ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಋ) ಬೆಂಗಳೂರು ಮಹಾನಗರ ಪಾಲಿಕೆ ಕೆಆರ್‌ಐಡಿಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳುವ ಕಾಮಗಾರಿಗಳಲ್ಲಿ ಪಾರದರ್ಶಕತೆ ಕಾಯ್ದೆ ಉಲ್ಲಂಘನೆ ಆಗಿರುವ ಬಗ್ಗೆ.**

- ಶ್ರೀ ಪಿ.ಆರ್.ರಮೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**5.ವರದಿಯನ್ನೊಪ್ಪಿಸುವುದು**

**6. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ವಿಷಯ:- ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ಸರಹದ್ದಿನಲ್ಲಿ ಬರುವ ಹಿರೇನಾಗವಲ್ಲಿ ಗ್ರಾಮದ ಬಳಿ ಕಾನೂನು ಬಾಹಿರವಾಗಿ ನಡೆಯುತ್ತಿರುವ ಗಣಿಗಾರಿಕೆ ಬಗ್ಗೆ.**

- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ನಸೀರ್ ಅಹ್ಮದ್
- ಶ್ರೀ ಕೆ.ಹರೀಶ್ ಕುಮಾರ್
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಹೆಚ್.ಎಂ.ರಮೇಶ್ ಗೌಡ
- ಶ್ರೀ ಮುರುಗೇಶ್ ಆರ್.ನಿರಾಣಿ (ಗಣಿ ಮತ್ತು ಭೂವಿಜ್ಞಾನ ಸಚಿವರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಎನ್.ಅಪ್ಪಾಜಿಗೌಡ
- ಶ್ರಿ ಸುನೀಲ್ ವಲ್ಯಾಪುರೆ
- ಡಾ:ತೇಜಸ್ವಿನಿಗೌಡ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಎಸ್.ರವಿ

~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(402) 16.3.2021/10.40/ಎಂ.ಎಂ.-ಬಿ.ಎನ್.ಎಸ್.**

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, 16ನೇ ಮಾರ್ಚ್ 2021**

**ಸದನವು ವಿಧಾನಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 10 ಗಂಟೆ 42 ನಿಮಿಷಕ್ಕೆ ಸಮಾವೇಶಗೊಂಡಿತು.**

**ಉಪಸಭಾಪತಿ (ಶ್ರೀ ಎಂ.ಕೆ. ಪ್ರಾಣೇಶ್) ಅವರು**

**ಪೀಠದಲ್ಲಿ ಉಪಸ್ಥಿತರಿದ್ದರು**

"ತಿದ್ದುಪಡಿಯಾಗದ ... ಉಪಯೋಗಿಸಕೂಡದು"

**(402) 16.3.2021/10.40/ಎಂ.ಎಂ.–ಬಿ.ಎನ್.ಎಸ್.**

**ಉಪಸಭಾಪತಿಯವರು:–** ಈಗ ಪ್ರಶ್ನೋತ್ತರ ವೇಳೆ. ಮೊದಲಿಗೆ ಶ್ರೀ ಬಸವರಾಜ ಪಾಟೀಲ್ ಇಟಗಿಯವರು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಇಲ್ಲಿ ಇಲ್ಲ. ತಾವು ಹೇಳುತ್ತಿರುವುದು ನಿನ್ನೆಯದ್ದು. ಇವತ್ತಿನ ಪ್ರಶ್ನೆ ಬೇರೆ ಇದೆ.

**ಉಪಸಭಾಪತಿಯವರು:–** ಮಾನ್ಯ ಗೋವಿಂದರಾಜುರವರು.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಮಂತ್ರಿಗಳು ಇನ್ನೂ ಸದನಕ್ಕೆ ಬಂದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇನ್ನು ಐದು ನಿಮಿಷಗಳಲ್ಲಿ ಬರುತ್ತಾರೆ.

**ಉಪಸಭಾಪತಿಯವರು:–** ಈಗ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿಯವರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 1195**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:–** ಮಾನ್ಯ ಸಭಾಪತಿಯವರೇ, ನಿನ್ನೆ ಸರ್ಕಾರ 13ನೇ ಅಂತರಾಷ್ಟ್ರೀಯ ಚಲನಚಿತ್ರೋತ್ಸವ ಕಾರ್ಯಕ್ರಮವನ್ನು 'ಕೊರೋನಾ' ಕಾರಣಕ್ಕಾಗಿ ಮುಂದೂಡಿದ್ದಾರೆ. ಅದು ಸರ್ಕಾರದ ಒಳ್ಳೆಯ ನಿರ್ಧಾರವಾಗಿದೆ. ನಾನು ಈ ಅಂತರಾಷ್ಟ್ರೀಯ ಚಲನಚಿತ್ರೋತ್ಸವದ ಬಗ್ಗೆ ಪ್ರಶ್ನೆ ಕೇಳುವುದಕ್ಕೆ ಮುಖ್ಯವಾದ ಉದ್ದೇಶವೇನಂದರೆ, ನಾನು ಇಲ್ಲಿ ನಾಮನಿರ್ದೇಶನ ಹೊಂದಿದ ಸದಸ್ಯನಾಗಿರುವುದು ನಾನು ಸಿನಿಮಾ, ನಾಟಕ ಇದಕ್ಕೆಲ್ಲಾ ನನ್ನದೇ ಆದ ಸೇವೆ ಸಲ್ಲಿಸಿರುವುದರಿಂದ ಇಲ್ಲಿ ಸದಸ್ಯನಾಗಿದ್ದೇನೆ. ನಿಮಗೆಲ್ಲಾ ಗೊತ್ತಿರುವುದಿಲ್ಲ, ನಾನು ಮತ್ತು ನನ್ನ ಸ್ನೇಹಿತರು 'ಲಂಕೇಶ'ರ ಕೊನೆಯ ಸಿನಿಮಾ 'ಎಲ್ಲಿಂದಲೋ ಬಂದವರು' ಸಿನಿಮಾವನ್ನು produce ಮಾಡಿದ್ದೆವು. ಆ ಕಾರಣದಿಂದ ನನಗೆ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರು ಪರಿಚಯ. ಶ್ರೀ ಆಲನಹಳ್ಳಿ ಕೃಷ್ಣ ಮತ್ತು ಶ್ರೀ ದೇವನೂರ ಮಹಾದೇವ ಮತ್ತು ಶ್ರೀ ಲಂಕೇಶರವರು ನಾವೆಲ್ಲಾ ಸ್ನೇಹಿತರಿದ್ದಾಗ 'ಕುಪ್ಪೇಗಾಲ' ಎಂಬ ಒಂದು ಊರಿನಲ್ಲಿ ಶೂಟಿಂಗ್ ಮಾಡಬೇಕಾದರೆ 'ಸಿದ್ದರಾಮನಹುಂಡಿ' ಅದರ ಪಕ್ಕದ ಊರಾಗಿತ್ತು. ಅಲ್ಲಿಗೆ ಶ್ರೀ ಸಿದ್ದರಾಮಯ್ಯನವರು ಶೂಟಿಂಗ್ ನೋಡುವುದಕ್ಕೆ ಬಂದಾಗ ಅವರ ಪರಿಚಯವಾಯಿತು. 'ಎಲ್ಲಿಂದಲೋ ಬಂದವರು' ಸಿನಿಮಾದಲ್ಲಿ ಅವರು ಒಂದು ಸಣ್ಣ ಪಾತ್ರವನ್ನೂ ಸಹ ಮಾಡಿದ್ದರು. ಶ್ರೀ ಲಂಕೇಶರು ಅವಕಾಶ ಕೊಟ್ಟಿದ್ದರು. ನಾನು ಇಲ್ಲಿಗೆ nominate ಆಗಿರುವುದೂ ಅದೇ ಕಾರಣಕ್ಕಾಗಿ. ನಾನೊಬ್ಬ ಎಂ.ಎಲ್.ಸಿ., ಆಗಿದ್ದರೂ ಸಹ ಅದನ್ನು ತೋರಿಸಿಕೊಳ್ಳದೇ ಪ್ರತಿಯೊಂದು Film Festival ನಲ್ಲೂ ಸಹ ಒಂದು ವಾರ continuous ಆಗಿ ಒಂದು ದಿನಕ್ಕೆ 3–4 ಸಿನಿಮಾ ನೋಡುತ್ತಿರುತ್ತೇನೆ. ಸಿನಿಮಾ ಒಂದು movement ಆಗಿದೆ. ಈ ರೀತಿಯ movement ಆಗುವುದಕ್ಕೆ ಕಾರಣ ನೂರಾರು ಜನರು ಇದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:–** ಮಾನ್ಯ ಮೋಹನ್ ಕುಮಾರ್ ಕೊಂಡಜ್ಜಿಯವರೇ ಪ್ರಶ್ನೆ ಕೇಳಿ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:–** ಮಾನ್ಯ ಸಭಾಪತಿಯವರೇ, ಆ ಎಲ್ಲಾ ಕಾರಣಗಳಿಗೆ 'ಚಲನಚಿತ್ರ ಅಕಾಡೆಮಿ' ಸೃಷ್ಟಿಯಾಯಿತು. Inauguration and closing ಗೆ ಸುಮಾರು 2

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಿಂದ 2.5 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇಡೀ ಜಗತ್ತಿನಲ್ಲಿ ಎಲ್ಲೇ Film Festival ಆದರೂ ಬಹಳ ಸಿಂಪಲ್ ಆಗಿರುತ್ತದೆ. ಅಲ್ಲಿಗೆ ಅಂತರಾಷ್ಟ್ರೀಯ ಚಲನಚಿತ್ರದ ನಾಯಕರು, ನಿರ್ದೇಶಕರುಗಳು ಬಂದಿರುತ್ತಾರೆ.

**ಉಪಸಭಾಪತಿಯವರು:-** ಮಾನ್ಯ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿಯವರೇ, ಸರ್ಕಾರ ಏನು ಮಾಡಬೇಕೆಂದು ಕೇಳಿ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯಲ್ಲಿ ಉತ್ತರವಿದೆ. 2017ರಲ್ಲಿ inauguration ಗೆ 2¼ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. 2018 ರಲ್ಲಿ ಕೇವಲ 16 ಲಕ್ಷ ರೂಪಾಯಿಗಳು, 2019ರಲ್ಲಿ 2ಳಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ರೀತಿ ದುಂದುವೆಚ್ಚವಾಗುತ್ತಿದೆ. ನಾನು ಪ್ರಶ್ನೆ ಕೇಳಿದಾಗ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾದ 'ಪುರಾಣಿಕ್'ರವರು ಯಾವರೀತಿ ಮಾತನಾಡಿದರೆಂದರೆ, 'ಹೌದು, ನಾವು ಮಾಡಿಯೇ ಮಾಡುತ್ತೇವೆ, ದುಂದುವೆಚ್ಚವಾದರೆ ತಪ್ಪೇನಿಲ್ಲ, ಕಲಾವಿದರಿಗೆ employment ಆಗುತ್ತದೆ, ಕೆಲಸ generate ಆಗುತ್ತದೆ' ಎಂದು ಹೇಳುತ್ತಾರೆ. ಇದರ ಬಗ್ಗೆ ಅದ್ದೂರಿ ವೆಚ್ಚ ಮಾಡಬಾರದೆಂದು ಶ್ರೀ ಗಿರೀಶ್ ಕಾಸರವಳ್ಳಿಯವರು ಮತ್ತು ಶ್ರೀ ಶೇಷಾದ್ರಿಯವರು ಎಲ್ಲರೂ ವಿರೋಧ ಮಾಡಿದ್ದಾರೆ. ಆದರೂ ಸರ್ಕಾರ ಈ ರೀತಿ ಮಾಡಬಾರದು. 'ಬ್ಯಾಂಕ್ವೆಟ್ ಹಾಲ್'ನಲ್ಲಿ ಕಾರ್ಯಕ್ರಮವನ್ನು ಮಾಡಬೇಕೆಂಬುದು ನನ್ನ ಒತ್ತಾಯವಾಗಿದೆ.

**ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು)(ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಮೋಹನ್ ಕುಮಾರ್ ಕೊಂಡಜ್ಜಿಯವರು ಕೇಳಿರುವ ಪ್ರಶ್ನೆಗೆ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದೇವೆ. ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಅಂತರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಮಾಡಲಾದ ಒಟ್ಟು ವೆಚ್ಚವನ್ನು ಕೇಳಿದ್ದಾರೆ. ಮೂರು ವರ್ಷಗಳಲ್ಲಿ 2017-18ನೇ ಸಾಲಿನಲ್ಲಿ 06 ಕೋಟಿ 65 ಲಕ್ಷ ರೂಪಾಯಿ ವೆಚ್ಚವಾಗಿದೆ. 2018-19ರಲ್ಲಿ 04 ಕೋಟಿ 61 ಲಕ್ಷ ರೂಪಾಯಿಗಳು, 2019-20ರಲ್ಲಿ 07 ಕೋಟಿ 79 ಲಕ್ಷ ರೂಪಾಯಿಗಳನ್ನು ಇದುವರೆಗೂ ಕೊಟ್ಟಿದ್ದೇವೆ. ಉದ್ಘಾಟನಾ ಮತ್ತು ಮುಕ್ತಾಯ ಸಮಾರಂಭಕ್ಕೆ ಖರ್ಚು ಮಾಡಿದ ಬಗ್ಗೆ ಕೇಳಿದ್ದಾರೆ, 2017-18ರಲ್ಲಿ 02 ಕೋಟಿ 24 ಲಕ್ಷ ರೂಪಾಯಿಗಳು, 2018-19ರಲ್ಲಿ 16 ಲಕ್ಷ ರೂಪಾಯಿಗಳು ಮತ್ತು 2019-20ರಲ್ಲಿ 02 ಕೋಟಿ 45 ಲಕ್ಷ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳು. ಮಾನ್ಯ ಮೋಹನ್ ಕುಮಾರ್ ಕೊಂಡಜ್ಜಿಯವರು ಚಲನಚಿತ್ರೋತ್ಸವದ ಉದ್ದೇಶವೆಂದರೆ ಕನ್ನಡ ಚಲನಚಿತ್ರೋತ್ಸವಕ್ಕೂ ಪ್ರೋತ್ಸಾಹ ಕೊಡಬೇಕು ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿರುವ ಚಲನಚಿತ್ರಗಳು ಇಲ್ಲಿ ಪ್ರದರ್ಶನಗೊಂಡು ಅದರ ಬಗ್ಗೆ awareness create ಮಾಡಬೇಕು ಮತ್ತು ಈ ಭಾಗದ ಚಲನಚಿತ್ರಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ರೀತಿಯ ಉತ್ತೇಜನ ಕೊಡುವುದು ಮತ್ತು ಇದರಿಂದ ಪ್ರವಾಸೋದ್ಯಮಕ್ಕೂ ಅನುಕೂಲವಾಗುವಂತಹದ್ದು ಆಗುತ್ತದೆ. ಗೋವಾದಲ್ಲಿ International Film Festival ನಡೆಯುತ್ತದೆ. ಆ ರೀತಿ ಬೆಂಗಳೂರಿನಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇವತ್ತೇನು ಅದು ಹೊಸದಾಗಿ ನಡೆಯುತ್ತಿಲ್ಲ. ಆ ಕಾರ್ಯಕ್ರಮಕ್ಕೆ ಎಷ್ಟು ಖರ್ಚು ಮಾಡಬೇಕೆನ್ನುವುದಕ್ಕೆ ಅಲ್ಲೊಂದು 'ಕೋರ್ ಕಮಿಟಿ' ಇರುತ್ತದೆ. ಅವರೆಲ್ಲಾ ನಿರ್ಧಾರ ಮಾಡಿಕೊಂಡು ಖರ್ಚು ಮಾಡುತ್ತಾರೆ. ಯಾರೋ ಒಬ್ಬ ಅಧ್ಯಕ್ಷರು, ಮತ್ತೊಬ್ಬರು ಮಾಡುವುದಲ್ಲ ಇದು. ಮಾನ್ಯ ಸದಸ್ಯರು ದುಂದುವೆಚ್ಚದ ಬಗ್ಗೆ ಹೇಳಿದರು. ಹಾಗಾದರೆ ಕಳೆದ ಹಲವಾರು ವರ್ಷಗಳ ಹಿಂದೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದಾರಲ್ಲಾ ಅದಕ್ಕೆ ಮಾನ್ಯ ಮೋಹನ್ ಕುಮಾರ್ ಕೊಂಡಜ್ಜಿಯವರ ಉತ್ತರ ಏನು ಎಂದು ಪ್ರಶ್ನೆ ಕೇಳುತ್ತೇನೆ. ಏಕೆಂದರೆ, ಇವತ್ತು ಮಾಡಿರುವುದಲ್ಲ, ಖರ್ಚು ವೆಚ್ಚ ಎನ್ನುವುದಕ್ಕೆ ಒಂದು ಕಮಿಟಿ ಇರುತ್ತದೆ ಅವರು ನೋಡುತ್ತಾರೆ. Royalty ಎಂದು ಇರುತ್ತದೆ ಅಂತರಾಷ್ಟ್ರೀಯ ಮಟ್ಟದಲ್ಲಿ ಬೇರೆ ದೇಶಗಳಿಂದ ಚಲನಚಿತ್ರಗಳನ್ನು ತಂದಾಗ ಆ Royalty ಯನ್ನು ಅವರಿಗೆ ಕೊಡಬೇಕಾಗುತ್ತದೆ. ಹೀಗಾಗಿ ಎಲ್ಲಿ ಖರ್ಚನ್ನು ಕಡಿಮೆ ಮಾಡಬೇಕೋ ಅದನ್ನು ಮಾಡುವುದಕ್ಕೆ ಸಾಧ್ಯವಿದೆ.

**(ಮುಂದು)**

**(403) 16-03-2021/ 10-50/ ಕೆಹೆಚ್-ಜಿಆರ್**

**ಶ್ರೀ ಜಗದೀಶ್ ಶೆಟ್ಟರ್ (ಮುಂದು):-**

ಇದರ ಬಗ್ಗೆ ಮಾನ್ಯ ಸದಸ್ಯರು ಏನು ಸಂಶಯಗಳನ್ನು ವ್ಯಕ್ತ ಮಾಡಿದರು, ದುಂದು ವೆಚ್ಚ ಮಾಡುವುದು ಸರ್ಕಾರದ ಉದ್ದೇಶವೂ ಅಲ್ಲ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಉದ್ದೇಶವೂ ಅಲ್ಲ. ಇದರಲ್ಲಿ ದುಂದು ವೆಚ್ಚ ಮಾಡುವಂತಹ ಪ್ರಶ್ನೆಯೂ ಸಹ ಇಲ್ಲ. ಎಲ್ಲಿ ಅಗತ್ಯವಾದಂತಹ ವೆಚ್ಚ ಮಾಡುವುದಕ್ಕೆ ಸಾಧ್ಯ ಇದೆಯೋ ಅಲ್ಲಿ ಆ ವೆಚ್ಚವನ್ನು ಮಾಡುವಂಥದ್ದನ್ನು ಸರ್ಕಾರ ಮಾಡುತ್ತದೆ ಮತ್ತು ಇದಕ್ಕೆ ಸಂಬಂಧಪಟ್ಟ ಅಕಾಡೆಮಿ ಮಾಡುತ್ತದೆ. ಆದ್ದರಿಂದ, ಇದರ ಬಗ್ಗೆ ಮಾನ್ಯ ಮೋಹನ್ ಕುಮಾರ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಂಡಜ್ಜಿಯವರಿಗೆ ಯಾವುದೇ ಸಂಶಯ ಬೇಡ. ಆ ರೀತಿ ದುಂದು ವೆಚ್ಚ ಮಾಡುವುದಕ್ಕೆ ಸರ್ಕಾರ ಯಾವ ರೀತಿ ಪ್ರಯತ್ನ ಮಾಡುವುದಿಲ್ಲ. ಅದಕ್ಕೆ ಕನಿಷ್ಠ ಎಷ್ಟು ಖರ್ಚು ಬರುತ್ತದೋ ಅದನ್ನು ಮಾಡಲಾಗುತ್ತದೆ. ಸಿನಿಮಾ ರಂಗದಿಂದ ಬಂದಂತಹವರಿಗೆ ಅದರ ಬಗ್ಗೆ involvement ಇದೆ ಎಂದು ಮಾನ್ಯ ಸದಸ್ಯರು ಹೇಳಿದರು. ತಾವು ಯಾವಾಗಲೋ ಎಂ.ಎಲ್.ಸಿ., ಆಗಬೇಕಾಗಿತ್ತು. ಬಹಳ ವರ್ಷಗಳ ನಂತರ ಈಗ ತಮ್ಮನ್ನು ನಾಮಿನೇಟ್ ಮಾಡಿದ್ದಾರೆ. ಆ ಮಾತು ಬೇರೆ. ಏಕೆಂದರೆ, ತಮಗೆ ಅಷ್ಟೊಂದು ಪ್ರತಿಭೆ ಇದೆ. ತಮ್ಮನ್ನು ಯಾವಾಗಲೋ ಗುರುತಿಸಬೇಕಾಗಿತ್ತು. ಈಗ ತಮ್ಮನ್ನು ಗುರುತಿಸಿ, ತಾವು ಎಂ.ಎಲ್.ಸಿ., ಆಗಿದ್ದೀರಿ. ನನಗೆ ಸಂತೋಷ. ಈಗ ಏರ್-ಷೋ ಆಯಿತು. ಈ ಒಂದು ಏರ್-ಷೋಗೆ ಏನು ಖರ್ಚು ಮಾಡುತ್ತಾರೆ, ಅದನ್ನು ನಾವು ದುಂದು ವೆಚ್ಚ ಎಂದು ಹೇಳುವುದಕ್ಕೆ ಬರುವುದಿಲ್ಲ. ಇದಕ್ಕೆ ವಿದೇಶದಿಂದ ಎಷ್ಟು ಜನ ಬಂದರು ಎನ್ನುವುದೆಲ್ಲಾ ಇದೆ. ಆ ಹಿನ್ನೆಲೆಯಲ್ಲಿ ತಮಗೆ ಆ ರೀತಿ ಏನಾದರೂ ಸಂಶಯ ಇದ್ದರೆ, ಆ ಸಂಶಯವನ್ನು ತೆಗೆಯಿರಿ ಮತ್ತು ಯಾವುದೇ ದುಂದು ವೆಚ್ಚವನ್ನು ಮಾಡುವಂತಹ ಉದ್ದೇಶ ಸರ್ಕಾರಕ್ಕೆ ಇಲ್ಲ. ಕರೋನಾ ಹಿನ್ನೆಲೆಯಲ್ಲಿ Technical Advisory Committee ಗೆ ನಾವು ರೆಫರ್ ಮಾಡಿದ್ದೇವೆ. ಇದಕ್ಕೆ ಕರ್ನಾಟಕ ಚಲನಚಿತ್ರೋತ್ಸವವನ್ನು ಮಾಡುವ ಬಗ್ಗೆ ಅವರ advice ಕೇಳಿದಾಗ ಅವರು ಎಲ್ಲಾ ಅಧ್ಯಯನ ಮಾಡಿಕೊಂಡು, ಇಲ್ಲಿ ಕರ್ನಾಟಕ ಚಲನಚಿತ್ರೋತ್ಸವವನ್ನು ಮಾಡುವುದು ಬೇಡ. ಈಗ ಕರೋನಾ ಹೆಚ್ಚಳವಾಗುತ್ತಿದೆ. ಆ ಹಿನ್ನೆಲೆಯಲ್ಲಿ ಈಗ ಸದ್ಯಕ್ಕೆ ಮಾಡಬಾರದು ಎಂದು advise ಮಾಡಿದ ಮೇಲೆ ತಕ್ಷಣವೇ ಅದನ್ನು ಮುಂದಕ್ಕೆ ಹಾಕುವಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ನಾನು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷ, ಬಿಜೆಪಿ ಪಕ್ಷ ಮತ್ತು ಜೆಡಿ(ಎಸ್) ಪಕ್ಷದವರನ್ನು ಕರೆಯಿಸಿ; ಚಲನಚಿತ್ರ ರಂಗಕ್ಕೂ ಮತ್ತು ಸರ್ಕಾರಕ್ಕೂ ಯಾವುದೇ ಸಂಬಂಧ ಇರಲಿಲ್ಲ. ವೈಯಕ್ತಿಕವಾಗಿ Information Department ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿ ಜವಾಬ್ದಾರಿ ಆಗುತ್ತದೆ. ಮಾನ್ಯ ಶೇಷಾದ್ರಿಯವರು ಚಿತ್ರ ನಟಿಯರಾದ ಶ್ರೀಮತಿ ಕರೀನಾ ಕಪೂರ್ ಮತ್ತು ಶ್ರೀಮತಿ ಜಯ ಬಚ್ಚನ್‌ರವರು ಬಂದಿರುವುದಕ್ಕೆ ಸುಮಾರು 1 ಕೋಟಿ ರೂಪಾಯಿಗಳಷ್ಟು ಪೇಮೆಂಟ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಅವರು ಬಂದು ಅರ್ಧ ತಾಸು ಕುಳಿತು ಹೋದರೆ ಅವರಿಗೆ 1 ಕೋಟಿ ರೂಪಾಯಿಗಳಷ್ಟು ಪೇಮೆಂಟ್ ಕೊಡುತ್ತಾರೆ ಎಂದು ಹೇಳಿದ್ದಾರೆ. ಇದರ details ನಾನು ಕೇಳಿಲ್ಲ. ಆದರೆ ಈ ಒಂದು ವಿಚಾರ ಪತ್ರಿಕೆಯಲ್ಲಿ ವರದಿಯಾಗಿದೆ. ಇದನ್ನು ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇಷಾದ್ರಿಯವರು ಹೇಳಿದ್ದಾರೆ. Its fact also. ಯಾವುದೇ ಕಾರಣಕ್ಕೂ ನಾನು ಈ ಸರ್ಕಾರ, ಆ ಸರ್ಕಾರ ಎಂದು ಹೇಳುವುದಿಲ್ಲ. ಬಹಳ ಹಿಂದೆ ಕಲಾವಿದೆ ಶ್ರೀಮತಿ ಸುಹಾಸಿನಿಯವರು ಇಂತಹ ಒಂದು ಕಾರ್ಯಕ್ರಮಕ್ಕೆ ಉಚಿತವಾಗಿ ಬಂದು ಹೋದರು. ರಜನಿಕಾಂತ್‌ರವರು ಸಹ ಯಾವುದೇ ರೀತಿಯಲ್ಲಿ ಹಣ ಪಡೆಯದೆ ಉಚಿತವಾಗಿ ಬಂದು ಹೋಗುತ್ತಾರೆ. ದುಡ್ಡು ಕೊಟ್ಟು ಕಲಾವಿದರನ್ನು ಕರೆದುಕೊಂಡು ಬರುವುದಾಗಲೀ, Event Managers ಗಳಿಗೆ ಹಣ ಕೊಟ್ಟು inauguration ಮಾಡಿಸುವುದಾಗಲೀ, ಇದು ನಮ್ಮ ಕೆಲಸವೇ ಅಲ್ಲ. ಇದರ ಬಗ್ಗೆ ನನಗೆ ಮಾಹಿತಿ ಇದೆ. ಇದನ್ನು ಹೊರಗುತ್ತಿಗೆ ಕಂಪನಿಯಾದ ಡಿ.ಎನ್.ಎ., ಕಂಪನಿ. ಇದು ಕರ್ನಾಟಕಕ್ಕೆ ಒಳ್ಳೆಯ ಕಂಪನಿಯಾಗಿದೆ. ಈ ಕಂಪನಿಗೆ ಕೊಡಬೇಕೆಂದು ಇವರು 4ನೇ ತಾರೀಖು 3 ಗಂಟೆಗೆ . . .

**ಉಪ ಸಭಾಪತಿಯವರು:-** ಮಾನ್ಯ ಮೋಹನ್ ಕುಮಾರ್ ಕೊಂಡಜ್ಜಿಯವರೇ, ತಾವು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ತಮ್ಮೊಟ್ಟಿಗೆ ಇದರ ಬಗ್ಗೆ ಮಾತುಕತೆ ಮಾಡುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, ಡಿ.ಎನ್.ಎ., ಕಂಪನಿಯವರ ಜೊತೆಗೆ ಇವರು ಮಾತುಕತೆ ಮಾಡುತ್ತಾರೆ. ಕರ್ನಾಟಕ ಚಲನಚಿತ್ರ ಅಕಾಡೆಮಿಯಲ್ಲಿ ಈ ರೀತಿ ಮಾಡಬಾರದು. ತಾವು ಕರ್ನಾಟಕ ಚಲನಚಿತ್ರ ಅಕಾಡೆಮಿಯನ್ನು ನಡೆಸಬೇಕು. Information Department ರವರು ಒಗ್ಗೂಡಿ, ಚಿತ್ರರಂಗದವರನ್ನೆಲ್ಲಾ ಕರೆದು ಇದರ ಬಗ್ಗೆ ನಿರ್ಧಾರ ಮಾಡಬೇಕು. ಯಾವುದೇ ಕಾರಣಕ್ಕೂ ಇದಕ್ಕೆ ಯಾವುದೇ ರೀತಿಯ ದುಂದು ವೆಚ್ಚ ಮಾಡಬಾರದೆನ್ನುವುದು ನಮ್ಮೆಲ್ಲರ ಮನವಿಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಮುರುಗೇಶ್ ಆರ್.ನಿರಾಣಿಯವರು ಸದನಕ್ಕೆ ಹಾಜರಾಗಿರುವುದರಿಂದ, ಮಾನ್ಯ ಗೋವಿಂದರಾಜುರವರ ಪ್ರಶ್ನೆಯನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1413**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, 'ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನೂರಾರು ವರ್ಷಗಳಿಂದ ಕಲ್ಲು ಕುಟುಕರು (ಭೋವಿ ಜನಾಂಗ) ಈ ಪ್ರದೇಶದಲ್ಲಿರುವ ಬಂಡೆ ಕಲ್ಲುಗಳಿಂದ ಸೈಜು ಹಾಗೂ ಚಪ್ಪಡಿ ಕಲ್ಲುಗಳನ್ನು ಹೊಡೆದು ಜೀವನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎಂದು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು 'ಬಂದಿರುತ್ತದೆ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇನ್ನೊಂದು ನನ್ನ ಉಪ ಪ್ರಶ್ನೆಯೇನೆಂದರೆ, 'ಹಾಗಿದ್ದಲ್ಲಿ, ಇತ್ತೀಚಿನ ದಿನಗಳಲ್ಲಿ ಕಲ್ಲು ಗಣಿಗಾರಿಕೆಯಲ್ಲಿ ನಡೆಯುತ್ತಿರುವ ಅಹಿತಕರ ಘಟನೆಗಳಿಂದ ಇಲಾಖೆಯವರು ಕಲ್ಲು ಕುಟುಕರ ಕೆಲಸಕ್ಕೆ ತೊಂದರೆಯುಂಟಾಗಿರುವ ಬಗ್ಗೆ ಕೇಳಲಾಗಿರುವ ಪ್ರಶ್ನೆಗೆ ಮಾನ್ಯ ಸಚಿವರು 'ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಂತೆ ಪರವಾನಿಗೆ ಪಡೆಯದೆ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡ ವಿಧಿಸಿ ಸಂಗ್ರಹಿಸಲು ಕ್ರಮ ವಹಿಸಲಾಗಿದೆ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ಬೇರೆ ಬೇರೆ ಕಡೆಗಳಲ್ಲಿ ಅಕ್ರಮ ಗಣಿಗಾರಿಕೆ ಹೆಚ್ಚಾಗಿ ನಡೆಯುತ್ತಿದೆ ಎನ್ನುವುದು ತಮ್ಮ ಗಮನಕ್ಕೂ ಕೂಡ ಬಂದಿದೆ. ಅಕ್ರಮ ಗಣಿಗಾರಿಕೆ ವಿಚಾರದಲ್ಲಿ ಕಲ್ಲು ಕುಟುಕರು ನೂರಾರು ವರ್ಷಗಳಿಂದ ಕಲ್ಲುಗಳನ್ನು ಒಡೆದು ಜೀವನ ಮಾಡುತ್ತಿದ್ದಾರೆ. ಕೋಲಾರ ಹಾಗೂ ಚಿಕ್ಕಬಳ್ಳಾಪುರ ಈ ಎರಡು ಜಿಲ್ಲೆಗಳಲ್ಲಿ ಮಾತ್ರ ಸುಮಾರು 2 ಲಕ್ಷ ಜನರು ಸೈಜ್ ಕಲ್ಲುಗಳು ಒಡೆಯುವಂತಹ ಕೆಲಸ ಮಾಡುತ್ತಿದ್ದಾರೆ. ಇವರು ಮಾಡುವಂತಹ ವೃತ್ತಿಯಲ್ಲಿ ಯಾವುದೇ blasting ಮಾಡಿ ಒಡೆಯುವಂತಹದ್ದು ಇರುವುದಿಲ್ಲ. ಸುತ್ತಮುತ್ತಲಿನಲ್ಲಿ ಸಿಗುವಂತಹ ಕಲ್ಲು-ಮರಳುಗಳನ್ನು ತೆಗೆದುಕೊಂಡು ಬಂಡೆಗಳ ಮೇಲೆ ಹಾಕಿ ಸುಟ್ಟು, ಅವರ ಹತ್ತಿರ ಸಣ್ಣ-ಪುಟ್ಟ ಉಪಕರಣಗಳಿಂದ ಸೈಜು ಕಲ್ಲುಗಳನ್ನು ಮತ್ತು ಬಂಡೆ ಕಲ್ಲುಗಳನ್ನು ಒಡೆದು ಜೀವನ ಮಾಡುತ್ತಿರುತ್ತಾರೆ. ಇವತ್ತಿನ ದಿವಸ ಏನಾಗಿದೆ ಎಂದರೆ, ನಮ್ಮ ಸರ್ಕಾರದ ಮೇಲೆ ಅವಲಂಬನೆಯಾಗುವಂತಹ ರೀತಿಯಲ್ಲಿ ಅವರಿಗೆ ಬೇರೆ ಬೇರೆ ರೀತಿಯ ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಸಂತೋಷ. ಈ ಕಲ್ಲು ಕುಟುಕರು ವಂಶ ಪಾರಂಪರ್ಯವಾಗಿ ನೂರಾರು ವರ್ಷಗಳಿಂದ ಈ ಕೆಲಸವನ್ನು ಮಾಡಿಕೊಂಡು ಬರುತ್ತಿರುವವರಿಗೆ; ಇವತ್ತಿನ ದಿವಸ ನಾನಾ ರೀತಿಯಲ್ಲಿ quarry ಎನ್ನುವುದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು. 'Quarry' ಗೆ ಕನ್ನಡದಲ್ಲಿ ಅರ್ಥ ಏನೇಂದರೆ, ಕಲ್ಲು ಮತ್ತು ಇತರೆ ವಸ್ತುಗಳನ್ನು ಪಡೆಯಲು ನೆಲದಲ್ಲಿ ಕತ್ತರಿಸಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಸ್ತುಗಳನ್ನು ತೆಗೆಯುವುದಕ್ಕೆ quarry ಎನ್ನುವ ಅರ್ಥ ಬರುತ್ತದೆ. ಈ ಕಲ್ಲು ಕುಟುಕರಿಗೂ ಸಹ 'Quarry' ಎನ್ನುವ ಅರ್ಥದಲ್ಲಿ ನಮ್ಮಲ್ಲಿರುವ ಕಾಯ್ದೆ, ಕಾನೂನುಗಳನ್ನು ಅವರ ಮೇಲೆ ಹಾಕುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸ್ಫೋಟ ಆದ ಮೇಲೆ ಮಾನ್ಯ ಗಣಿ ಸಚಿವರು ಬಹಳ ಉಗ್ರವಾದಂತಹ ಕ್ರಮ ತೆಗೆದುಕೊಳ್ಳಬೇಕೆಂದು ಮಾಹಿತಿ ಕೊಟ್ಟಿದ್ದಾರೆ. ಬಹಳ ಸಂತೋಷ. ಆದರೆ, ಕಲ್ಲು ಕುಟುಕರು ಅಂದರೆ ಭೋವಿ ಜನಾಂಗದ ಜನರು ಯಾವುದೇ ರೀತಿಯಲ್ಲಿ ಸ್ಫೋಟ ಮಾಡಿ, gelatin ಕಡ್ಡಿಗಳ ಬಗ್ಗೆ ಇವತ್ತು ರಾಮಾಯಣ ಪಡುತ್ತಾರೆ. ಇವರಿಗೆ ಯಾವುದೇ ರೀತಿಯಲ್ಲಿ ಸಂಬಂಧ ಇರುವುದಿಲ್ಲ. ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ತಾವು ನೋಡಿದ್ದೀರಾ, ಬೆಂಗಳೂರು ವಿಶ್ವವಿದ್ಯಾನಿಲಯದ ಸಭೆಗೆ ಮಾನ್ಯ ಸಚಿವರು ಬರುತ್ತಿದ್ದರು. ಸುತ್ತಮುತ್ತಲೂ ಇರುವ ಕಲ್ಲು, ಬಂಡೆಗಳನ್ನು ಮಾನ್ಯ ಸಚಿವರು ಎಷ್ಟೋ ಬಾರಿ ಗಮನಿಸಿದ್ದಾರೆ. ಖಾಸಗಿ ಜಮೀನಿನಲ್ಲಿ ದೊಡ್ಡ ದೊಡ್ಡ ಬಂಡೆಗಳು ಇವೆ. ಇವತ್ತಿನ ದಿವಸ ಜಮೀನಿನ ಬೆಲೆ ಜಾಸ್ತಿ ಆಗಿದೆ. ಅದನ್ನು ಅಭಿವೃದ್ಧಿಪಡಿಸುವುದಕ್ಕೆ ಕಲ್ಲು ಕುಟುಕರು ಸಣ್ಣ ಸಣ್ಣ ಇಬ್ಬರು-ಮೂವರು ಇರುವಂತಹ ಕುಟುಂಬದವರು ಆ ಸೈಜು ಕಲ್ಲನ್ನು ಒಡೆದುಕೊಂಡು ಜೀವನ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಯಾವ ರೀತಿ ತೊಂದರೆ ಇದೆ ಎನ್ನುವ ಮಾತನ್ನು ನಾನು ಕೇಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, . . .

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದು ಇನ್ನು ಇದೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ. ತಾವು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟ ನಂತರ ತಾವು ಮಾತನಾಡಿ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಕೇವಲ ಕೋಲಾರ ಜಿಲ್ಲೆಯಲ್ಲಿ ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ ಭೋವಿ ಸಮಾಜದವರು ವಂಶ ಪಾರಂಪಾರಿಕವಾಗಿ ಕಲ್ಲು ಒಡೆಯುವ ಕಾಯಕವನ್ನು ಮಾಡಿಕೊಳ್ಳುತ್ತಾ ಬಂದಿದ್ದಾರೆ. ಆದರೆ, ಕೆಲವೊಂದು ಕಡೆ ತೊಂದರೆಯಾಗಿದೆ. ಇದೇ ರೀತಿಯಾಗಿ ಮೊನ್ನೆಯ ದಿವಸ ಶಿರಾ ತಾಲ್ಲೂಕಿನಲ್ಲಿಯೂ ಕೂಡ ಈ ಸಮಾಜದವರಿಗೆ ತೊಂದರೆಯಾಗಿರುವುದನ್ನು ನಾವು ಕ್ಯಾಬಿನೇಟ್‌ಗೆ ತಂದು ಅವರಿಗೆ ಅನುಕೂಲತೆಯನ್ನು ಮಾಡಿಕೊಟ್ಟಿದ್ದೇವೆ. ಈಗಾಗಲೇ New Mining Policy ಅನ್ನು ತರಬೇಕೆನ್ನುವುದು ನಮ್ಮ ಸರ್ಕಾರದ ಮತ್ತು ನಮ್ಮ ಇಲಾಖೆಯ ಉದ್ದೇಶವಾಗಿದೆ. ಅದರಲ್ಲಿ ಈ ರೀತಿಯ ಸಣ್ಣ-ಪುಟ್ಟ ಕಲ್ಲು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಣಿಗಾರಿಕೆ ಮಾಡುವಂತಹವರಿಗೆ ಯಾವ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕೆನ್ನುವುದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆ. ಈಗಾಗಲೇ ಲೈಸನ್ಸ್ ಇಲ್ಲದೇ ಯಾವುದೇ ಗಣಿಗಾರಿಕೆ ಮಾಡುವಂತಹದ್ದನ್ನು ನಾವು ಕಾನೂನುಬಾಹಿರ ಎಂದು ಕರೆಯುತ್ತೇವೆ. ಇದರ ಸಲುವಾಗಿ 2016 ರಲ್ಲಿ ಎಸ್.ಸಿ., ಎಸ್.ಟಿ., ಜನಾಂಗದವರಿಗೆ ಮತ್ತು ವಂಶ ಪಾರಂಪರಿಕವಾಗಿ ಮಾಡಿಕೊಂಡು ಬರುವಂತಹವರಿಗೆ auction ಇಲ್ಲದೇ ಅವರು ಗಣಿಗಾರಿಕೆಯನ್ನು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವನ್ನು ಒದಗಿಸಿಕೊಟ್ಟಿದ್ದೇವೆ. ಆದರೂ ಸಹ ಇವರು ರೆವಿನ್ಯೂ ಇಲಾಖೆ, ಅರಣ್ಯ ಇಲಾಖೆಗಳಲ್ಲಿ ಸಂಬಂಧಪಟ್ಟ ಎನ್.ಓ.ಸಿ.,ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ತೆಗೆದುಕೊಂಡ ನಂತರ ಸರಳೀಕರಣವನ್ನು ಮಾಡಿ auction ಮಾಡಬೇಕಾದರೆ, ಅವರು ಭಾಗವಹಿಸಿದರೆ, ಹಿಂದುಳಿದ ಜನಾಂಗದವರು compete ಮಾಡುವುದಕ್ಕೆ ಆಗುವುದಿಲ್ಲ. ಅದರಲ್ಲಿ ಈಗಾಗಲೇ ನಾವು ರಿಯಾಯಿತಿಯನ್ನು ಕೊಟ್ಟಿದ್ದೇವೆ. ಇಡೀ ರಾಜ್ಯದಲ್ಲಿ ಇಂತಹವರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಆದ್ದರಿಂದ ಇವರನ್ನೆಲ್ಲಾ ಒಳಗೊಂಡಂತೆ ಒಂದು ಬಾರಿ Association ನವರನ್ನು ಕರೆಯಿಸಿ, ಚರ್ಚೆ ಮಾಡಿ ಇದಕ್ಕೆ ಏನಾದರೂ ಸರಳೀಕರಣ ಮಾಡುವುದಾದರೆ ಮುಖಾಂತರ ಅವರಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ಚಿಂತನೆ ಮಾಡುತ್ತದೆ.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, 'ಇವರ ಜೀವನೋಪಾಯಕ್ಕೆ ರೂಪಿಸಿರುವ ಯೋಜನೆಗಳು ಯಾವುವು?' ಎಂದು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. 'ದಿನಾಂಕ: 12–08–2016ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ನ್ನು ಜಾರಿಗೊಳಿಸಿದ್ದು, ಸದರಿ ನಿಯಮಗಳ ಪ್ರಕಾರ ಸರ್ಕಾರಿ ಜಮೀನಿನಲ್ಲಿರುವ ಉಪಖನಿಜ ನಿಕ್ಷೇಪಗಳನ್ನು ತೆಗೆಯಲು ಹರಾಜು ಮೂಲಕವೇ ಗುತ್ತಿಗೆಗಳನ್ನು ಮಂಜೂರು ಮಾಡಬೇಕಾಗಿರುತ್ತದೆ' ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇವರು ಮಾಡುವಂತಹ ಕಸುಬಿಗೆ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ಈ ಕಾಯಿದೆ ಇವರಿಗೆ ಅನ್ವಯವಾಗುವುದಿಲ್ಲ. ನಿಕ್ಷೇಪಗಳು ಎಂದರೆ, ಭೂಮಿಯಲ್ಲಿ ಇರುವುದನ್ನು ಹೊರಗಡೆ ತೆಗೆದು ಮಾಡುವುದಿಲ್ಲ. ಭೂಮಿಯ ಮೇಲೆ ಏನು ಕಲ್ಲು ಬಂಡೆಗಳು ಇವೆ, ಆ ಕಲ್ಲು ಬಂಡೆಗಳನ್ನು ಮತ್ತು ಸೈಜು ಕಲ್ಲುಗಳನ್ನು ಒಡೆಯುತ್ತಾರೆ. ಇದರಿಂದ, ಸಣ್ಣ ಸಣ್ಣ ಮನೆಗಳನ್ನು ಕಟ್ಟುವುದಕ್ಕೆ ಉಪಯೋಗವಾಗುತ್ತದೆ. ಬೆಂಗಳೂರಿನಲ್ಲಿ columns ಹಾಕಿ ಕಟ್ಟಡಗಳನ್ನು ಕಟ್ಟುತ್ತಾರೆ. ಆದರೆ ಸಣ್ಣ ಸಣ್ಣ ಮನೆಗಳನ್ನು ಕಟ್ಟಲು ಸೈಜು ಕಲ್ಲುಗಳು ಬೇಕು. ಹಳ್ಳಿಗಳಲ್ಲಿಯೂ ಕೂಡ ಮನೆ ಕಟ್ಟಲು ಸೈಜು ಕಲ್ಲುಗಳು ಬೇಕು. ಇವತ್ತಿನ ದಿವಸ ತಾವು ಕಾಯ್ದೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಿಸಿದ್ದೀರಿ, ಅದು ಬಹಳ ಒಳ್ಳೆಯದು. ಇಷ್ಟು ದಿನಗಳವರೆಗೂ ಅವರವರ ಪಾಡಿಗೆ ಅವರವರ ವೃತ್ತಿಯನ್ನು ಮಾಡಿಕೊಂಡು ಹೋಗುತ್ತಿದ್ದರು. ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಮೊನ್ನೆಯ ದಿವಸ ಒಂದು ಸಮಸ್ಯೆಯಾದಾಗ ಬಿಜಾಪುರದಲ್ಲಿ ಒಂದು ಸಭೆಗೆ ಬಂದಿದ್ದರು. ಇವರಿಗೆ ಫೋನ್ ಮಾಡಿದಾಗ ತಕ್ಷಣದಲ್ಲಿಯೇ ಹಾಜರಾಗಿ ಅವರಿಗೆ ಮತ್ತು ನಮಗೆ ಸ್ಪಂದಿಸಿದ್ದಾರೆ. ಇವತ್ತಿನ ದಿವಸ ಕಾಯ್ದೆ ಪ್ರಕಾರ ದಂಡ ಇದೆ. ನಾನು ಒಬ್ಬ ಜನಪ್ರತಿನಿಧಿಯಾಗಿ ಅವರಿಗೆ ಫೋನ್ ಮಾಡಿ ಅಧಿಕಾರಿಗಳಿಗೆ ಮನವಿ ಮಾಡಿದೆ. ಡಿ.ಸಿ. ಕಛೇರಿಯಲ್ಲಿ ಡಿ.ಎಂ.ಎಫ್., ಇದ್ದಾಗಲೂ ಸಹ ನಾವು ಮತ್ತು ಸಂಸದರು ಸೇರಿ . . .

**ಉಪ ಸಭಾಪತಿಯವರು:-** ಮಾನ್ಯ ಗೋವಿಂದರಾಜುರವರೇ, ಮಾನ್ಯ ಸಚಿವರು ಏನು ಮಾಡಬೇಕೆಂದು ಹೇಳಿ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ ಅಲ್ಲಿನ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಅಲ್ಲಿ ಸಣ್ಣ ಸಣ್ಣ ಕಲ್ಲು ಕುಟುಕರು ಕೆಲಸ ಮಾಡುತ್ತಿದ್ದಾರೆ.

**(ಮುಂದು)**

**(404) 16/03/2021/ಎಸ್‌ಪಿಆರ್/ಜಿಆರ್/11:00**

**ಶ್ರೀ ಗೋವಿಂದರಾಜು (ಮುಂದು):-**

ಕಲ್ಲುಕುಟುಕು ಕೆಲಸ ಮಾಡುವವರಿಗೆ ತೊಂದರೆ ಕೊಡಬಾರದೆಂದು ಹೇಳಿದರೂ ಸಹ ಅವರ ಗಾಡಿಯನ್ನು ತಡೆದರು. ಈ ವಿಚಾರದಲ್ಲಿ ನಾನೂ ಸಹ ಮನವಿಯನ್ನು ಮಾಡಿಕೊಂಡಿದ್ದೇನೆ. ಆ ನಂತರದಲ್ಲಿ ಒಂದು ಗಾಡಿಗೆ 53,000/- ರೂಪಾಯಿಗಳಷ್ಟು ದಂಡವನ್ನು ವಿಧಿಸಿದ್ದಾರೆ. ಒಂದು ಮೆಟ್ರಿಕ್ ಟನ್‌ಗೆ 70/- ರೂಪಾಯಿಗಳ ರಾಯಧನವನ್ನು ನಿಗದಿಪಡಿಸಿ, 1,150/- ರೂಪಾಯಿಗಳನ್ನು ವಿಧಿಸಿ, ಇದಕ್ಕೂ ಸಹ 22,500/- ರೂಪಾಯಿಗಳಷ್ಟು ಸಂಯುಕ್ತ ದಂಡವನ್ನು ವಿಧಿಸಿದ್ದಾರೆ. ಇದರ ಜೊತೆಗೆ ನಿಯಂತ್ರಣ ಶುಲ್ಕವನ್ನಾಗಿ 30,000/- ರೂಪಾಯಿಗಳನ್ನು ವಿಧಿಸಿದ್ದಾರೆ. 10 ಟನ್ ಕಲ್ಲಿಗೆ ಅಂದರೆ ಸುಮಾರು 350 ಕಲ್ಲುಗಳಿಗೆ ಒಟ್ಟಾರೆಯಾಗಿ 50-53 ಸಾವಿರ ರೂಪಾಯಿಗಳ ದಂಡವನ್ನು ವಿಧಿಸಿದ್ದಾರೆ. ಈ ರೀತಿಯಾದರೆ, ಕಲ್ಲುಕುಟುಕರು ತಮ್ಮ ವೃತ್ತಿಯನ್ನು ಹೇಗೆ ಮುಂದುವರೆಸುತ್ತಾರೆ? ಅವರ ಜೀವನ ಹೇಗೆ ನಡೆಯಬೇಕು? ಇಂತಹ ವರ್ಗದ ಜನರಿಗೆ ಸರ್ಕಾರವು ದಯಮಾಡಿ ದಂಡವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧಿಸಬಾರದು. ಅವರ ಪಾಡಿಗೆ ಅವರನ್ನು ಬಿಡಿ. ಅವರು ಹಳ್ಳಿಗಳಲ್ಲಿ ವಾಸಿಸುತ್ತಿದ್ದು, ಅಲ್ಲಿನ ಕಲ್ಲುಬಂಡೆಗಳನ್ನು ಒಡೆದುಕೊಂಡು ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಆ ವರ್ಗದ ಜನರ ಪರವಾಗಿ ಮಂತ್ರಿಗಳಿಗೆ ಒತ್ತಾಯಿಸುತ್ತೇನೆ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವುದು ಸರಿಯಾಗಿದೆ. ಈ ಕಾರಣಕ್ಕಾಗಿ ರಾಜ್ಯದಾದ್ಯಂತ ಈ ರೀತಿಯಾಗಿ ಅಲ್ಪ ಪ್ರಮಾಣದಲ್ಲಿ ಕಲ್ಲು ಗಣಿಗಾರಿಕೆ ಮಾಡುವವರು ಅಥವಾ ಹೊಲಗಳಲ್ಲಿರುವ ಕಲ್ಲುಗಳನ್ನು ಒಡೆದು ಜೀವನ ನಡೆಸುತ್ತಿರುವವರ ಮಾಹಿತಿಯನ್ನು ಕಲೆಹಾಕಲಾಗುತ್ತಿದೆ. ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಕೋಲಾರ ಜಿಲ್ಲೆಗೆ ಸಂಬಂಧಪಟ್ಟಂತೆ ಪ್ರಸ್ತಾಪಿಸಿದ್ದಾರೆ. ಇದರ ಬಗ್ಗೆಯೂ ಸಹ ಸವಿವರವಾದ ಮಾಹಿತಿಯನ್ನು ಇಲಾಖಾಧಿಕಾರಿಗಳಿಂದ ಪಡೆದುಕೊಂಡು, ಇದೇ ವಿಷಯವಾಗಿ ಸದಸ್ಯರೊಂದಿಗೆ ಚರ್ಚಿಸಿ, ಕಲ್ಲುಕುಟುಕರಿಗೆ ಯಾವುದೇ ರೀತಿಯಾಗಿ ತೊಂದರೆಯಾಗದಂತೆ, ಗಣಿಗಾರಿಕೆ ನೀತಿಯಲ್ಲಿಯೂ ಸಹ ಬದಲಾವಣೆ ಮಾಡಿಸುವ ವ್ಯವಸ್ಥೆಗಳನ್ನು ಮಾಡಲಾಗುವುದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

**ಉಪಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಪಿ.ಆರ್.ರಮೇಶ್‌ರವರದ್ದು. ಪ್ರಶ್ನೆ ಕೇಳಿದ ಸದಸ್ಯರಿಗೆ ಮಾತ್ರವೇ ಪ್ರಶ್ನೋತ್ತರ ಅವಧಿಯಲ್ಲಿ ಉಪಪ್ರಶ್ನೆಯನ್ನು ಕೇಳಲು ಅವಕಾಶ ನೀಡಲಾಗುವುದು. ಈ ವಿಚಾರದಲ್ಲಿ ದಯಮಾಡಿ ಸದಸ್ಯರು ಸಹಕಾರವನ್ನು ನೀಡಬೇಕು. ನಿಮಗೆ ಅವಕಾಶ ದೊರೆತಾಗ ನಿಮಗಿರುವ ವಿಚಾರಗಳನ್ನು ತಿಳಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ನೀಡುವ ಸಲಹೆಯನ್ನು ಸ್ವೀಕರಿಸಲು ತಮ್ಮ ಬಳಿ ಸಮಯವಿಲ್ಲವೆಂದರೆ, ನಾವೇನು ಮಾಡಬೇಕು? ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಎಂಬುವಂತೆ ತಾವು ಮಾಡುತ್ತಿದ್ದೀರಿ. ನೀವು ನನಗೆ ಮಾತನಾಡಲು ಅವಕಾಶ ನೀಡುತ್ತೀರೆಂದು ನಾನು ಭಾವಿಸುತ್ತೇನೆ.

**ಉಪಸಭಾಪತಿಯವರು:-** ನಾನು ಹೇಳುವುದು ನಿಮಗೆ ಅರ್ಥವಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. ಅದನ್ನೂ ಮೀರಿ ನೀವು ಮಾತನಾಡುತ್ತೇನೆಂದು ಹೇಳಿದರೆ, ನಾನೇನು ಹೇಳಲಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಭೋಜೇಗೌಡರೆ ಇಲ್ಲಿ ನಿಯಮಗಳನ್ನು ಮಾಡಿಕೊಂಡಿದ್ದೇವೆ, ಹೀಗಾಗಿ ಅವುಗಳನ್ನು ಮುರಿಯುವುದು ಬೇಡ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಹೇಳುವ ಸಲಹೆಗಳನ್ನು ತೆಗೆದುಕೊಂಡರೆ ಒಳ್ಳೆಯದಲ್ಲವೇ?

**ಉಪಸಭಾಪತಿಯವರು:–** ಸದಸ್ಯರು ಕೇಳಿರುವ ಪ್ರಶ್ನೆಗಳೆಲ್ಲವೂ ನೋಡಿಕೊಂಡು, ಅವುಗಳಿಗೆ ಪರಿಹಾರ ನೀಡುವುದಾಗಿ ಸಚಿವರು ತಿಳಿಸಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಕೆಲವು ಸದಸ್ಯರಿಂದ ತಿಳಿದುಕೊಳ್ಳಬೇಕಾಗುತ್ತದೆ. ಹೀಗಾಗಿ ನನಗೆ ಮಾತನಾಡಲು ಅವಕಾಶವನ್ನು ನೀಡಿ.

**ಉಪಸಭಾಪತಿಯವರು:–** ಹೀಗಿದ್ದಲ್ಲಿ, ನೀವು ಸಚಿವರೊಂದಿಗೆ ಮುಕ್ತವಾಗಿ ವ್ಯವಹರಿಸಿ.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಇದೇ ವಿಷಯವಾಗಿ ನಿಯಮ 68ರಡಿ ವಿವರವಾದ ಚರ್ಚೆಯನ್ನು ನಿಗದಿಪಡಿಸಲಾಗಿದ್ದು, ಆ ಸಂದರ್ಭದಲ್ಲಿ ಸದಸ್ಯರು ವಿವರವಾಗಿ ಮಾತನಾಡಿದ್ದಲ್ಲಿ ನಾನು ಅವರಿಗೆ ಉತ್ತರವನ್ನು ನೀಡುತ್ತೇನೆ.

**ಉಪಸಭಾಪತಿಯವರು:–** ಶ್ರೀ ಭೋಜೇಗೌಡರೇ, ನೀವು ಆ ಸಂದರ್ಭದಲ್ಲಿ ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮತ್ತು ತಾವು ಮಲೆನಾಡು ಪ್ರದೇಶದಿಂದ ಬಂದವರಾಗಿದ್ದೇವೆ. ಬೆಂಗಳೂರು ನಗರದಲ್ಲಿ ಭೂ ಕಬಳಿಕೆಯಿಂದಾಗಿ ಕೆರೆ–ಕಟ್ಟೆಗಳನ್ನು ನುಂಗಿದರು. ಇದನ್ನೇ ಮಲೆನಾಡು ಭಾಗದಲ್ಲಿ ಮಾಡಿದಾಗ, ಅಲ್ಲಿನ ಅರ್ಧ ಅಥವಾ ಒಂದು ಎಕರೆ ಭೂಮಿಯನ್ನು ಹೊಂದಿದವರು ಕರು, ಹಸುಗಳನ್ನು ಕಟ್ಟಿಕೊಂಡು, ಮನೆಗಳನ್ನು ಖಾಲಿ ಮಾಡುತ್ತಿದ್ದಾರೆ. ಹೀಗಾಗಿ ಕಲ್ಲು ಹೊಡೆಯುವ ವಿಚಾರದಲ್ಲಿ ಸರ್ಕಾರವು ಒಂದಂಶವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಸದಸ್ಯರು ಒಂದು ನಿಮಿಷ ನಾನು ಹೇಳುವುದನ್ನು ಕೇಳಬೇಕು. ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ನಿಯಮ – 68 ರಡಿ ಇದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರವಾಗಿ ಚರ್ಚೆಯಿದೆ. ಆಗ ಸದಸ್ಯರು ತಮ್ಮ ಸಲಹೆಗಳನ್ನು ನೀಡಲಿ, ಅದನ್ನು ನಾನು ಸ್ವೀಕರಿಸುತ್ತೇನೆ.

**ಉಪಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಪಿ.ಆರ್.ರಮೇಶ್ ರವರದ್ದು.

**ಶ್ರೀ ಪಿ.ಆರ್.ರಮೇಶ್:–**ಮಾನ್ಯ ಸಭಾಪತಿಯವರೇ, ನನ್ನ ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ 1415"ಕ್ಕೆ ಸಹಕಾರ ಸಚಿವರು ನೀಡುವ ಉತ್ತರವನ್ನು ನಾನು ಬಹಿಷ್ಕರಿಸುತ್ತೇನೆ.

**ಉಪಸಭಾಪತಿಯವರು:–** ಮಾನ್ಯ ರಮೇಶ್‌ನವರೇ, ತಾವು ಹಿರಿಯ ಸದಸ್ಯರಾಗಿದ್ದೀರಿ, ದಯವಿಟ್ಟು ...

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಅವರು ಏಕೆ ಬಹಿಷ್ಕರಿಸಬೇಕು?

**ಉಪಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ರಮೇಶ್‌ನವರೇ, ಪ್ರಶ್ನೆಯನ್ನು ಕೇಳುವ ಹಕ್ಕು ನಿಮಗೆ ಇದೆ. ಆದರೆ ನೀವು ಒಮ್ಮೆ ಪ್ರಶ್ನೆಯನ್ನು ಕೇಳಿದ ನಂತರ ಅದು ಸದನಕ್ಕೆ ಬಂದರೆ, ಅದು ಸದನದ ಆಸ್ತಿಯಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಬಹಿಷ್ಕಾರ ಮಾಡುವ ಹಕ್ಕು ನಮಗೆ ಇದೆ.

**ಉಪಸಭಾಪತಿಯವರು:–** ನಾನು ಮೊದಲು ನನ್ನ ಮಾತುಗಳನ್ನು ಪೂರ್ತಿಗೊಳಿಸುತ್ತೇನೆ; ನಂತರದಲ್ಲಿ ನೀವು ಮಾತನಾಡಿ. ಸಚಿವರು ನೀಡುವ ಉತ್ತರವನ್ನು ಸದನವು ಬಹಿಷ್ಕಾರ ಮಾಡಬೇಕಾಗುತ್ತದೆ ಹೊರತು ನೀವು ವೈಯಕ್ತಿಕವಾಗಿ ಬಹಿಷ್ಕಾರ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಹರಿಪ್ರಸಾದ್‌ರವರೇ, ನೀವು ಕೆಲವು ವಿಚಾರಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಉಪಸಭಾಪತಿಯವರು:–** ಮಾನ್ಯ ಸಚಿವರೇ, ತಾವು ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಹರಿಪ್ರಸಾದ್‌ರವರೇ, ನೀವು ಹಿರಿಯ ಸದಸ್ಯರಾಗಿದ್ದು, ಅರ್ಥ ಮಾಡಿಕೊಳ್ಳಬೇಕು. ಯಾವುದೋ ಒಂದು ಸಾಮಾಜಿಕ ಜಾಲತಾಣಕ್ಕೆ ಸಂಬಂಧಪಟ್ಟಂತೆ ಸಚಿವರು ನ್ಯಾಯಾಲಯದಲ್ಲಿ ಕೇವಿಯಟ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಜಿಯನ್ನು ಸಲ್ಲಿಸಿದ್ದಾರೆ ಎನ್ನುವುದು ನಿಮ್ಮ ಪ್ರಶ್ನೆಯಾಗಿದೆ. ಇವತ್ತಿನ ದಿವಸ ಸಾಮಾಜಿಕ ಜಾಲತಾಣಗಳು ಯಾವ ವ್ಯವಸ್ಥೆಯಲ್ಲಿವೆ ಎನ್ನುವುದು ತಮಗೆಲ್ಲರಿಗೂ ಸಹ ತಿಳಿದಿದೆ. ಯಾವ ಸಂದರ್ಭದಲ್ಲಿ ಯಾರನ್ನು ಬೇಕಾದರೂ ನಿಮ್ಮನ್ನೂ ಒಳಗೊಂಡಂತೆ ತೇಜೋವಧೆ ಮಾಡುವಂತಹ ಕೆಲಸಗಳು ನಡೆಯುತ್ತವೆ. ಹೀಗಾಗಿ ಸಾಮಾಜಿಕ ಜಾಲತಾಣದೊಳಗೆ ಬರಬಾರದು ಎನ್ನುವ ಉದ್ದೇಶದಿಂದ ಪ್ರತಿಯೊಬ್ಬರೂ ಕೂಡ ಅರ್ಜಿಗಳನ್ನು ಸಲ್ಲಿಸಿದ್ದಾರೆ. ನಾಳೆಯ ದಿನ ನೀವೂ ಸಹ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸುವ ಘಟನೆಗಳಾಗಬಹುದು. ಹೀಗಾಗಿ ಇದನ್ನು ನೀವುಗಳು ಏಕೆ ದೊಡ್ಡ ವಿಚಾರವನ್ನಾಗಿ ಮಾಡುತ್ತೀರೆಂದು ನನಗೆ ಅರ್ಥವಾಗುತ್ತಿಲ್ಲ. ಸದಸ್ಯರು ಕೇಳುವ ಪ್ರಶ್ನೆಗಳಿಗೆ ಸರ್ಕಾರವು ಉತ್ತರವನ್ನು ನೀಡಬೇಕಾಗುತ್ತದೆ ಮತ್ತು ಸರ್ಕಾರವನ್ನು ನಡೆಸಬೇಕಾಗುತ್ತದೆ. ಈ ವಿಚಾರದಲ್ಲಿ ನೀವುಗಳು ಈ ರೀತಿಯಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವುದರಿಂದ ಸದನಕ್ಕೆ ಹಾಗೂ ನಿಮಗೆ ಗೌರವ ತರುವುದಿಲ್ಲ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾವು ಸಚಿವರಿಂದ ಈ ಪ್ರಶ್ನೆಗೆ ಉತ್ತರವನ್ನು ಬಯಸುತ್ತೇವೆ; ಇದಕ್ಕೆ ಸರ್ಕಾರವು ಉತ್ತರಿಸಬೇಕು.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದು ನಮ್ಮ ಹಕ್ಕು ಆಗಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸದಸ್ಯರು ಪ್ರಶ್ನೆಗಳನ್ನು ಕೇಳದಿದ್ದರೆ, ಇತರೆ ಸದಸ್ಯರುಗಳಿಗೆ ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅಧಿಕಾರವಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಈ ಪ್ರಶ್ನೆಯನ್ನು ಬಹಿಷ್ಕರಿಸುತ್ತೇವೆ. ಸಚಿವರು ಉತ್ತರವನ್ನಾದರೂ ನೀಡಲಿ ಅಥವಾ ಇನ್ನೇನಾದರನ್ನೂ ನೀಡಲಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ನಾವು ಸಚಿವರಿಗೆ ಪ್ರಶ್ನೆಗಳನ್ನು ಕೇಳಬೇಕಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೆಯನ್ನು ಕೇಳುವ ಅಧಿಕಾರವು ನಮಗೂ ಸಹ ಇದೆ. ಹೀಗಾಗಿ ನಾವು ಪ್ರಶ್ನೆಗಳನ್ನು ಕೇಳುತ್ತೇವೆ. ಅದು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡ ಪ್ರಶ್ನೆಯಾಗಿದೆ. **(ಗೊಂದಲ)** ಈ ಒಂದು ಪ್ರಶ್ನೆಯಿಂದ ರಾಜ್ಯದಲ್ಲಿನ ಅನೇಕ ಸಾರ್ವಜನಿಕರ ಸಮಸ್ಯೆಗಳು ಪರಿಹಾರವಾಗುತ್ತವೆ. **(ಗೊಂದಲ)** ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಿಲ್ಲವೆಂದರೆ, ನಾವೇ ಪ್ರಶ್ನೆಗಳನ್ನು ಕೇಳುತ್ತೇವೆ. ಆದರೆ, ...

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಸಹಕಾರ ಸಚಿವರಿಂದ ನಾವು ಉತ್ತರವನ್ನು ಬಯಸುತ್ತೇವೆ.

**(ಗೊಂದಲ)**

**ಉಪಸಭಾಪತಿಯವರು:-** ಸಭಾನಾಯಕರೇ, ನೀವು ಪ್ರಶ್ನೆಯನ್ನು ಕೇಳುತ್ತಿರೋ ಅಥವಾ ಬಿಡುತ್ತರೋ, ಆದರೆ ಇಲ್ಲಿರುವ ಪ್ರಶ್ನೆ ಅದಲ್ಲ. ಸದಸ್ಯರು ಕೇಳಿರುವ ಪ್ರಶ್ನೆಯು ಸನದಕ್ಕೆ ಬಂದಿದೆ. ಹೀಗಾಗಿ ಸದನದ ಒಳಗಡೆ ಇಡೀ ರಾಜ್ಯದ ಜನರ ವಿಚಾರಗಳನ್ನು ತಿಳಿದುಕೊಳ್ಳಬೇಕಾಗಿದೆ. ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ; ಹೀಗಾಗಿ ಸಹಕಾರ ಸಚಿವರು ಉತ್ತರವನ್ನು ಕೊಡಬೇಕಾಗುತ್ತದೆ. ಹೀಗಾಗಿ ಸಚಿವರು ಉತ್ತರವನ್ನು ನೀಡಲಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಸಚಿವರು ನೀಡುವ ಉತ್ತರವನ್ನು ಬಹಿಷ್ಕರಿಸಿದ್ದೇವೆ.

**(ಗೊಂದಲ)**

**ಉಪಸಭಾಪತಿಯವರು:-** ಸದಸ್ಯರು ಕೇಳುವ ಪ್ರಶ್ನೆಯನ್ನು ಇಡೀ ಸದನವು ಕೇಳುತ್ತದೆ. ಇದು ಕೇವಲ ಸದಸ್ಯರ ಪ್ರಶ್ನೆಯಲ್ಲ. ಇದು ಕೇವಲ ಒಬ್ಬರಿಗೆ ಸಂಬಂಧಪಟ್ಟ ವಿಚಾರವಲ್ಲ. ಸದಸ್ಯರು ಪ್ರಶ್ನೆಯನ್ನು ಕೇಳುವ ಮೊದಲೇ ಈ ವಿಚಾರದ ಬಗ್ಗೆ ಯೋಚನೆಯನ್ನು ಮಾಡಬೇಕಾಗಿತ್ತು. ಸದಸ್ಯರು ಪ್ರಶ್ನೆಯನ್ನು ಕೇಳಿದ ನಂತರ ಮತ್ತು ಅದು ಸದನಕ್ಕೆ ಬಂದ ಮೇಲೆ ಅದು ಸದನದ ಆಸ್ತಿಯಾಗುತ್ತದೆ ಹಾಗೂ ಸಚಿವರು ಅದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಹೀಗಾಗಿ ಸಚಿವರು ಈ ಪ್ರಶ್ನೆಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕಡ್ಡಾಯವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ನೀವು ಯಾವ ವಿಚಾರಗಳನ್ನು ಬೇಕಾದರೂ ತೆಗೆದುಕೊಳ್ಳಿ, ಅದನ್ನು ಬೇಡವೆಂದು ಹೇಳುವ ಅಧಿಕಾರವು ನಿಮಗೂ ಸಹ ಇರುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಸಚಿವರು ಕೊಡುವ ಉತ್ತರವನ್ನು ಬಹಿಷ್ಕರಿಸುತ್ತೇವೆ.

**(ಗೊಂದಲ)**

**ಉಪಸಭಾಪತಿಯವರು:-** ನೀವು ಬಹಿಷ್ಕಾರ ಮಾಡುಬಹುದು ಎಂದು ಯಾವ ಕಾನೂನು ಹೇಳುತ್ತದೆ ಎನ್ನುವುದನ್ನು ನನಗೆ ಹೇಳಿ. **(ಗೊಂದಲ)** ಯಾವ ನಿಯಮದಡಿ ನೀವು ಪ್ರಶ್ನೆಯನ್ನು ಕೇಳಿ, ಅದನ್ನು ಬಹಿಷ್ಕಾರ ಮಾಡುತ್ತೇನೆ ಎಂದು ಹೇಳಲಾಗಿದೆ ಎನ್ನುವುದನ್ನು ನೀವು ನನಗೆ ತಿಳಿಸಿ. ಆಗ ನಾನು ಒಪ್ಪಿಕೊಳ್ಳುತ್ತೇನೆ. **(ಗೊಂದಲ)** ಪ್ರಶ್ನೆಯನ್ನು ಕೇಳಿದ ಸಂದರ್ಭದಲ್ಲಿ, ಆ ಪ್ರಶ್ನೆಯನ್ನು ತಿರಸ್ಕರಿಸುವುದು ಅಥವಾ ಆ ಪ್ರಶ್ನೆಯನ್ನು ನಾನು ಕೇಳುವುದಿಲ್ಲ ಎಂದು ಹೇಳಿ ಬಹಿಷ್ಕರಿಸಿದರೆ, ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಯಾವ ನಿಯಮದಡಿ ಅವಕಾಶವಿದೆ ಎಂದು ನನಗೆ ಹೇಳಿ. ಒಂದು ವೇಳೆ ಆ ನಿಯಮದಡಿ ಆ ರೀತಿಯಾಗಿ ಇದ್ದರೆ, ಖಂಡಿತವಾಗಿಯೂ ಸಹ ಅದೇ ರೀತಿಯಾಗಿ ಮಾಡಲಾಗುವುದು. ನಿಮಯದಲ್ಲಿ ಇಲ್ಲದೇ ಇರುವುದನ್ನು ಖಂಡಿತವಾಗಿಯೂ ಸಹ ಪೀಠದಿಂದ ಅಂಗೀಕೃತ ಮಾಡುವುಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ನಮ್ಮ ಹಕ್ಕು ಆಗಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರ ಹಕ್ಕು ತಾವು ಪ್ರಶ್ನೆಯನ್ನು ಕೇಳುವುದಿಲ್ಲ ಎಂದು ಆಗಿದೆ. ಈಗ ಅದು ಸದನದ ಸ್ವತ್ತಾಗಿರುವುದರಿಂದ ನಾವು ಪ್ರಶ್ನೆಯನ್ನು ಕೇಳುತ್ತೇವೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಕೇಳಿಕೊಳ್ಳಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ನಾವು ಪ್ರಶ್ನೆಯನ್ನು ಕೇಳುತ್ತೇವೆ.

**(ಗೊಂದಲ)**

**ಉಪಸಭಾಪತಿಯವರು:–** ಶ್ರೀ ಹರಿಪ್ರಸಾದ್‌ರವರೇ, ನೀವು ಬಹಳಷ್ಟು ಸದನಗಳನ್ನು ನೋಡಿಕೊಂಡು ಬಂದಿದ್ದೀರಿ. ನಿಮಗೆ ಎಲ್ಲವೂ ಅರ್ಥವಾಗುತ್ತದೆ. ಕೇವಲ ವಿರೋಧಕ್ಕೋಸ್ಕರ ವಿರೋಧ ಮಾಡುವುದು ಒಳ್ಳೆಯದಲ್ಲ. ಯಾವ ನಿಯಮದಲ್ಲಿ ಅವಕಾಶವಿದೆ ಎನ್ನುವುದನ್ನು ತಿಳಿಸಿ. ಆಗ ಮಾತ್ರವೇ ನಾನು ಒಪ್ಪಿಕೊಳ್ಳುತ್ತೇನೆ. **(ಗೊಂದಲ)** ಪ್ರಶ್ನೆಯನ್ನು ಕೇಳಬಾರದು ಎಂದು ಯಾವ ನಿಯಮಗಳಲ್ಲಿದೆ ಎನ್ನುವುದನ್ನು ಹೇಳಿ; ಆಗ ನಾನು ಒಪ್ಪಿಕೊಳ್ಳುತ್ತೇನೆ. **(ಗೊಂದಲ)** ಈ ರೀತಿಯಾಗಿ ಸದನದ ಒಳಗಡೆ ದಿಕ್ಕು ತಪ್ಪಿಸುವ ಕೆಲಸವನ್ನು ಮಾಡಬೇಡಿ. ಅದಕ್ಕೆ ನಾನು ಅವಕಾಶವನ್ನು ನೀಡುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, . . . . . . **(ಗೊಂದಲ)** ಈ ಸದನದ ಗೌರವ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸಾಂದರ್ಭಿಕವಾಗಿ ನಿಮ್ಮ ಸಮಾಧಾನಕ್ಕಾಗಿ ಹೇಳಲಾಗಿರುತ್ತದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಈ ಸದನದ ಗೌರವ ಹಾಗೂ . . . . .

**(ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡಿದ್ದು ದಾಖಲು ಮಾಡಿರುವುದಿಲ್ಲ)**

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, you cannot compel a Member to ask the Question.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾವು ಪ್ರಶ್ನೆಯನ್ನು ಕೇಳುವುದಿಲ್ಲ ಎನ್ನುವ ನಿಯಮವು ಇದೆ. ಆದರೆ ನೀವು ಪ್ರಶ್ನೆಯನ್ನು ಕೇಳದಿದ್ದಾಗ ಅದು ಸದನದ ಆಸ್ತಿಯಾಗುತ್ತದೆ. ಬೇರೆಯವರಿಗೆ ಅಧಿಕಾರ ಬರುತ್ತದೆ.

**(ಗೊಂದಲ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಪ್ರಶ್ನೆಯನ್ನು ಕೇಳುವುದು ನಮ್ಮ ಹಕ್ಕು ಆಗಿದೆ. ಒಂದು ವೇಳೆ ನಾವು ಪ್ರಶ್ನೆಯನ್ನು ಕೇಳದೇ, ಸದನದಲ್ಲಿ ಹೊರನಡೆಯಬಹುದು. ಪ್ರತಿಯೊಂದನ್ನು ನಾವು ನಮ್ಮ ಭಾವನೆಗಳಲ್ಲಿ ವ್ಯಕ್ತಪಡಿಸಬಹುದು.

**ಉಪಸಭಾಪತಿಯವರು:–** ಶ್ರೀ ಪ್ರತಾಪಚಂದ್ರ ಶೆಟ್ಟರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು ನಿಯಮ – 49 ನ್ನು ವಿರೋಧ ಪಕ್ಷದ ಸದಸ್ಯರು ನೋಡಬೇಕು. ಅದನ್ನು ನಾನು ಈಗ ಉಲ್ಲೇಖಿಸುತ್ತೇನೆ.

> **'49– ಪ್ರಶ್ನೆಗಳನ್ನು ಹಿಂಪಡೆಯುವುದು ಅಥವಾ ಮುಂದೂಡುವುದು:–**
> **ಯಾರೇ ಸದಸ್ಯರು ಯಾವ ಸಭೆಯ ಕಾರ್ಯಕ್ರಮದ ಪಟ್ಟಿಯಲ್ಲಿ ತನ್ನ ಪ್ರಶ್ನೆಯನ್ನು ಇಡಲಾಗಿದೆಯೋ ಆ ಸಭೆ ನಡೆಯುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ನೋಟೀಸು ನೀಡುವ ಮೂಲಕ ತನ್ನ ಪ್ರಶ್ನೆಯನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು, ಅಥವಾ ನೋಟೀಸಿನಲ್ಲಿ ನಿರ್ದಿಷ್ಟಪಡಿಸುವಂಥ ತರುವಾಯ ದಿನಕ್ಕೆ ಮುಂದೂಡಬಹುದು ಮತ್ತು ಅಂಥ ಮುಂದೂಡಿದ ದಿನದಂದು ಸೂಚನೆಗೆ ಒಳಪಟ್ಟು ಮತ್ತು ನಿಯಮದ ಉಪಬಂಧಗಳ ಪ್ರಕಾರ ಪ್ರಶ್ನೆಯನ್ನು ಪಟ್ಟಿಯಲ್ಲಿ ಹಾಗೆ ಮುಂದೂಡದೆ ಇರುವಂಥ ಎಲ್ಲ ಪ್ರಶ್ನೆಗಳನ್ನು ಸೇರಿಸತಕ್ಕದ್ದು'.**

ವಿರೋಧ ಪಕ್ಷದ ಸದಸ್ಯರು ಇದನ್ನು ನೋಡಬೇಕು. ನನಗೆ ಯಾವುದೇ ಸದಸ್ಯರು ನೋಟೀಸ್‌ನ್ನು ನೀಡಿಲ್ಲ. ಪ್ರಶ್ನೆಗಳನ್ನು ನಿಮ್ಮ ಇಚ್ಛಾನುಸಾರ ಉಲ್ಲೇಖಿಸಲಾಗಿದೆ. ಹೀಗಾಗಿ ಯಾವುದೇ ಕಾರಣಕ್ಕೂ ಸಹ ಇದನ್ನು ಮುಂದೂಡುವ ಪ್ರಶ್ನೆಯೇ ಇಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಬೇರೆ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ನೀಡಿ.

**(ಗೊಂದಲ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, . . .

**ಉಪಸಭಾಪತಿಯವರು:–** ನೀವು ಹಿರಿಯ ಸದಸ್ಯರಾಗಿದ್ದೀರಿ, ಪೀಠದಲ್ಲಿಯೂ ಸಹ ಕುಳಿತಿದ್ದೀರಿ. ನೀವೇ ಹೀಗೆ ಹೇಳಿದರೆ, ಸದನವನ್ನು ನಡೆಸುವುದು ಹೇಗೆ? ನಿಯಮ – 49 ನ್ನು ನೋಡಿ.

**(ಗೊಂದಲ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ . . .

**(ಮುಂದು)**

**(405)/16–3–2021/11–10/ಎಲ್‌ಎಂ/ಎಂಡಿ**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಮುಂದು):–**

ಮಾನ್ಯ ಸಭಾಪತಿಗಳೆ, ಈ ಸದನದಲ್ಲಿ ಒಂದು ಸತ್‌ಸಂಪ್ರದಾಯವಿದೆ. ಸದಸ್ಯರು ಪ್ರಶ್ನೆ ಕೇಳಬಹುದು ಅಥವಾ ಬಿಡಬಹುದು. ಒಂದು absence ಇದ್ದರೆ ಪ್ರಶ್ನೆ ಕೇಳದೆ ಇರಬಹುದು. ವಿಶೇಷವಾಗಿ ತಾವು ಅನುಮತಿ ಕೊಟ್ಟರೆ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಶ್ನೆ ಕೇಳಬಹುದು. ಇಲ್ಲಿ ಪ್ರತಿಭಟನಾತ್ಮಕವಾಗಿ ನಾವು ಪ್ರಶ್ನೆ ಕೇಳುವುದಿಲ್ಲ ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಅದನ್ನು ನಾವು ಹೇಳುತ್ತೇವೆ. ಅದನ್ನು ಮುಂದುವರೆಸಲೇ ಬೇಕು ಎನ್ನುವುದು ಸಂಘರ್ಷ, ಆ ಸಂಘರ್ಷ ನಿಮಗೆ ಅಡ್ಡಿ ಇಲ್ಲ ಎಂದರೆ ನಮಗೂ ಅಡ್ಡಿ ಇಲ್ಲ. ಇಲ್ಲಿ ನಮಗೆ ಖುಷಿ ಇದ್ದರೆ ಪ್ರಶ್ನೆ ಕೇಳುತ್ತೇವೆ ಅಥವಾ ಬಿಡುತ್ತೇವೆ. ನಾವು ಕೇಳೆ ಕೇಳುತ್ತೇವೆ ಎನ್ನುವುದಾದರೆ ಏನು ಮಾಡಲು ಆಗುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಪ್ರಶ್ನೆ ಕೇಳುವುದು ಬಿಡುವುದು ನನ್ನ ಹಕ್ಕು ಎಂದು ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಹೇಳಿದ್ದಾರೆ. ನಾನು ಪ್ರಶ್ನೆ ಕೇಳುವುದಿಲ್ಲ. ನೀವು ಏಕೆ ಒತ್ತಾಯ ಮಾಡುತ್ತೀರಿ ಎನ್ನುವ ನಿಮ್ಮ ವಾದಕ್ಕೆ ಅರ್ಥವಿದೆ. . . . . ಅದಕ್ಕಾಗಿ ನಾವು ಪ್ರಶ್ನೆ ಕೇಳುವುದಿಲ್ಲ ಎಂದು ಹೇಳಿದ್ದಾರೆ. ಹಾಗೆ ಹೇಳುವ ಹಕ್ಕು ನಿಮಗೆ ಇಲ್ಲ. ಪ್ರಶ್ನೆ ಕೇಳುವುದು, ಬಿಡುವುದು ನಿಮಗೆ ಬಿಟ್ಟ ವಿಚಾರ. . . . . . .

**(ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಮಾನ್ಯ ಸಭಾ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಉಲ್ಲೇಖ ಮಾಡಿರುವ ಕೆಲವು ಪದಗಳನ್ನು ದಾಖಲು ಮಾಡಿರುವುದಿಲ್ಲ)**

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಕರ್ನಾಟಕದ ಇತಿಹಾಸದಲ್ಲಿ ಇಂತಹದ್ದು ಯಾವತ್ತಾದರೂ ನಡೆದಿದೆಯ?

**ಶ್ರೀ ಬಿ.ಬಸವರಾಜು (ನಗರಾಭಿವೃದ್ಧಿ ಸಚಿವರು):–** ನಿಮ್ಮಲ್ಲಿ ಯಾರೂ ಸಹ ಕೋರ್ಟಿಗೆ ಹೋಗಿಲ್ಲವೇ?

**(ಗೊಂದಲ)**

**ಉಪಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಿಯಮ 50ನ್ನು ನೋಡಿ. ನಾನು ನಿಯಮವನ್ನು ಓದುತ್ತೇನೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ದಯಮಾಡಿ ಇದನ್ನು ಇಲ್ಲಿಗೆ ಬಿಡಿ. ದೊಡ್ಡದಾಗಿ ಮಾಡಲು ಹೋಗಬೇಡಿ. ಇಷ್ಟಕ್ಕೆ ಬಿಡದಿದ್ದರೆ ಈ ಸದನ ನಡೆಯುವುದಿಲ್ಲ.

**(ಗೊಂದಲ)**

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಗಳೆ, ಮಾನ್ಯ ಉಪಸಭಾಪತಿಯವರು ಸ್ಪಷ್ಟವಾಗಿ rule mention ಮಾಡಿ ಹೇಳಿದ್ದಾರೆ. ಒಬ್ಬರು ತಮ್ಮ ಪ್ರಶ್ನೆಯನ್ನು ಕೇಳುವುದಿಲ್ಲ ಎನ್ನುವುದಾದರೆ ಲಿಖಿತ ನೋಟಿಸ್ ಕೊಟ್ಟು ನಾನು ಸದರಿ ಪ್ರಶ್ನೆಯನ್ನು ಕೇಳುವುದಿಲ್ಲ ಎಂದು ತಿಳಿಸಬೇಕು. ಅದನ್ನು ಬಿಟ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂದು ಸದನದಲ್ಲಿ ಪ್ರಶ್ನೆ ಬಂದಾಗ ಆ ಪ್ರಶ್ನೆಯನ್ನು ನಾನು ಕೇಳುವುದಿಲ್ಲ, ಬಹಿಷ್ಕಾರ ಹಾಕುತ್ತೇವೆ ಎಂದರೆ ಏನು ಅರ್ಥ? ಇದನ್ನು ನೋಡಿದರೆ ವಿರೋಧ ಪಕ್ಷದ ಸದಸ್ಯರು ರಾಜಕಾರಣವನ್ನು ಸದನದ ಒಳಗೆ ಮಾಡುತ್ತಿದ್ದಾರೆ. ರಾಜಕಾರಣ ಮಾಡುವುದಾದರೆ ಸದನದ ಹೊರಗೆ ಮಾಡಿ, ಒಳಗಡೆ ಬೇಡ.

**(ಗೊಂದಲ)**

**ಉಪಸಭಾಪತಿಯವರು;–** ನಾನು ನಿಯಮವನ್ನು ಓದಿ ಹೇಳುತ್ತೇನೆ. ಅದನ್ನು ತಿಳಿದುಕೊಳ್ಳಿ. ಅದರಲ್ಲಿ ಏನಾದರೂ ತಪ್ಪಾಗಿದ್ದರೆ ವಾಪಸ್ ತೆಗೆದುಕೊಳ್ಳಿ.

**(ಗೊಂದಲ)**

ಈ ಪೀಠದಲ್ಲಿ ಕುಳಿತ ಮೇಲೆ ನಿಯಮಗಳ ಪ್ರಕಾರ ಸದನ ನಡೆಸುವುದು ನಮ್ಮ ಕರ್ತವ್ಯವಾಗಿದೆ. ಸ್ವಲ್ಪ ನಿಯಮ 50 ಏನು ಹೇಳುತ್ತದೆ ಅದನ್ನು ಕೇಳಿ ಎಲ್ಲರೂ. ನಂತರ ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ:–** ನಮಗೆ ಮಾತನಾಡಲು ಅವಕಾಶವನ್ನು ಕೊಡಿ. ನಮ್ಮ ಅಭಿಪ್ರಾಯವನ್ನು ಹೇಳುತ್ತೇವೆ.

**ಉಪಸಭಾಪತಿಯವರು:–** ಈ ವಿಚಾರದಲ್ಲಿ ಮಾತನಾಡಲು ತಮಗೆ ಖಂಡಿತವಾಗಿ ಅವಕಾಶವನ್ನು ಕೊಡುತ್ತೇನೆ. ಆದರೆ ನಿಯಮಗಳ ಅಡಿಯಲ್ಲಿ ಸದನವನ್ನು ನಡೆಸಲು ನೀವು ನನಗೆ ಅವಕಾಶ ಮಾಡಿಕೊಡಬೇಕು.

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಗಳೆ, ಕಳೆದ ಒಂದು ವಾರದಿಂದ ಈ ರೀತಿಯ ಪ್ರಶ್ನೆಗಳನ್ನು ನಾವು ಕೇಳುವುದಿಲ್ಲ ಎಂದು ಹೇಳುತ್ತಿದ್ದೇವೆ. ಪೀಠದಿಂದ ಅದನ್ನು ಒಪ್ಪಿ ನಮಗೆ ಅವಕಾಶವನ್ನು ಕೊಟ್ಟಿದ್ದಾರೆ. ಇವತ್ತು ಏಕೆ ಈ ನಿಯಮ ಬಂತು? ಒಂದು ವಾರದಿಂದ ಏಕೆ ಈ ನಿಯಮ ಬರಲಿಲ್ಲ? ಪೀಠದಿಂದ ಏಕೆ ನಮಗೆ ಅನ್ಯಾಯವಾಗುತ್ತಿದೆ. ಒಂದು ವಾರದಿಂದ ಅವಕಾಶ ಕೊಟ್ಟು ಇವತ್ತು ಏಕೆ ಈ ನಿಯಮ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:-** ನಾನು ಈ ಪೀಠದಲ್ಲಿ ಕುಳಿತು ಸಭಾಪತಿಯಾಗಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ನಿಯಮಗಳ ಪ್ರಕಾರವೇ ಸದನವನ್ನು ನಡೆಸುವಂತಹ ಕೆಲಸವನ್ನು ಮಾಡುತ್ತೇನೆ.

(ಗೊಂದಲ)

ನಾನು ನಿಯಮ 50ನ್ನು ಓದುತ್ತೇನೆ ಕೇಳಿ, **"**ಸಭಾಪತಿಯವರು ಸದಸ್ಯರ ಹೆಸರನ್ನು ಕರೆದಾಗ ಸದಸ್ಯರು ಕುಳಿತ ಜಾಗದಲ್ಲಿಯೇ ಎದ್ದುನಿಂತುಕೊಳ್ಳತಕ್ಕದ್ದು. ಯಾವುದೆ ಪ್ರಶ್ನೆಯನ್ನು ಕೇಳಲು ಅವಕಾಶ ನೀಡಿದಾಗ ಪ್ರಶ್ನೆಯನ್ನು ಕೇಳದಿದ್ದರೆ ಅಥವಾ ಯಾವ ಸದಸ್ಯರ ಹೆಸರಿನಲ್ಲಿ ಆ ಪ್ರಶ್ನೆ ಇರುತ್ತದೆ ಆ ಸದಸ್ಯರು ಗೈರು ಹಾಜರಾಗಿದ್ದರೆ, ಸಭಾಪತಿಯವರು ಯಾವುದೆ ಸದಸ್ಯರ ಕೋರಿಕೆಯ ಮೇರೆಗೆ ಆ ಪ್ರಶ್ನೆಗೆ ಉತ್ತರ ನೀಡಬೇಕೆಂದು ನಿರ್ದೇಶಿಸಬಹುದು.**"** This is the procedure. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಇದು ನಿಮಗೂ ಗೊತ್ತಿದೆ. ನಿಯಮ 50ರ 3ನೇ ಭಾಗದಲ್ಲಿ ಈ ರೀತಿ ಇದೆ. ಹೀಗಾಗಿ ನಾನು ಸದಸ್ಯರಿಗೆ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ತಾವು ನಿಯಮ 49ನ್ನು ಓದಿದ್ದೀರಿ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:-** ಜನ ನೋಡುತ್ತಿದ್ದಾರೆ.

**(ಗೊಂದಲ)**

**ಉಪಸಭಾಪತಿಯವರು:-** ಜನ ನೋಡುತ್ತಿದ್ದಾರೆ ಎನ್ನುವುದನ್ನು ನೀವು ಹಿರಿಯರು ಯೋಚನೆ ಮಾಡಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ:-** ಅವರು ಪ್ರಶ್ನೆ ಕೇಳುವುದಿಲ್ಲ ಇದನ್ನು ಇಲ್ಲಿಗೆ ಬಿಡಿ. ಹೀಗೆ ಮುಂದುವರೆದರೆ ನಾವು ಧರಣ ಮಾಡುವುದು ಸದನ ನಿಂತು ಹೋಗುವುದು ಇವೆಲ್ಲವು ನಡೆಯುವುದು, ಈಗ ಆಗಿರುವ ಮರ್ಯಾದೆ ಸಾಕು ಇದನ್ನು ಇಲ್ಲಿಗೆ ಮುಗಿಸಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜಗದೀಶ್ ಶೆಟ್ಟರ್:-** ಈ ರೀತಿಯ ರಾಜಕಾರಣ ಮಾಡುವುದಾದರೆ ಹೊರಗೆ ಹೋಗಿ ಮಾಡಿ. ಸಾರ್ವಜನಿಕರ ಹಣ ವೆಚ್ಚವಾಗುತ್ತಿದೆ. ಸದನ ಇರುವುದು ಚರ್ಚೆ ಮಾಡಲಿಕ್ಕೆ, ಆ ಕೆಲಸವನ್ನು ಮಾಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ತಾವು ನಿಯಮ 49 ಮತ್ತು ನಿಯಮ 50ನ್ನು ಓದಿ ನೋಟೀಸ್ ಕೊಡಬೇಕು ಎಂದು ಹೇಳಿದ್ದೀರಿ. ನಾವು ಈಗ ಪ್ರಶ್ನೆ ಕೇಳುವುದೇ ಇಲ್ಲ ಎಂದರೆ ಅದಕ್ಕೆ ಏನಾದರೂ ನಿಯಮವಿದೆಯೇ? We will not ask the question. ನಾವು ಪ್ರಶ್ನೆ ಹಾಕಿದ್ದೇವೆ ಅದು ಒಂದು ಸದನದಲ್ಲಿ ಬಂದಿದೆ, ಪ್ರಶ್ನೆಯನ್ನು withdraw ಮಾಡಬೇಕಾದರೆ ನೋಟೀಸ್ ಕೊಡಬೇಕು ಅದಕ್ಕೆಲ್ಲಾ ಒಂದು procedure ಇದೆ. ಈಗ ನಾವು ಸದನಕ್ಕೆ ಬಂದಿದ್ದೇವೆ. We are not interested to ask the question. It is an inherent right, fundamental right of the member of this August House.

**ಶ್ರೀ ಸಿ.ಎಂ.ಇಬ್ರಾಹಿಂ:-** ನೀವು ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಮಾಡಿ ನಂತರ ತೆಗೆದುಕೊಳ್ಳಿ.

**(ಗೊಂದಲ)**

**ಉಪಸಭಾಪತಿಯವರು:-** ಯಾರೂ ಒಬ್ಬ ಸದಸ್ಯರು ಎದ್ದು ನಿಂತು ಕೇಳಿದರೆ ಅದಕ್ಕೆ ಅವಕಾಶ ಕೊಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸಂಬಂಧಪಟ್ಟ ಸದಸ್ಯರು ನಾನು ಪ್ರಶ್ನೆಯನ್ನು ಕೇಳುವುದಿಲ್ಲ ಎಂದರೆ ಅದಕ್ಕೆ ನಿಯಮವಿದೆಯ? Is there any rule? ನಾನು ಪ್ರಶ್ನೆಯನ್ನು ಕೇಳಿದ್ದೇನೆ. ನಿಯಮಗಳ ಪ್ರಕಾರ ಆ ಪ್ರಶ್ನೆಯನ್ನು withdraw ಮಾಡಬೇಕಾದರೆ ನೋಟಿಸ್ ಕೊಡಬೇಕು ಎನ್ನುವ ಎಲ್ಲಾ procedure ನ್ನು ತಾವು ಓದಿ ಹೇಳಿದ್ದಿರಿ. It is the procedure. We will not deny it. ಇದು ನಾವೇ ಮಾಡಿಕೊಂಡಿರುವಂತಹ ನಿಯಮಗಳು ಅದನ್ನು ನಾನು ಒಪ್ಪುತ್ತೇನೆ. All of a sudden, ನನಗೆ ಆ ಪ್ರಶ್ನೆಯನ್ನು ಕೇಳಲು ನನಗೆ ಆಸಕ್ತಿ ಇಲ್ಲ ಎಂದಾಗ, can you

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

compel a member to ask that question, you cannot compel. ಆಯಿತು, you leave it ಎಂದು ಹೇಳಬೇಕು ನೀವು. ಅದರ ಬಗ್ಗೆ ನಿಯಮ ಏನು ಹೇಳಿದೆ ಹೇಳಿ.

**ಉಪಸಭಾಪತಿಯವರು:–** ಅದರ ಬಗ್ಗೆಯು ನಿಯಮದಲ್ಲಿ ಹೇಳಿದೆ, ಸದಸ್ಯರು ಪ್ರಶ್ನೆಯನ್ನು ಕೇಳದೆ ಇದ್ದ ಸಂದರ್ಭದಲ್ಲಿ, ಬೇರೆ ಸದಸ್ಯರು ಆ ಪ್ರಶ್ನೆಯನ್ನು ಎದ್ದು ನಿಂತು ಕೇಳಿದರೆ ಅದಕ್ಕೆ ಉತ್ತರವನ್ನು ಕೊಡಬೇಕು ಎನ್ನುವ ನಿಯಮವಿದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ನಿಯಮ 50(2)ನ್ನು ಓದಿ. ಅದರಲ್ಲಿ ಸಭಾಪತಿಯವರು ಒಬ್ಬ ಸದಸ್ಯನ ಹೆಸರನ್ನು ಕರೆದಾಗ, ಆ ಸದಸ್ಯರು ತಾವು ಕುಳಿತ ಜಾಗದಿಂದ ಎದ್ದು ನಿಲ್ಲತಕ್ಕದ್ದು ಮತ್ತು ತನ್ನ ಹೆಸರಿನ ಮುಂದೆ ಇರುವಂತಹ ಪ್ರಶ್ನೆಯನ್ನು ಕೇಳಲು ನನಗೆ ಉದ್ದೇಶವಿಲ್ಲವೆಂದು ತಿಳಿಸದ ಹೊರತು, ಪ್ರಶ್ನೆಗಳ ಪಟ್ಟಿಯಲ್ಲಿ ಇರುವ ತನ್ನ ಪ್ರಶ್ನೆಯ ಸಂಖ್ಯೆಯನ್ನು ಸೂಚಿಸಿ ಆ ಪ್ರಶ್ನೆಯನ್ನು ಕೇಳತಕ್ಕದ್ದು.

**(ಗೊಂದಲ)**

**ಉಪಸಭಾಪತಿಯವರು:–** ಇನ್ನೊಬ್ಬ ಸದಸ್ಯರು ಆ ಪ್ರಶ್ನೆಯನ್ನು ಕೇಳಬಹುದು. ನಿಯಮ 50(3)ನೆಯದನ್ನು ಓದಿ. You come to the third point. ಅದನ್ನು ಮುಂದುವರೆಸಿ ಏಕೆ ಅರ್ಧಕ್ಕೆ ನಿಲ್ಲಿಸುತ್ತೀರಿ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಸಭಾಪತಿಯವರು ಸದಸ್ಯರನ್ನು ಕರೆದಾಗ ಸದಸ್ಯರು ತಾವು ಕುಳಿತ ಜಾಗದಿಂದ ಎದ್ದು ನಿಲ್ಲತಕ್ಕದು.

**Mr. DEPUTY CHAIRMAN:-** Yes, next ನಿಯಮ 50(3) ನ್ನು ನೋಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ತನ್ನ ಹೆಸರಿನ ಮುಂದೆ ಇರುವ ಪ್ರಶ್ನೆಯನ್ನು ಕೇಳಲು ತನಗೆ ಉದ್ದೇಶವಿಲ್ಲ ಎಂದ ತಿಳಿಸದ ಹೊರತು, ಪ್ರಶ್ನೆಯ ಪಟ್ಟಿಯಲ್ಲಿರುವ ತನ್ನ ಸಂಖ್ಯೆಯನ್ನು ಸೂಚಿಸಿ ಪ್ರಶ್ನೆಯನ್ನು ಕೇಳತಕ್ಕದ್ದು. ನನಗೆ ಇಷ್ಟ ಇದ್ದರೆ ಆ ಪ್ರಶ್ನೆ ಸಂಖ್ಯೆಯನ್ನು ಹೇಳುತ್ತೇನೆ. ನನಗೆ ಇಷ್ಟ ಇಲ್ಲ ಎಂದರೆ ಪ್ರಶ್ನೆಯನ್ನು ಕೇಳುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೆ ನೀವು ಇಬ್ಬರು ಅರ್ಥಮಾಡಿಕೊಳ್ಳದಿದ್ದರೆ ಬೇರೆ ಯಾರು ಅರ್ಥ ಮಾಡಿಕೊಳ್ಳಲು ಸಾಧ್ಯ?

**(ಮುಂದು)**

**(406)16-03-2021(11-20)ಬಿಎಸ್‌ಡಿ-ಎಂಡಿ**

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ:-** ಬಿಜೆಪಿ ಗೆ ಏನೂ ಇಲ್ಲ, ಏನು ಇದು?

**(ಗೊಂದಲ)**

**ಶ್ರೀ ಜಗದೀಶ್ ಶೆಟ್ಟರ್:-** ಇಡೀ ದೇಶದಲ್ಲಿ ಕಾಂಗ್ರೆಸ್ loss ಆಗುತ್ತಿದೆ. ಸದನದ ಹೊರಗೆ ರಾಜಕಾರಣ ಮಾಡೋಣ. ಸದನ ಚರ್ಚೆ ಮಾಡುವುದಕ್ಕೆ ಇರುವುದು. ರಾಜಕಾರಣ ಮಾಡಬಾರದು ಮತ್ತು ರಾದ್ಧಾಂತ ಮಾಡುವುದಕ್ಕೆ ಹೋಗಬಾರದು.

**ಉಪ ಸಭಾಪತಿಯವರು:-** ಮಾನ್ಯ ಇಬ್ರಾಹಿಂ ರವರೇ, ತಾವು ಕುಳಿತುಕೊಳ್ಳಿ. ನಿಯಮದ ಮುಂದುವರೆದ ಭಾಗ 3ನ್ನು ಓದಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ನಿಯಮ 49 ಮತ್ತು 50 ರಲ್ಲಿ ಇರುವುದೆಲ್ಲವನ್ನೂ ಓದಿದ್ದೀರಿ. ತಾವು ಹೇಳಿರುವುದೆಲ್ಲವೂ ಸತ್ಯ. ಇದು ಸದನದ ನಿಯಮ. ಈ ಸದನದಲ್ಲಿ ಪ್ರತಿಭಟನೆ ಮಾಡಬಾರದು ಎಂದು ನಿಯಮದಲ್ಲಿ ಇದೆಯೇ? ಇದು ನಮ್ಮ birth right. ಇದರ ಬಗ್ಗೆ ಯಾರನ್ನೂ ಕೇಳಿ ಮಾಡಬೇಕಾಗಿಲ್ಲ. ಮಾನ್ಯ ಜಗದೀಶ್ ಶೆಟ್ಟರ್ ರವರು ರಾಜಕಾರಣ ಮಾಡುವ ಬಗ್ಗೆ ಹೇಳುತ್ತಿದ್ದಾರೆ. ಅವರೆಲ್ಲ ಸತ್ಯ ಹರಿಶ್ಚಂದ್ರರೇ ಅಥವಾ ಸನ್ಯಾಸಿಗಳೇ? ಹರಿಶ್ಚಂದ್ರ ಆದರೆ ಇಲ್ಲಿ ಜಾಗ ಇಲ್ಲ, ಸ್ಮಶಾನದಲ್ಲಿ ಜಾಗ! ಪ್ರತಿಭಟನೆಯನ್ನು ನೈತಿಕತೆಯ ಪ್ರಶ್ನೆ ಮೇಲೆ ಮಾಡುತ್ತಿದ್ದೇವೆ. ಅದಕ್ಕೆ ಸರ್ಕಾರ ಉತ್ತರ ಕೊಡಬೇಕು. ಅದನ್ನು ಬಿಟ್ಟು ಮಾಡಿಕೊಂಡಿರುವ ಕಾನೂನುಗಳನ್ನು ಹೇಳುವಾಗ ಸದನದ ನೈತಿಕತೆಯ ಪ್ರಶ್ನೆಯೂ ಇದೆ. ತಾವು ನಾವೆಲ್ಲರೂ ಸದನದಲ್ಲಿ ಇರುವ ಬಗ್ಗೆ ಹೇಳಿದಿರಿ. ಮಾನ್ಯ ಜಾರ್ಜ್ ಫರ್ನಾಂಡೀಸ್‌ರವರಿಗೆ ಒಂದು ವರ್ಷಗಳ ಕಾಲ ಪ್ರತಿಭಟನೆ ಮಾಡಿ ಬಹಿಷ್ಕಾರ ಹಾಕಿದೆವು. ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯ ಉದಾಹರಣೆಗಳಿದ್ದು, ಬಹಿಷ್ಕಾರ ಮಾಡಿಲ್ಲ ಎಂದು ಹೇಳಬಾರದು. ಆದ್ದರಿಂದ ಸದಸ್ಯರು ಹೇಳಿರುವುದನ್ನು ನಾವು ಪಾಲನೆ ಮಾಡುತ್ತೇವೆ. ಅವರು ಪ್ರಶ್ನೆ ಕೇಳುವುದಿಲ್ಲ. ಅದು ನಮ್ಮ ಹಕ್ಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿः–** ಅವಕಾಶ ಇದೆ.

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಎಲ್ಲಾ ಆತ್ಮೀಯರು question ಕೇಳುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕೆ ನನಗೆ ಬೇಜಾರಿಲ್ಲ. ಆದರೆ ಒಬ್ಬ ಸದಸ್ಯನನ್ನು ತೇಜೋವಧೆ ಮಾಡುವುದಕ್ಕೆ ನನ್ನ ವಿರೋಧ ಇದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿः–** ಅವರ ಬಾಯಲ್ಲಿ ಈ ಮಾತು ಬರಬಾರದು.

**ಶ್ರೀ ಎಸ್.ಟಿ. ಸೋಮಶೇಖರ್ः–** ಇದೇ ಕಾಂಗ್ರೆಸ್ ಪಕ್ಷದ ಶ್ರೀ ಹೆಚ್.ವೈ. ಮೇಟಿ ರವರು ಮಂತ್ರಿಗಳಾಗಿದ್ದಾಗ ರಾಸಲೀಲೆ ವಿಚಾರ ಬಂತು. ಅವರು ರಾಜೀನಾಮೆಯನ್ನು ಕೊಟ್ಟರು. ತದನಂತರ 2–3 ತಿಂಗಳುಗಳಾದ ಮೇಲೆ ಅದು duplicate ಎಂದು ಅವರಿಗೆ clean chit ಕೊಟ್ಟರು. ಮಾನ್ಯ ಮೇಟಿ ಸೋತರು ಅವರ ಮನಸ್ಸು ಮುರಿದು ಹೋಯಿತು.

**ಶ್ರೀ ಸಿ.ಎಂ. ಇಬ್ರಾಹಿಂः–** ನಾವು ಸ್ವಾಗತ ಮಾಡುತ್ತೇವೆ.

**ಉಪ ಸಭಾಪತಿಯವರುः–** ಮಾನ್ಯ ಇಬ್ರಾಹಿಂ ರವರೇ, ಕುಳಿತುಕೊಳ್ಳಿ, ಅವರು ಮಾತನಾಡಲಿ. ಅವರು ಮಾತನಾಡುವಾಗ disturb ಏಕೆ ಮಾಡುತ್ತೀರಾ? ಅವರು ವಿಚಾರ ಹೇಳಲಿ. ಮಂತ್ರಿಗಳೇ ತಾವು ಮಾತನಾಡಿ.

**ಶ್ರೀ ಎಸ್.ಟಿ. ಸೋಮಶೇಖರ್ः–** ಮಾನ್ಯ ಮೇಟಿಯವರ ಮನೆ, ಮನಸ್ಸು ಸೇರಿದಂತೆ ಎಲ್ಲವೂ ಮುರಿದು ಹೋಯಿತು. ನಂತರ clean chit ಬಂತು. ಅದೆಲ್ಲವೂ ವಾಪಸ್ಸು ಬಂತೇ? . . . . . ನಾನು ಕಾಂಗ್ರೆಸ್‌ನಲ್ಲಿ ಇರುವಾಗ ರೂ.950 ಕೋಟಿಗಳ allegation ಮಾಡಿದರು. ನಾನು Court ವಿಚಾರ ತಂದಿಲ್ಲ.

**(ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಸಹಕಾರ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರು ಮಾತನಾಡಿದ್ದು ದಾಖಲಿಸಲಿಲ್ಲ)**

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮಾನೆ ಶ್ರೀನಿವಾಸಃ-** ಮಾನ್ಯ ಸಭಾಪತಿಯವರೇ, ಬೇರೆ ಕಡೆ ಹೋಗುತ್ತಿದ್ದರೆ ಒಂದು ನೈತಿಕತೆ ಎನ್ನುವುದು ಬೇಕು. ಅವರಿಗೆ ಗೌರವ ಬರಲಿಲ್ಲ. ಅವರ ಗೌರವ ಹೋಗಿಲ್ಲ. ಅವರ ಗೌರವ ಉಳಿದಿದೆ.

**ಶ್ರೀ ಎಸ್.ಟಿ. ಸೋಮಶೇಖರ್ಃ-** ಹೌದು.

**ಶ್ರೀ ಮಾನೆ ಶ್ರೀನಿವಾಸಃ-** ಮಾನ್ಯ ಸಭಾಪತಿಯವರೇ, . . . . .

**(ಗೊಂದಲ)**

**ಶ್ರೀ ಎಸ್.ಟಿ. ಸೋಮಶೇಖರ್ಃ-** ನೀವು Court ಗೆ ಹೋಗಲೇ ಇಲ್ಲವೇ? ಅವರು Court ನಲ್ಲಿ ಏನೂ ಕೇಳಿಲ್ಲವೇ?

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ ಃ-** ಒಂದು ಸರ್ಕಾರಕ್ಕೆ ಪ್ರಶ್ನೆ ಕೇಳುವುದಕ್ಕೆ .......

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ಃ-** ಮಾನ್ಯ ಸಭಾಪತಿಯವರೇ, . . . . .

**(ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್ ಹಾಗೂ ಶ್ರೀ ಮಾನೆ ಶ್ರೀನಿವಾಸ್‌ರವರು ಮಾತನಾಡಿದ್ದು ದಾಖಲಿಸಲಿಲ್ಲ)**

**(ಗೊಂದಲ)**

**ಶ್ರೀ ವಿ. ಸೋಮಶೇಖರ್ಃ-** ಒಂದು ಕೆಲಸ ಮಾಡಲಿ, ಯಾವ ಪ್ರಶ್ನೆಯನ್ನು ಕೇಳುವುದಿಲ್ಲ ಎಂದು writing ನಲ್ಲಿ ಕೊಟ್ಟುಬಿಡಲಿ. ಮಾನ್ಯ ಪಿ.ಆರ್. ರಮೇಶ್‌ರವರು phone ಮಾಡಿದ್ದರು.

**ಶ್ರೀ ಬಿ.ಕೆ. ಹರಿಪ್ರಸಾದ್ಃ-** ಒಂದು ನಿಮಿಷ, ಅವರು yield ಆಗುವುದಕ್ಕೆ ನಾನು request ಮಾಡುತ್ತಿದ್ದೇನೆ. ಅವರು yield ಆಗುವುದಕ್ಕೆ ಕೇಳುತ್ತಿದ್ದೇನೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ದಯಮಾಡಿ ಅವರು ಒಂದು ನಿಮಿಷ ಕುಳಿತುಕೊಳ್ಳಲಿ. ನಿನ್ನೆ ಮಾನ್ಯ ಪಿ.ಆರ್. ರಮೇಶ್‌ರವರು phone ಮಾಡಿ ಇದರ ಬಗ್ಗೆ ಕೇಳಿದರು. ಆಗ ನಾನು ಪ್ರಶ್ನೆ ಕೇಳುವುದಿಲ್ಲ ಮತ್ತು ನೈತಿಕತೆ ಬಗ್ಗೆ ಹೇಳುತ್ತಿದ್ದೀರಿ ಎಂದು ಕೇಳಿದೆ. ಮಾನ್ಯ ರಮೇಶ್ ರವರು ' ಇಲ್ಲ, ಅದೆಲ್ಲಾ ನನಗೆ ಗೊತ್ತಿಲ್ಲ, ನಾನು ಪ್ರಶ್ನೆ ಕೇಳುತ್ತೇನೆ, ನೀವು ಸರಿಯಾದ answer ಹೇಳಬೇಕು' ಎಂದು ಹೇಳಿದರು. ಆಗ ನಾನು 'ಸಹಕಾರ ಇಲಾಖೆಗೆ ಸಂಬಂಧಪಟ್ಟ answer ಅನ್ನು ಹೇಳುತ್ತೇನೆ, ಆದರೆ ನೀವು ಕೇಳುತ್ತಿರುವ ಪ್ರಶ್ನೆ ನನ್ನ ಇಲಾಖೆಗೆ ಬರುವುದಿಲ್ಲ' ಎಂದು ಹೇಳಿದ್ದೇನೆ. ಮಾನ್ಯ ರಮೇಶ್‌ರವರು ಈ ರೀತಿ ಅವರ opinion ಕೊಟ್ಟಿದ್ದಾರೆ. ಅವರೆಲ್ಲರೂ ನನ್ನ ನೈತಿಕತೆಯನ್ನು ಹೇಳಬೇಕಾಗಿಲ್ಲ. ನಾವು ನೈತಿಕತೆಯಿಂದಲೇ ಹೋಗುತ್ತಿದ್ದೇವೆ. . . . . ಆದರೆ ಹೋದ ಮಾನ-ಮರ್ಯಾದೆ ವಾಪಸ್ಸು ಬಂತೇ? Throughout world ಹರಾಜಾದ ಮಾನವು ವಾಪಸ್ಸು ಬರುತ್ತದೆಯೇ? ಅವನ family ಗೆ damage ಆಯಿತು, ಅದು ವಾಪಸ್ಸು ಬರುತ್ತದೆಯೇ? ಇದರಿಂದ ನಾನು ಹೇಳುತ್ತಿದ್ದೇನೆ.

**(ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಸಹಕಾರ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರು ಮಾತನಾಡಿದ್ದು ದಾಖಲಿಸಲಿಲ್ಲ)**

**ಶ್ರೀ ಮರಿತಿಬ್ಬೇಗೌಡರು:-** ಮಾನ್ಯ ಸಭಾಪತಿಯವರೇ,

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ......

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳೇ ಹಾಗೂ ಮಾನ್ಯ ಇಬ್ರಾಹಿಂರವರೇ, ಒಂದು ನಿಮಿಷ ಕುಳಿತುಕೊಳ್ಳಿ. ಮೊದಲನೆಯದಾಗಿ ಪ್ರಶ್ನೋತ್ತರ ಅವಧಿಯಲ್ಲಿ...... ಮಾನ್ಯ ಮರಿತಿಬ್ಬೇಗೌಡರೆ, ತಾವು ಉಪ ಸಭಾಪತಿಯಾಗಿ ಕೆಲಸ ಮಾಡಿದವರು, ತಮಗೂ ಗೊತ್ತಿದೆ, ಇಲ್ಲಿ ಕುಳಿತಾಗ ಒಂದು ರೀತಿ ಮತ್ತು ಅಲ್ಲಿ ಕುಳಿತಾಗ ಒಂದು ರೀತಿ ಮಾಡುವುದಕ್ಕೆ ಆಗುತ್ತದೆಯೇ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ. ಇಬ್ರಾಹಿಂ:–** ಅವರು explanation ಕೊಡುತ್ತಿದ್ದಾರೆ, One hour discussion ಇಡಿ. . . . . . . ಇದೆಲ್ಲವೂ ಚರ್ಚೆ ನಡೆಯಲಿ, one hour discussion ಗೆ ಇಡಿ. ಮಾನ್ಯ Leader of the Opposition ರವರು ಎದ್ದು ಹೇಳಬೇಕು. ಅವರು ಎದ್ದು ನಿಂತು ಹೇಳಬೇಕು.

**(ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂರವರು ಮಾತನಾಡಿದ್ದು ದಾಖಲಿಸಲಿಲ್ಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇದು ದಬ್ಬಾಳಿಕೆ. ನಮ್ಮ ಪ್ರಶ್ನೆಗಳು ಇವೆ.

**ಉಪ ಸಭಾಪತಿಯವರು:–** ಮೊದಲನೆಯದಾಗಿ ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆಗೆ ಅವಕಾಶ ಇಲ್ಲ. ಅದನ್ನು ಮೀರಿ ಚರ್ಚೆಯಾಗುತ್ತಿದೆ. ಎರಡನೆಯದಾಗಿ ......

**ಶ್ರೀ ಎಸ್.ಎಲ್. ಭೋಜೇಗೌಡ:–** ಉತ್ತರ ಕೊಡಬಹುದು ಅಲ್ಲವೆ? ಸಾರ್ವಜನಿಕರಿಗೆ ಉತ್ತರ ಕೊಡಬೇಕಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮಾವಳಿ ಬಗ್ಗೆ ಅಲ್ಲದೇ ಪೀಠಕ್ಕೆ ಸಂಬಂಧಪಟ್ಟ ವಿಚಾರ ಹೇಳುತ್ತೇನೆ.

**ಉಪ ಸಭಾಪತಿಯವರು:–** ಅಯಿತು, ತಾವು ಹೇಳುವಿರಂತೆ ಒಂದು ನಿಮಿಷ. ನಂತರ ಮಾತನಾಡಿ. ಮೊದಲನೆಯದಾಗಿ ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆಗೆ ಅವಕಾಶ ಇಲ್ಲ. ಅದರಲ್ಲೂ ಕೂಡ ಚರ್ಚೆ ಮಾಡಿದ್ದು, ಅನಿವಾರ್ಯ ಕಾರಣಗಳಿಂದ ಅವಕಾಶ ಕೊಟ್ಟಿದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಸಮಾಜಕ್ಕೆ ಉತ್ತರ ಕೊಡಬೇಕು, ಇದು ವೈಯಕ್ತಿಕ ಅಲ್ಲ.

**(ಗೊಂದಲ)**

**ಉಪ ಸಭಾಪತಿಯವರು:–** ಎರಡನೆಯದಾಗಿ ಪ್ರಶ್ನೆಯನ್ನು ಕೇಳಿದ ನಂತರ ಸರಿಯಾದ ಉತ್ತರ ಬರದಿದ್ದರೆ ತಿರಸ್ಕಾರ ಮಾಡುವ ಅಧಿಕಾರ ಮಾನ್ಯ ಸದಸ್ಯರಿಗೆ ಇದೆ. ಆದರೆ ಪ್ರಶ್ನೆ ಕೇಳುವುದಕ್ಕಿಂತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊದಲೇ ತಿರಸ್ಕಾರ ಮಾಡುವುದಲ್ಲ. ಉತ್ತರ ಸಮಂಜಸವಾಗಿಲ್ಲ ಎಂದು ತಿರಸ್ಕಾರ ಮಾಡುವ ಅಧಿಕಾರ ಇದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮಗಳನ್ನು ಬಿಡಿ, ನಾನು ಪೀಠಕ್ಕೆ ಸಂಬಂಧಪಟ್ಟ ವಿಚಾರವನ್ನು ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ನಾವು ಸಮಾಜದ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಕೇಳುವುದು, ಅವರಿಗೆ ಬೇಡ ಎಂದರೆ ಸಮಾಜದ ಹಿತದೃಷ್ಟಿಯಿಂದ ಪ್ರಶ್ನೆ ಕೇಳಿರುವುದರಿಂದ ಉತ್ತರವನ್ನು ಕೊಡಲೇಬೇಕು. ಇದರಲ್ಲಿ ವೈಯಕ್ತಿಕ ಇಲ್ಲ, ಸಮಾಜದ ದೃಷ್ಟಿಯಿಂದ ಕೇಳಿರುವುದು.

**(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಮಾನ್ಯ ಎಸ್.ಎಲ್. ಭೋಜೇಗೌಡರ ಮಾತನ್ನು ಮೇಜು ಕುಟ್ಟಿ ಸ್ವಾಗತಿಸಿದರು)**

**ಉಪ ಸಭಾಪತಿಯವರು:–** ಅವಕಾಶ ಕೊಡುತ್ತೇನೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ. ಪ್ರಶ್ನೋತ್ತರ ಅವಧಿಯಲ್ಲಿ ಹೆಚ್ಚು ಸಮಯ ತೆಗೆದುಕೊಳ್ಳುವುದು ಬೇಡ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಮಗೆ ಅನುಕೂಲವಾಗುವ ಹಾಗೂ ತಮ್ಮ ವಿಚಾರದಲ್ಲಿ ಹೆಚ್ಚು ಬೆಳಕು ಚೆಲ್ಲುವಂತಹ ಮಾತನ್ನು ಹೇಳುತ್ತಿದ್ದೇನೆ. ಇದು ಇವತ್ತು ಬಂದಿಲ್ಲ, ಈಗಾಗಲೇ ಎರಡು ದಿವಸಗಳಿಂದ ನಡೆಯುತ್ತಿದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ,

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ತಾವು ಹೇಳಬೇಕು.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ......

**ಉಪ ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ಕುಳಿತುಕೊಳ್ಳಿ, ಮಾನ್ಯ ವಿರೋಧ ವಿರೋಧ ಪಕ್ಷದ ನಾಯಕರು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, You allowed me to speak. ಇದು ಇವತ್ತು ಬಂದ ಪ್ರಶ್ನೆಯಲ್ಲ, ಈಗಾಗಲೇ ಎರಡು ದಿವಸಗಳಿಂದ ಚರ್ಚೆಯಾಗುತ್ತಿದೆ. ಇದೇ ಪೀಠವನ್ನು ಅಲಂಕರಿಸಿದ್ದ ಮಾನ್ಯ ಸಭಾಪತಿಯವರು ಈ ಪ್ರಶ್ನೆ ಉದ್ಭವಿಸಿದಾಗ ಬಹಳ ಚರ್ಚೆಯಾಗಿ ruling ಕೊಟ್ಟಿದ್ದಾರೆ.

**(ಮುಂದು)**

**(407)/16.03.2021/11.30/ಹೆಚ್‌ವಿಃಎಕೆ**

**(ಗೊಂದಲ)**

**(ಈ ಹಂತದಲ್ಲಿ ಮಾತನಾಡಲು ಎದ್ದು ನಿಂತ ಮಾನ್ಯ ಸದಸ್ಯರಾದ ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್) ಇವರನ್ನು ಮತ್ತೊಬ್ಬ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ. ಇಬ್ರಾಹಿಂರವರು 'ಕುಳಿತುಕೊಳ್ಳಿ' ಎಂದು ಏರು ಧ್ವನಿಯಲ್ಲಿ ಹೇಳಿ ಮಾನ್ಯ ಎಸ್.ನಾಗರಾಜ್‌ರವರ ಕೈ ಹಿಡಿದು ಎಳೆದು ಕೂರಿಸುತ್ತಾರೆ)**

**(ಗೊಂದಲ)**

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):-** ಸನ್ಮಾನ್ಯ ಸಭಾಪತಿಯವರೇ, ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ಇವರು ಯಾರು? ನಾವು ಮಾತನಾಡಬಾರದೇ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಂದೇಶ್ ನಾಗರಾಜ್‌ರವರೇ, ದಯವಿಟ್ಟು ಕುಳಿತುಕೊಳ್ಳಿ. ತಾವುಗಳೇ ಪರಸ್ಪರ ಮಾತನಾಡಿಕೊಳ್ಳದೇ, ಪೀಠವನ್ನು ಉದ್ದೇಶಿಸಿ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನಮಗೆ ಪೀಠದ ಬಗ್ಗೆ ಮತ್ತು ನಿಯಮಗಳ ಬಗ್ಗೆ ಗೌರವವಿದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬಾರದೆಂದು ಯಾವ ಆಕ್ಟ್‌ನಲ್ಲಿ ಉಲ್ಲೇಖ ಮಾಡಿದೆ? ಇಲ್ಲಿ ಮಾತನಾಡುವವರೇ, ಮಾತನಾಡುತ್ತಿರುತ್ತಾರೆ. ನಾವುಗಳು ಸದನಕ್ಕೆ ಬಂದು ಸುಮ್ಮನೆ ಕುಳಿತುಕೊಂಡು ಹೋಗಬೇಕೇ? ಹೇಳಿದ್ದೇ ಹೇಳುತ್ತಿರುತ್ತಾರೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಂದೇಶ್ ನಾಗರಾಜ್‌ರವರೇ, ದಯವಿಟ್ಟು ಕುಳಿತುಕೊಳ್ಳಿ. ತಾವುಗಳೇ ಪರಸ್ಪರ ಮಾತನಾಡಿಕೊಳ್ಳದೇ, ಪೀಠವನ್ನು ಉದ್ದೇಶಿಸಿ ಮಾತನಾಡಿ. ತಾವು ಏನೇ ಮಾತನಾಡುವುದಿದ್ದರೂ ಪೀಠದ ಅನುಮತಿಯನ್ನು ತೆಗೆದುಕೊಂಡು ಮಾತನಾಡಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಇವತ್ತು ಉದ್ಭವಿಸಿಲ್ಲ. ಈಗಾಗಲೇ ಕಳೆದ ಮೂರು ದಿನಗಳಿಂದ ಈ ಬಗ್ಗೆ ಚರ್ಚೆ ನಡೆಯುತ್ತಿದೆ. ಕೆಲವು tainted ministers ಗೆ ನಾವು ಪ್ರಶ್ನೆ ಕೇಳಬಾರದು ಎನ್ನುವುದರ ಬಗ್ಗೆ ನಿರ್ಧಾರವಾಗಿದೆ. ಆಗ ಈ ವಿಚಾರ ಚರ್ಚೆಗೆ ಬಂದಾಗ, ಮಾನ್ಯ ಬಸವರಾಜ ಹೊರಟ್ಟಿಯವರು ಸಭಾಪತಿಗಳ ಪೀಠವನ್ನು ಅಲಂಕರಿಸಿದ್ದರು. ಪ್ರಶ್ನೋತ್ತರ ವೇಳೆಯಲ್ಲಿ ಅವರು ಪ್ರಶ್ನೆ ಕೇಳಬೇಕಾಗಿರುವ ಮಾನ್ಯ ಸದಸ್ಯರ ಹೆಸರನ್ನು ಕರೆದಾಗ, ಮಾನ್ಯ ಸದಸ್ಯರು "ನಾನು ಪ್ರಶ್ನೆ ಕೇಳುವುದಿಲ್ಲ" ಎಂದು ಹೇಳಿದ ಮೇಲೆ ಮುಗಿಯಿತು. I will skip to the next question" ಎಂದು ಈಗಾಗಲೇ ಮಾನ್ಯ ಸಭಾಪತಿಯವರು ರೂಲಿಂಗ್ ಕೊಟ್ಟಿದ್ದಾರೆ. ಇದೇ ಸದನದಲ್ಲಿ ಎರಡು ದಿನಗಳ ಹಿಂದೆ ಮಾನ್ಯ ಬಸವರಾಜ ಹೊರಟ್ಟಿಯವರು ಸಭಾಪತಿಗಳ ಪೀಠದಲ್ಲಿ ಕುಳಿತಿದ್ದಾಗ ಈ ವಿಚಾರಕ್ಕೆ ಸಂಬಂಧಪಟ್ಟಂತೆ he has given a ruling. ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದಿಲ್ಲವೆಂದು ಹೇಳಿದಾಗ ಅವರು "ನೀವು ಪ್ರಶ್ನೆ ಕೇಳದಿದ್ದರೆ, ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ" ಎಂದು ಹೇಳಿದರೆ, 'ಸನ್ಮಾನ್ಯ ಸಭಾಪತಿಯವರೇ, ಯಾಕೆ ಪ್ರಶ್ನೆ ಕೇಳುವುದಿಲ್ಲವೆಂದು ತಾವು ಮಾನ್ಯ ಸದಸ್ಯರನ್ನು ಕೇಳಬಹುದಲ್ಲವೇ?' ಎಂದು ನಾನು ಕೇಳಿದಾಗ ಅವರು "It is not my business. It is none of my business. I will not ask" ಎಂದು ಹೇಳಿದ್ದರು. ಮಾನ್ಯ ಸದಸ್ಯರೊಬ್ಬರು ಪ್ರಶ್ನೆ ಕೇಳುವುದಿಲ್ಲವೆಂದರೆ, ಮುಂದಿನ ಪ್ರಶ್ನೆಗೆ ಹೋಗಬೇಕೆಂದು ಈಗಾಗಲೇ ಅವರು ರೂಲಿಂಗ್ ಕೊಟ್ಟಿದ್ದಾರೆ. We will forget about the name.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದೆ ವೇದವಾಕ್ಯವಲ್ಲ. ಮೊನ್ನೆ ಕೇಳಿದಂತಹ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾತ್ರ ಮಾನ್ಯ ಸಭಾಪತಿಯವರು ಆ ರೀತಿ ಹೇಳಿದ್ದರು. ಆಗ ಯಾರೂ ಉಪ ಪ್ರಶ್ನೆಯನ್ನು ಕೇಳಿರಲಿಲ್ಲ. ಈಗ ಮಾನ್ಯ ಭೋಜೇಗೌಡರು ಆ ಪ್ರಶ್ನೆ ಈಗ ಸದನದ ಆಸ್ತಿ, ನಾನು ಉಪ ಪ್ರಶ್ನೆಯನ್ನು ಕೇಳುತ್ತೇನೆಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಸಭಾ ಪೀಠದಿಂದ ರೂಲಿಂಗ್ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದಿಲ್ಲವೆಂದು ಹೇಳಿದಾಗ ಅವರು ನೀವು ಪ್ರಶ್ನೆ ಕೇಳದಿದ್ದರೆ, ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ ಎಂದು ಹೇಳಿದರೆ, 'ಸನ್ಮಾನ್ಯ ಸಭಾಪತಿಯವರೇ, ಯಾಕೆ ಪ್ರಶ್ನೆ ಕೇಳುವುದಿಲ್ಲವೆಂದು ತಾವು ಮಾನ್ಯ ಸದಸ್ಯರನ್ನು ಕಾರಣ ಕೇಳಬಹುದಲ್ಲವೇ?' ಎಂದು ನಾನು ಕೇಳಿದಾಗ ಅವರು "ಕಾರಣ ಕೇಳುವುದು ನನ್ನ ಕೆಲಸ ಅಲ್ಲ. ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದಿಲ್ಲ ಅಲ್ಲವೇ, O.K., you forget it" ಎಂದು ಹೇಳಿದ್ದರು. The Hon. Chairman has given a ruling. It is binding on you.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರು ನೀಡಿರುವ ರೂಲಿಂಗ್ ಅವತ್ತಿನ ಪ್ರಶ್ನೆಗೆ ಮಾತ್ರ ಸೀಮಿತವಾಗಿತ್ತು. ಇವತ್ತಿನ ಪ್ರಶ್ನೆಗೆ ಅನ್ವಯವಾಗುವುದಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಸಭಾ ಪೀಠದಲ್ಲಿ ಕುಳಿತಾಗ ನಾನು ನಿಯಮಗಳ ಪ್ರಕಾರವೇ ಸದನವನ್ನು ನಡೆಸಬೇಕಾಗುತ್ತದೆಯೇ ಹೊರತು ನನ್ನ ಸ್ವಂತ ಇಚ್ಛೆಯಂತೆ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, you have got an unfettered discretionary power. You also have residual powers.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ನಿಯಮದ ಪ್ರಕಾರ ಇರುವಂತಹ ಅವಕಾಶಗಳನ್ನು ತಮ್ಮೆಲ್ಲರಿಗೂ ಕೊಡುವುದು ನನ್ನ ಕರ್ತವ್ಯವಾಗಿದೆ. ನಿಯಮಗಳನ್ನು ಉಲ್ಲಂಘನೆ ಮಾಡಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕಷ್ಟದ ವಿಚಾರ ಎನ್ನುವುದು ನಿಮಗೂ ಗೊತ್ತಿದೆ ನನಗೂ ಗೊತ್ತಿದೆ. ಅದು ಸಾಧ್ಯವೂ ಇಲ್ಲ. ನಿಯಮದಲ್ಲಿ ಏನಿದೆ ಅದರನ್ವಯ ನಾನು ಅವಕಾಶ ಮಾಡಿ ಕೊಟ್ಟಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, you throw some light on this ruling. ಇದೇ ಪೀಠವನ್ನು ಅಲಂಕರಿಸಿದಂತಹ ಮಾನ್ಯ ಸಭಾಪತಿಯವರೇ ನಮಗೆ ಹೇಳಿದ್ದಾರೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದಿಲ್ಲ ಎಂದಾಗ, "ಮುಂದಿನ ಪ್ರಶ್ನೆಗೆ ಹೋಗೋಣ" ಎಂದು ಹೇಳಿದ್ದಾರೆ. "ನಾನು insist ಮಾಡುವುದಿಲ್ಲ. ಅವರು ಯಾಕೆ ಪ್ರಶ್ನೆ ಕೇಳುವುದಿಲ್ಲ ಎನ್ನುವ ಕಾರಣವನ್ನು ನಾನು ಕೇಳುವುದಿಲ್ಲವೆಂದು" ಹೇಳಿದ್ದಾರೆ. That is the ruling of the Hon. Chairman and it is binding.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್(ನಾಮ ನಿರ್ದೇಶನ ಹೊಂದಿದವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಸಭಾಪತಿಯವರು ರೂಲಿಂಗ್ ಕೊಟ್ಟಿದ್ದಾರೆ. ತಾವು ಆ ಪೀಠದಲ್ಲಿ ಕುಳಿತುಕೊಂಡು ಮಾನ್ಯ ಸಭಾಪತಿಯವರು ಕೊಟ್ಟಿರುವಂತಹ ರೂಲಿಂಗ್ ಅನ್ನು overrule ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ಮಾನ್ಯ ಸಭಾಪತಿಯವರು ಯಾವುದೋ ಸಂದರ್ಭದಲ್ಲಿ ಯಾವುದೋ ಪ್ರಶ್ನೆಗೆ ಸೀಮಿತವಾಗಿ ಆ ರೀತಿ ಹೇಳಿರಬಹುದು. ಅದನ್ನು ಇಲ್ಲಿ ಅನ್ವಯಿಸುವುದಕ್ಕೆ ಬರುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, the Hon. Chairman has given a ruling. ಅವರು ಏನು ರೂಲಿಂಗ್ ಕೊಟ್ಟಿದ್ದಾರೆಂದರೆ, 'ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದಿಲ್ಲವೆಂದರೆ ಸರಿ, ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ' ಎಂದು ರೂಲಿಂಗ್ ಕೊಟ್ಟಿದ್ದಾರೆ. It has been already decided.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಅದು ಮೊನ್ನೆ ಕೇಳಿದಂತಹ ಪ್ರಶ್ನೆಗೆ ಮಾತ್ರ ಸೀಮಿತವಾಗುತ್ತದೆ. ಎಲ್ಲ ಪ್ರಶ್ನೆಗಳಿಗೂ ಅದು ಅನ್ವಯವಾಗುವುದಿಲ್ಲ. ಇವತ್ತು ಮಾನ್ಯ ಸುನೀಲ್ ಸುಬ್ರಮಣಿ ಅವರು ಈ ಪ್ರಶ್ನೆ ಸದನದ ಸ್ವತ್ತಾಗಿರುವುದರಿಂದ, ನಾನು ಉಪ ಪ್ರಶ್ನೆ ಕೇಳುತ್ತೇನೆಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಈ ಸದನದ ಘನತೆ ಗೌರವವನ್ನು ಎತ್ತಿ ಹಿಡಿಯಬೇಕಾಗಿದೆ. The fulltime Chairman has given a ruling. ಇವತ್ತು ಒಂದು ರೂಲಿಂಗ್ ನಾಳೆ ಮತ್ತೊಂದು ರೂಲಿಂಗ್ ಮತ್ತೊಂದು ದಿನ ಪ್ಯಾನಲ್‌ನಲ್ಲಿರುವ ಛೇರ್ಮನ್‌ರವರು ಸಭಾ ಪೀಠದಲ್ಲಿ ಕುಳಿತಾಗ ಮತ್ತೊಂದು ರೀತಿಯಲ್ಲಿ ರೂಲಿಂಗ್ ಕೊಡುವುದು ಇದು ಸರಿಯೇ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಭಾಪತಿಯವರು ಆ ಪ್ರಶ್ನೆಯರ್ಥಕ್ಕೆ ಸೀಮಿತವಾಗಿ ರೂಲಿಂಗ್ ಕೊಟ್ಟಿದ್ದಾರೆಯೇ ವಿನಃ ಕಾನೂನು ಮೊರೆ ಹೋಗಿರುವ ಯಾವುದೇ ಮಂತ್ರಿಗಳಿಗೆ ಉತ್ತರ ಹೇಳುವುದಕ್ಕೆ ಅವಕಾಶವಿಲ್ಲವೆಂದು ರೂಲಿಂಗ್ ಕೊಟ್ಟಿಲ್ಲ. ಒಂದು ಪ್ರಶ್ನೆಗೆ ಮಾತ್ರ ಸೀಮಿತವಾಗಿ ಅವರು ಆ ರೀತಿ ಹೇಳಿದ್ದಾರೆ. ತಾವು ಬೇಕಾದರೆ, ಕಡತ ತರಿಸಿಕೊಂಡು ನೋಡಬಹುದು ಅಥವಾ ರೆಕಾರ್ಡ್ ಆಗಿರುವುದು ಕೇಳಬಹುದು. ಸುಮ್ಮನೆ ತಮ್ಮ ಮೂಗಿನ ನೇರಕ್ಕೆ ಮಾತನಾಡುವುದು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀ ಸೋಮಶೇಖರ್‌ರವರು ಪ್ರತಿನಿತ್ಯ ವೈಯಕ್ತಿಕವಾಗಿ ಈ ರೀತಿ ಮಾತನಾಡುವುದು ತಪ್ಪು ಎಂದು ಹೇಳುತ್ತಿದ್ದಾರೆ. ಅವರ ಪಕ್ಷದ ಸದಸ್ಯರಾಗಿರುವ ಮಾನ್ಯ ಯತ್ನಾಳ್‌ರವರು ಪ್ರತಿನಿತ್ಯ ಒಂದೊಂದು ಹೇಳಿಕೆಯನ್ನು ಕೊಡುತ್ತಿದ್ದಾರೆ. ಅದಕ್ಕೆ ಉತ್ತರ ಕೊಡುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಅದನ್ನು ಕೆಳಮನೆಯವರು ನೋಡಿಕೊಳ್ಳುತ್ತಾರೆ. ಅದರ ವಿಚಾರ ಇವರಿಗೆ ಬೇಡ.

**(ಗೊಂದಲ)**

**ಉಪ ಸಭಾಪತಿಯವರು:–** ಈಗ ಪ್ರಶ್ನೋತ್ತರ, ಮಾನ್ಯ ಸಹಕಾರ ಸಚಿವರು ಉತ್ತರವನ್ನು ಹೇಳಬೇಕು.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರದ ಈ ಧೋರಣೆಯನ್ನು ಖಂಡಿಸಿ ಸದನದ ಬಾವಿಗಿಳಿದು ನಾವು ಧರಣಿ ನಡೆಸುತ್ತೇವೆ.

**(ಗೊಂದಲ)**

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು ಸದನದ ಬಾವಿಗಿಳಿದು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಶ್ರೀ ಸುನೀಲ್ ಸುಬ್ರಮಣಿ.ಎಂ.ಪಿ:–** ಸನ್ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1415 ಅನ್ನು ಮಾನ್ಯ ಸಹಕಾರ ಸಚಿವರಿಗೆ ಕೇಳುತ್ತಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಕುಂಬಾರ ಸಮಾಜದವರು ಬಹಳ ಹಿಂದುಳಿದ ಸಮಾಜದವರಾಗಿದ್ದಾರೆ. ಅವರಿಗೆ ಆರ್ಥಿಕ ಸಹಾಯ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಚಿವರೇ ಉತ್ತರವನ್ನು ಹೇಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್(ಸದನದ ಬಾವಿಯೊಳಗಿನಿಂದ):–** ಸನ್ಮಾನ್ಯ ಸಭಾಪತಿಯವರೇ, ..........

**(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದ ಬಾವಿಯೊಳಗೆ ನಿಂತು ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಎಲ್ಲ ಪ್ರಶ್ನೆಗಳಿಗೂ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವಿಲ್ಲ. ಯಾವ ಸದಸ್ಯರು ಪ್ರಶ್ನೆಯನ್ನು ಕೇಳುವುದಿಲ್ಲ, ಅಂತಹ ಪ್ರಶ್ನೆಗೆ ಉಪ ಪ್ರಶ್ನೆಯನ್ನು ಕೇಳಬಹುದಾಗಿದೆ. ಇಲ್ಲಿ ಮಾನ್ಯ ಸದಸ್ಯರು ಪ್ರಶ್ನೆಯನ್ನೇ ಕೇಳಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು:–** ಸದನದ ಬಾವಿಯೊಳಗೆ ನಿಂತು ಯಾವ ಸದಸ್ಯರು ಮಾತನಾಡಬಾರದು. ಅದಕ್ಕೆ ಅವಕಾಶವಿಲ್ಲ. ಯಾರಾದರು ಮಾತನಾಡಬೇಕೆಂದಿದ್ದರೆ, ತಮ್ಮ ಸ್ಥಾನಕ್ಕೆ ಬಂದು ಮಾತನಾಡಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ತಮ್ಮ ಸ್ಥಾನಕ್ಕೆ ಹಿಂತಿರುಗಿ):–** ಸನ್ಮಾನ್ಯ ಸಭಾಪತಿಯವರೇ, the House is not in order.

**(ಗೊಂದಲ)**

**ಉಪ ಸಭಾಪತಿಯವರು:–** ಈ House orderನಲ್ಲಿ ಇರದಂತೆ ಮಾಡಿರುವುದು ತಾವು. ದಯವಿಟ್ಟು ಆರ್ಡರ್‌ಗೆ ಬನ್ನಿ. ಕುಳಿತುಕೊಳ್ಳಿ, ಚರ್ಚೆ ಮಾಡಿ, ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ಬೇರೆ ಸಂದರ್ಭದಲ್ಲಿ ತಮಗೆ ಅವಕಾಶ ಮಾಡಿಕೊಡಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಸದನದ ಬಾವಿಯೊಳಗೆ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಉಪ ಸಭಾಪತಿಯವರು:–** ಈಗ ಪ್ರಶ್ನೋತ್ತರ ಮುಂದುವರೆಯುತ್ತದೆ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಗಣಿ ಮತ್ತು ಭೂವಿಜ್ಞಾನ ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ಕೇಳಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, House orderನಲ್ಲಿ ಇಲ್ಲ. ಹೇಗೆ ಪ್ರಶ್ನೆಯನ್ನು ಕೇಳುವುದು? ದಯಮಾಡಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**(ಗೊಂದಲ)**

**DEPUTY CHAIRMAN:** In Practice and Procedure of Parliament by Kaul and Shakdher, it is given that, "In case ruling of the Speaker..." ಸಭಾಪತಿಯವರು ಸಭಾಪೀಠದಲ್ಲಿ ಕುಳಿತು ಕೊಟ್ಟಿದ್ದರೂ ಸಹ ಅದಕ್ಕೆ ಪುನಃ ಅವಕಾಶಗಳು ಇವೆ. That is not the ruling.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು, ಸದನದ ಬಾವಿಯೊಳಗಿನಿಂದ):–** ಸನ್ಮಾನ್ಯ ಸಭಾಪತಿಯವರೇ,..........

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಸದನದ ಬಾವಿಯೊಳಗೆ ನಿಂತು ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ.)**

**(ಗೊಂದಲ)**

**ಉಪ ಸಭಾಪತಿಯವರು:–** ತಾವು ಏನೇ ಹೇಳಬೇಕಾದರೂ, ತಮ್ಮ ಸ್ಥಾನಕ್ಕೆ ಮರಳಿ ಬಂದು ಮಾತನಾಡಬೇಕು. ಸದನದ ಬಾವಿಯೊಳಗೆ ನಿಂತು ಮಾತನಾಡಬಾರದು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ರೂಲಿಂಗ್ ಬದಲಾವಣೆ ಮಾಡುವುದಕ್ಕೆ ನಿಯಮಗಳಲ್ಲಿ ಅವಕಾಶವಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, the House is not in order. You cannot take up any matter. ಸದನ ಆರ್ಡರ್‌ನಲ್ಲಿ ಇಲ್ಲದಂತಹ ಸಮಯದಲ್ಲಿ ಸದನ ನಡೆಸುವುದಕ್ಕೆ ಹೇಗೆ ಸಾಧ್ಯ?

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, 10 ನಿಮಿಷಗಳ ಕಾಲ ಸದನವನ್ನು ಮುಂದೂಡಿ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸಭಾನಾಯಕರನ್ನು ತಮ್ಮ ಕೊಠಡಿಗೆ ಕರೆದು ಮಾತನಾಡಿ, ಆನಂತರ ಸದನವನ್ನು ನಡೆಸಿ. ಸದನ ಆರ್ಡರ್‌ನಲ್ಲಿ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸದನ ಆರ್ಡರ್‌ನಲ್ಲಿ ಇಲ್ಲ. ಇಂತಹ ಸಮಯದಲ್ಲಿ ತಾವು ಸದನದ ಕಲಾಪವನ್ನು ಸ್ವಲ್ಪ ಸಮಯ ಮುಂದೂಡಿ, ಆನಂತರ ಚರ್ಚೆ ಮಾಡೋಣ. ಮಾನ್ಯ ಸಭಾನಾಯಕರಿಗೆ ಸದನವನ್ನು ನಡೆಸುವ ಆಸಕ್ತಿ ಇದ್ದರೆ, let him advise the Hon. Chairman.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಸದನ ಆರ್ಡರ್‌ನಲ್ಲಿ ಇಲ್ಲದಂತೆ ಮಾಡಿರುವವರು 'ಅವರೇ'(ವಿರೋಧ ಪಕ್ಷವಾದ ಕಾಂಗ್ರೆಸ್) ಅವರಿಗೆ ಚರ್ಚೆ ಮಾಡುವ ಮನಸ್ಸಿದ್ದರೆ ವಾಪಸ್ಸು ತಮ್ಮತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು.

**(ಮುಂದು)**

**(408) 16.3.2021 11.40 ಪಿಕೆ:ಎಕೆ**

**(ಗೊಂದಲ)**

**ಉಪಸಭಾಪತಿಯವರು:–** ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(409)16–03–2021/12–00/ ಬಿಕೆಪಿ–ಆರ್.ಎನ್

**(ಬೆಳಗ್ಗೆ 11 ಗಂಟೆ 41 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 12 ಗಂಟೆ 08 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಉಪ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಉಳಿದ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಬಂದು ಮತ್ತೆ ಧರಣಿ ನಿರತರಾದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೋತ್ತರದ ಮಧ್ಯೆ ನಮ್ಮಲ್ಲಿ ಸಣ್ಣ–ಪುಟ್ಟ ಚರ್ಚೆಗಳಾಗಿವೆ, ಆದರೆ, ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಪ್ರತಿಪಕ್ಷದ ಸದಸ್ಯರುಗಳು ಸೇರಿದಂತೆ ಎಲ್ಲಾ ಸದಸ್ಯರುಗಳು ಅನೇಕ ಪ್ರಶ್ನೆಯನ್ನು ಕೇಳಿದ್ದಾರೆ. ಆದ್ದರಿಂದ, ಈ ಪ್ರಶ್ನೋತ್ತರವನ್ನು ಸುಸೂತ್ರವಾಗಿ ನಡೆಸಲಿಕ್ಕೆ ಪ್ರತಿಪಕ್ಷದ ಸದಸ್ಯರುಗಳು ಅವರವರ ಸ್ಥಾನಗಳಿಗೆ ತೆರಳಬೇಕೆಂದು ತಮ್ಮ ಮೂಲಕ ಅವರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಕಲಾಪವನ್ನು ಮುಂದುವರಿಸಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳುವಂತಹ ಹಕ್ಕು ಸದಸ್ಯರಿಗೆ ಇದೆ. ಅವರುಗಳಿಗೆ ಇಷ್ಟವಿದ್ದರೆ ಕೇಳಬಹುದು, ಕಷ್ಟವಿದ್ದರೆ ಬಿಡಬಹುದು. It is their discretionary ಬಗ್ಗೆ ಅವರುಗಳಿಗೆ ಉತ್ತರವನ್ನು ಪಡೆಯಬೇಕೆನ್ನುವ ಆಸಕ್ತಿ ಇದ್ದರೆ ಪ್ರಶ್ನೆಯನ್ನು ಕೇಳಲಿ. ಕೇಳದಿರಲಿ. ಅದಕ್ಕೆ ಅವರುಗಳಿಗೆ ಅವಕಾಶ ಮಾಡಿಕೊಡಬೇಕು. ಅದಕ್ಕೆ ಈ ವಿಚಾರವನ್ನು ಸುಧೀರ್ಘವಾಗಿ ಚರ್ಚೆ ಮಾಡಬೇಕೆನ್ನುವುದನ್ನು ನಾನು ಒಪ್ಪುವುದಿಲ್ಲ. ಆದರೆ, ಯಾವ ಸದಸ್ಯರಿಗೆ ಪ್ರಶ್ನೆಯನ್ನು ಕೇಳುವ ಹಕ್ಕು ಇದೆ, ಆ ಸದಸ್ಯರು ನಾನು ಪ್ರಶ್ನೆಯನ್ನು ಕೇಳುವುದಿಲ್ಲವೆಂದರೆ, ಆ ಸದಸ್ಯರಿಗೆ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಟ್ಟರೂ ಅವರು ತಮ್ಮ ಪ್ರಶ್ನೆ ಕೇಳುವುದಿಲ್ಲವೆಂದು ಹೇಳಿರುವುದರಿಂದ ತಾವು ಮುಂದಿನ ಪ್ರಶ್ನೆಗೆ ಹೋಗಬಹುದು.

**ಉಪ ಸಭಾಪತಿಯವರು:** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ತಮ್ಮ ಪಕ್ಷದ ಸದಸ್ಯರುಗಳಿಗೆ ತಮ್ಮ ತಮ್ಮ ಸ್ಥಾನಗಳಿಗೆ ತೆರಳುವಂತೆ ತಿಳಿಸಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:** ಮಾನ್ಯ ಸಭಾಪತಿಯವರು ಒಪ್ಪಿದ್ದಾರೆ. ಹಾಗಾಗಿ, ಮಾನ್ಯ ಸದಸ್ಯರೆಲ್ಲರೂ ತಮ್ಮ-ತಮ್ಮ ಸ್ಥಾನಕ್ಕೆ ತೆರಳಬೇಕೆಂದು ವಿನಂತಿಸುತ್ತೇನೆ.

**(ಈ ಹಂತದಲ್ಲಿ ಧರಣಿನಿರತ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)**

**ಶ್ರೀ ಸಿ.ಎಂ.ಇಬ್ರಾಹಿಂ:** ಈ ಕೆಲಸವನ್ನು ಮೊದಲೇ ಮಾಡಬಹುದಾಗಿತ್ತು. ಮಾನ್ಯ ಸಭಾಪತಿಯವರೆ, ಬಹಳ ಸಂತೋಷವಾಯಿತು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(410) 16.03.2021 12.10 ಎಸ್‌ವಿ-ವಿಕೆ**

**ಪ್ರಶ್ನೆ ಸಂಖ್ಯೆ 1224**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಸಂಗ್ರಹಿಸಲಾಗುವಂತಹ ರಾಜಧನದ ಮೇಲೆ ಶೇ.10 ರಿಂದ ಶೇ.30 ರಷ್ಟು ಸೆಸ್ ಅನ್ನು ಸರ್ಕಾರ ಕಲೆಹಾಕುತ್ತಿದೆ. ಇಲ್ಲಿಯವರೆವಿಗೆ ರೂ.2,336 ಕೋಟಿ ಸಂಗ್ರಹವಾಗಿದೆ. ಅದರಲ್ಲಿ ಕೇಂದ್ರದ ಪ್ರಧಾನ ಮಂತ್ರಿಗಳ ಕೆಲವು ಯೋಜನೆಗಳನ್ನು ಸರ್ಕಾರವು ಕೈಗೆತ್ತಿಕೊಂಡ ನಂತರ ರೂ.1,537.97 ಕೋಟಿ ಹಣ ಉಳಿದಿರುತ್ತದೆ. ಅದಕ್ಕೆ ಜಿಲ್ಲಾವಾರು ಪ್ರತಿಷ್ಠಾನಗಳನ್ನು ಮಾಡಿದೆ. 2015-16ರಿಂದ 2021 ರವರೆಗೆ ಅಂದರೆ ಐದು ವರ್ಷಗಳ ತನಕ ಏಕೆ ಕಾಯ್ದುಕೊಂಡಾಗಿ ಬಂತು ಎಂಬುದು ನನ್ನ ಪ್ರಶ್ನೆ. ಪ್ರತಿ ವರ್ಷ ಅಥವಾ ಪ್ರತಿ ಎರಡು ವರ್ಷಕ್ಕೊಮ್ಮೆ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಆಯಾ ಜಿಲ್ಲಾ ಮಟ್ಟದ ಸಭೆಯಾಗಬೇಕು. ಸಂಬಂಧಪಟ್ಟಂತಹ ಎಲ್ಲಾ ಶಾಸಕರೂ ಅಲ್ಲಿ ಸದಸ್ಯರಾಗಿರುತ್ತಾರೆ. ಅವರಿಂದ ಏನೇನು ಕಾರ್ಯಕ್ರಮಗಳಾಗಬೇಕು ಎನ್ನುವ ಪಟ್ಟಿಯನ್ನು ತೆಗೆದುಕೊಂಡು ಜಿಲ್ಲಾ ಪಂಚಾಯತ್ ಮೂಲಕ ಅಥವಾ ಲೋಕೋಪಯೋಗಿ ಇಲಾಖೆಯ ಮೂಲಕ ಮಾಡಿಸಬೇಕು. ಇಷ್ಟು ವರ್ಷಗಳ ಕಾಲ ಹಣವನ್ನು ಇಟ್ಟುಕೊಂಡಿರುವುದು ಒಳ್ಳೆಯದಲ್ಲ ಎನ್ನುವುದ ನನ್ನ ಅಭಿಪ್ರಾಯ.

ಎರಡನೆಯದಾಗಿ ವಿಧಾನ ಪರಿಷತ್ ಸದಸ್ಯರನ್ನು ಕೇವಲ ಒಂದು ಜಿಲ್ಲೆಗೆ ಏಕೆ ಸೀಮಿತಗೊಳಿಸಲಾಗುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಈಗ ನನಗೆ ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ನಾಲ್ಕು ಜಿಲ್ಲೆಗಳಿವೆ. 1,60,000 ಜನ ಪದವೀಧರ ಮತದಾರರು ನನ್ನ ಕ್ಷೇತ್ರವ್ಯಾಪ್ತಿಯಲ್ಲಿದ್ದಾರೆ. ನನಗೆ ಕೇವಲ ಒಂದು ಜಿಲ್ಲೆಯನ್ನು ತೆಗೆದುಕೊಳ್ಳಿ ಎಂದರೆ ಹೇಗಾಗುತ್ತದೆ? ಹಾಗಾದರೆ ನನ್ನ ಕ್ಷೇತ್ರವನ್ನು ಕೇವಲ ಒಂದು ಜಿಲ್ಲೆಗಷ್ಟೇ ಸೀಮಿತಗೊಳಿಸಲಿ. ಜಿಲ್ಲಾ ಪಂಚಾಯತ್ ಸಭೆಗಳಿರಲಿ ಅಥವಾ ಪ್ರಗತಿ ಪರಿಶೀಲನಾ ಸಭೆಗಳಿರಲಿ ನಾಲ್ಕು ಜಿಲ್ಲೆಗಳಲ್ಲಿಯೂ ನಾವು ಭಾಗವಹಿಸುತ್ತೇವೆ. ಇಲ್ಲಿ ಒಂದನ್ನು ಮಾತ್ರ ತೆಗೆದುಕೊಳ್ಳಿ ಎಂದರೆ that is wrong. ವಿಧಾನ ಪರಿಷತ್ ಸದಸ್ಯರು ಅವರ ಕ್ಷೇತ್ರವ್ಯಾಪ್ತಿಯಲ್ಲಿರುವಂತಹ ಎಲ್ಲಾ ಸಭೆಗಳಿಗೂ ಹೋಗಿ ಭಾಗವಹಿಸಬೇಕು. ಆದ್ದರಿಂದ ಈ ಒಂದು ಮಿತಿಯನ್ನು ತೆಗೆಯಬೇಕು. ಪ್ರತಿವರ್ಷ ಅಥವಾ ಎರಡು ವರ್ಷಕ್ಕೊಮ್ಮೆ ಜಿಲ್ಲಾ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆಯಾಗಬೇಕು. ಸರ್ಕಾರದ ಮಾರ್ಗದರ್ಶಿಯಂತೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ಜಿಲ್ಲಾಪಂಚಾಯತ್ ಅಥವಾ ಲೋಕೋಪಯೋಗಿ ಇಲಾಖೆಯ ಮುಖಾಂತರ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕು.

ಇದರ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕೆಂದು ಕೋರುತ್ತೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯಲ್ಲಿ 2016ರಿಂದ ಇಲ್ಲಿಯವರೆವಿಗೆ ರೂ.2336 ಕೋಟಿಗಳು ಡಿಎಂಎಫ್ ವಂತಿಗೆಯು ಸಂಗ್ರಹವಾಗಿದೆ. ಅದರಲ್ಲಿ ರೂ.700 ಕೋಟಿಗಿಂತಲೂ ಹೆಚ್ಚು ಕಳೆದ ವರ್ಷದಲ್ಲಿ cover ಆಗಿದೆ. ನಮ್ಮ ಸರ್ಕಾರ ಬಂದಾಗಿನಿಂದ ಇದನ್ನು ಭಿರತಜಡಿ ಮಾಡಿದ್ದೇವೆ. ಇದು ಹಿಂದೆ ಉಳಿದಿದ್ದ ಹಣವಾಗಿದೆ. ನಾಲ್ಕು ವರ್ಷದ ಹಿಂದೆ ನಮ್ಮ ಸರ್ಕಾರ ಇರಲಿಲ್ಲ. ಕಾಂಗ್ರೆಸ್ ಸರ್ಕಾರ ಮತ್ತು ಸಮ್ಮಿಶ್ರ ಸರ್ಕಾರ ಎರಡೂ ಬಂದ ನಂತರ ಅದು ಅಷ್ಟೇ ಉಳಿದಿದೆ. ಗಣಿ ಮತ್ತು ಭೂ ವಿಜ್ಞಾನ ಸಚಿವರು ಇದರ ಸದಸ್ಯರಾಗಿರುವುದಿಲ್ಲ. ನಾನು ಅದನ್ನು follow up ಮಾಡಿದ್ದೇನೆ. ಜಿಲ್ಲಾ ಉಸ್ತುವಾರಿ ಸಚಿವರು ಇದಕ್ಕೆ ಅಧ್ಯಕ್ಷರಿರುತ್ತಾರೆ. ಆ ಜಿಲ್ಲೆಯಲ್ಲಿರುವಂತಹ ಎಲ್ಲಾ ಶಾಸಕರೂ ಅದಕ್ಕೆ ಸದಸ್ಯರಿರುತ್ತಾರೆ. ಒಬ್ಬ ವಿಧಾನ ಪರಿಷತ್ ಸದಸ್ಯರು ಇರುತ್ತಾರೆ. ಇದರ ಬಗ್ಗೆ ಕಳೆದ ಬಾರಿಯೂ ಚರ್ಚೆಯಾಗಿತ್ತು. ವಿಧಾನ ಪರಿಷತ್ ಸದಸ್ಯರಿಗೆ ಒಂದು ತಾಲ್ಲೂಕಿಗೆ ಮಾತ್ರ voting powers ಕೊಟ್ಟಿರುತ್ತಾರೆ. ತಾವು ಯಾವ ತಾಲ್ಲೂಕಿಗಾಗಲೀ ಅಥವಾ ಜಿಲ್ಲೆಗಾಗಲೀ ಸೂಚಿಸುತ್ತೀರೋ ಅಲ್ಲಿ ತೋರಿಸಬೇಕೆನ್ನುವುದು ಹಿಂದಿನ ಸರ್ಕಾರವಿದ್ದಾಗಿನಿಂದಲೂ ನಡೆದು ಬಂದಿದೆ. ತಮ್ಮ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳನ್ನು ಸೇರಿಸಬೇಕೆನ್ನುವ ತಮ್ಮ ಕೋರಿಕೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮುಖ್ಯಮಂತ್ರಿಯವರ ಜೊತೆಯಲ್ಲಿ ಚರ್ಚೆ ಮಾಡಿ ಅದರ ಬಗ್ಗೆ ಮುಂದಿನ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾ ಜಿಲ್ಲಾ ಪಂಚಾಯತ್ ಸಭೆಗಳಿಗೂ ನಾವು ಹೋಗುತ್ತೇವೆ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಶ್ರೀಕಂಠೇಗೌಡರೇ, ತಮ್ಮ ಮಾತನ್ನು ನಾನು ಒಪ್ಪುತ್ತೇನೆ. ವಿಧಾನ ಪರಿಷತ್ ಸದಸ್ಯರ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿಯೂ voting ಸೇರಿಸಿಬಿಟ್ಟರೆ ಸರಿ ಹೋಗುತ್ತದೆ. ತಮ್ಮ ನೋಡಲ್ ತಾಲ್ಲೂಕಿನಲ್ಲಿ ಮಾತ್ರ voting powers ಇರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, voting powers ಇರುವುದನ್ನು ನಾನು ಒಪ್ಪುತ್ತೇನೆ. ಆದರೆ ತಾಲ್ಲೂಕು ಸಭೆಗಳಲ್ಲದೆ ಜಿಲ್ಲಾ ಮಟ್ಟದ ಸಭೆಗಳಿಗೂ ವಿಧಾನಸಭಾ ಸದಸ್ಯರು ಬರುತ್ತಾರಲ್ಲವೆ? ಕೆ.ಡಿ.ಪಿ.ಸಭೆಗಳಿಗೂ ಬರುತ್ತಾರೆ. ಅವರು ತಮ್ಮ ತಾಲ್ಲೂಕಿಗೆ ಮಾತ್ರ ಸೀಮಿತರಾಗುವುದಿಲ್ಲ. ಜಿಲ್ಲಾ ಪಂಚಾಯತ್ ಸಭೆಗಳಿಗೂ ಬರುತ್ತಾರೆ. ಅದೇ ರೀತಿ ನಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ನಾಲ್ಕು ಅಥವಾ ಐದು ಜಿಲ್ಲೆಗಳಿರುತ್ತವೆ. ಆ ಎಲ್ಲಾ ಜಿಲ್ಲೆಗಳ ಸಭೆಗಳಲ್ಲಿಯೂ ನಾವು ಭಾಗವಹಿಸುತ್ತೇವೆ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಶ್ರೀಕಂಠೇಗೌಡರೇ, ತಾವು ಕಳೆದ ಬಾರಿಯೂ ಇದೇ ವಿಷಯವನ್ನು ಎತ್ತಿದ್ದು, ಈ ಸದನದಲ್ಲಿ ಚರ್ಚೆಯಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಹೌದು ಮಾನ್ಯ ಸಚಿವರೇ, ಅದು sort out ಆಗಿರುವುದಿಲ್ಲ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಈ ರೀತಿ ಮಾಡುವುದರಿಂದ ನಮಗೇನೂ ವ್ಯತ್ಯಾಸವಾಗುವುದಿಲ್ಲ. ಏಕೆಂದರೆ ತಾವು ಡಿಎಂಎಫ್ ಫಂಡ್ ಅನ್ನು ಅಭಿವೃದ್ಧಿ ಮಾಡುವ ಸಲುವಾಗಿ ಸಲಹೆಗಳನ್ನು ಕೊಡುತ್ತೀರಿ. ಅದರ ಬಗ್ಗೆ ಚರ್ಚೆ ಮಾಡಿ ನಂತರ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಮಂತ್ರಿಗಳೇ, ಇದು ಎಲ್ಲಾ ವಿಧಾನ ಪರಿಷತ್ ಸದಸ್ಯರ ಅಭಿಪ್ರಾಯ. ಮಾನ್ಯ ಶ್ರೀಕಂಠೇಗೌಡರು ಪ್ರಸ್ತಾಪ ಮಾಡಿರುವ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ಕೆಲಸವನ್ನು ತಾವು ಮಾಡಬೇಕು.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಆಗಲಿ ಮಾನ್ಯ ಸಭಾಪತಿಯವರೇ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಒಂದು ಸ್ಪಷ್ಟೀಕರಣ ಬೇಕು. ಅವರು ನಾಲ್ಕು ಜಿಲ್ಲೆಗಳ ಮಾತನ್ನು ಹೇಳಿದರು. ನಾವು ವಿಧಾನ ಸಭಾ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದು, ನಮ್ಮ ಕ್ಷೇತ್ರವ್ಯಾಪ್ತಿ ಇಡೀ ರಾಜ್ಯಕ್ಕೆ ಇದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ಕೂಡ ಕೆಲವು ಕಡೆ ಮೂರು ತಾಲ್ಲೂಕುಗಳನ್ನು ಪ್ರತಿನಿಧಿಸುತ್ತಾರೆ. ಆಗ ಮೂರೂ ತಾಲ್ಲೂಕುಗಳಲ್ಲಿ ಅವರು representation ಕೊಡುತ್ತಾರೆ. ಉದಾಹರಣೆಗೆ ತಮ್ಮ ಜಿಲ್ಲೆಯಲ್ಲಿರುವ ಶೃಂಗೇರಿ. ಅದು ಮೂರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಲ್ಲೂಕುಗಳನ್ನೊಳಗೊಂಡ ಕ್ಷೇತ್ರ. ಶಿವಮೊಗ್ಗ ಜಿಲ್ಲೆಯಲ್ಲಿರುವ ಸಾಗರ ಕ್ಷೇತ್ರದಲ್ಲಿ ಸಾಗರ ಮತ್ತು ಹೊಸನಗರ ಎರಡೂ ತಾಲ್ಲೂಕುಗಳ ವಿಧಾನ ಸಭಾ ಸದಸ್ಯರಿಗೆ ಅವಕಾಶ ಮಾಡಿಕೊಡುತ್ತಾರೆ. ಶಿವಮೊಗ್ಗ ಗ್ರಾಮಾಂತರ ಕ್ಷೇತ್ರ ವ್ಯಾಪ್ತಿಗೆ ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರು ಮತ್ತು ಶಿವಮೊಗ್ಗ ತಾಲ್ಲೂಕು ಬರುತ್ತದೆ. ವಿಧಾನ ಸಭಾ ಸದಸ್ಯರಿಗೆ ಎರಡು ಕಡೆ ಪ್ರಾತಿನಿಧ್ಯ ಸಿಗಬಹುದು ಎಂಬುದಾದರೆ ನಾನು ಪದವೀಧರ ಕ್ಷೇತ್ರದಲ್ಲಿ ಸುಮಾರು 31 ವಿಧಾನ ಸಭಾ ಕ್ಷೇತ್ರಗಳನ್ನು ಪ್ರತಿನಿಧಿಸುತ್ತೇನೆ. ಅವರಿಗೆ ಹೇಗೆ ಮೂರು ತಾಲ್ಲೂಕುಗಳು ಒಂದು ಕ್ಷೇತ್ರವಾಗುತ್ತದೆಯೋ ಹಾಗೆಯೇ ನಮ್ಮದೂ ಒಂದು ಕ್ಷೇತ್ರ. ಕ್ಷೇತ್ರ ವ್ಯಾಪ್ತಿಯಲ್ಲಿ ನಮಗೆ ಸಮರ್ಥವಾದಂತಹ ಸಂಪೂರ್ಣ ಪ್ರಾತಿನಿಧ್ಯ ಬೇಕು. ತಾರತಮ್ಯ ಮಾಡಲು ಅವಕಾಶವಿಲ್ಲ.

**ಶ್ರೀ ಮುರುಗೇಶ್ ಆರ್. ನಿರಾಣಿ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಸ್ವಲ್ಪ ಚರ್ಚೆ ಮಾಡಿ ಶೀಘ್ರ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಚಿವರೇ, ಇದು ನಮ್ಮ ಸದನದ ಎಲ್ಲಾ ಸದಸ್ಯರ ಅಭಿಪ್ರಾಯ. ನನ್ನದು ದಕ್ಷಿಣ ಪದವೀಧರ ಕ್ಷೇತ್ರವಾಗಿದ್ದು, ನಾಲ್ಕು ಜಿಲ್ಲೆಗಳು ಬರುತ್ತದೆ. ನಾನು ನಾಲ್ಕು ಜಿಲ್ಲೆಗಳನ್ನು ಪ್ರತಿನಿಧಿಸಬೇಕಲ್ಲವೆ?

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಶ್ರೀಕಂಠೇಗೌಡರೇ, ತಾವು ಹೇಳುತ್ತಿರುವುದು ಸರಿಯಿದೆ. ಆದರೂ ಸಹಿತ ನಮ್ಮ ಅಧಿಕಾರಿಗಳ ಜೊತೆ ಮತ್ತು ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚಿಸಿ, ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಚಿವರೇ, ಅದು ಕೇವಲ ಅವರೊಬ್ಬರ ಅಭಿಪ್ರಾಯವಾಗಿರುವುದಿಲ್ಲ. ಈ ಸದನದ ಎಲ್ಲಾ ಸದಸ್ಯರ ಅಭಿಪ್ರಾಯಗಳನ್ನು ಒಟ್ಟಾರೆ ಕ್ರೋಢೀಕರಿಸಿ, ಅವರು ನಮ್ಮೆಲ್ಲರ ಧ್ವನಿಯಾಗಿ ಮಾತನಾಡಿದ್ದಾರೆ. ತಾವು ಅದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಚಿವರೇ, ಕಳೆದ ಬಾರಿಯೂ ತಾವು ಇದನ್ನೇ ಹೇಳಿದ್ದಿರಿ. ಈಗಲೂ ಪುನರುಚ್ಚರಿಸಿದ್ದೀರಿ. ತಾವು ಹೇಳಿದಂತೆ ನಡೆಯುತ್ತಿದೆಯೇ ಎನ್ನುವ ಬಗ್ಗೆ ತಾವು ಮಾಹಿತಿ ಪಡೆಯಬೇಕು. ನೀವು ಹೇಳಿರುವುದನ್ನು consideration ಮಾಡುವುದಾದರೆ ತಮ್ಮ ಬಳಿ ದಾಖಲೆಯಿರಬೇಕಲ್ಲವೆ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಈ ಸಮಿತಿಯಲ್ಲಿ ಮಂತ್ರಿಗಳಿಲ್ಲ. ಈಗ ನಾವು ಸ್ವಲ್ಪ ಬದಲಾವಣೆಯನ್ನು ತರುತ್ತಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆಗಳಾಗುತ್ತಿವೆ. ಕೆಲವೊಂದು ಜಿಲ್ಲೆಗಳಲ್ಲಿ ಸಭೆಗಳೇ ಆಗಿಲ್ಲ. ನಾನು ಜಿಲ್ಲೆಗಳ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ತಾವು ನೀಡಿರುವ ಸಲಹೆಗಳನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಚಿವರೇ, ಒಬ್ಬ ವಿಧಾನ ಪರಿಷತ್ ಸದಸ್ಯರಿಗೆ ಇಷ್ಟು ಹಣವನ್ನು ಅನುದಾನವೆಂದು ನೀಡಲಾಗುತ್ತದೆ. ಆ ಅನುದಾನವನ್ನ ಜಿಲ್ಲೆಯ ಒಳಗೆ, ತಾಲ್ಲೂಕು ಮಟ್ಟದಲ್ಲಿ ಬಳಕೆ ಮಾಡಿಕೊಳ್ಳಬೇಕು. ಜಿಲ್ಲೆಯಿಂದ ಹೊರಗೆ ಹೋಗುವುದಕ್ಕಾಗುವುದಿಲ್ಲ. ಹೆಚ್ಚಿನ ಅನುದಾನವನ್ನೂ ಕೊಡುವುದಿಲ್ಲ. ಹೆಚ್ಚು ಅನುದಾನ ನೀಡಬೇಕೆಂದು ನಾವು ಕೇಳುವುದಿಲ್ಲ. ನಮಗೆ ಪ್ರತಿನಿಧಿಸುವುದಕ್ಕಾಗಿ ಒಂದು ಜಿಲ್ಲೆಯನ್ನು ಕೊಟ್ಟಿರುತ್ತಾರೆ. ಸರ್ಕಾರ ಕೊಡುವ ಅನುದಾನವನ್ನು ಆ ಜಿಲ್ಲೆಯ ವ್ಯಾಪ್ತಿಯಲ್ಲಿ ಬಳಕೆ ಮಾಡಲು ಅವಕಾಶ ಮಾಡಿಕೊಡಿ.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ಕೆಲವೊಂದು ಕಡೆ 31–32 ತಾಲ್ಲೂಕು.....

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಈ ವಿಷಯದ ಮೇಲೆ ಚರ್ಚೆ ಬೇಡ. ಮುಂದಿನ ಪ್ರಶ್ನೆ ಮಾನ್ಯ ಅರವಿಂದಕುಮಾರ್ ಅರಳಿಯವರದ್ದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1377**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ವಿಸ್ತೃತವಾದ ಉತ್ತರವನ್ನು ಒದಗಿಸಿದ್ದಾರೆ. ನನ್ನ ಉಪ ಪ್ರಶ್ನೆಯಲ್ಲಿ ಮಹಿಳಾ ಉದ್ಯಮ ಪಾರ್ಕ್ ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂದು ಕೇಳಿದ್ದೆನು. ನಾನು ಇಸವಿಯನ್ನು ತಪ್ಪು ಹಾಕಿದ್ದರೂ, ಅದನ್ನು ಸರಿಪಡಿಸಿಕೊಂಡು ಉತ್ತರವನ್ನು ಕೊಟ್ಟಿದ್ದಾರೆ. ರೂ.13.93 ಕೋಟಿ ವೆಚ್ಚದಲ್ಲಿ ಮಾಡಲಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಈ ಪ್ರಕ್ರಿಯೆ ಇನ್ನೂ ಅಲ್ಲಿ ಪ್ರಾರಂಭವಾಗಿರುವುದಿಲ್ಲ. 42.57 ಎಕರೆ ಜಮೀನನ್ನು locate ಮಾಡಿದ್ದಾರೆ. ಆದರೆ ಅಲ್ಲಿ ಯಾವುದೇ ಕೆಲಸ ನಡೆಯುತ್ತಿಲ್ಲ. ಅದಕ್ಕೆ boundary ಹಾಕುವುದಾಗಲೀ ಅಥವಾ marking ಮಾಡುವುದಾಗಲೀ ಯಾವುದೇ ಕೆಲಸ ನಡೆಯುತ್ತಿಲ್ಲ. ಹೀಗಿರುವಾಗ ರೂ.13.93 ಕೋಟಿ ಎಲ್ಲಿ ಖರ್ಚಾಗುತ್ತದೆ ಎಂದು ನಾನು ಕೇಳಬಯಸುತ್ತೇನೆ.

**(ಮುಂದು)**

**(411) 16.03.2021, 12 .20 KG.VK**

**ಶ್ರೀ ಜಗದೀಶ್‌ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅರವಿಂದಕುಮಾರ್ ಅರಳಿಯವರು ಬೀದರ್‌ಗೆ ಸಂಬಂಧಪಟ್ಟಂತೆ, KIADB (Karnataka Industrial Areas Development Board) ಬಡಾವಣೆಗಳು ಅಭಿವೃದ್ಧಿಯಾಗಿವೆಯೇ ಎಂಬುದರ ಬಗ್ಗೆ ಮತ್ತು ಮಹಿಳಾ ಪಾರ್ಕ್‌ಗಳನ್ನು ಅಭಿವೃದ್ಧಿ ಮಾಡುವಂಥದ್ದರ ಬಗ್ಗೆ ಕೇಳಿದ್ದಾರೆ. ಈಗಾಗಲೇ ನಮ್ಮ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಮಹಿಳಾ ಪಾರ್ಕ್‌ಗಳನ್ನು ಅಭಿವೃದ್ಧಿ ಮಾಡಿದ್ದೇವೆ. ಮೈಸೂರಿನಲ್ಲಿ ಒಂದು ಕಡೆ ಸುಮಾರು 48 ಎಕರೆ ಜಾಗವನ್ನು ಮತ್ತು ಇನ್ನೊಂದು ಕಡೆ 64 ಎಕರೆ ಜಾಗವನ್ನು ಅಭಿವೃದ್ಧಿ ಪಡಿಸಿದ್ದೇವೆ. Allocation ಮಾಡಿದ್ದೇವೆ ಮತ್ತು plots ಗಳನ್ನು ಕೊಟ್ಟಿದ್ದೇವೆ. ಧಾರವಾಡ ಜಿಲ್ಲೆಯಲ್ಲಿ ಸುಮಾರು 30 ಎಕರೆ ಜಾಗದಲ್ಲಿ ಮಹಿಳಾ ಪಾರ್ಕ್‌ನ್ನು ಮಾಡಿದ್ದೇವೆ. ಆ ಎಲ್ಲಾ ಸೈಟ್‌ಗಳನ್ನು allotment ಮಾಡಿದ್ದೇವೆ. ಹಾರೋಹಳ್ಳಿಯಲ್ಲಿ ಸುಮಾರು 106 ಎಕರೆ ಜಾಗದಲ್ಲಿ ಮಹಿಳಾ ಪಾರ್ಕ್‌ಗಳನ್ನು ಅಭಿವೃದ್ದಿ ಮಾಡುತ್ತಿದ್ದೇವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು 48 ಎಕರೆ ಜಾಗದಲ್ಲಿ ಮಾಡುತ್ತಿದ್ದೇವೆ. ಬೀದರ್ ಜಿಲ್ಲೆಯಲ್ಲಿ ಮಹಿಳಾ ಪಾರ್ಕ್‌ನ್ನು ಮಾಡಲು ಈಗಾಗಲೇ 42 ಎಕರೆ 57

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗುಂಟೆ ಜಾಗವನ್ನು reserve ಮಾಡಿ ಇಟ್ಟಿದ್ದೇವೆ. ಎಷ್ಟು ಅಳತೆಯ ನಿವೇಶನಗಳು ಇರಬೇಕು ಎನ್ನುವುದರ ಬಗ್ಗೆಯೂ ಸಹ ಪ್ಲಾನ್‌ನ್ನು ರೆಡಿ ಮಾಡಿಟ್ಟಿದ್ದೇವೆ. ಈ ಹಿನ್ನೆಲೆಯಲ್ಲಿ ರಸ್ತೆ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ದೃಷ್ಟಿಯಿಂದ immediately 13.93 ಕೋಟಿ ರೂಗಳನ್ನು ಬಿಡುಗಡೆ ಮಾಡಿದ್ದೇವೆ. Tender process ಆದ ತಕ್ಷಣವೇ, ಮಹಿಳಾ ಪಾರ್ಕ್‌ನ್ನು ಅಭಿವೃದ್ಧಿ ಮಾಡಿ ಅಲ್ಲಿಯ ನಿವೇಶನಗಳನ್ನು ಮಹಿಳಾ ಉದ್ಯಮದಾರರಿಗೆ allot ಮಾಡುತ್ತೇವೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಕ್ಷಣವೇ ಎಂದು ಹೇಳಿದ್ದಾರೆ. ಹಾಗಾದರೆ, ಇದಕ್ಕೆ ಏನಾದರೂ time bound ಅನ್ನು ಹಾಕಿಕೊಂಡಿದ್ದಾರೆಯೇ ಎಂಬುದನ್ನು ತಿಳಿಸಬೇಕು.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ KIADB ನಿಂದ ನಿರ್ಧಾರವಾಗಿದೆ ಮತ್ತು ಅದಕ್ಕೆ ಹಣ ಸಹ ಬಿಡುಗಡೆಯಾಗಿದೆ. ಮತ್ತೊಂದು ಕಡೆ ಟೆಂಡರ್ ಕರೆಯುವಂತಹ process ನಡೆದಿದೆ. ಬಹುಶಃ ಮೂರು ಅಥವಾ ಆರು ತಿಂಗಳಿನಲ್ಲಿ ಅಭಿವೃದ್ಧಿ ಮಾಡುತ್ತೇವೆ. ಅದಾದ ಮೇಲೆ plot ಗಳನ್ನು ಹಂಚುವ ಪಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ನನಗೆ ಇದರಲ್ಲಿ ಇನ್ನೊಂದು ವಿಷಯ confuse ಆಗುತ್ತಿದೆ. ಮಹಿಳಾ ಉದ್ಯಮಿದಾರರಿಗೆ ಕೊಟ್ಟಿರುವಂತಹ ಸೌಲಭ್ಯದಲ್ಲಿ ಭೂ ಪರಿವರ್ತನಾ ಶುಲ್ಕವನ್ನು ಮರುಪಾವತಿ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಇದು ಏನೆಂದು ಅರ್ಥವಾಗುತ್ತಿಲ್ಲ. ದಯವಿಟ್ಟು, ಮಾನ್ಯ ಸಚಿವರು ಇದರ ಬಗ್ಗೆ ವಿಶ್ಲೇಷಣೆ ಮಾಡಿದರೆ ಒಳ್ಳೆಯದು.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಕೆಲವರು ಅವರ ಸ್ವಂತ ಲ್ಯಾಂಡಿನಲ್ಲಿ ಒಂದು ಕೈಗಾರಿಕೆಯನ್ನು ಅಥವಾ ಬೇರೆ ಏನಾದರೊಂದು ಮಾಡಿಕೊಂಡಿರುತ್ತಾರೆ. ಅಲ್ಲಿಯೂ ಅವರು Non-agricultural ಸಲುವಾಗಿ ಹಣವನ್ನು ಕಟ್ಟಿರುತ್ತಾರೆ. ನಾವು ಆ ಹಣವನ್ನು ಸಹ refund ಮಾಡುತ್ತೇವೆ. ಹಾಗಾಗಿ, ಅದನ್ನು ಭೂ-ಪರಿವರ್ತನಾ ಶುಲ್ಕ ಮರುಪಾವತಿ ಎಂದು ಹೇಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1368**

**(ಉತ್ತರ ಒದಗಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 2018-19 ಮತ್ತು 2019-20ನೇ ಸಾಲಿನಲ್ಲಿ ಮಡಿಕೇರಿ ನಗರಸಭೆಯಲ್ಲಿ ಯಾವ ಯಾವ ಕಾಮಗಾರಿಗಳು ಆಗಿವೆ ಮತ್ತು ಆ ಕಾಮಗಾರಿಗಳು ಎಷ್ಟು ಪೂರ್ಣಗೊಂಡಿವೆ ಎಂಬುದರ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. 2019-20ನೇ ಸಾಲಿನಲ್ಲಿ ನಮ್ಮಲ್ಲಿ ಹಲವಾರು ಕಾಮಗಾರಿಗಳು ಆಗಿವೆ. ಆದರೆ, ಆ ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸಬಯಸುತ್ತೇನೆ. ಇದರ ಜೊತೆಗೆ 2020-21ನೇ ಸಾಲಿನ ಮಳೆಹಾನಿಯ ಹಣ ಬಿಡುಗಡೆಯಾಗುವುದು ಬಾಕಿ ಇದೆ. ನಂತರ ಚರಂಡಿ, ತಡೆಗೋಡೆ ಮತ್ತು major roads ಕೆಲಸಗಳಿಗೆಂದು ಪುನಃ ಸುಮಾರು 30 ಕೋಟಿ ರೂಪಾಯಿಗಳ ಪ್ರಸ್ತಾವನೆ ನಗರಸಭೆಯಿಂದ ಸರ್ಕಾರಕ್ಕೆ ಬಂದಿದೆ.

ಮಾನ್ಯ ಸಭಾಪತಿಯವರೇ, tender process ಬಹಳ ವಿಳಂಬವಾಗಿ ನಡೆಯುತ್ತಿದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ತಮಗೂ ಕೊಡಗು ಜಿಲ್ಲೆ ಚೆನ್ನಾಗಿ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿ ಕೇವಲ 4 ತಿಂಗಳು ಮಾತ್ರ ಕೆಲಸ ಮಾಡುವುದಕ್ಕೆ ಅವಕಾಶವಿದೆ. ಉಳಿದ ತಿಂಗಳುಗಳಲ್ಲಿ ವಿಪರೀತ ಮಳೆ ಇರುವುದರಿಂದ ಯಾವುದೇ ಕಾಮಗಾರಿಯ ಕೆಲಸಗಳು ನಡೆಯುವುದಿಲ್ಲ. ಹಾಗಾಗಿ, ಸರ್ಕಾರಕ್ಕೆ ಕಡತಗಳು ಬಂದರೆ, ಅವುಗಳನ್ನು ಆದಷ್ಟು ಶೀಘ್ರವಾಗಿ ಕಳುಹಿಸಿಕೊಡಬೇಕೆಂದು ಈ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ 30 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ, ಅದು ಸಹ ಆಗಲೇಬೇಕು. ಅತಿವೃಷ್ಟಿಯಿಂದ ಕೊಡಗು ಜಿಲ್ಲೆಯಲ್ಲಿ ಯಾವ ರೀತಿಯ ಅನಾಹುತಗಳು ಆಗುತ್ತಿವೆ, ಅದೇರೀತಿಯಲ್ಲಿ ಮಡಿಕೇರಿ ನಗರದಲ್ಲಿಯೂ ಸಹ ಎಲ್ಲಾ ಚರಂಡಿಗಳು ಕೊಚ್ಚಿಹೋಗಿ ಬಹಳ ಅನಾಹುತಗಳು ಆಗಿವೆ. ಬೆಟ್ಟಗುಡ್ಡಗಳಲ್ಲಿ ಇರುವಂತಹ ಮನೆಗಳು ಕೊಚ್ಚಿಹೋಗಿವೆ. ಹಾಗಾಗಿ, ಬಹಳ ಎಚ್ಚರಿಕೆಯನ್ನು ವಹಿಸಬೇಕಾಗಿದೆ. ಈ ಬಗ್ಗೆ ಜಿಲ್ಲಾಡಳಿತಕ್ಕೆ ಸೂಕ್ತವಾದಂತಹ ಒಂದು ಕ್ರಮವನ್ನು ಕೈಗೊಳ್ಳುವುದಕ್ಕೆ ನಿರ್ದೇಶನ ನೀಡಬೇಕೆಂದು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಎನ್.ನಾಗರಾಜ್(ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರವನ್ನು ನೀಡಿದ್ದೇನೆ. ಮಾನ್ಯ ಸದಸ್ಯರು ಪ್ರಮುಖವಾಗಿ ಮಳೆಹಾನಿ ಕಾಮಗಾರಿಯಡಿ ಕೈಗೆತ್ತಿಕೊಂಡಿರುವ ಎಲ್ಲಾ ಕಾಮಗಾರಿಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರ್ಣಗೊಳಿಸಲಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. 2019-20ನೇ ಸಾಲಿನ ಆಗಸ್ಟ್ ತಿಂಗಳಿನಲ್ಲಿ ಉಂಟಾದ ಅತಿವೃಷ್ಟಿಯಿಂದ ಆದ ಪ್ರವಾಹ ಹಾಗೂ ಭೂ-ಕುಸಿತದಿಂದ ಹಾನಿಯಾದ ಸಾರ್ವಜನಿಕರ ರಸ್ತೆ, ಸೇತುವೆ, ತಡೆಗೋಡೆ ಕಟ್ಟಡ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ದುರಸ್ಥಿ/ಪುನರ್ ನಿರ್ಮಾಣ ಮಾಡುವ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾದ ರೂ.646.00 ಲಕ್ಷಗಳ ಅನುದಾನದಡಿ ಒಟ್ಟು ಐದು ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದ್ದು ಈ ಪೈಕಿ ರೂ.350.00 ಲಕ್ಷಗಳ ಮೊತ್ತದ 04 ಕಾಮಗಾರಿಗಳು ಪೂರ್ಣಗೊಂಡಿದ್ದು ರೂ.296.00 ಲಕ್ಷಗಳ ಮೊತ್ತದ ಒಂದು ಕಾಮಗಾರಿಯು ಪ್ರಗತಿಯಲ್ಲಿದ್ದು, ಶೇಕಡಾ 50 ರಷ್ಟು ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಬಾಕಿ ಇರುವಂತಹ ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸುವುದಕ್ಕೆ ಕ್ರಮಕೈಗೊಳ್ಳಲಾಗುವುದು. ಇದಕ್ಕೆ ಹಣ ಸ್ವಲ್ಪ ಬಿಡುಗಡೆಯಾಗಬೇಕಾಗಿದೆ. 2018-19ನೇ ಸಾಲಿನಲ್ಲಿ ಮಡಿಕೇರಿ ನಗರಸಭೆಗೆ ಮಂಜೂರಾಗಿರುವ ಮಳೆಹಾನಿ ಅನುದಾನದಡಿ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರು 30 ಕೋಟಿ ರೂಪಾಯಿಗಳ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಮನವಿಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಜೊತೆಗೆ ಚರ್ಚಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1395**
**(ಉತ್ತರ ಒದಗಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಗದಗ-ಬೆಟಗೇರಿ ನಗರಕ್ಕೆ 24x7 ಕುಡಿಯುವ ನೀರು ಸರಬರಾಜು ಯೋಜನೆ ಮತ್ತು ಅದರ ಪ್ರಗತಿಯ ಕುರಿತು ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಚಿವರು ನೀಡಿರುವಂತಹ ಉತ್ತರಗಳ ಆಧಾರದ ಮೇಲೆ ನಾನು ಮೂರು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ, ಈ ಕಾಮಗಾರಿ ಯಾವಾಗ ಪ್ರಾರಂಭವಾಯಿತು ಮತ್ತು ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಅವಧಿಯನ್ನು ಕೊಟ್ಟಿದ್ದರು ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು 24x7 ಯೋಜನೆಯನ್ನು 2014 ರಲ್ಲಿ ಅವರಿಗೆ ಗುತ್ತಿಗೆ ಕೊಟ್ಟಿದ್ದು, ಆ ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಎರಡೂವರೆ ವರ್ಷಗಳ ಅವಧಿಯನ್ನು ಕೊಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಈ ಕಾಮಗಾರಿ 2016ಕ್ಕೆ ಮುಗಿಯಬೇಕಾಗಿತ್ತು. ಆದರೆ, ಇನ್ನು ಕಾಮಗಾರಿ ಮುಗಿದಿಲ್ಲ. ಈಗ 2021ನೇ ಸಾಲಿನಲ್ಲಿದೆ. ಒಟ್ಟು ಐದು ವರ್ಷಗಳ ಕಾಲ ಕಾಮಗಾರಿಯನ್ನು ಮಾಡಲು ವಿಳಂಬವಾಗಿದೆ. ಐದು ವರ್ಷಗಳು ವಿಳಂಬವಾಗಲು ಕಾರಣಗಳು ಏನು ಎಂಬುದು ಬೇಕಲ್ಲವೇ? ಇದು ವಿಳಂಬವಾಗಲು ಯಾರು ಜವಾಬ್ದಾರರು? ಮೂರನೆಯದಾಗಿ, ಯಾವುದೇ ಒಂದು ಕಾಮಗಾರಿಯನ್ನು ಗುತ್ತಿಗೆದಾರರಿಗೆ ಕೊಡಬೇಕಾದರೆ ಒಂದು ಕರಾರನ್ನು ಮಾಡಿರುತ್ತಾರೆ. ಐದು ವರ್ಷಗಳ ಕಾಲ ಕಾಮಗಾರಿಯನ್ನು ವಿಳಂಬ ಮಾಡಿರುವವರಿಗೆ ಏನು ದಂಡ ವಿಧಿಸುತ್ತಾರೆ? ಎರಡನೆಯದಾಗಿ, ಈ ಕಾಮಗಾರಿಯನ್ನು ಮುಗಿಸುವುದಕ್ಕೆ deadline ಏನು ಕೊಟ್ಟಿದ್ದಾರೆ? ಈ ಅವಧಿಯಲ್ಲಿ ಅವರಿಗೆ ಎಷ್ಟು ಬಾರಿ ವಿಸ್ತರಣೆ ಮಾಡಿದ್ದೀರಿ? ಅದಕ್ಕೆ ಏಳು ಬಾರಿ ವಿಸ್ತರಣೆ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಅವರು ಕೊಟ್ಟಿರುವಂತಹ deadline ಗೆ ಬಾಕಿ ಮೂರು ತಿಂಗಳು ಇದೆ. ದಿನಾಂಕ 31.05.2021 ಕ್ಕೆ ಸಂಪೂರ್ಣ ಕಾಮಗಾರಿ ಮುಗಿಸಿ ನಗರಸಭೆಗೆ ಹಸ್ತಾಂತರ ಮಾಡಬೇಕಾಗಿದೆ. ಈ ಮೂರು ತಿಂಗಳಿನಲ್ಲಿ ಈ ಕಾಮಗಾರಿಯನ್ನು ಮುಗಿಸುವುದಕ್ಕೆ ಬಹಳ ಅಸಾಧ್ಯವಾಗಿದೆ. ಏಕೆಂದರೆ, ಅಲ್ಲಿ ಐದು overhead tank ಗಳನ್ನು ಮಾಡಬೇಕಾಗಿತ್ತು. ಈ ಐದು overhead tank ಗಳಲ್ಲಿ ಕೇವಲ 2 ಮಾತ್ರ ಸಂಪೂರ್ಣಗೊಂಡಿವೆ. ಇನ್ನೂ under process ನಲ್ಲಿವೆ. ಮನೆ ಸಂಪರ್ಕಕ್ಕೆ ಒಟ್ಟು 14 zone ಮಾಡಿದ್ದರು. ಈ 14 zone ಗಳಲ್ಲಿ ಬರಿ 7 zone ಗಳಿಂದ ಮನೆಗಳಿಗೆ connection ಕೊಟ್ಟಿದ್ದಾರೆ. ಮಾನ್ಯ ಸಚಿವರು ಗದಗ-ಬೆಟಗೇರಿ ನಗರದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

24x7 ಯೋಜನೆ ಕಾಮಗಾರಿ ಅಡಿ 41618 ಮನೆಗಳ ನಳ ಸಂಪರ್ಕವನ್ನು ಕರಾರಿನಂತೆ ನೀಡಬೇಕಾಗಿರುತ್ತದೆ. ಈ ಪೈಕಿ 36606 ಮನೆಗಳ ನಳ ಸಂಪರ್ಕವನ್ನು ನೀಡಲಾಗಿದೆ. ಬಾಕಿ 5012 ಸಂಖ್ಯೆ ಮನೆ ನಳ ಸಂಪರ್ಕ ಪ್ರಗತಿಯಲ್ಲಿರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಈ ಮಾಹಿತಿ ನನಗೆ ತಿಳಿದ ಮಟ್ಟಿಗೆ ಸರಿಯಿಲ್ಲ. 50% ರಷ್ಟು ಮನೆಗಳಿಗೆ water connection ಕೊಟ್ಟಿದ್ದಾರೆ.

(ಮುಂದು)

**(412) 16-03-2021(12-30)ಎಂವಿ-ಬಿಎನ್‌ಎಸ್**

**ಶ್ರೀ ಎಸ್.ವಿ.ಸಂಕನೂರ (ಮುಂದು):-**

ಇನ್ನೂ ಸಾಕಷ್ಟು ಕೆಲಸಗಳು ಬಾಕಿ ಉಳಿದಿವೆ. ಅವರಿಗೆ ಇನ್ನು ಮೂರು ತಿಂಗಳು ಸಮಯ ಮಾತ್ರ ಇದೆ. ಅದಕ್ಕೆ ಅವರ ವಿರುದ್ಧ ಏನು ಕ್ರಮ ಕೈಗೊಳ್ಳುತ್ತಾರೆ? ಉಳಿದಿರುವ ಕಾಮಗಾರಿಗಳನ್ನು ಹೇಗೆ ಪೂರ್ಣಗೊಳಿಸುತ್ತಾರೆ? ಇದಕ್ಕೆ ಮಾನ್ಯ ಸಚಿವರು ಏನು ಮಾಡುತ್ತಾರೆ ಎಂಬುದರ ಬಗ್ಗೆ ಉತ್ತರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರರವರು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಜಿಲ್ಲೆಗೆ ಭೇಟಿ ನೀಡಿ, ಆ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಸಭೆ ಮಾಡಿದ್ದೇನೆ. ನಾನು ಅಲ್ಲಿನ ವಾಸ್ತವ ಸ್ಥಿತಿಗಳನ್ನು ಅರಿತುಕೊಂಡಿದ್ದೇನೆ. ಈಗ ಏನಾಗಿದೆ ಎಂದರೆ, ಈ ಕಾಮಗಾರಿ 2014ರಲ್ಲಿ ಪ್ರಾರಂಭವಾಗಿದೆ. ಕಾಮಗಾರಿ ಪ್ರಾರಂಭವಾದ ಮೇಲೆ ಅವರಿಗೆ ಸುಮಾರು 60 ತಿಂಗಳುಗಳ ಕಾಲಾವಕಾಶವನ್ನು ನೀಡಿದ್ದೆವು. ಈ ಕಾಲಾವಕಾಶವನ್ನು ಕೊಟ್ಟ ನಂತರ ಅದು ಮತ್ತೆ ವಿಸ್ತರಣೆಯಾಯಿತು. ನಾವು ಕೈಗೆತ್ತಿಕೊಂಡಿರುವ ಕಾಮಗಾರಿಗಳು 300 ಕಿಲೋಮೀಟರ್‌ಗೆ ಸಂಬಂಧಪಟ್ಟಂತೆ ಮಾತ್ರ. ಅಂದರೆ 300 ಕಿಲೋಮೀಟರ್‌ಗಳಿಗೆ ಪೈಪ್‌ಲೈನ್ ಅಳವಡಿಸುವಂಥದ್ದು. ಅದಾದ ಮೇಲೆ ಹೆಚ್ಚುವರಿಯಾಗಿ ಇನ್ನು 143 ಕಿಲೋಮೀಟರ್ ಜಾಸ್ತಿಯಾಯಿತು. ಹೀಗಾಗಿ ಅದರ ಕಾಲಾವಕಾಶ ಹೆಚ್ಚಾಗಿರುವುದರಿಂದ ಈ ರೀತಿಯ ಸಮಸ್ಯೆಯಾಗಿದೆ. ಒಟ್ಟು 41,618 ಮನೆಗಳಿಗೆ ನೀರಿನ ಸಂಪರ್ಕವನ್ನು ಕಲ್ಪಿಸಬೇಕಾಗಿತ್ತು. ಈಗಾಗಲೇ 36,606 ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಿದ್ದೇವೆ. ಇನ್ನು 5,012 ಮನೆಗಳಿಗೆ ನೀರಿನ ಸಂಪರ್ಕವನ್ನು ಕಲ್ಪಿಸಬೇಕು. ಇದನ್ನು ಬೇಗ ಇತ್ಯರ್ಥ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದ್ದೇನೆ. ನಾನು ಮತ್ತೊಮ್ಮೆ ಮಾನ್ಯ ಸದಸ್ಯರ ಜೊತೆ ಕುಳಿತು ಅವರ ಜೊತೆ ಚರ್ಚೆ ಮಾಡಿ, ಈ ಸದನ ಮುಗಿದ ತಕ್ಷಣ ಮುಂದಿನ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಂಗಳ 15ನೇ ತಾರೀಖಿನ ನಂತರ ಗದಗ ಜಿಲ್ಲೆಗೆ ಭೇಟಿ ಕೊಡುತ್ತೇನೆ. ಆ ಸಂದರ್ಭದಲ್ಲಿ ಸಮಗ್ರವಾಗಿ ಏನೇನು ಆಗಬೇಕು ಅದರ ಬಗ್ಗೆ ನಾನು ಮತ್ತು ಮಾನ್ಯ ಸದಸ್ಯರು ಕುಳಿತು ಚರ್ಚೆ ಮಾಡಿ, ಅದನ್ನು ಪರಿಹಾರ ಮಾಡುವಂತಹ ಕೆಲಸವನ್ನು ಖಂಡಿತವಾಗಿ ಸರ್ಕಾರ ಮಾಡುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ದಿನಾಂಕ 31.05.2021ರ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಗುತ್ತಿಗೆದಾರರಿಗೆ time bound ಅನ್ನು ಸಹ ನೀಡಿದ್ದೇನೆ. ಈಗ ಏನಾಗಿದೆ ಎಂದರೆ, ಕಾಮಗಾರಿಯ ಗುತ್ತಿಗೆಯನ್ನು ಹೊರ ರಾಜ್ಯದವರು ತೆಗೆದುಕೊಂಡಿದ್ದಾರೆ. ಅವರು ಬೇರೆ ಬೇರೆ ಭಾಗದಲ್ಲಿ ಗುತ್ತಿಗೆಯನ್ನು ತೆಗೆದುಕೊಂಡು, ಅದರಿಂದ ಅವರು ನಷ್ಟ ಅನುಭವಿಸಿ ಆ ಕಂಪನಿ ಮುಚ್ಚಿ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿ, ಈ ರೀತಿಯ ಅವಾಂತರವಾಗಿದೆ. ಇವತ್ತಿನ ದಿವಸ ಸಾಕಷ್ಟು ಮನೆಗಳಿಗೆ ನೀರನ್ನು ಸರಬರಾಜು ಮಾಡುತ್ತಿದ್ದೇವೆ. ಇನ್ನು ಕೆಲವು ಮನೆಗಳಿಗೆ ನೀರನ್ನು ಸರಬರಾಜು ಮಾಡಬೇಕು. ಆ ನಿಟ್ಟಿನಲ್ಲಿ ಖಂಡಿತವಾಗಿ ಸರ್ಕಾರ ಕ್ರಮವನ್ನು ಜರುಗಿಸುತ್ತದೆ. ಈ ಕಾಮಗಾರಿ 2012ರಲ್ಲಿ ಪ್ರಾರಂಭವಾಗಿದೆ. 2012ರಲ್ಲಿ bulk water supply ಆಯಿತು. 2013ರಲ್ಲಿ water treatment plant ಮಾಡಿದೆವು. ಅದಾದ ಮೇಲೆ 2014ರಲ್ಲಿ ಪೈಪ್‌ಲೈನ್ ಕಾಮಗಾರಿ ಚಾಲನೆಯಾಗಿ, 2017ರಲ್ಲಿ ಅಂದಿನ ಮುಖ್ಯಮಂತ್ರಿಗಳು ಇದರ ಉದ್ಘಾಟನೆಯನ್ನು ಸಹ ಮಾಡಿದರು. ಮಾನ್ಯ ಸದಸ್ಯರು ಹೇಳಿದಂತೆ, ಇದು ವಿಳಂಬವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಖಂಡಿತವಾಗಿ ಸರ್ಕಾರ ಗಂಭೀರವಾದ ಚಿಂತನೆಯನ್ನು ಮಾಡಿ, ಅದಕ್ಕೆ ಸಂಬಂಧಪಟ್ಟಂತೆ ಕ್ರಮವನ್ನು ಜರುಗಿಸುತ್ತದೆ.

**ಶ್ರೀ ಎಸ್.ವಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಈ ಕಾಮಗಾರಿಗಳು ಕಳಪೆಯಾಗಿದ್ದು ಕಾಮಗಾರಿಯ ಪ್ರಗತಿ ಆಮೆಗತಿಯಲ್ಲಿ ನಡೆದಿದೆ. ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ದಿನಾಂಕ 26.05.2017ರಂದು ಅಲ್ಲಿಗೆ ಬಂದು ಅಲ್ಲಿನ ಮುನ್ಸಿಪಾಲಿಟಿ ಎದುರಿಗೆ ಒಂದು ದಿವಸ ಧರಣಿ ಕುಳಿತುಕೊಂಡಿದ್ದರು. ಅಂದರೆ, ಕಾಮಗಾರಿಯ ವೇಗ ಹೆಚ್ಚಿಸುವುದಕ್ಕೆ ದೊಡ್ಡವರು ಬಂದು ಧರಣಿ ಕುಳಿತುಕೊಂಡರೂ ಸಹ ಈ ಕೆಲಸ ಆಗಿಲ್ಲ. ಅದಕ್ಕೆ ಗುತ್ತಿಗೆದಾರರನ್ನು ಯಾವರೀತಿ ನಿಯಂತ್ರಣ ಮಾಡುತ್ತಾರೆಂಬುದು ಪ್ರಶ್ನೆಯಾಗಿದೆ. ನನ್ನ ಮತ್ತೊಂದು ಪ್ರಶ್ನೆ ಏನೆಂದರೆ, ಒಟ್ಟಾರೆ ಗದಗ ಮತ್ತು ಬೆಟಗೇರಿಯ ಸುಮಾರು ಎರಡು ಲಕ್ಷ ಜನರ ಅಭಿಪ್ರಾಯವೇನೆಂದರೆ, ಗದಗ ಮತ್ತು ಬೆಟಗೇರಿಗೆ ನೀರು ಸರಬರಾಜು ಮಾಡುವಂತಹ ಈ ಕಾಮಗಾರಿ ಸಂಪೂರ್ಣ ವಿಫಲವಾಗಿದೆ. ಅದು ಏಕೆ ವಿಫಲವಾಗಿದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳುತ್ತೇನೆ. ಇದಕ್ಕೆ ಮೊದಲ ಕಾರಣವೇನೆಂದರೆ, ಅಲ್ಲಿ ಹೊಸ ಪೈಪ್‌ಲೈನ್‌ಗಳನ್ನು ಹಾಕಿದ್ದಾರೆ. ಆ ಹೊಸ ಪೈಪ್‌ಲೈನ್‌ಗಳನ್ನು ಹಾಕಿ ಆರು ಅಥವಾ ಒಂಬತ್ತು ತಿಂಗಳು ಆಗಿಲ್ಲ. ಆದರೆ, ಅಲ್ಲಿ ಆರು ತಿಂಗಳಿಗೆ ಮತ್ತು ಎಂಟು ತಿಂಗಳಿಗೆ ಒಮ್ಮೆ ಆ ಪೈಪ್‌ಲೈನ್‌ಗಳು ಒಡೆದು ಹೋಗುತ್ತಿವೆ. ಅವುಗಳು ಏಕೆ break ಆಗುತ್ತಿವೆ ಎಂದರೆ, ಗುತ್ತಿಗೆದಾರರು ಗುಣಮಟ್ಟದ ಸಾಮಾಗ್ರಿಗಳನ್ನು ಉಪಯೋಗ ಮಾಡುತ್ತಿಲ್ಲ. ನಾನು ಅದೇ ಊರಿನಲ್ಲಿ ಇರುತ್ತೇನೆ. ಪೈಪ್‌ಗಳು ಆರು ತಿಂಗಳಿಗೊಮ್ಮೆ break ಆಗುತ್ತಿವೆ. ಪೈಪ್‌ಲೈನ್ break ಆಗಿರುವುದರಿಂದ ಇನ್ನು ಹದಿನೈದು ದಿವಸ ನೀರು ಬರುವುದಿಲ್ಲವೆಂದು ಅಲ್ಲಿನ ಪತ್ರಿಕೆಗಳಲ್ಲಿ ಮಾಹಿತಿ ಕೊಡುತ್ತಾರೆ. ಈ ರೀತಿ ಏಕೆ? ಎರಡನೆಯ ಕಾರಣವೇನೆಂದರೆ, ಅಲ್ಲಿ ಮುಖ್ಯವಾಗಿ ನೀರನ್ನು ಪಂಪ್ ಮಾಡುವುದಕ್ಕೆ ಒಟ್ಟು ನಾಲ್ಕು ಪಂಪ್‌ಸೆಟ್‌ಗಳು ಇರಬೇಕು. ಆದರೆ, ಅಲ್ಲಿ ಕೇವಲ ಎರಡು ಪಂಪ್‌ಸೆಟ್‌ಗಳಿವೆ. ಅದರಲ್ಲೂ ಯಾವುದಾದರು ಒಂದು ಸುಟ್ಟು ಹೋಗುತ್ತದೆ. ಆರು ತಿಂಗಳಿಗೊಮ್ಮೆ ಪಂಪ್‌ಸೆಟ್‌ಗಳು ಸುಟ್ಟು ಹೋಗುತ್ತವೆ. ಆದುದರಿಂದ, ಗದಗ ಮತ್ತು ಬೆಟಗೇರಿ ಜನರಿಗೆ ಸಮರ್ಪಕವಾಗಿ ನೀರಿನ ವಿತರಣೆಯಾಗುತ್ತಿಲ್ಲ. ಅಲ್ಲಿ ನಾಲ್ಕು ಪಂಪ್‌ಗಳು ಕೆಲಸ ಮಾಡುವಂತೆ ಮಾಡಬೇಕು. ಇದಕ್ಕೆ ನನ್ನ ವಿನಂತಿ ಏನೆಂದರೆ, ಅಲ್ಲಿನ ಕಾಮಗಾರಿ ಸಂಪೂರ್ಣವಾಗಿ ಕಳಪೆಯಾಗಿದೆ ಮತ್ತು ಆರು ತಿಂಗಳಿಗೊಮ್ಮೆ ಪೈಪ್‌ಲೈನ್‌ಗಳು break ಆಗುತ್ತಿವೆ ಮತ್ತು ಪ್ರತಿಬಾರಿ ಪಂಪ್‌ಸೆಟ್‌ಗಳು ಸುಟ್ಟು ಹೋಗುತ್ತಿವೆ. ಅದಕ್ಕೆ ನನ್ನ ವಿನಂತಿ ಮತ್ತು ಆಗ್ರಹ ಏನೆಂದರೆ, ಯಾವ ಯಾವ ಭಾಗದಲ್ಲಿ ಯಾವ ರೀತಿಯ ಕಳಪೆ ಕಾಮಗಾರಿಯಾಗಿದೆ ಎಂಬುದನ್ನು ಪರಿಶೀಲಿಸಲು ದಯವಿಟ್ಟು ಮಾನ್ಯ ಸಚಿವರು Technical Expert Committee ಯನ್ನು ನೇಮಕ ಮಾಡಲಿ. ಏಕೆಂದರೆ, ಈ ಕಾಮಗಾರಿಗಳಿಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಲಾಗಿದೆ. ಆ ಗುತ್ತಿಗೆದಾರರು ಉಪಯೋಗವಿಲ್ಲ. ಅವರು ಉಪಯೋಗಕ್ಕೆ ಬಾರದಂತಹ ಸಾಮಾಗ್ರಿಗಳನ್ನು ಕಾಮಗಾರಿಗೆ ಉಪಯೋಗಿಸಿದ್ದಾರೆ. ಗದಗ ಮತ್ತು ಬೆಟಗೇರಿ ಜನರು ಕಾಲ ಕಾಲಕ್ಕೆ ಗಲಾಟೆ ಮಾಡಿ ಧರಣಿ ಮಾಡುತ್ತಾರೆ. ಇದಕ್ಕೆ ಒಂದು Technical Expert Committee ಮಾಡಿ, ಅಲ್ಲಿ ಏನೇನು ಕಳಪೆ ಕಾಮಗಾರಿಯಾಗಿದೆ ಅದನ್ನು ಕಂಡು ಹಿಡಿದು ಅವರ ಮೇಲೆ ಕ್ರಮಕೈಗೊಳ್ಳಲಿ ಎಂದು ನನ್ನ ಒತ್ತಾಯ. ಅವರು ಇದಕ್ಕೆ ಸಂಬಂಧಪಟ್ಟಂತೆ ಸಮಿತಿಯನ್ನು ರಚನೆ ಮಾಡಲೇಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಅಲ್ಲಿನ ಅಧಿಕಾರಿಗಳು ಮತ್ತು ಇಂಜಿನಿಯರ್ಸ್ ಏನು ಮಾಡುತ್ತಿದ್ದಾರೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಜೊತೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಹಾಗೂ ಎಲ್ಲಾ ಅಧಿಕಾರಿಗಳ ಜೊತೆ ಸಭೆ ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಸಂಪೂರ್ಣವಾಗಿ ಎಲ್ಲಾ ಮಾಹಿತಿಗಳು ಸಹ ಗೊತ್ತಿದೆ. ಆ ಸಭೆಯಲ್ಲಿ ಮಾನ್ಯ ಸದಸ್ಯರು ಹೊಸ ಮೋಟರ್ ಅನ್ನು ಖರೀದಿ ಮಾಡುವಂತೆ ಹೇಳಿದ ತಕ್ಷಣ, ನಾನು ನಗರ ಸಭೆಯ ಆಯುಕ್ತರಿಗೆ ತಿಳಿಸಿದ್ದೇನೆ. ಅಂದರೆ, ಹೊಸ ಮೋಟರ್ ಅನ್ನು ಖರೀದಿ ಮಾಡುವುದಕ್ಕೆ ಸರ್ಕಾರ ಚಿಂತನೆಯನ್ನು ಮಾಡಿದೆ. ಅಲ್ಲಿ ಮೋಟರ್ ರಿಪೇರಿಯಾಗಿರುವುದರಿಂದ ಆ ರೀತಿಯಾಗಿದೆ. ಅಲ್ಲಿ ಏನಾಗಿದೆ ಎಂದರೆ, ಹಿಂದಿನ ಸರ್ಕಾರದಲ್ಲಿ ನೇಮಕವಾದಂತಹ ಗುತ್ತಿಗೆದಾರರ ಕಂಪನಿಗಳು ಎಲ್ಲೋ ಒಂದು ಕಡೆ ಮುಚ್ಚಿ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅವರನ್ನು terminate ಮಾಡಿದರೆ, ಉಳಿದ ಕೆಲಸವನ್ನು ಮಾಡುವುದಕ್ಕೆ ಯಾರೂ ಸಹ ಮುಂದೆ ಬರುವುದಿಲ್ಲ. ಇವತ್ತು ನಾವು ಅವರನ್ನು terminate ಮಾಡುವುದಕ್ಕೂ ಸಹ ರೆಡಿ ಇದ್ದೇವೆ. ಕಳಪೆ ಕಾಮಗಾರಿ ಎಲ್ಲಿ ಆಗಿದೆ ಎಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿಲ್ಲ. ನಾನು ಮುಂದಿನ ತಿಂಗಳ 15ನೇ ತಾರೀಖಿನ ನಂತರ ಗದಗ ಜಿಲ್ಲೆಗೆ ಭೇಟಿ ನೀಡುತ್ತಿದ್ದೇನೆ. ಅಲ್ಲಿನ ಪ್ರತಿ ರಸ್ತೆಯಲ್ಲೂ ಓಡಾಡುತ್ತೇನೆ. ಎಲ್ಲೆಲ್ಲಿ ಏನೇನು ಸಮಸ್ಯೆ ಆಗಿದೆ ಎಂಬುದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ, ಆ ರೀತಿ ಕಳಪೆ ಕಾಮಗಾರಿಯಾಗಿ ಏನಾದರೂ ಸಮಸ್ಯೆ ಆಗಿದ್ದರೆ, ಖಂಡಿತವಾಗಿ ಸರ್ಕಾರ ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ಜರುಗಿಸುವುದಕ್ಕೆ ಹಿಂಜರಿಯುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 1213**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಪುರಸಭೆಯ ಸಮಸ್ಯೆಗಳ ಬಗ್ಗೆ ಮತ್ತು ಅನುದಾನದ ಲಭ್ಯತೆಗೆ ಅನುಗುಣವಾಗಿ ಪರಿಹಾರವನ್ನು ಕೈಗೊಳ್ಳುವ ಕ್ರಮಗಳ ಬಗ್ಗೆ ಸರ್ಕಾರ ಬಹಳ ಸವಿಸ್ತಾರವಾದ ಉತ್ತರವನ್ನು ನೀಡಿದೆ. ನಮಗೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಕೂಡ, ನಾವು ಕುಡಿಯುವ ನೀರಿನ ಸಮಸ್ಯೆಯಿಂದ ಬಹಳ ತತ್ತರಿಸುತ್ತಿದ್ದೇವೆ. ಏಕೆಂದರೆ, ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಕೇಂದ್ರ ಪುರಸ್ಕೃತ 'ಅಮೃತ್ ಯೋಜನೆ' ಅಡಿಯಲ್ಲಿ ಎಂದು ಉಲ್ಲೇಖ ಮಾಡಿದ್ದಾರೆ. ಕುಡಿಯುವ ನೀರಿಗಾಗಿ ಕಡ್ಡಾಯವಾಗಿ ಶೇಕಡಾ 50ರಷ್ಟು ನೀರನ್ನು ಮೀಸಲಿಡಲಾಗುವುದೆಂದು ತಮ್ಮ ಉತ್ತರದಲ್ಲಿ ಉಲ್ಲೇಖ ಮಾಡಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಕಡ್ಡಾಯವಾಗಿ ಕುಡಿಯುವ ನೀರಿಗಾಗಿ ಶೇಕಡಾ 50ರಷ್ಟು ನೀರನ್ನು ಮೀಸಲಿಟ್ಟು, ಅದು ವ್ಯವಸ್ಥಿತವಾಗಿ ಆಗದಿದ್ದರೆ, ಅದಕ್ಕೆ ಸರ್ಕಾರ ಕೈಗೊಳ್ಳುವ ಕ್ರಮವೇನು? ನಾನು ಕೂಡ ಪುರಸಭೆಯ ಸದಸ್ಯೆಯಾಗಿ ಕೆಲಸ ಮಾಡಿದ್ದೇನೆ. ನಮ್ಮ ರಾಜ್ಯ ಒಳಚರಂಡಿ ಮುಕ್ತ ರಾಜ್ಯವೆಂದು ಯಾವಾಗ ಆಗುತ್ತದೆ? ಇನ್ನೊಂದು ಪ್ರಶ್ನೆ ಏನೆಂದರೆ, ಗಲೀಜು ಚರಂಡಿಯ ದುರ್ವಾಸನೆಯಿಂದ ಜನರನ್ನು ಹೇಗೆ ಮುಕ್ತ ಮಾಡುತ್ತಾರೆ? ಏಕೆಂದರೆ, ಮಳೆ ನೀರಿನ ಯೋಜನೆಯಡಿ ಚರಂಡಿಯ ಕಾಮಗಾರಿಯನ್ನು ಕೈಗೊಳ್ಳುತ್ತೇವೆಂದು, ತಮ್ಮ ಉತ್ತರದಲ್ಲಿ ಉಲ್ಲೇಖ ಮಾಡಿದ್ದಾರೆ. ಇವತ್ತು ನಮ್ಮ ರಾಜ್ಯದ ಎಲ್ಲಾ ಚರಂಡಿಗಳೂ ಕೂಡ ಮಳೆಯ ನೀರನ್ನೇ ಅವಲಂಬಿಸಿವೆ. ಅಂದರೆ, ಮಳೆ ಬಂದರೆ ಮಾತ್ರ ವರ್ಷಕ್ಕೊಮ್ಮೆ ಆ ಚರಂಡಿಗಳು ಚೊಕ್ಕವಾಗುವುದು. ಸ್ವಚ್ಛತಾ ಸಿಬ್ಬಂದಿ ಸಾಮಾನ್ಯವಾಗಿ ನಗರದ ಮುಖ್ಯರಸ್ತೆಯನ್ನು ಮಾತ್ರ ಚೊಕ್ಕ ಮಾಡುತ್ತಾರೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ವರ್ಷವಾದರೂ ಸಹ ಚರಂಡಿಯನ್ನು ಚೊಕ್ಕ ಮಾಡುವುದಿಲ್ಲ. ಅದರಲ್ಲಿ ಸಿಬ್ಬಂದಿಗಳ ಕೊರತೆಯನ್ನು ಸಹ ಉಲ್ಲೇಖ ಮಾಡಿದ್ದಾರೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಹೇಳುತ್ತಿರುವುದು ಒಳಚರಂಡಿ ಮುಕ್ತ ರಾಜ್ಯವೋ ಅಥವಾ ಹೊರ ಚರಂಡಿ ಮುಕ್ತ ರಾಜ್ಯವೋ ಎಂದು ತಿಳಿಸಲಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ರಾಜ್ಯವನ್ನು ಒಳಚರಂಡಿ ಮುಕ್ತ ರಾಜ್ಯ ಎಂದು ಯಾವಾಗ ಮಾಡುತ್ತಾರೆ? ಮತ್ತು ಹೊರ ಚರಂಡಿಯ ವ್ಯವಸ್ಥೆಯ ಬಗ್ಗೆಯೂ ಸಹ ಪ್ರಶ್ನೆ ಕೇಳುತ್ತಿದ್ದೇನೆ. ಸಿಬ್ಬಂದಿಗಳ ಕೊರತೆಯ ಸಮಸ್ಯೆ ಈಗಿನ ಸಮಸ್ಯೆ ಅಲ್ಲ. ನಾವು ಅದನ್ನು ನಿರಂತರವಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನೋಡುತ್ತಿದ್ದೇವೆ. ಹೊರ ಚರಂಡಿಯಲ್ಲಿ ಕೊಳಚೆ ನಾರುತ್ತಿದ್ದು, ಅದರಿಂದ ಸೊಳ್ಳೆಗಳು ಬರುತ್ತವೆ. ಆ ರೀತಿಯಾದರೂ ಸಹ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಯವರು ವರ್ಷವಾದರೂ ಸಹ ಹೊರ ಚರಂಡಿಯನ್ನು ಸ್ವಚ್ಛಗೊಳಿಸುತ್ತಿಲ್ಲ. ಇದಕ್ಕೆ ಸರ್ಕಾರದ ಕ್ರಮವೇನು? ಏಕೆಂದರೆ, ಇದಕ್ಕೆ ಮಳೆಯ ನೀರು ಆಧಾರವಾಗಿರುತ್ತದೆ. ಪಟ್ಟಣ ಪಂಚಾಯಿತಿಗಳಲ್ಲಿ ಪ್ರತಿಬಾರಿ ಸಿಬ್ಬಂದಿಗಳ ಕೊರತೆಯ ಬಗ್ಗೆ ಹೇಳುತ್ತಾರೆ.

ನೀರಿನ ಸಮಸ್ಯೆ ಬಗ್ಗೆ ಹೇಳುವುದಾದರೆ, ಗುಜರಾತ್ ರಾಜ್ಯದಲ್ಲಿ ಪ್ರತಿ ಮನೆಗೆ ನಲ್ಲಿ ನೀರಿನ ವ್ಯವಸ್ಥೆ ಇದೆ. ಮಾನ್ಯ ಪ್ರಧಾನ ಮಂತ್ರಿಗಳು ಪ್ರತಿ ಮನೆಗೆ ನಲ್ಲಿ ನೀರಿನ ವ್ಯವಸ್ಥೆ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ರಾಜ್ಯಕ್ಕೆ ಈ ರೀತಿಯ ವ್ಯವಸ್ಥೆ ಯಾವಾಗ ಬರುತ್ತದೆ? ಇದನ್ನು ಸಾಧಿಸುವುದಕ್ಕೆ ಸರ್ಕಾರ ಯಾವ ಗಡುವನ್ನು ನಿಗದಿಪಡಿಸಿದೆ? ಮರುಭೂಮಿ ಪ್ರದೇಶದಲ್ಲೂ ಸಹ ನಲ್ಲಿ ನೀರನ್ನು ಕೊಡುತ್ತಾರೆ. ನಮ್ಮಲ್ಲಿ ಇರುವಂತಹ ನಲ್ಲಿಗಳನ್ನು ತಿರುಗಿಸಿದರೆ ನೀರು ಬರುವುದಿಲ್ಲ, ನಲ್ಲಿಯಿಂದ ಕೇವಲ ಧೂಳು ಮತ್ತು ಗಾಳಿ ಬರುತ್ತದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ, ನಮ್ಮ ರಾಜ್ಯದಲ್ಲಿ ಈ ರೀತಿಯ ಸಮಸ್ಯೆ ಇದೆ. ಆದುದರಿಂದ ಇದನ್ನು ಸರಿಪಡಿಸಬೇಕು. ಮತ್ತೊಂದು ಬಹಳ ಮುಖ್ಯವಾದ ವಿಷಯವೇನೆಂದರೆ, ಮಾನ್ಯ ಸಚಿವರ ಲಿಖಿತ ಉತ್ತರದಲ್ಲಿ ತ್ಯಾಜ್ಯ ನಿರ್ವಹಣೆ ಬಗ್ಗೆ ಉಲ್ಲೇಖ ಮಾಡಿದ್ದಾರೆ.

**(ಮುಂದ)**

**(413) 12.40 16.03.2021 ಎಲ್‌ಎಲ್‌/ಬಿಎನ್‌ಎಸ್**

**ಶ್ರೀಮತಿ ಭಾರತಿಶೆಟ್ಟಿ(ಮುಂದು):-**

ನೆಲಭರ್ತಿ ಜಾಗದ ಲಭ್ಯತೆ ಇಲ್ಲದೇ ಇರುವ ನಗರದಲ್ಲಿ ನೆಲವನ್ನು ಖರೀದಿ ಮಾಡುವುದು ಹಾಗೂ ತ್ಯಾಜ್ಯವಸ್ತುಗಳನ್ನು ಹಾಕುವುದಕ್ಕೆ ಯಾರೂ ಕೂಡ ಎಲ್ಲಿಯೂ ಬಿಡುವುದಿಲ್ಲ. ಹಾಗಾಗಿ, ಅಂತಹ ತ್ಯಾಜ್ಯವಸ್ತುಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಸರ್ಕಾರದ ಚಿಂತನೆ ಏನು? ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಬಹಳ ಸವಿಸ್ತಾರವಾದ ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಒಂದು ಕಡೆ ಬೀದಿ ದೀಪಗಳ ಮತ್ತು ವಿದ್ಯುತ್ ಸಮಸ್ಯೆಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಆದರೆ, ಇಂತಹ ತ್ಯಾಜ್ಯವಸ್ತುಗಳಿಂದಲೇ ನಾವು ವಿದ್ಯುತ್ ಉತ್ಪಾದನೆ ಮಾಡಬಹುದು. ಅದರಂತೆ, ಸರ್ಕಾರ ಇದನ್ನು ಯಾವಾಗ ಪ್ರಾರಂಭ ಮಾಡುತ್ತದೆ? ಅಲ್ಲದೇ, ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಸಹ ತ್ಯಾಜ್ಯವಸ್ತುಗಳಿಂದ ವಿದ್ಯುತ್ ಉತ್ಪಾದನೆ ಮಾಡಿದರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಸಮಸ್ಯೆ ಬಗೆಹರಿಯಬಹುದು. ಹಾಗಾಗಿ, ನನ್ನ ಪ್ರಶ್ನೆಗೆ ಉತ್ತರ ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದೇ ಪ್ರಶ್ನೆಯಲ್ಲಿ ಬಹಳ ಉಪಪ್ರಶ್ನೆಗಳನ್ನು ಕೇಳಿದ್ದಾರೆ. ಅವರು ಕೇಳಿರುವಂತಹ ಪ್ರಶ್ನೆಗಳಿಗೆ ನಾವು ಸಮರ್ಪಕವಾದ ಉತ್ತರವನ್ನು ಈಗಾಗಲೇ ಕೊಟ್ಟಿದ್ದೇವೆ. ಆದರೆ, ಇದರ ಮೂಲ ಪ್ರಶ್ನೆ ಏನೆಂದರೆ, ಗುಜರಾತ್ ರಾಜ್ಯದಲ್ಲಿ ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಮನೆ ಮನೆಗೆ ಕುಡಿಯುವ ನೀರಿನ ವ್ಯವಸ್ಥೆ ಕೊಟ್ಟಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಸಮರ್ಪಕವಾಗಿ ಕೊಟ್ಟಿರುವುದಿಲ್ಲ ಎನ್ನುವುದಾಗಿರುತ್ತದೆ. 'ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆ' ಎಂದು ಈ ವರ್ಷದ ಬಜೆಟ್‌ನಲ್ಲಿ ತಂದಿದ್ದಾರೆ. ಆ ಯೋಜನೆಯಂತೆ ಏಪ್ರಿಲ್ ತಿಂಗಳಿನಿಂದ ಆಯಾ ರಾಜ್ಯಗಳಿಗೆ ಕೇಂದ್ರ ಸರ್ಕಾರ ಕೊಟ್ಟಂತಹ ಅನುದಾನಗಳು ಹಂಚಿಕೆ ಆಗಬೇಕು. ಅದಾದ ನಂತರ, ಮುಂದಿನ ವರ್ಷದಲ್ಲಿ ಈ ಸ್ಥಳೀಯ ನಗರಸಭೆಗಳು, ಪಟ್ಟಣ ಪಂಚಾಯಿತಿಗಳು ಮನೆ ಮನೆಗಳಿಗೆ ನೀರು ಕೊಡುವಂತಹ ಒಂದು ಕಾರ್ಯಕ್ರಮವನ್ನು ಈ ವರ್ಷದ ಏಪ್ರಿಲ್ ತಿಂಗಳ ಮುಂದಿನ ದಿನಗಳಲ್ಲಿ ಅದು ಪ್ರಾರಂಭವಾಗುತ್ತದೆ. ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ...

**ಶ್ರೀ ಕೆ. ಗೋವಿಂದರಾಜು(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಈ ಕಾರ್ಯಕ್ರಮಕ್ಕಾಗಿ ಬಜೆಟ್‌ನಲ್ಲಿ ಹಣ ಮೀಸಲಿಡಲಾಗಿದೆಯೇ?

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಹೌದು. ಬಜೆಟ್‌ನಲ್ಲಿ ಹಣ ಇಟ್ಟಿರುವುದಕ್ಕೆ ಇದನ್ನು ಕೊಡಲಾಗಿದೆ. ಇದು 'ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆ'ಯಡಿಯಲ್ಲಿ ನೀಡಿದಂತಹ ಹಣ ಆಗಿರುತ್ತದೆ. ಹಾಗಾಗಿ, ಈ ಕಾರ್ಯಕ್ರಮವನ್ನು ಗ್ರಾಮೀಣ ಪ್ರದೇಶದಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಅದರ ಆಧಾರದ ಮೇರೆಗೆ ಮಾನ್ಯ ಸದಸ್ಯರು ಸದರಿ ಕಾರ್ಯಕ್ರಮವನ್ನು ನಗರ ಪ್ರದೇಶಗಳಲ್ಲಿ ಕೊಡಬೇಕೆಂದು ಕೇಳಿದ್ದಾರೆ. ಅದು ಈ ವರ್ಷ ಏಪ್ರಿಲ್ ತಿಂಗಳು ಕಳೆದ ತರುವಾಯ ಆ ಕಾರ್ಯಕ್ರಮ ಪ್ರಾರಂಭವಾಗುತ್ತದೆ ಮತ್ತು ರಾಜ್ಯದಲ್ಲಿ ಎಷ್ಟು ಪೌರಾಡಳಿತ ಮತ್ತು ಮಹಾನಗರ ಪಾಲಿಕೆಗಳು ಇವೆ ಎಂಬ ಬಗ್ಗೆ ಪ್ರಶ್ನೆಯನ್ನು ಸಹ ಮಾನ್ಯ ಸದಸ್ಯರು ಕೇಳಿದ್ದಾರೆ. ಅದರಂತೆ, 10 ಮಹಾನಗರ ಪಾಲಿಕೆಗಳು, 59 ನಗರಸಭೆಗಳು, 120 ಪುರಸಭೆಗಳು, 110 ಪಟ್ಟಣ ಪಂಚಾಯಿತಿಗಳು ನಮ್ಮ ರಾಜ್ಯದಲ್ಲಿರುತ್ತವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರ ಜೊತೆಗೆ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಕುಡಿಯುವ ನೀರಿನ ಸಮಸ್ಯೆಗೆ 2015-16ನೇ ಸಾಲಿನಿಂದ 2019-20ನೇ ಸಾಲಿನವರೆಗೆ 14ನೇ ಹಣಕಾಸು ಆಯೋಗದ ಯೋಜನೆಯಡಿಯಲ್ಲಿ ಸರ್ಕಾರ ಕುಡಿಯುವ ನೀರಿಗೆ ಕೊಟ್ಟಂತಹ ಹಂಚಿಕೆ ಅನುದಾನದಲ್ಲಿ ಶೇಕಡ 50 ರಷ್ಟು ಅನುದಾನವು ನಿರ್ಬಂಧಿತ ಅನುದಾನವಾಗಿದ್ದು, ಸದರಿ ಅನುದಾನದಲ್ಲಿ ಕುಡಿಯುವ ನೀರಿಗೆ ಶೇಕಡ 50 ರಷ್ಟು ಮೀಸಲಿಟ್ಟು ಕುಡಿಯುವ ನೀರಿಗಾಗಿ ಬಳಸಲು ಕಡ್ಡಾಯಗೊಳಿಸುವ ಸರ್ಕಾರದ ಒಂದು ಆದೇಶ ಕೂಡ ಇರುತ್ತದೆ. ಮಾನ್ಯ ಸದಸ್ಯರು ಒಳಚರಂಡಿ ವ್ಯವಸ್ಥೆ ಬಗ್ಗೆ ಸಹ ಪ್ರಶ್ನೆ ಕೇಳಿದ್ದು, ಅದು ನಗರಾಭಿವೃದ್ಧಿ ಇಲಾಖೆಗೆ ಬರುತ್ತದೆ. ಬಜೆಟ್‌ನಲ್ಲಿ ಸರ್ಕಾರ ಕೊಡತಕ್ಕಂತಹ ಹಣವನ್ನು ನಾವು ಒಳಚರಂಡಿ ಮತ್ತು ಕುಡಿಯುವ ನೀರಿನ ಬೋರ್ಡ್‌ಗೆ ಹಣವನ್ನು ಕೊಡುತ್ತೇವೆ. ಅದರ ಅನುಷ್ಠಾನವನ್ನು administration and Engineering Department of Urban Development Department ನವರು ಮಾಡುತ್ತಾರೆ. ಆದರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯಂತೆ, ಈ ಸಮಸ್ಯೆ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಬಹಳಷ್ಟು ಇದೆ. ಇಂತಹ ಕಾಮಗಾರಿಗಳಲ್ಲಿ ಗುತ್ತಿಗೆದಾರರು ಆಂಧ್ರಪ್ರದೇಶ, ತಮಿಳುನಾಡು ಮತ್ತು ಒಡಿಸ್ಸಾ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಗುತ್ತಿಗೆದಾರರಾಗಿ ಬಂದು ಗುತ್ತಿಗೆಯನ್ನು ಪಡೆಯುತ್ತಾರೆ. ತದನಂತರ, ಆ ಕಾಮಗಾರಿಯನ್ನು ಅವರು ಪೂರ್ಣಗೊಳಿಸದೇ, ಸೆಕೆಂಡ್ ಪಾರ್ಟಿ ಅಥವಾ ಥರ್ಡ್ ಪಾರ್ಟಿಗಳಿಗೆ ಶೇಕಡ 5 ರಷ್ಟು ಕಮಿಷನ್ ಇಟ್ಟುಕೊಂಡು ಕಾಮಗಾರಿಯನ್ನು ಉಪ ಗುತ್ತಿಗೆ ನೀಡುತ್ತಾರೆ.

**(ಗೊಂದಲ)**

**ಶ್ರೀ ಕೆ. ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಅಂತಹ ಗುತ್ತಿಗೆದಾರರನ್ನು ಬ್ಲಾಕ್‌ಲಿಸ್ಟ್ ಮಾಡಿ. ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಿ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಮಂತ್ರಿಗಳೇ, ತಾವು ಅಂತಹ ಗುತ್ತಿಗೆದಾರರಿಗೆ ತಡೆ ಮಾಡುವಂತಹ ಕೆಲಸ ಮಾಡಬೇಕೆಂದು ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಇದು ನಮ್ಮ ಹೊಸಕೋಟೆ ತಾಲ್ಲೂಕು ಸೇರಿದಂತೆ, ಇಡೀ ರಾಜ್ಯದಲ್ಲಿ ಬಹಳ ದೊಡ್ಡ ಸಮಸ್ಯೆಯಾಗಿರುತ್ತದೆ. ಸರ್ಕಾರದಿಂದ ಇಂತಹ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಮಗಾರಿಗಳಿಗೆ ಸಾವಿರಾರು ಕೋಟಿ ರೂಪಾಯಿಗಳ ಖರ್ಚುವೆಚ್ಚ ಮಾಡಲಾಗುತ್ತಿದೆ. ನಾನು ಈಗಾಗಲೇ ನಗರಾಭಿವೃದ್ಧಿ ಸಚಿವರಾದ ಶ್ರೀ ಬಿ.ಎ. ಬಸವರಾಜುರವರಿಗೆ ಈ ಬಗ್ಗೆ ತಿಳಿಸಿದ್ದೇನೆ. ಈ ವಿಷಯಕ್ಕೆ ಸಂಬಂಧಪಟ್ಟ ಕಾಮಗಾರಿಯಲ್ಲಿ 3 ವರ್ಷಗಳ ಅವಧಿಯಲ್ಲಿ ಕಾಮಗಾರಿ ಪೂರ್ಣ ಮಾಡಬೇಕೆಂದು ಟೆಂಡರ್‌ನಲ್ಲಿ ಇದ್ದರೂ ಸಹ ಸದರಿ ಗುತ್ತಿಗೆದಾರರು 5 ಅಥವಾ 6 ವರ್ಷ ಕಳೆದರೂ ಕಾಮಗಾರಿ ಪೂರ್ಣಗೊಳಿಸದೇ ಇರುವುದು ನಮ್ಮ ಗಮನಕ್ಕೆ ಬಂದಿರುತ್ತದೆ.

**ಉಪ ಸಭಾಪತಿಯವರು:–** ಅಂತಹ ಗುತ್ತಿಗೆದಾರರನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸಿ.

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಒಳಚರಂಡಿ ವ್ಯವಸ್ಥೆ ಬಗ್ಗೆ ಆಗಲೇ ಮಾನ್ಯ ನಗರಾಭಿವೃದ್ಧಿ ಸಚಿವರು ಉತ್ತರ ನೀಡಿರುತ್ತಾರೆ. ನಾನು ಈ ವಿಷಯದಲ್ಲಿ ಒಂದು ಮಾತನ್ನು ಹೇಳುವುದೇನೆಂದರೆ, ಈ ಕಾಮಗಾರಿಯಲ್ಲಿ ಯಾವುದೇ ಗುತ್ತಿಗೆದಾರರಾಗಿರಲಿ ಅಂದರೆ ಅವರು ಕರ್ನಾಟಕ ರಾಜ್ಯದವರಾಗಲಿ ಅಥವಾ ಹೊರರಾಜ್ಯದವರು ಆಗಿರಲಿ ಅವರನ್ನು ನಿರ್ದಾಕ್ಷಿಣ್ಯವಾಗಿ ಬ್ಲಾಕ್‌ಲಿಸ್ಟ್‌ಗೆ ಹಾಕಬೇಕು. ಜೊತೆಗೆ, ಈ ಕಾಮಗಾರಿಗಳಲ್ಲಿ ಯಾರು ನಿಜವಾದ ಟೆಂಡರ್‌ದಾರರಾಗಿರುತ್ತಾರೆ, ಅವರೇ ಈ ಕಾಮಗಾರಿಯ ಕೆಲಸವನ್ನು ಪೂರ್ಣಗೊಳಿಸಬೇಕು ಹಾಗೂ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ಇಲ್ಲದೇ ಹೋದರೆ, ಅಂತಹ ಗುತ್ತಿಗೆದಾರರು ಬೇರೆ ಬೇರೆ ಕಾಮಗಾರಿಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶಗಳು ಕೊಡಬಾರದು. ಇದನ್ನು ಕಟ್ಟುನಿಟ್ಟಾಗಿ ನಾವೆಲ್ಲರೂ ಪಾಲನೆ ಮಾಡಬೇಕು. ಇಂತಹ ವಿಷಯಗಳಲ್ಲಿ ಯಾರೇ ಮಂತ್ರಿಗಳು ಆಗಿರಲಿ ಅಥವಾ ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ.

**ಶ್ರೀ ಕೆ. ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಸರ್ಕಾರದಿಂದ ಒಂದು ಸುತ್ತೋಲೆ ಹೊರಡಿಸಿ.

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇನ್ನೂ ಕೆಲವೊಂದು ಪ್ರಶ್ನೆಗಳನ್ನು ಕೇಳಿದ್ದಾರೆ. ಅದರಂತೆ, ನಮ್ಮಲ್ಲಿ ಉತ್ಪತ್ತಿಯಾಗುವಂತಹ ಘನತ್ಯಾಜ್ಯ ವಸ್ತುಗಳನ್ನು ವಿಲೇ ಮಾಡಿ, ಸಂಗ್ರಹಣೆ ಮಾಡುವುದಕ್ಕಾಗಿ ಜಿಲ್ಲಾಧಿಕಾರಿಗಳು, ನಗರಸಭೆಗಳು ಮತ್ತು ಪುರಸಭೆಗಳಿಗೆ 5 ಎಕರೆ ಅಥವಾ 10 ಎಕರೆ ಜಮೀನನ್ನು ಕೊಟ್ಟಿರುತ್ತಾರೆ. ಆದಾಗ್ಯೂ, ಸರ್ಕಾರದಿಂದ ಕೊಟ್ಟಂತಹ ಜಮೀನಿನಲ್ಲಿ ಘನತ್ಯಾಜ್ಯ ವಿಲೇ ಮಾಡಿ ಸಂಗ್ರಹಣೆ ಮಾಡುವುದಕ್ಕೆ ಆ ಜಮೀನಿನ ಸುತ್ತಮುತ್ತಲಿನ ಗ್ರಾಮಸ್ಥರು, "ಇಲ್ಲಿ ಘನತ್ಯಾಜ್ಯವನ್ನು ಹಾಕಬಾರದು. ಈ ರೀತಿಯ ತ್ಯಾಜ್ಯವನ್ನು ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಗ್ರಾಮದಲ್ಲಿ ಹಾಕಿದರೆ, ಸೊಳ್ಳೆಗಳು ಬರುತ್ತವೆ, ನಾಯಿಗಳು ಬರುತ್ತವೆ ಮತ್ತು ಇದರಿಂದಾಗಿ, ನಮಗೆ ಜ್ವರ ಬರುತ್ತದೆ" ಎಂದು ಗಲಾಟೆಗಳನ್ನು ಮಾಡುತ್ತಾರೆ. ಈ ಬಗ್ಗೆ ನಗರಸಭೆಗಳು ಮತ್ತು ಪುರಸಭೆಗಳಲ್ಲಿ ಬಹಳಷ್ಟು ದೂರು ಬಂದಿರುತ್ತವೆ. ಅದಕ್ಕಾಗಿ, ಮುಂದಿನ ದಿನಗಳಲ್ಲಿ ಘನತ್ಯಾಜ್ಯ ವಸ್ತುಗಳನ್ನು ಬೇರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿ ವಿಲೇ ಮಾಡುವ ರೀತಿ ನಮ್ಮ ರಾಜ್ಯದಲ್ಲಿಯೂ ಸಹ ಈ ಸಮಸ್ಯೆಗೆ ಪರ್ಯಾಯ ವ್ಯವಸ್ಥೆ ಮಾಡುವ ವಿಷಯ ಸರ್ಕಾರದ ಚಿಂತನೆಯಲ್ಲಿರುತ್ತದೆ.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ, ಘನತ್ಯಾಜ್ಯವಸ್ತುಗಳ ಬಗ್ಗೆ ಉಲ್ಲೇಖ ಮಾಡಿರುವ ಪ್ರಶ್ನೆಗೆ ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಸರಿಯಿದೆ. ಅದರಲ್ಲಿ, ತ್ಯಾಜ್ಯವಸ್ತುಗಳನ್ನು ಸುಡಬಾರದು. ಒಂದು ವೇಳೆ ತ್ಯಾಜ್ಯ ವಸ್ತುಗಳನ್ನು ಸುಟ್ಟರೆ ಗರಿಷ್ಠ ರೂ.25,000/– ದಂಡವನ್ನು ವಿಧಿಸಿ ವಸೂಲಿ ಮಾಡುತ್ತೇವೆಂದು ಹೇಳಿರುತ್ತಾರೆ. ಆದರೆ, ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ನಿಟ್ಟಿನಲ್ಲಿ ಏನಾದರೂ ಒಂದು ಹೆಜ್ಜೆ ಇಡಬಹುದಲ್ಲವೇ?

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಆ ಕೆಲಸವನ್ನು ಮಾಡುವುದಕ್ಕಾಗಿ ಸರ್ಕಾರದ ಹಂತದಲ್ಲಿ ಈ ಹಿಂದೆ 2–3 ಸಭೆಗಳನ್ನು ಮಾಡಲಾಗಿರುತ್ತದೆ. ನಾನು ಮಂತ್ರಿಯಾಗಿ ಬಂದ ನಂತರ ಈ ಬಗ್ಗೆ ಸಭೆ ಮಾಡಿ, ಈ ಸಮಸ್ಯೆಗೆ ಏನಾದರೂ ಶಾಶ್ವತವಾದಂತಹ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತಿದ್ದೇವೆ.

**ಉಪ ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಮಾನೆ ಶ್ರೀನಿವಾಸರವರದ್ದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:1350**

**(ಈ ಹಂತದಲ್ಲಿ ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)**

**ಉಪ ಸಭಾಪತಿಯವರು:–** ಶ್ರೀ ಎಂ.ಎ. ಗೋಪಾಲಸ್ವಾಮಿಯವರ ಪ್ರಶ್ನೆ **ಸಂಖ್ಯೆ:1184ಕ್ಕೆ** ಸಂಬಂಧಪಟ್ಟ ಸಚಿವರು ಕಾಲಾವಕಾಶ ಕೇಳಿರುತ್ತಾರೆ. ಮುಂದಿನ ಪ್ರಶ್ನೆ ಶ್ರೀ ಕೆ.ಸಿ. ಕೊಂಡಯ್ಯನವರದ್ದು.

**ಶ್ರೀ ಕೆ.ಸಿ. ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಸಂಖ್ಯೆ:1417ಗೆ ಉತ್ತರ ಬಂದಿರುವುದಿಲ್ಲ.

**ಉಪ ಸಭಾಪತಿಯವರು:–** ತಮ್ಮ ಪ್ರಶ್ನೆಗೆ ಸಂಬಂಧಪಟ್ಟ ಸಚಿವರು ಕಾಲಾವಕಾಶ ಕೇಳಿರುತ್ತಾರೆ. ಅದರಂತೆ, ಮುಂದಿನ ವಾರದಲ್ಲಿ ತಮ್ಮ ಪ್ರಶ್ನೆಗೆ ಉತ್ತರ ಕೊಡಿಸುವ ವ್ಯವಸ್ಥೆ ಮಾಡೋಣ.

**ಶ್ರೀ ಕೆ.ಸಿ. ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಹಾಗಾದರೆ ನನ್ನ ಪ್ರಶ್ನೆಗೆ ಮುಂದಿನ ವಾರದಲ್ಲಿ ಉತ್ತರ ಕೊಡುತ್ತಾರೆಯೇ?

**ಉಪ ಸಭಾಪತಿಯವರು:–** ಆಯಿತು. ಮುಂದಿನ ವಾರದಲ್ಲಿ ಉತ್ತರ ಕೊಡಿಸೋಣ. ಮಾನ್ಯ ಸಭಾನಾಯಕರೇ, ಶ್ರೀ ಕೆ.ಸಿ. ಕೊಂಡಯ್ಯನವರ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ. ಹಾಗಾಗಿ, ಮುಂದಿನ ವಾರದಲ್ಲಿ ಉತ್ತರ ಕೊಡಿಸುವಂತಹ ಕೆಲಸವನ್ನು ತಾವು ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:1196**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್. ರುದ್ರೇಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ. ಆದರೆ, ಆಡಳಿತಾತ್ಮಕವಾಗಿ ಪಟ್ಟಣಗಳನ್ನು ಹೇಗೆ ವಿಂಗಡಣೆ ಮಾಡುತ್ತಾರೆಂಬ ಬಗ್ಗೆ ವಿವರವನ್ನು ಕೊಡಲಾಗಿದೆ. ಆದರೆ, ನಾನು ಕೇಳುತ್ತಿರುವುದೇನೆಂದರೆ, tier-1, tier-2, tier-3 ಅಥವಾ ಎ.ಬಿ.ಸಿ. ಎಂದು ಕೆಲವು ನಗರಗಳನ್ನು categorization ಮಾಡಿದ್ದೇವೆ. ಹಾಗಾಗಿ, ನನ್ನ ಪ್ರಶ್ನೆಗೆ ಆ ರೀತಿಯ ಉತ್ತರವನ್ನು ನಾನು ಬಯಸಿದ್ದೆನು. ಅದರಂತೆ, ಮಾನ್ಯ ಸಚಿವರು ದಯಮಾಡಿ ನನ್ನ ಪ್ರಶ್ನೆಗೆ ವಿವರಗಳನ್ನು ನೀಡಬೇಕೆಂದು ಕೇಳುತ್ತೇನೆ.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್. ರುದ್ರೇಗೌಡರವರು ನಮ್ಮ ರಾಜ್ಯದಲ್ಲಿರುವ ನಗರಗಳನ್ನು ಪುರಸಭೆಗಳು, ನಗರಸಭೆಗಳು, ಪಟ್ಟಣ ಪಂಚಾಯಿತಿಗಳನ್ನಾಗಿ ಯಾವ ಮಾನದಂಡದಲ್ಲಿ ವರ್ಗೀಕರಣ ಮಾಡುತ್ತೇವೆ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಸಂಪೂರ್ಣವಾದ ಉತ್ತರವನ್ನು ಒದಗಿಸಲಾಗಿದೆ. ಅದೇ ರೀತಿ ನಗರಗಳನ್ನು ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸಲು ಸರ್ಕಾರ ಏನೇನು ಮಾನದಂಡಗಳನ್ನು ಅನುಸರಿಸಲಾಗಿದೆ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದು, ಅದಕ್ಕೆ ಸಂಪೂರ್ಣವಾದ ಉತ್ತರವನ್ನು ಒದಗಿಸಲಾಗಿದೆ. ಇದರ ಜೊತೆಗೆ, ಮಾನ್ಯ ಸದಸ್ಯರು tier-1, tier-2, tier-3 cities ಬಗ್ಗೆ ಏನು ಮಾಹಿತಿ ಕೇಳಿದ್ದಾರೆ, ಅದರ ಬಗ್ಗೆ ಪ್ರಸ್ತುತ ನನಗೆ ಮಾಹಿತಿ ಇರುವುದಿಲ್ಲ. ಅದನ್ನು ನಂತರ ಒದಗಿಸಿಕೊಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ. ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ಅಧಿನಿಯಮ 1964 ಕಲಂ 349 ರನ್ವಯ ಜನಸಂಖ್ಯೆ 10 ಸಾವಿರದಿಂದ 20 ಸಾವಿರಕ್ಕೆ ಹೆಚ್ಚಿಲ್ಲದಂತಿರಬೇಕು. ಜೊತೆಗೆ, ಅಂತಹ ಪ್ರದೇಶದ ಜನಸಂಖ್ಯೆಯು ಜನಸಾಂದ್ರತೆಯು ಆ ಪ್ರದೇಶದ ಒಂದು ಚದರ ಕಿಲೋಮೀಟರ್ ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇರಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(414) 16.03.2021 12.50 ವೈಎಲ್-ಜಿಆರ್**

**ಶ್ರೀ ಬಿ.ಎ.ಬಸವರಾಜ(ಮುಂದು):-**

ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ. 50 ಕ್ಕಿಂತ ಕಡಿಮೆ ಇರಬೇಕು. ಮುಂದುವರೆದು, ದಿನಾಂಕ: 19.03.2015 ರ ಸಚಿವ ಸಂಪುಟ ಸಭೆಯ ನಿರ್ಣಯದಂತೆ ಸುಮಾರು 15,000 ಕ್ಕಿಂತ ಕಡಿಮೆ ಜನಸಂಖ್ಯೆ ಇರಬಾರದೆನ್ನುವಂಥ ಮಾನದಂಡವನ್ನು ಪಟ್ಟಣ ಪಂಚಾಯಿತಿಗಳಲ್ಲಿ ವಿಧಿಸಲಾಗಿದೆ. ಅದಲ್ಲದೇ ಪುರಸಭೆಯನ್ನಾಗಿ ಪರಿವರ್ತಿಸಲು ಆ ಪ್ರದೇಶದ ಜನಸಂಖ್ಯೆ 20,000 ದಿಂದ 50,000 ಕ್ಕೆ ಹೆಚ್ಚಿರುವಂತಿರಬೇಕು. ಜನಸಂಖ್ಯೆಯ ಜನಸಾಂದ್ರತೆಯು ಒಂದು ಚದುರ ಕಿ.ಮೀ ವಿಸ್ತೀರ್ಣಕ್ಕೆ 1500 ಕ್ಕಿಂತ ಕಡಿಮೆ ಇರಬಾರದು. ಜೊತೆಗೆ ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ಒಂಭತ್ತು ಲಕ್ಷ ಆದಾಯ ಬರಬೇಕು ಹಾಗೂ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳು ಬರಬೇಕೆಂಬ ಮಾಹಿತಿಯನ್ನು ಈಗಾಗಲೇ ಒದಗಿಸಲಾಗಿದೆ.

ಅದೇ ರೀತಿ ನಗರಸಭೆಯನ್ನಾಗಿ ಪರಿವರ್ತಿಸಲು ಸುಮಾರು ರೂ.50,000 ದಿಂದ 3 ಲಕ್ಷ ರೂಪಾಯಿಗೆ ಮಿತಿಯನ್ನಿಟ್ಟುಕೊಳ್ಳಲಾಗಿದೆ. ನಂತರ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ.ವಿಸ್ತೀರ್ಣಕ್ಕೆ 1500 ಕ್ಕಿಂತ ಕಡಿಮೆ ಇರಬಾರದು. ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಭತ್ತು ಲಕ್ಷ ಸಂದಾಯವಾಗಬೇಕು ಮತ್ತು ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿ ನೀಡುವಂತೆ ಮಾಡಲಾಗಿದೆ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇರಬಾರದು.

ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸಲು ಸಹ ಆ ಪ್ರದೇಶದ ಜನಸಂಖ್ಯೆ 3 ಲಕ್ಷಕ್ಕಿಂತ ಕಡಿಮೆ ಇರಬಾರದು. ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ.ವಿಸ್ತೀರ್ಣಕ್ಕೆ 3000 ಕ್ಕಿಂತ ಕಡಿಮೆ ಇರಬಾರದು. ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ 6 ಕೋಟಿ ಸಂದಾಯವಾಗಬೇಕು ಮತ್ತು ವಾರ್ಷಿಕ ತಲಾ ಒಬ್ಬರಿಗೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

200 ರೂಪಾಯಿ ಬರಬೇಕು. ಈ ರೀತಿಯಾಗಿ ಮಾನದಂಡಗಳನ್ನು ಅಳವಡಿಸಿ ಮಹಾನಗರ ಪಾಲಿಕೆ, ನಗರ ಪಾಲಿಕೆ, ಪಟ್ಟಣ ಪಂಚಾಯಿತಿ ಮಾಡಲು ಸರ್ಕಾರ ಕ್ರಮಗಳನ್ನು ಜರುಗಿಸಿದೆ.

**ಶ್ರೀ ಎಸ್.ರುದ್ರೇಗೌಡ:-** ಮಾನ್ಯ ಸಭಾಪತಿಯವರೇ, ಆಡಳಿತಾತ್ಮಕವಾಗಿ ಮಾನ್ಯ ಸಚಿವರು ನೀಡಿರುವಂಥ ಉತ್ತರ ಸರಿಯಾಗಿದೆ. ಆದರೆ, ನನಗೆ ಬೇಕಾಗಿರುವ ಮಾಹಿತಿ ಏನೆಂದರೆ, Tier-1, Tier-2, Tier-3 cities ಎಂದು ಉಲ್ಲೇಖ ಮಾಡುತ್ತೇವೆ, ಅದರ ವರ್ಗೀಕರಣ ನಮ್ಮ ರಾಜ್ಯದಲ್ಲಿಯು ಆಗಿದೆಯೇ?

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೆ, ಒಂದು ನಿಮಿಷ. ಮೊದಲು ಮಾನ್ಯ ಸಚಿವರು ಮಾತನ್ನು ಮುಗಿಸಲಿ. ನಂತರ ತಾವು ಮಾತನಾಡಿ.

**ಶ್ರೀ ಎಸ್.ರುದ್ರೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ವೇಳೆ ವರ್ಗೀಕರಣವಾಗಿದರೆ, ಯಾವ್ಯಾವ ನಗರಗಳಲ್ಲಿ Tier-1, Tier-2, Tier-3 cities ಮಾಡಲಾಗಿದೆ ಎಂಬುದರ ವಿವರವನ್ನು ಮಾನ್ಯ ಸಚಿವರು ನೀಡಬೇಕೆಂದು ಕೇಳಬಯಸುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, Tier-1, Tier-2, Tier-3 cities ಗೆ ಸಂಬಂಧಿಸಿದಂತೆ, ನಗರಸಭೆಗಳ ವರ್ಗೀಕರಣವನ್ನು ಕೇಂದ್ರ ಸರ್ಕಾರ ಮಾತ್ರ ಮಾಡಿದೆ. ಇವತ್ತಿನವರೆಗೂ ರಾಜ್ಯ ಸರ್ಕಾರ ಎಲ್ಲಿಯು ಆ ರೀತಿಯಾದ ವರ್ಗೀಕರಣವನ್ನು ಮಾಡಿಲ್ಲ. ಕೇವಲ ಪಟ್ಟಣ ಪಂಚಾಯಿತಿಗಳು, ಪುರಸಭೆಗಳು, ನಗರಸಭೆಗಳು, ಮಹಾನಗರ ಪಾಲಿಕೆಗಳಲ್ಲಿ ವರ್ಗೀಕರಣ ಮಾಡಲು ನಮ್ಮ ರಾಜ್ಯಕ್ಕೆ ಅನುಮತಿ ಇದ್ದು, ಆ ನಿಟ್ಟಿನಲ್ಲಿ ಮಾತ್ರ ವರ್ಗೀಕರಣ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂಥ ಪ್ರಸ್ತಾವನೆ ಇಲ್ಲಿಯವರೆಗೂ ನಮ್ಮ ಸರ್ಕಾರದ ಮುಂದೆ ಬಂದಿಲ್ಲ. ಅದಕ್ಕೆ ಸಂಬಂಧಪಟ್ಟಂತೆ, ಮಾನ್ಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ವಿವರವಾದ ಮಾಹಿತಿಯನ್ನು ಒದಗಿಸಿ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1222**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಲಾಕ್‌ಡೌನ್ ಸಂದರ್ಭದಲ್ಲಿ ಕಾರ್ಮಿಕರ ಮುಷ್ಕರ ನಡೆಯುತ್ತಿತ್ತು. ತದನಂತರ ಸಾಕಷ್ಟು ಸಂಧಾನ ಮಾಡಿ, ಮತ್ತೆ ಕಾರ್ಖಾನೆಯಲ್ಲಿ ಕೆಲಸ ನಡೆಯುತ್ತಿದೆ. ಆದರೆ, ಕಾರ್ಖಾನೆಯನ್ನು ಪ್ರಾರಂಭ ಮಾಡುವಾಗ ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಈಗಾಗಲೇ ಮಾನ್ಯ ಸಚಿವರು ಸಹ 'ವೈಯಕ್ತಿಕ ವಾಗ್ದಾನ ಬರೆದುಕೊಡಬೇಕೆಂಬ ಆಡಳಿತ ವರ್ಗದ ನಿಯಮವನ್ನು ಸಡಿಲಿಸಿ, ಕಾರ್ಮಿಕ ಸಂಘವು ಸರ್ಕಾರಕ್ಕೆ ವಾಗ್ದಾನ ಬರೆದುಕೊಟ್ಟಲ್ಲಿ ಅದನ್ನು ಆಡಳಿತ ವರ್ಗದವರು ಅಂಗೀಕರಿಸುವುದಾಗಿ ತಿಳಿಸಿದ್ದರು' ಎಂದು ಉತ್ತರದಲ್ಲಿ ಬರೆಯಲಾಗಿದೆ. ಮೊದಲನೆಯದಾಗಿ, ಇವತ್ತಿಗೂ ಸಹ ಟೊಯೋಟೊ ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು 'ವೈಯಕ್ತಿಕ ವಾಗ್ದಾನ ಬರೆದುಕೊಡಬೇಕೆಂದು' ಕಡ್ಡಾಯ ಮಾಡುತ್ತಿದ್ದಾರೆ. ಎರಡನೆಯದಾಗಿ, 74 ಜನರನ್ನು ಕರ್ತವ್ಯದಿಂದ ಅಮಾನತುಗೊಳಿಸಲಾಗಿದೆ. ಅದರಲ್ಲಿ ಸುಮಾರು 7, 8 ಜನರನ್ನು ಕರ್ತವ್ಯದಿಂದ ವಜಾಗೊಳಿಸಲಾಗಿದೆ. ಈಗಾಗಲೇ ಸಂಧಾನ ಮಾಡುವಂಥ ಸಂದರ್ಭದಲ್ಲಿ 'ಸಾಕಷ್ಟು ವರ್ಷಗಳ ಕಾಲ ಅವರು ಕರ್ತವ್ಯ ನಿರ್ವಹಿಸಿದ್ದು, ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದ ಪ್ರಯುಕ್ತ' ಆ ಸಂಧಾನ ಸಮಯದಲ್ಲಿ ಮಾನ್ಯ ಸಚಿವರು ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಭಾವಿಸಿದ್ದೇನೆ. ಆದರೆ, ಯಾರನ್ನು ಸಹ ಮತ್ತೆ ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳುವಂಥ ಪ್ರಯತ್ನವನ್ನು ಮಾಡಿಲ್ಲ. ಜೊತೆಗೆ ಮುಷ್ಕರವಾದ ಬಳಿಕ ಕಾರ್ಮಿಕರ ಮೇಲೆ ಸಾಕಷ್ಟು ಒತ್ತಡ ಹೇರುತ್ತಿದ್ದಾರೆ. ಅಂದರೆ, 10 ಜನರು ಮಾಡುವ ಕೆಲಸವನ್ನು 07 ಜನರು ಮಾಡಬೇಕೆಂದು ಆಡಳಿತ ವರ್ಗದವರು ಒತ್ತಾಯ ಮಾಡುತ್ತಿದ್ದಾರೆ. ಇದರಿಂದಾಗಿ ಕಾರ್ಮಿಕರ ಸಮಸ್ಯೆ ಸಂಪೂರ್ಣವಾಗಿ ಪರಿಹಾರವಾಗಿಲ್ಲ. ಮಾನ್ಯ ಸಚಿವರು ಯಾರ ಹತ್ತಿರ ಸಂಧಾನ ಮಾಡಿದ್ದರು, ಅವರು ನಮ್ಮ ವಿರೋಧ ಪಕ್ಷದ ನಾಯಕರ ಮನೆಗೂ ಬಂದಿದ್ದರು. ಅವತ್ತು ನಾನು ಸಹ ಅಲ್ಲಿಯೇ ಇದ್ದೆ. ಆದರೆ, ಆಡಳಿತ ವರ್ಗದವರೇನಿದ್ದಾರೆ, ಅವರು ಸಡಿಲಿಕೆ ನೀಡುವುದಿಲ್ಲವೆಂದು ಹೇಳುತ್ತಿದ್ದರು. ಅದಕ್ಕೆ ಸಂಬಂಧಿಸಿದಂತೆ, ಸರ್ಕಾರದ ಉತ್ತರದ ರೀತ್ಯಾ ಸಡಿಲಿಕೆ ನೀಡುವಲ್ಲಿ ತಿಳಿಸಿದ್ದರೂ ಸಹ ಆ ಕೆಲಸವನ್ನು ಆಡಳಿತ ವರ್ಗದವರು ಮಾಡಿಲ್ಲ. ಇದಕ್ಕೆ ಸಂಬಂಧಿಸಿದಂತೆ ಕ್ರಮವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಟೊಯೋಟೊ ಕಿರ್ಲೋಸ್ಕರ್ ಕಾರ್ಖಾನೆಗೆ ಸಂಬಂಧಿಸಿದಂತೆ ಲಾಕ್‌ಡೌನ್ ಅಥವಾ ಮುಷ್ಕರದ ಸಂದರ್ಭದಲ್ಲಿ ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕಳುಹಿಸಿದರು. ಇದಕ್ಕೆ ಸಂಬಂಧಿಸಿದಂತೆ, ಬಹಳಷ್ಟು ಸಂಧಾನ, ಚರ್ಚೆ ಮಾಡಿ, ಮುಷ್ಕರವೂ ಅಂತ್ಯಗೊಂಡಿದೆ. ಈಗಾಗಲೇ ಎಲ್ಲಾ ನೌಕರರು ಕಾರ್ಖಾನೆಗೆ ಹೋಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಕಾರ್ಖಾನೆ ಕೆಲಸವು ನಡೆಯುತ್ತಿದೆ. ನಾನು ಸಹ ಕೈಗಾರಿಕಾ ಸಚಿವನಾಗಿ ಸಂಧಾನಕ್ಕೆ ಹೋಗಿದ್ದ ಸಂದರ್ಭದಲ್ಲಿ ಅಲ್ಲಿಗೆ ಲೋಕಸಭಾ ಸದಸ್ಯರು, ಶಾಸಕರು, ಇನ್ನಿತರ ಹಲವಾರು ಶಾಸಕ ಮಿತ್ರರು, ಆಡಳಿತ ವರ್ಗದವರು ಮತ್ತು ಕಾರ್ಮಿಕ ನಾಯಕರ ಸಮ್ಮುಖದಲ್ಲಿ ಪರಸ್ಪರ ಚರ್ಚೆ ಮಾಡಿ, ಸಾಕಷ್ಟು ಸಂಧಾನ ಮಾಡುವಂಥ ಪ್ರಯತ್ನ ಮಾಡಿದ್ದೇವೆ. ಈಗಾಗಲೇ ಮಾನ್ಯ ಸದಸ್ಯರು 'undertaking' ಎಂದು ಏನು ಉಲ್ಲೇಖ ಮಾಡಿದ್ದಾರೆ, ಆ undertaking ಗೆ ಸಂಬಂಧಿಸಿದಂತೆ ಆಡಳಿತ ವರ್ಗದವರು ಕೇಳಿದ್ದು, undertaking ನ್ನು ಸಹ ಕೇಳಬಾರದು ಮತ್ತು ಯಾರ್‍ಯಾರು ಕಾರ್ಖಾನೆ ಬಿಟ್ಟು ವಲಸೆ ಹೋಗಿದ್ದು, ಮತ್ತೆ ಕಾರ್ಖಾನೆಗೆ ವಾಪಸ್ಸು ಬರುತ್ತಾರೆ, ಅವರೆಲ್ಲರನ್ನೂ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ತಿಳಿಸಲಾಗಿದ್ದು, ಸುಮಾರು ಮೂರು ಸಿಬ್ಬಂದಿಗಳು ವಾಪಸ್ಸು ಬಂದಿದ್ದು, ಅವರೆಲ್ಲರನ್ನೂ ಕಾರ್ಖಾನೆಗೆ ಸೇರಿಸಿಕೊಂಡಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರು ತಿಳಿಸಿದ ಹಾಗೆ ಸುಮಾರು 60 ರಿಂದ 70 ಜನರನ್ನು ಅಮಾನತ್ತುಗೊಳಿಸಲಾಗಿದೆ, ಅವರಿಗೂ ಕಾರ್ಮಿಕ ನಾಯಕರಿದ್ದು, ಆದಷ್ಟು ಬೇಗ restore ಮಾಡಬೇಕು ಮತ್ತು suspension revoke ಮಾಡಬೇಕೆಂದು ಹೇಳುತ್ತೇವೆ. ಆದರೆ, ಕಾರ್ಖಾನೆ ವ್ಯವಸ್ಥೆ ಪ್ರಕಾರ ಸಿಬ್ಬಂದಿಯನ್ನು ಅಮಾನತ್ತುಗೊಳಿಸಿದರೆ, ಆತನ ಮೇಲೆ ವಿಚಾರಣೆ ನಡೆಸಲಾಗುತ್ತದೆ. ಆ ವಿಚಾರಣೆಗೆ ಸಮಯ ನಿಗದಿ ಇರಲಿಲ್ಲ. ನಾವು ಸಂಧಾನ ನಡೆಸಲು ಹೋದಾಗ, 2 ಅಥವಾ 3 ತಿಂಗಳುಗಳ ಕಾಲ ಸಮಯವನ್ನು ನಿಗದಿಪಡಿಸಿ, ಆ ವಿಚಾರಣೆಯನ್ನು ಮುಕ್ತಾಯಗೊಳಿಸಬೇಕು ಹಾಗೂ ಯಾರು ತಪ್ಪು ಮಾಡಿರುವುದಿಲ್ಲ ಅವರನ್ನು ತಕ್ಷಣವೇ ಕೆಲಸಕ್ಕೆ restore ಮಾಡಿಕೊಂಡು, ಯಾರು ತಪ್ಪು ಮಾಡಿದ್ದಾರೆ ಅವರನ್ನು ವಜಾಗೊಳಿಸಬೇಕೆಂದು' ತಿಳಿಸಲಾಗಿದೆ. ಈ ವಿಚಾರವಾಗಿ ಆಡಳಿತ ವರ್ಗದವರು ಸಂಧಾನಕ್ಕೆ ಬಂದಾಗ ನಿಗದಿತ ಸಮಯದೊಳಗೆ ವಿಚಾರಣೆಯನ್ನು ಮುಕ್ತಾಯಗೊಳಿಸುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಆ ಹಿನ್ನಲೆಯಲ್ಲಿ ಇವತ್ತು ವಜಾಗೊಂಡವರನ್ನು ಹೊರತುಪಡಿಸಿ, ಉಳಿದವರೆಲ್ಲರೂ ಕಾರ್ಖಾನೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದು, ಕಾರ್ಖಾನೆ ಸಹ ಪುನರಾರಂಭಗೊಂಡಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಕಾರ್ಮಿಕರ ಸಂಸ್ಥೆಯಿಂದ ಪತ್ರವನ್ನು ನೀಡಿದರೆ, ಎಲ್ಲಾ ಕಾರ್ಮಿಕರು ಕೆಲಸಕ್ಕೆ ಹೋಗಬಹುದು ಎಂದು ಮಾನ್ಯ ಸಚಿವರು ಹೇಳಿದರು. ಆದರೆ, ವೈಯಕ್ತಿಕವಾಗಿ ಎಲ್ಲಾ ಕಾರ್ಮಿಕರ ಹತ್ತಿರ ಇವತ್ತಿಗೂ ಸಹ ಆಡಳಿತ ವರ್ಗದವರು ಪತ್ರವನ್ನು ಕೇಳುತ್ತಿದ್ದು, ಪತ್ರವನ್ನು ನೀಡಿದ ಮೇಲೆ ಕೆಲಸಕ್ಕೆ ಸೇರಿಸಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಇದರ ಕಡೆ ಸ್ವಲ್ಪ ಗಮನಹರಿಸಿ, ಇದನ್ನು ಸರಿಪಡಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ವೈಯಕ್ತಿಕವಾಗಿ undertaking ತೆಗೆದುಕೊಳ್ಳುವುದೇನಿತ್ತು, ಅದನ್ನು ನಿಲ್ಲಿಸಿ, ಕಾರ್ಮಿಕರ ಪರವಾಗಿ ಇರುವಂಥ ಕಾರ್ಮಿಕ ನಾಯಕರೊಬ್ಬರ undertaking ಸಾಕು ಎನ್ನುವ ರೀತಿ ಮಾಡಲಾಗಿದ್ದು, ಅದಕ್ಕೆ ಆಡಳಿತ ವರ್ಗದವರು ಒಪ್ಪಿಕೊಂಡು ಹೋಗಿದ್ದರು. ಆದರೆ, ಮಾನ್ಯ ಸದಸ್ಯರು ಈಗ ಹೊಸ ಮಾಹಿತಿಯನ್ನು ನೀಡುತ್ತಿದ್ದು, ಅದರ ಬಗ್ಗೆ ವಿಚಾರ ಮಾಡುತ್ತೇನೆ. ಈಗಾಗಲೇ individual undertaking ತೆಗೆದುಕೊಳ್ಳಬಾರದೆಂದು ತಿಳಿಸಲಾಗಿದ್ದು, ಅದರಲ್ಲಿ ಏನಾದರೂ violate ಮಾಡಿದ್ದರೆ, ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ 1383**

**ಉಪ ಸಭಾಪತಿಯವರು:-** ಶ್ರೀ ಎಂ.ನಾರಾಯಣಸ್ವಾಮಿಯವರ ಪ್ರಶ್ನೆ ಸಂಖ್ಯೆ 1383 ಗೆ ಮಾನ್ಯ ಸಚಿವರು ಕಾಲಾವಕಾಶ ಕೋರಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1387**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಂದ ಈ ರೀತಿಯ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಇದರಿಂದಾಗಿ ಮನಸ್ಸಿಗೆ ಬಹಳ ನೋವು ಉಂಟಾಗುತ್ತಿದೆ. ನಾವೆಲ್ಲರೂ ವಿದ್ಯಾರ್ಥಿ ದೆಸೆಯಿಂದ, ಸಹಕಾರಿ ಕ್ಷೇತ್ರದಿಂದ ಬಂದವರು. ಶ್ರೀ ಮಹಾತ್ಮ ಗಾಂಧಿಜೀಯವರ ಕೊಡುಗೆಯಿಂದಾಗಿ ಇಡೀ ವಿಶ್ವದಲ್ಲಿಯೇ ಈ ಸಹಕಾರಿ ಆಂದೋಲನ ಅಸ್ತಿತ್ವದಲ್ಲಿದೆ. ನಾನು ಕೇಳಿದಂಥ ಪ್ರಶ್ನೆಯೇನೆಂದರೆ, 5 ವರ್ಷಗಳ ಕಾಲ ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ಕರ್ತವ್ಯ ನಿರ್ವಹಿಸುವಂಥ ಸಂದರ್ಭದಲ್ಲಿ 3 ವರ್ಷಗಳ ಕಾಲ, 3 General Body ಸಭೆಯಲ್ಲಿ ಸಹಿ ಹಾಕುವವರು ಮತ್ತು 3 ವರ್ಷಗಳ ಕಾಲ ಆ ಸಹಕಾರ ಸಂಘಗಳಲ್ಲಿ ವ್ಯವಹಾರ ನಡೆಸುವುದಕ್ಕೆ ಸಂಬಂಧಿಸಿದಂತೆ ಸಹಕಾರಿ ಸಂಘಗಳ ಕಾಯ್ದೆಯ ಸೆಕ್ಷನ್ 20 ರಲ್ಲಿ ನಿಯಮ ಇದೆ. ಅದನ್ನು ಕೆಲವು ಸಂಘದವರು ದುರ್ಬಳಕೆ ಮಾಡಿಕೊಂಡು, ಕೆಲವರು voting rights ಅನ್ನೇ ಕಳೆದುಕೊಳ್ಳುವಂಥ ರೀತಿ ದಾಖಲೆಗಳನ್ನು ತಿರುಚುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಬಹಳಷ್ಟು ಪ್ರಕರಣಗಳು ಬೆಳಕಿಗೆ ಬಂದಿದೆ.

**(ಮುಂದು)**

**(415) 16.03.2021/1.00/ಎಸ್‌ಕೆ-ಜಿಆರ್** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಮುಂದು):–**

ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯವು ಕೂಡ ಇಲಾಖಾಧಿಕಾರಿಗಳಿಗೆ ಸಹಕಾರಿ ಸಂಘಗಳ ಕಾಯಿದೆ ಸೆಕ್ಷನ್ 20 ರಲ್ಲಿ ಇದನ್ನು ತಿದ್ದುಪಡಿ ಮಾಡಿ ಅಥವಾ ಇದನ್ನು ಸರಿಪಡಿಸಿ ಎನ್ನುವಂತಹ ಎಚ್ಚರಿಕೆಯನ್ನು ಕೊಟ್ಟಿರುವಂತಹ ಕೆಲವು ನಿದರ್ಶನಗಳಿವೆ. ಇದರ ಬಗ್ಗೆ ಏನು ಮಾಡುತ್ತೀರಾ ಎಂದು ಕೇಳಿದಾಗ, ಅದಕ್ಕೆ ಏನೇನೋ ಉತ್ತರವನ್ನು ಕೊಟ್ಟಿದ್ದಾರೆ. ದಯವಿಟ್ಟು, ಈ ಸೆಕ್ಷನ್ 20 ರ ಬಗ್ಗೆ ತಮಗೆ ಕಾಳಜಿ ಮತ್ತು ಅನುಭವ ಇದೆ. ಈ ಸಹಕಾರಿ ಆಂದೋಲನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾರದರ್ಶಕವಾಗಿರಬೇಕು. ಈ ಏಳು ಬಣ್ಣಗಳಿಂದ ನಡೆಯುವಂತಹ ಈ ಸಹಕಾರಿ ಆಂದೋಲನದಲ್ಲಿ ಎಲ್ಲರಿಗೂ ಕೂಡ ಅವಕಾಶಗಳು ಸಿಗಬೇಕು ಎನ್ನುವ ದೃಷ್ಟಿಯಿಂದ ಈ ಸೆಕ್ಷನ್ ಮತ್ತು ಇನ್ನಿತರ ಸೆಕ್ಷನ್‌ಗಳಲ್ಲಿ ತಿದ್ದುಪಡಿ ತರತಕ್ಕಂತಹದ್ದು ಬಹಳ ಅನಿವಾರ್ಯ. ಆ ದೆಸೆಯಲ್ಲಿ ತಾವು ಶಾಸಕರನ್ನು ಒಳಗೊಂಡಂತೆ ಒಂದು Experts

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

Committee ಮಾಡಿ. ಈ ಸೆಕ್ಷನ್ 20 ಕ್ಕೆ ತಿದ್ದುಪಡಿಯನ್ನು ತರುವಂತಹ ವ್ಯವಸ್ಥೆಯನ್ನೇನಾದರೂ ತಾವು ಮಾಡುತ್ತೀರಾ? ಸರ್ಕಾರ ಇದರ ಬಗ್ಗೆ ಚಿಂತನೆಯಲ್ಲಿದೆಯಾ ಎಂಬುದು ನನ್ನ ಪ್ರಶ್ನೆ.

ಎರಡನೆಯದಾಗಿ, ಸಹಕಾರಿ ಕ್ಷೇತ್ರದ ಚುನಾವಣೆಗಳು ಬಹಳ ಪ್ರಬಲವಾದ ಪೈಪೋಟಿಯಲ್ಲಿ ನಡೆಯುತ್ತಿವೆ. ಈ ಸಹಕಾರಿ ಅಂದೋಲನಕ್ಕೆ ಬೆಚ್ಚಿ-ಬೆದರಿ, ಇಲ್ಲಿ ಆಗುವುದಿಲ್ಲವೆಂದು, ನಾನು ಐದಾರು ವರ್ಷಗಳಿಂದ ಈ ಅಂದೋಲನದಿಂದ ಹೊರಗಡೆ ಬಂದಿದ್ದೇನೆ. ಆದರೆ ಆ ಸಂಸ್ಥೆಯಲ್ಲಿ ಸರ್ಕಾರದ ಷೇರು ಧನ ಮತ್ತು ಸಹಾಯಧನವನ್ನು ಇಟ್ಟಿದ್ದೇವೆ ಎಂದು ಹೇಳಿ, nomination ಮಾಡುವ ಪದ್ಧತಿಯನ್ನು ಉಳಿಸಿಕೊಂಡು ಬಂದಿದೆ. ಆದರೆ ನಾಮಕರಣ ಪದ್ಧತಿ ಮಾಡಿ, ತಾವು ಸದಸ್ಯರನ್ನಾಗಿ ಇಡಿ. ಆದರೆ ನಾಮಕರಣ ಹೊಂದಿದಂತಹ ಸದಸ್ಯರೇ ಅಧ್ಯಕ್ಷರು, ಮತ್ತು ಉಪಾಧ್ಯಕ್ಷರು ಆಗುವುದು. ಚುನಾಯಿತ ಪ್ರತಿನಿಧಿಗಳು (Elected body) ಅಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಆಗುವ ಹಾಗಿಲ್ಲ ಎನ್ನುವಂತಹ ಒಂದು ಸರ್ಕಾರದ ಒತ್ತಡದಲ್ಲಿ ನಡೆಯುವಂತಹ ಬಹಳಷ್ಟು ಉದಾಹರಣೆಗಳು ಈ ರಾಜ್ಯದಲ್ಲಿವೆ. ನಾಮ ನಿರ್ದೇಶನವನ್ನು ಹೊಂದಿದಂತಹ ಸದಸ್ಯರೇ ಈಗ ದೊಡ್ಡ ದೊಡ್ಡ ಬ್ಯಾಂಕ್‌ಗಳು ಮತ್ತು ಸೊಸೈಟಿಯಲ್ಲಿ ಅಧ್ಯಕ್ಷರು ಆಗಿರುವಂತಹದ್ದು. ನಾಮನಿರ್ದೇಶನವನ್ನು ಹೊಂದಿದಂತಹ ಸದಸ್ಯರು ಸದಸ್ಯರಾಗಿ, ನಿರ್ದೇಶಕರಾಗಿ ಕೆಲಸ ಮಾಡಲಿ. ದಯವಿಟ್ಟು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪದಾಧಿಕಾರಿ ಆಗತಕ್ಕಂತಹ ಒಬ್ಬ ಚುನಾಯಿತ ಪ್ರತಿನಿಧಿಯ ಹಕ್ಕನ್ನು ಮೊಟಕುಗೊಳಿಸಬಾರದು. ಅದಕ್ಕೆ ತಾವು ಏನಾದರೂ ಕಡಿವಾಣ ಹಾಕುತ್ತೀರಾ? ಈ ಹಿಂದೆ ಶ್ರೀ ಎಸ್.ಎಸ್. ಪಾಟೀಲ್‌ರವರು ಸಹಕಾರಿ ಸಚಿವರಾಗಿದ್ದಾಗ, ಸರ್ಕಾರದ ನಾಮಿನೇಷನ್ ಅಧಿಕಾರವನ್ನೇ ತೆಗೆದುಬಿಟ್ಟಿದ್ದರು. ಸಹಕಾರಿ ಕ್ಷೇತ್ರದಲ್ಲಿ ಸರ್ಕಾರದ ನಾಮಿನೇಷನ್ ಬೇಡ ಎಂಬ ಬಗ್ಗೆ ಎರಡೂ ಸದನಗಳಲ್ಲಿ ಚರ್ಚೆಯಾಗಿತ್ತು. ಆದರೆ ಅದು ಹೇಗೋ ಹಾಗೇ ಮುಂದುವರೆದುಕೊಂಡು ಬಂದಿದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸಹಕಾರಿ ಕ್ಷೇತ್ರದಲ್ಲಿ ಮೊದಲು ಮೀಸಲಾತಿ ಪದ್ಧತಿ ಇರಲಿಲ್ಲ. ಈಗ ಇದೇ ಸರ್ಕಾರ ಬಹಳ ವರ್ಷಗಳ ಹಿಂದೆ ಮೀಸಲಾತಿಯನ್ನು ತಂದಿದೆ. ಎಸ್.ಸಿ., ಎಸ್.ಟಿ., ಓ.ಬಿ.ಸಿ., ಹೀಗೆ ಪ್ರತಿಯೊಬ್ಬರಿಗೂ ಕೂಡ ನಿರ್ದೇಶಕರ ಸ್ಥಾನದಲ್ಲಿ ಭಾಗವಹಿಸುವುದಕ್ಕೆ ಮತ್ತು ಚುನಾಯಿತರಾಗುವುದಕ್ಕೆ ಮೀಸಲಾತಿ ಸೌಲಭ್ಯವನ್ನು ಸಹಕಾರಿ ಕ್ಷೇತ್ರದಲ್ಲಿ ತಂದು ಕೊಟ್ಟಿದೆ. ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಮೀಸಲಾತಿಯನ್ನು ಕೊಟ್ಟಿರುವಂತಹದ್ದು, ಇದೊಂದು ದೊಡ್ಡ ಸಾಧನೆ. ಆ ಸರ್ಕಾರಗಳನ್ನು ನಾನು ಅಭಿನಂದಿಸುತ್ತೇನೆ. ಮೀಸಲಾತಿಯನ್ನು ಕೊಟ್ಟಿರುವಂತಹ ಈ ಸಂದರ್ಭದಲ್ಲಿ ಸರ್ಕಾರದ ಷೇರು ಧನವಿದೆ ಎಂಬ ಕಾರಣಕ್ಕೆ ನಾಮನಿರ್ದೇಶನ ಮಾಡತಕ್ಕಂತಹ ವ್ಯವಸ್ಥೆಯನ್ನು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರಿ. ಆದರೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರು ಸಹಕಾರಿ ಇಲಾಖೆಯಲ್ಲಿ ಪದಾಧಿಕಾರಿಗಳಾಗತಕ್ಕಂತಹದ್ದನ್ನು ತಪ್ಪಿಸುವುದಕ್ಕೆ ಮಾನ್ಯ ಸಚಿವರು ಏನಾದರೂ ಮಾಡುತ್ತಾರೆಯೇ ಎಂಬ ಬಗ್ಗೆ ತಿಳಿಸಬೇಕು.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಕೇಳಿರುವಂತಹ ಪ್ರಶ್ನೆಗಳಿಗೆ ಸಂಕ್ಷಿಪ್ತವಾದ ಉತ್ತರವನ್ನು ಕೊಡುವಂತಹ ಕೆಲಸವನ್ನು ನಾನು ಮಾಡಿದ್ದೇನೆ. ನಾಮಿನೇಷನ್ ಮಾಡತಕ್ಕಂತಹದ್ದು; ಯಾವ ಸಹಕಾರ ಸಂಸ್ಥೆಗಳು ಮತ್ತು ಬ್ಯಾಂಕ್‌ಗಳಲ್ಲಿ ಸರ್ಕಾರದ ಷೇರು ಮತ್ತು ಸರ್ಕಾರದ ಗ್ಯಾರಂಟಿ ಇದೆ, ಅದಕ್ಕೆ ಮಾತ್ರ ನಾಮಿನೇಷನ್ ಮಾಡತಕ್ಕಂತಹ ಪದ್ಧತಿಯನ್ನು ಮೊದಲಿನಿಂದಲೂ ಮಾಡಿಕೊಂಡು ಬರಲಾಗಿದೆ. ಮಾನ್ಯ ಸದಸ್ಯರು ಕೇಳಿರುವಂತಹದ್ದು, ಡಿ.ಸಿ.ಸಿ., ಬ್ಯಾಂಕ್‌ಗೆ ಸಂಬಂಧಿಸಿದಂತೆ ಇರಬಹುದು ಎನ್ನುವಂತಹದ್ದು ನನ್ನ ಊಹೆ. ಯಾವತ್ತು ಕೂಡ ನಾಮಿನೇಷನ್ ಮಾಡತಕ್ಕದ್ದಕ್ಕೆ ಮಾಡುತ್ತೇವೆಯೇ ವಿನಃ ಆಡಳಿತ ಮಂಡಳಿಯಲ್ಲಿ ಇವರನ್ನೇ ಅಧ್ಯಕ್ಷರನ್ನಾಗಿ ಮಾಡಿ ಎಂದು ನಮ್ಮ ಸಹಕಾರಿ ಇಲಾಖೆಯಾಗಲಿ, ನಮ್ಮ ಸರ್ಕಾರವಾಗಲಿ pressure ಮಾಡುವಂತಹದ್ದು ಇಲ್ಲ. ಮಾನ್ಯ ಸದಸ್ಯರು ಕೇಳಿರುವಂತಹದ್ದು ಬಹುಶಃ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಇರಬಹುದು. ಆದರೆ ನಾಮಿನೇಷನ್ ಮಾಡುವುದಕ್ಕೆ ಚಾಲನೆಯನ್ನು ಕೊಟ್ಟಿದ್ದೇವೆ. ಹಿಂದೆಯೂ ಇದೆ, ಈಗಲೂ ಇದೆ ಹಾಗೂ ಮುಂದೆಯೂ ಇರಬಹುದು. ಷೇರು ಇರುವಂತಹದ್ದು. 2-3 ಡಿ.ಸಿ.ಸಿ., ಬ್ಯಾಂಕ್‌ಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಡಿ.ಸಿ.ಸಿ. ಬ್ಯಾಂಕ್‌ಗಳ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಒಂದೊಂದು ಡಿ.ಸಿ.ಸಿ., ಬ್ಯಾಂಕ್‌ಗಳಿಗೆ ಸುಮಾರು ಹತ್ತು ಲಕ್ಷ ರೂಪಾಯಿಗಳ ಷೇರು ಹಣವನ್ನು ಕೊಡತಕ್ಕೆಂತು ಎನ್ನುವಂತಹದ್ದನ್ನು ಮಾಡಿದ್ದೇವೆಯೇ ವಿನಃ ನಾಮಿನೇಷನ್ ಮಾಡಿರುವಂತಹವರನ್ನೇ, ಅಧ್ಯಕ್ಷರನ್ನಾಗಿ ಮಾಡಿ ಎಂದು ಸರ್ಕಾರ ಎಲ್ಲಿಯೂ ಕೂಡ ಸಹಕಾರ ಇಲಾಖೆಯಲ್ಲಿ pressure ಮಾಡುವಂತಹದ್ದು ಇಲ್ಲ. ಆ ಹಕ್ಕು ಇರುವಂತಹದ್ದು ಚುನಾಯಿತ ಚುನಾಯಿತ ಪ್ರತಿನಿಧಿಗಳಿಗೆ ಮಾತ್ರ. ಚುನಾಯಿತ ಪ್ರತಿನಿಧಿಗಳನ್ನು ಅಧ್ಯಕ್ಷರು, ಉಪಾಧ್ಯಕ್ಷರನ್ನಾಗಿ ಮಾಡುವಂತಹ ಹಕ್ಕಿನ ಅಧಿಕಾರ ಆಡಳಿತ ಮಂಡಳಿಯವರಿಗೆ ಇದೆ. ಅದನ್ನು ನಾವು ಮೊಟಕುಗೊಳಿಸುವಂತಹದ್ದನ್ನು ಮಾಡುವುದಿಲ್ಲ. ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆಯನ್ನು ಕೇಳಲಿಲ್ಲ. ಅದರ ಬಗ್ಗೆ ಮಾಹಿತಿಯನ್ನು ಹೇಳಿದ್ದೀರಿ. ಅದನ್ನು ಈಗ ತಿದ್ದುಪಡಿ ತರುವಂತಹದ್ದಕ್ಕೆ ಚಾಲನೆಯನ್ನು ಕೊಡುತ್ತಿದ್ದೇವೆ. ಮೊನ್ನೆ ಕೂಡ ಸಭೆ ನಡೆದಿದೆ. ಕ್ಯಾಬಿನೆಟ್‌ಗೆ ಬಂದು ತಿದ್ದುಪಡಿಗೆ ಬರುತ್ತದೆ. ಐದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಮಾನ್ಯ ಸಭೆಗಳಲ್ಲಿ ಮೂರು ಸಭೆಗಳಿಗೆ continuous ಆಗಿ ಗೈರು ಹಾಜರಾದರೆ ಅಂತಹವರಿಗೆ ಆ ಹಕ್ಕು ಇರುವುದಿಲ್ಲ. ಎನ್ನುವಂತಹ ಬದಲಾವಣೆಯನ್ನು ಕೂಡ ಮಾಡತಕ್ಕಂತಹ ...

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವ್ಯವಸ್ಥೆ ಮೊದಲಿನಂತೆಯೇ ಆಗಲಿ. ... General body meeting ಗೆ ಹೋಗಲಿಲ್ಲವೆಂದರೆ ಮನೆ-ಮನೆಗೆ ತೆಗೆದುಕೊಂಡು ಹೋಗಿ, ಬೇಕಾದವರಿಂದ ಸಹಿ ಹಾಕಿಸುತ್ತಾರೆ, ಬೇಡದವರನ್ನು ಬಿಟ್ಟುಬಿಡುತ್ತಾರೆ. ಇದರಲ್ಲಿ ಬಹಳ ರಾಡಿ ಎದ್ದು ಹೋಗಿದೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಅದನ್ನು ಬದಲಾವಣೆ ಮಾಡುವುದರ ಬಗ್ಗೆ ಚಿಂತನೆ ನಡೆದಿದೆ. ಡಿ.ಸಿ.ಸಿ., ಬ್ಯಾಂಕ್‌ಗಳಿಗೆ ಯಾವುದೂ ಷೇರು ಇಲ್ಲ. ಅವರಿಗೂ ಕೂಡ ಸುಮಾರು 10 ಲಕ್ಷ ರೂಪಾಯಿಗಳ ಷೇರು ಕೊಡುವಂತಹದ್ದರ ಚಾಲನೆಯನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ.

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** 10 ಲಕ್ಷ ರೂಪಾಯಿಗಳ ಷೇರು ಬರೀ ಕೈ ಆಡಿಸುವುದಕ್ಕಷ್ಟೆ. 10 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಬರೀ ಡಿ.ಸಿ.ಸಿ., ಬ್ಯಾಂಕ್‌ಗೆ ಷೇರು. ...

**ಶ್ರೀ ಎಸ್.ಟಿ. ಸೋಮಶೇಖರ್:-** ಸರ್ಕಾರದಲ್ಲಿ ಕೈ ಆಡಿಸುವುದರಿಂದ ಸರ್ಕಾರದಲ್ಲಿ ನಬಾರ್ಡ್‌ನಲ್ಲಿ ಕೊಟ್ಯಾಂತರ ರೂಪಾಯಿಗಳನ್ನು ಡಿ.ಸಿ.ಸಿ., ಬ್ಯಾಂಕ್‌ಗೆ ಕೊಟ್ಟಿದ್ದೇವೆ.

**ಶ್ರೀ ಎಸ್. ರವಿ:-** ಡಿ.ಸಿ.ಸಿ., ಬ್ಯಾಂಕ್‌ಗಳಿಗೆ ಹತ್ತು ಕೋಟಿ ರೂಪಾಯಿಗಳನ್ನು ಕೊಡಿ. ಕೇವಲ 10 ಲಕ್ಷವನ್ನು ಕೊಟ್ಟರೆ 'ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಯ ತರಹ ಆಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ರವಿಯವರೇ ದಯವಿಟ್ಟು, ಕುಳಿತುಕೊಳ್ಳಿ.

**ಶ್ರೀ ಎಸ್.ಟಿ. ಸೋಮಶೇಖರ್:-** 10 ಲಕ್ಷ ರೂಪಾಯಿಗಳು ಇರಲಿ ಅಥವಾ 2 ಲಕ್ಷ ರೂಪಾಯಿಗಳು ಇರಲಿ, ...

**ಶ್ರೀ ಎಸ್. ರವಿ:-** ಮಾನ್ಯ ಸಚಿವರೇ, 10 ಲಕ್ಷ nominal. 10 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಯಾವುದಕ್ಕೂ ಪ್ರಯೋಜನವಾಗುವುದಿಲ್ಲ. ಅದರಿಂದ ಡಿ.ಸಿ.ಸಿ., ಬ್ಯಾಂಕ್‌ಗಳು ಏನೂ ಉದ್ಧಾರವಾಗುವುದಿಲ್ಲ. ಈ ಬ್ಯಾಂಕ್‌ಗಳಿಗೆ 10 ಕೋಟಿ ರೂಪಾಯಿಗಳ ಷೇರನ್ನಾದರೂ ಕೊಡಿ. At

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

least, ಸರ್ಕಾರ ಇಷ್ಟು ಹಣವನ್ನು ಕೊಟ್ಟಿದೆ ಎಂದು ಆ ಬ್ಯಾಂಕ್‌ಗಳು ಉದ್ಧಾರವಾದರೂ ಆಗುತ್ತವೆ. ಅದನ್ನು ಬಿಟ್ಟು ಕೇವಲ 10 ಲಕ್ಷ ರೂಪಾಯಿಗಳನ್ನು ಕೊಟ್ಟು, ಕೊಟ್ಟಿದ್ದೇವೆಂದು ತಾವು ಏಕೆ ಹೇಳುತ್ತೀರಾ? ಅದರಿಂದ ಪ್ರಯೋಜನವಾದರೂ ಏನು?

**ಶ್ರೀ ಎಸ್.ಟಿ. ಸೋಮಶೇಖರ್:-** 10 ಲಕ್ಷ ರೂಪಾಯಿಗಳ ಷೇರನ್ನು ಕೊಟ್ಟು, ತಮ್ಮನ್ನು ನಾಮಿನಿ ಮಾಡುತ್ತೇವೆ. ನಾಮಿನೇಷನ್ ಮಾಡುವುದರಿಂದ ತಮಗೆ ತೊಂದರೆ ಏನಾಗಿದೆ?

**ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನವನ್ನು ಹೊಂದಿದವರು):-** ಅವರನ್ನು ಅಧ್ಯಕ್ಷರನ್ನಾಗಿ ಮಾಡುವುದು; ತಾವು ಏನು ಮಾಡುತ್ತೀರಾ ಎಂದರೆ, 10 ಲಕ್ಷ ರೂಪಾಯಿಗಳ ಷೇರು ಕೊಟ್ಟು, ನಾಮಿನಿ ಮಾಡಿದರೆ, ಅವರನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರಾ?

**ಉಪ ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ನಾನು ತಮಗೆ ಮಾತನಾಡಲು ಅವಕಾಶವನ್ನು ಕೊಟ್ಟಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಾಮಿನೇಷನ್ ಮಾಡುವಂತಹ ಉದ್ದೇಶ ಏನೆಂದರೆ, ಅಲ್ಲಿ ಸರ್ಕಾರದ ಪ್ರತಿನಿಧಿ ಇರಬೇಕೆಂಬ ಉದ್ದೇಶ ಒಂದೇ ವಿನಃ ಯಾವ ಕಾರಣಕ್ಕೂ ಕೂಡ ನಾಮಿನಿ ಇರುವವರನ್ನು ಅಧ್ಯಕ್ಷರನ್ನಾಗಿ ಮಾಡಿ ಎಂದು ನಾವು ನಿರ್ದೇಶನವನ್ನು ಕೊಡುವುದಿಲ್ಲ. ನಾವು ಯಾರೂ ಕೂಡ ಚುನಾವಣೆಯಲ್ಲಿ ಭಾಗಿ ಆಗುವುದಿಲ್ಲ. ಚುನಾವಣೆಯಲ್ಲಿ ಯಾರು ಗೆದ್ದು ಬರುತ್ತಾರೆ, ಅವರೆಲ್ಲ ಸೇರಿ ನಾಮಿನಿಯನ್ನು ಅಧ್ಯಕ್ಷರನ್ನಾಗಿ ಮಾಡಿಕೊಳ್ಳುವಂತಹ ಅವಕಾಶ ಇರುವುದರಿಂದ ಮಾಡಿಕೊಂಡಿದ್ದಾರೆ. ಅದಕ್ಕೆ ನಮ್ಮ ವಿರೋಧವಿಲ್ಲ.

**ಶ್ರೀ ಯು.ಬಿ. ವೆಂಕಟೇಶ್:-** ತಮ್ಮ direction ಇದೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, direction ಇಲ್ಲ, ಯಾವುದೂ ಇಲ್ಲ. ಈಗ 21 ಡಿ.ಸಿ.ಸಿ., ಬ್ಯಾಂಕ್‌ಗಳಲ್ಲಿ ಅಂದರೆ ಗುಲ್ಬರ್ಗಾ, ಮಂಡ್ಯ ಇವೆರಡು ಜಿಲ್ಲೆಗಳಲ್ಲಿ ನಾಮಿನಿಯಾಗಿರುವವರೇ ಅಧ್ಯಕ್ಷರಾಗಿದ್ದಾರೆ. ಆ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಯಾರು ಗೆದ್ದಿರುತ್ತಾರೆ, ಈ ನಾಮಿನಿಯನ್ನು ಅಧ್ಯಕ್ಷರನ್ನಾಗಿ ಮಾಡಿ ಎಂದು ನೇರವಾಗಿ ಆಗಲೀ, ಮೌಖಿಕವಾಗಿ ಆಗಲೀ ಅಥವಾ ಪರೋಕ್ಷವಾಗಿ ಆಗಲೀ ನಮ್ಮ ಸರ್ಕಾರ ಮತ್ತು ಇಲಾಖೆಯವರು ಮಾಡುವುದಿಲ್ಲ. ಆ ಆಡಳಿತ ಮಂಡಳಿಯಲ್ಲಿ ಯಾರು ಗೆದ್ದು ಬರುತ್ತಾರೆ, ಅವರು ಚುನಾಯಿತ ಪ್ರತಿನಿಧಿಗಳನ್ನು ಅಧ್ಯಕ್ಷರನ್ನಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದರೆ, ನಮ್ಮದೇನು objection ಇಲ್ಲ. ಮಾನ್ಯ ಸದಸ್ಯರಿಗೆ ಇನ್ನುಳಿದಂತಹ ಮಾಹಿತಿ ಏನಾದರೂ ಬೇಕಿದ್ದರೆ ಆ ಮಾಹಿತಿಯನ್ನು ಸಹ ಕೊಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಂಡ್ಯ ಡಿ.ಸಿ.ಸಿ., ಬ್ಯಾಂಕ್ ಬಗ್ಗೆ ಕೇಳಲಿಲ್ಲ. ಆದರೆ ರಾಜ್ಯದಲ್ಲಿರುವ ಕೆಲವು ಬ್ಯಾಂಕ್‌ಗಳಲ್ಲಿ ನಾಮಿನೇಷನ್ ಸದಸ್ಯರು ಅಧ್ಯಕ್ಷರಾಗಿದ್ದಾರೆ ಎಂದು ಮಾನ್ಯ ಸಚಿವರು ಹೇಳಿದರು. ಮಾನ್ಯ ಸಚಿವರಿಗೆ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಡಿ.ಸಿ.ಸಿ., ಬ್ಯಾಂಕ್‌ನಲ್ಲಿ 12 ಜನ ವಿವಿಧ ಕ್ಷೇತ್ರಗಳಿಂದ ಚುನಾಯಿತ ನಿರ್ದೇಶಕರು ಬರುತ್ತಾರೆ, 3 ಜನ ಸರ್ಕಾರದ ಮತದಾರರು ಇರುತ್ತಾರೆ. ಅದರಲ್ಲಿ ಒಬ್ಬರು ನಾಮಿನಿ, ಇನ್ನೊಬ್ಬರು ಉಪ ನಿಬಂಧಕರು, ಮತ್ತೊಬ್ಬರು ಜಂಟಿ ನಿಬಂಧಕರು ಇರುತ್ತಾರೆ. ನಾಮಿನಿಗಳು ಇರುತ್ತಾರೆ ಮತ್ತು ಅಪೆಕ್ಸ್ ಬ್ಯಾಂಕಿನ ನಾಮಿನಿ ಒಂದು ಇರುತ್ತದೆ. ಇವರೆಲ್ಲರೂ ಸೇರಿಕೊಂಡು ನಾಮಿನಿಯಾಗಿ ಬಂದವರನ್ನೇ, ಚುನಾಯಿತರಾಗಿ ಇರುವಂತಹವರು, ಸರ್ಕಾರದ ಪ್ರಭಾವವಿಲ್ಲದೇ ನಾಮಿನಿಯಾಗಿ ಬಂದವರನ್ನು ಅಧ್ಯಕ್ಷರನ್ನಾಗಿ ಮಾಡಿಬಿಡುತ್ತಾರೆ ಎಂದು ಹೇಳಿದರೆ, ಇದು ಸತ್ಯವೇ? ನನ್ನ ಕಳಕಳಿ ಏನೆಂದರೆ, ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಮತ್ತು ಸರ್ಕಾರದ ಹಸ್ತಕ್ಷೇಪ ಇರಬಾರದು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಇವತ್ತು ತಮ್ಮ ಸರ್ಕಾರವಿದೆ, ತಾವು ಮಾಡುತ್ತೀರಾ; ನಾಳೆ ನಮ್ಮ ಸರ್ಕಾರ ಬರುತ್ತದೆ, ಆಗ ನಾವು ಮಾಡುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ ಚರ್ಚೆ ಮಾಡುವುದು ಬೇಡ. ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಕೇಳಿ, ಅವರಿಂದ ಉತ್ತರವನ್ನು ತೆಗೆದುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಹಕಾರಿ ಸಚಿವರಿಗೆ ವಿನಂತಿ. ದಯವಿಟ್ಟು, ಆಯಿತು ತಾವು ಮುಂದುವರೆಸುತ್ತೀರಾ, ತಾವು ನಾಮಿನೇಷನ್ ಹಾಕಿ, ಇಲ್ಲಿ ಸರ್ಕಾರದ ಪ್ರತಿನಿಧಿಯಾಗಿ, ಅಲ್ಲಿ ಆಡಳಿತದ ಎಲ್ಲಾ ವಿಶಿಷ್ಟ ವ್ಯವಹಾರಗಳನ್ನು ನೋಡುವುದಕ್ಕೆ ಮತ್ತು ಭಾಗವಹಿಸುವುದಕ್ಕೆ ತಾವು ಪ್ರತಿನಿಧಿಯನ್ನು ನೇಮಿಸಿ. ಆದರೆ ನಾಮಿನೇಷನ್ ಇರುವ ಸದಸ್ಯರೇ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಬೇಕು ಎನ್ನುವುದನ್ನು ದಯವಿಟ್ಟು, ತೆಗೆಯಿರಿ. **(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(416)16.03.2021,1.10, TCH-MD

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಇದರ ಬಗ್ಗೆ ಚಿಂತನೆ ಇರಲಿ. ಇನ್ನೊಂದು ಪ್ರಶ್ನೆ ಏನೆಂದರೆ, ಈಗ ಸಹಕಾರಿ ಪ್ರಾಥಮಿಕ ಸಂಘಗಳಲ್ಲಿ ಮತ್ತು PCARD Bank (Primary Co-operative Agriculture and Rural Development Bank ಗಳಲ್ಲಿ ಎಸ್.ಸಿ/ಎಸ್.ಟಿ ಸದಸ್ಯತ್ವ ನೋಂದಣಿಗೆ ಕಳೆದ ವರ್ಷದಲ್ಲಿ ಸರ್ಕಾರ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ. ಆ ಹಣದಿಂದ ಈ ರಾಜ್ಯದಲ್ಲಿ ಎಷ್ಟು ಮಂದಿ ಎಸ್.ಸಿ/ಎಸ್.ಟಿಯವರು ಸದಸ್ಯರಾಗಿದ್ದಾರೆ. ಸಾಧ್ಯವಾದರೆ ದಯವಿಟ್ಟು ತಿಳಿಸಬೇಕು.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಮಾಹಿತಿಯ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಅವರಿಗೆ ಬೇಕಾದರೆ ಮಾಹಿತಿಯನ್ನು ತರಿಸಿಕೊಡುತ್ತೇನೆ. ಅವರೇನು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಸಮರ್ಪಕವಾಗಿ ಉತ್ತರ ಕೊಟ್ಟಿದ್ದೇವೆ. ಸರ್ಕಾರ ಸಹಕಾರ ಇಲಾಖೆಯಲ್ಲಿ ಯಾರನ್ನು ನಾಮಿನಿ ಸದಸ್ಯರನ್ನು ಮಾಡುತ್ತಿದೆ ಅವರನ್ನು ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಆ ಕಾನೂನಿನಲ್ಲಿ ಅವಕಾಶವಿರುವುದರಿಂದಲೇ ಅವರು ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿ ಚುನಾಯಿತರಾಗಿ ಮಾಡಿಕೊಳ್ಳುತ್ತಾರೆ. ಆದರೆ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ ಹೇಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಅದರ ಬಗ್ಗೆ ಚರ್ಚೆ ಮಾಡಿ ಏನು ಮಾಡಬೇಕೆಂದು ತೀರ್ಮಾನ ಮಾಡುತ್ತೇವೆ. ಸದ್ಯಕ್ಕೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಮಾಡಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಅವರು ಮಾಡಿಕೊಂಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 16ನೇ ಮಾರ್ಚ್ 2021ರ ಸಮೂಹ–2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 92 ಪ್ರಶ್ನೆಗಳ ಪೈಕಿ, 55 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿಯನ್ನು ಲಗತ್ತಿಸಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## 2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ

**ಅ) ವಿಷಯ:–** ಮೈಸೂರಿನ ಸಮಾರಂಭವೊಂದರಲ್ಲಿ ಹಿರಿಯ ಸಾಹಿತಿ ಶ್ರೀ ಎಸ್.ಎಲ್.ಭೈರಪ್ಪನವರು ತಿಗಳ (ವಹ್ನಿಕುಲ) ಸಮುದಾಯದ ಆರಾಧ್ಯ ದೇವತೆ ದ್ರೌಪದಿಯ ಕುರಿತು ಮಾತನಾಡಿರುವರೆನ್ನಲಾದ ಅವಹೇಳನಕಾರಿ ಮಾತುಗಳ ಬಗ್ಗೆ.

----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪಿ.ಆರ್.ರಮೇಶ್‌ರವರು ದಿನಾಂಕ 04.03.2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ಸೂಚನೆಗೆ ಸಂಬಂಧಿಸಿದಂತೆ, ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಿದೆ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ:–** ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಕಾಲುವೆಗೆ ಘನತ್ಯಾಜ್ಯಗಳನ್ನು ಬಿಸಾಡಿ ಕಾಲುವೆ ಕಲುಷಿತಗೊಳ್ಳುತ್ತಿರುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ದಿನಾಂಕ 09.03.2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಇ) **ವಿಷಯ:-** ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪಾರಂಭಿಸಿದ ನಾಗರಿಕ ಸಹಾಯವಾಣಿ ಕೇಂದ್ರವನ್ನು ಸ್ಥಗಿತಗೊಳಿಸದೇ ಜನಸಾಮಾನ್ಯರ ಹಿತದೃಷ್ಟಿಯಿಂದ ಮುಂದುವರೆಸುವ ಬಗ್ಗೆ.

----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿಯವರು ದಿನಾಂಕ 15.03.2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸರ್ಕಾರದಿಂದ ಉತ್ತರ ನೀಡದಿರುವ ಬಗ್ಗೆ.**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, Point of Order. ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಿಯಮ 58 ಡಿ ಪ್ರಕಾರ ಉತ್ತರವನ್ನು ಕೊಡಬೇಕಾಗುತ್ತದೆ. ನಿಯಮ 58 ಡಿಯಲ್ಲಿ " ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯಕ್ಕೆ ಉತ್ತರಗಳನ್ನು ಸಾಧ್ಯವಾದಷ್ಟು ಸದಸ್ಯರು ಪ್ರಸ್ತಾಪಿಸಿದ ಕೂಡಲೇ ಅಥವಾ ಎರಡು ದಿನದೊಳಗೆ ನೀಡತಕ್ಕದ್ದು" ಎಂದು ಹೇಳಲಾಗಿದೆ. ಅಂದರೆ ಉತ್ತರವನ್ನು ಈ ಸದನಕ್ಕೆ ಸಂಪೂರ್ಣವಾಗಿ ತಿಳಿಸಬೇಕು. ಸಭಾನಾಯಕರು ಉತ್ತರ ಕೊಟ್ಟಿದ್ದೇವೆಂದು ಕುಳಿತುಕೊಂಡುಬಿಟ್ಟರು. ದಯವಿಟ್ಟು ಉತ್ತರವನ್ನು ತಿಳಿಸಬೇಕೆಂದು ನಮ್ಮ provision ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಮ್ಮ ಹತ್ತಿರ ಅನುಮತಿಯನ್ನು ಪಡೆದುಕೊಂಡು, ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸಿದ್ದೇನೆ. ಪರಂಪರೆಯಿಂದ ನಾವು ಹಾಗೆಯೇ ನಡೆದುಕೊಂಡು ಬಂದಿದ್ದೇವೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಪರಂಪರೆಯಿಂದ ಹಾಗೆಯೇ ನಡೆದುಕೊಂಡು ಬಂದಿರುವುದಲ್ಲ, ಆದರೆ ನಿಯಮದಲ್ಲಿ ಏನಿದೆ?

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಪರಂಪರೆಯನ್ನು ನಾವು ಮಾಡಿಕೊಂಡಿರುವುದು ಅಷ್ಟೆ. Rule ನಲ್ಲಿ ಏನಿದೆ, ನೀವು ಹಿಂದಿನ record ನ್ನು ನೋಡಿ. ನನಗೂ ಸಹ ನೆನಪಿದೆ. ಮತ್ತೆ rule ನಲ್ಲೂ ಕೂಡ ಅವಕಾಶವಿದೆ.

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಅದನ್ನು ಶೀಘ್ರವಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡಿ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಿಯಮ 58 ಸಿ ಯಲ್ಲಿ "ಶೂನ್ಯವೇಳೆಯ ಸೂಚನಾ ಪತ್ರದ ಮೇಲಿನ ಭಾಷಣವು ಸಭಾಪತಿಯವರ ಅನುಮತಿಯನ್ನು ಹೊರತುಪಡಿಸಿ, ಮೂರು ನಿಮಿಷಗಳಿಗೆ ಮೀರತಕ್ಕದ್ದಲ್ಲ"

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಲಾಗಿದೆ. ಹಾಗೂ ನಿಯಮ 58 ಡಿ ಯಲ್ಲಿ "ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯಕ್ಕೆ ಉತ್ತರಗಳನ್ನು ಸಾಧ್ಯವಾದಷ್ಟು ಸದಸ್ಯರು ಪ್ರಸ್ತಾಪಿಸಿದ ಕೂಡಲೇ ಕೊಡಬೇಕಾಗುತ್ತದೆ. ಅಂದರೆ, ಒಂದು ಗಂಟೆ ಮುಂಚೆಯೇ ಕೊಟ್ಟಾಗ, ಅದಕ್ಕೆ ಉತ್ತರವನ್ನು ತಯಾರು ಮಾಡಿಕೊಂಡು ಬರಬೇಕು. ಒಂದು ವೇಳೆ ಉತ್ತರವನ್ನು ತಯಾರು ಮಾಡಿಕೊಂಡು ಬರುವುದಕ್ಕೆ ಆಗದಿದ್ದರೆ, ಎರಡು ದಿನಗಳೊಳಗೆ ಕೊಡಬೆಂದು ಇದೆ. ನೀವು ಉತ್ತರವನ್ನು ಎರಡು ದಿನಗಳೊಳಗೆ ಕೊಡುವುದಲ್ಲ, ಆಯಾ ಇಲಾಖೆ ಸಚಿವರು ಬಂದು ಉತ್ತರವನ್ನು ಕೊಡಬೇಕು.

**ಉಪ ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರೇನು 'Point of Order' ಕೇಳಿದ್ದಾರೆ, ಅದಕ್ಕೆ ಆ ನಿಯಮವನ್ನು ಪಾಲನೆ ಮಾಡುವಂಥ ವ್ಯವಸ್ಥೆ ಮಾಡಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ಸಭಾಪತಿಯವರಾಗಿದ್ದಾಗಲೂ ಸಹ ಈ ಸಂಪ್ರದಾಯವಿತ್ತು. ಒಂದು ವೇಳೆ ಇದನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತಿದ್ದಾರೆ, ಅದನ್ನು ಮುಂದಿನ ದಿವಸಗಳಲ್ಲಿ ಬದಲಾವಣೆ ಮಾಡುತ್ತೇವೆ.

**ಉಪ ಸಭಾಪತಿಯವರು:–** ಸಭಾನಾಯಕರೇ, ನಿಯಮಗಳನ್ನು ಪಾಲನೆ ಮಾಡುವಂಥ ಕೆಲಸವನ್ನು ಮಾಡಿ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರೇ, ಇದರಲ್ಲಿ ನಮ್ಮದು ಮತ್ತು ನಿಮ್ಮದೇನು ಪ್ರತಿಷ್ಠೆ ಏನಿಲ್ಲ. ನಾವು ಇರುವುದನ್ನು cut ಮಾಡಿಕೊಂಡು ಬರುವುದು ಬೇಡ. ಈ ಮುಂಚೆ ಯಾವ ರೀತಿ ಇತ್ತು ಆ ರೀತಿ ಇರಲಿ.

**ಉಪ ಸಭಾಪತಿಯವರು:–** ಸಭಾನಾಯಕರೇ, ಮಾನ್ಯ ಸದಸ್ಯರಾದ ಕೆ.ಪ್ರತಾಪಚಂದ್ರಶೆಟ್ಟಿಯವರ ಸಲಹೆಯನ್ನು ಸ್ವೀಕರಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರ ಸಲಹೆಯನ್ನು ಸ್ವೀಕರಿಸಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನನ್ನ ಶೂನ್ಯವೇಳೆ ಸೂಚನೆಗೆ ನನಗೊಬ್ಬನಿಗೆ ಮಾತ್ರ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇದು ಇಡೀ ಸದನದ ಆಸ್ತಿಯಾಗಿದೆ. ಈ ಸದನದ ಆಸ್ತಿಯನ್ನು ಈ ಸದನದಲ್ಲಿರತಕ್ಕಂಥ ಎಲ್ಲಾ ಸದಸ್ಯರಿಗೂ ಒಂದೇ ರೀತಿ ಕೊಡತಕ್ಕಂಥದ್ದು ಆಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆಯಿತು. ಎಲ್ಲಾ ಮಾನ್ಯ ಸದಸ್ಯರುಗಳಿಗೆ ಜೆರಾಕ್ಸ್ ಮಾಡಿಸಿ ಸರಬರಾಜು ಮಾಡುತ್ತೇವೆ.

**ಉಪ ಸಭಾಪತಿಯವರು:-** ಆಯಿತು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅವರು immediate ಆಗಿ ಮಾಡಬೇಕು. ಇದರ ಬಗ್ಗೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೀರಾ? ನಾನು ಈ ಸಂಬಂಧ ಒಂದು ಪತ್ರವನ್ನು ಕೊಡುತ್ತೇನೆ.

**ಉಪ ಸಭಾಪತಿಯವರು:-** ಆಯಿತು. ಕೊಡಿ, ನೋಡೋಣ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಎಲ್ಲವನ್ನೂ ಲಿಖಿತವಾಗಿ ಕೊಡುವ.. .

**ಉಪ ಸಭಾಪತಿಯವರು:-** ಮಾನ್ಯ ಕೆ.ಪ್ರತಾಪಚಂದ್ರಶೆಟ್ಟಿಯವರೇ, ಮಾನ್ಯ ಪಿ.ಆರ್.ರಮೇಶ್‌ರವರು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೇಳಿದ್ದರು. ಏಕೆಂದರೆ, ಶೂನ್ಯವೇಳೆಯ ಸೂಚನೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದು ನಿಮಗೂ ಕೂಡ ಗೊತ್ತಿದೆ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಹೌದು. ನಾನು ಹೇಳಿರುವುದು, ಸಚಿವರು ಸದನದಲ್ಲಿದ್ದಾಗ ಮಾನ್ಯ ಸದಸ್ಯರ ಸೂಚನೆಗೆ ಉತ್ತರವನ್ನು ಆಯಾ ಇಲಾಖೆಗೆ ಸಂಬಂಧಪಟ್ಟಂತಹ ಸಚಿವರೇ ಉತ್ತರವನ್ನು ಕೊಡಬೇಕು. ಒಂದುವೇಳೆ ಅವರು ಸದನದಲ್ಲಿ ಇಲ್ಲದಿದ್ದರೆ, ಸಭಾನಾಯಕರು ಅವರ ಪರವಾಗಿ ಉತ್ತರ ಕೊಡಬೇಕು. ಇಲ್ಲಿ ಅವರು ರೆಕಾರ್ಡ್‌ಗೆ ಹೋಗಲಿ ಎನ್ನತಕ್ಕಂಥ ಉದ್ದೇಶದಲ್ಲಿ ಪ್ರಶ್ನೆ ಹಾಕುವುದಲ್ಲ. ನಮಗೆ ಮಾನ್ಯ ಸಚಿವರಿಂದ ಏನು ಉತ್ತರ ಬರುತ್ತದೆಂದು ಗೊತ್ತಿರಬೇಕು. ಇದು ಮುಂಚಿನಿಂದಲೂ ನಡೆದುಕೊಂಡು ಬಂದಿದೆ. ನಾವು ಸ್ವಲ್ಪ ಹಿಂದೆ ಹೋದರೆ ಆಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನಿಮ್ಮ ಸ್ನೇಹಿತರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ಕೇಳುತ್ತಿದ್ದಾರೆ ಹೇಳಿ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರೇ, ನೀವು ಸ್ವಲ್ಪ ಹಿಂದಿನದ್ದು ನೋಡಬೇಕು. ನಾನೇನು ಹೊಸ ಕಾಯ್ದೆಯನ್ನು ಹೇಳುತ್ತಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನಿಮ್ಮ ಸ್ನೇಹಿತರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ಕೇಳುತ್ತಿದ್ದಾರೆ ಏನಾದರು ಹೇಳಿ. ಅದಕ್ಕೆ ಪರಿಹಾರ ಕಂಡುಹಿಡಿಯಿರಿ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರೇ, ನೀವು ಓದಿ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಭಾಪತಿಯವರಾಗಿದ್ದಂತಹ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ಏನು ಹೇಳುತ್ತಿದ್ದಾರೆ, ಅದರಂತೆ ನಾವು ನಡೆದುಕೊಳ್ಳಲಾಗುವುದೆಂದು ಹೇಳುತ್ತಿದ್ದೇವೆ. ಪುನಃ ನಾವು ಇನ್ನೇನು ಹೇಳುವುದು. ಅವರು ಹೇಳಿದ್ದಕ್ಕೆ ಸರಿ ಎಂದು ಹೇಳಿದ್ದೇನೆ.

**ಉಪ ಸಭಾಪತಿಯವರು:–** ಶ್ರೀ ಕೆ.ಪ್ರತಾಪಚಂದ್ರಶೆಟ್ಟಿಯವರೇ, ನೀವು ಹೇಳಿದಂತೆ ಮಾಡಲಾಗುವುದೆಂದು ಮಾನ್ಯ ಸಭಾನಾಯಕರು ಹೇಳಿದರಲ್ಲ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ನಾವು ಆದಷ್ಟು ಮೊದಲು ಯಾವ ರೀತಿ ಇತ್ತು, ಅದನ್ನು ಮಾಡಿಕೊಂಡು ಬರೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇನ್ನು ಮುಂದೆ ಆ ರೀತಿ ಮಾಡೋಣ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಇನ್ನು ಮುಂದೆ ಎಂದು ಹೇಳುವುದಲ್ಲ. ಈಗಿನಿಂದಲೇ ಪ್ರಾರಂಭ ಆಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ನಾಳೆಯಿಂದ ಪ್ರಾರಂಭ ಮಾಡುವುದಕ್ಕೆ ಏನು ತೊಂದರೆ ಇದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ನೋಡಿ, ಆಯಾ ಇಲಾಖಾ ಸಚಿವರು ಒಂದು ಪೇಜ್ ಉತ್ತರವನ್ನು ಓದುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದೇ ದಿವಸ ಅಲ್ಲ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅದೇ ದಿವಸ ಅಲ್ಲ. ಯಾವ ದಿವಸವಾದರೂ ಕೂಡ ಸಂಬಂಧಪಟ್ಟ ಸಚಿವರು ಈ ಸದನಕ್ಕೆ ಬಂದು ಉತ್ತರ ಕೊಡಬೇಕಾಗುತ್ತದೆ. ಇದು ಒಂದು gravity. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದನ್ನು ಕೊಟ್ಟುಕೊಂಡು ಹೋಗುವುದು, ಇದೆಲ್ಲ ಸರಿಯಾಗುವುದಿಲ್ಲ. ಈ ಹಿಂದೆ ಯಾವ ರೀತಿ ನಡೆದಿದೆ ನೋಡಿ. ನಾನೇ ನೋಡಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಪ್ರತಾಪಚಂದ್ರಶೆಟ್ಟಿಯವರು ಹಿರಿಯ ಸದಸ್ಯರಿದ್ದಾರೆ. ಅವರು ಸಲಹೆ ಕೊಟ್ಟಿದ್ದಾರೆ. ಅದೇ ರೀತಿ ಮಾಡೋಣ.

**ಉಪ ಸಭಾಪತಿಯವರು:-** ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ಸೂಚನೆಗೆ ಸಭಾನಾಯಕರು ಉತ್ತರವನ್ನು ಕೊಡುತ್ತಾರೆ. ಮಾನ್ಯ ಸಚಿವರು ಬರಬೇಕೆಂದು ಇಲ್ಲ. ಇದು ತಮಗೂ ಕೂಡ ಗೊತ್ತಿದೆ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಏನು ಹೇಳುತ್ತಿದ್ದೇನೆ ಅದಕ್ಕೆ ಬದ್ಧನಿದ್ದೇನೆ. ನೀವು ಹಿಂದಿನ ದಾಖಲೆಗಳನ್ನು ನೋಡಿ. ನಾನು ಕೂಡ ಇದನ್ನೆಲ್ಲಾ ಓದಿಕೊಂಡು, ಉತ್ತರ ತೆಗೆದುಕೊಂಡು ಬಂದಿದ್ದೇನೆ. ನಾನೇನು ಸುಳ್ಳು ಹೇಳುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರಿಗೆ ಸುಳ್ಳು ಹೇಳುವುದಕ್ಕೆ ಬರುವುದಿಲ್ಲ. ಮತ್ತೆ ಏಕೆ ನಾವು ಸುಮ್ಮನೆ ವಾದ ಮಾಡುವುದು. ಅವರಿಗೆ ಸುಳ್ಳು ಹೇಳುವುದಕ್ಕೆ ಬರುವುದಿಲ್ಲ ಎನ್ನುವುದಕ್ಕೆ ನಾನೇ ಸಾಕ್ಷಿ. ಮಾನ್ಯ ಸಭಾಪತಿಯವರೇ, ಆಯಿತು ಮಾಡೋಣ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ನಾವು ಇದಕ್ಕೆ ಹೇಳುವುದು ಅವರು ಮಂಗಳೂರು ಜಾಣರು ಎಂದು.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

**ಅ)ವಿಷಯ:- ಕಾಸರಗೋಡಿನಲ್ಲಿ ಕನ್ನಡ ಉಳಿವಿಗಾಗಿ ಅನುದಾನ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲು ಕೋರಿ.**

---

ಶ್ರೀ **ಕೆ.ಹರೀಶ್‌ಕುಮಾರ್** (ವಿಧಾನಸಭೆಯಿಂದ ಚುನಾಯಿತರಾದವರು):- ಮಾನ್ಯ ಸಭಾಪತಿಯವರೇ, ಕರ್ನಾಟಕದ ಗಡಿ ಭಾಗದ ಜಿಲ್ಲೆಯಾಗಿರುವ ಕಾಸರಗೋಡು, ಕೇರಳ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿದ್ದು, ಇಲ್ಲಿನ ಮಾತೃ ಭಾಷೆ ಕನ್ನಡವಾಗಿದ್ದು, ಈ ಜಿಲ್ಲೆಯನ್ನು ಕರ್ನಾಟಕಕ್ಕೆ ಸೇರಿಸಲು ಅನೇಕ ಹೋರಾಟಗಳು ನಡೆಯುತ್ತಿವೆ. ಇದರಲ್ಲಿ ಕರ್ನಾಟಕದ ದಿನ ಪತ್ರಿಕೆಗಳ ಪತ್ರಕರ್ತರ ಪಾತ್ರವು ಅತಿ ಮುಖ್ಯವಾದುದ್ದು. ಕಾಸರಗೋಡಿನಲ್ಲಿ ಕನ್ನಡದ ಉಳಿವಿಗಾಗಿ ಹೋರಾಡುತ್ತಿರುವ ಪತ್ರಕರ್ತರಿಗೆ ಕರ್ನಾಟಕ ಸರ್ಕಾರವು ಪ್ರೋತ್ಸಾಹಧನ, ಪಿಂಚಣಿ, ಕಾಸರಗೋಡಿನಲ್ಲಿ ಕನ್ನಡ ಪತ್ರಿಕಾ ಕಚೇರಿ ನಿರ್ಮಾಣ, ಕರ್ನಾಟಕ ಸಾರಿಗೆ ಬಸ್ಸುಗಳಲ್ಲಿ ಪ್ರಥಮ ಆಧ್ಯತೆಯ ಮೇರೆಗೆ ಉಚಿತ ಬಸ್‌ಪಾಸ್, ಕನ್ನಡ ಪತ್ರಿಕಾ ಭವನ ನಿರ್ಮಾಣ, ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳಿಗೆ ಅನುದಾನ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವತ್ತ ಚಿತ್ತಹರಿಸಿ ಕನ್ನಡದ ಉಳಿವಿಗೆ ಸರ್ಕಾರದ ಸಹಾಯಹಸ್ತ ಚಾಚಬೇಕೆಂದು ಒಟ್ಟಾರೆಯಾಗಿ ಕಾಸರಗೋಡಿನಲ್ಲಿ ಕನ್ನಡಿಗರ ಉಳಿವಿಗೆ ಹೋರಾಡುತ್ತಿರುವ ಕರ್ನಾಟಕದ ದಿನ ಪತ್ರಿಕೆಗಳ ಪತ್ರಕರ್ತರ ನೆರವಿಗೆ ಸರ್ಕಾರ ಧಾವಿಸಬೇಕೆಂಬ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಶ್ರೀ **ಕೋಟ ಶ್ರೀನಿವಾಸ ಪೂಜಾರಿ** (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಹರೀಶ್‌ಕುಮಾರ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ಸೂಚನೆಗೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ)ವಿಷಯ:- ಮೈಸೂರು ನಗರದಲ್ಲಿ ಚಲನಚಿತ್ರಗಳ ಚಿತ್ರೀಕರಣಕ್ಕೆ ಸುಸಜ್ಜಿತ ಫಿಲಂಸಿಟಿ ಸ್ಥಾಪನೆ ಕುರಿತು.**

---

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಚಲನಚಿತ್ರೋದ್ಯಮವು ಬಹಳ ಪ್ರಮುಖವಾದ ಉದ್ಯಮವಾಗಿದ್ದು, ಸರ್ಕಾರಕ್ಕೆ ಕೋಟಿಗಟ್ಟಲೆ ಆದಾಯವನ್ನು ತಂದುಕೊಡುತ್ತದೆ. ಆದರೆ, ಈಚೆಗೆ ಚಲನಚಿತ್ರೋದ್ಯಮದ ಚಟುವಟಿಕೆಗಳು ಕುಂಠಿತಗೊಂಡಿವೆ. ಈ ಉದ್ಯಮದ ಪುನಶ್ಚೇತನಕ್ಕೆ ಸರ್ಕಾರವು ಎಲ್ಲಾ ರೀತಿಯಿಂದಲೂ ಪ್ರೋತ್ಸಾಹ ನೀಡಬೇಕು.

ನಮ್ಮ ರಾಜ್ಯದಲ್ಲಿ ಒಂದು ಚಲನಚಿತ್ರಗಳ ಚಿತ್ರೀಕರಣಕ್ಕೆ ಸುಸಜ್ಜಿತ ಚಿತ್ರನಗರಿ ಅಂದರೆ ಫಿಲ್ಮ್ ಸಿಟಿ ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಕಳೆದ ಹತ್ತು ವರ್ಷಗಳಿಂದ ಈ ವಿಷಯ ನೆನೆಗುದಿಗೆ ಬಿದ್ದಿದೆ. ಈ ಫಿಲ್ಮ್ ಸಿಟಿಯನ್ನು ಮೊದಲಿಗೆ ಬೆಂಗಳೂರಿನ ಹೆಸರಘಟ್ಟದಲ್ಲಿ ಸ್ಥಾಪಿಸಬೇಕೆಂಬ ವಿಚಾರ ಸರ್ಕಾರದ ಆಲೋಚನೆ ಸರ್ಕಾರದ ಮುಂದೆ ಬಂದಿತು. ಆನಂತರ ಮಾನ್ಯ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರ ಕಾಲದಲ್ಲಿ ಫಿಲ್ಮ್ ಸಿಟಿಯನ್ನು ಮೈಸೂರಿನಲ್ಲಿ ಸ್ಥಾಪಿಸುವ ಬಗ್ಗೆ ನಿರ್ಧಾರ ತೆಗೆದುಕೊಂಡು, ನಂಜನಗೂಡು ತಾಲ್ಲೂಕಿನ ಹಿಮ್ಮಾವು ಬಳಿ ಅದಕ್ಕಾಗಿ 115 ಎಕರೆ ಭೂಮಿಯನ್ನೂ ಸ್ವಾಧೀನಪಡಿಸಿಕೊಂಡು ಮೀಸಲಿಡಲಾಯಿತು. ಆನಂತರ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯವರಾಗಿದ್ದಾಗ, ಚಿತ್ರನಗರಿಯನ್ನು ರಾಮನಗರದಲ್ಲಿ ಮಾಡುವುದಾಗಿ ಘೋಷಿಸಿದರು. ಆದರೆ, ಅಲ್ಲೂ ಚಿತ್ರನಗರಿ ಸ್ಥಾಪನೆಯಾಗಲಿಲ್ಲ. ಈಗಿನ ಸನ್ಮಾನ್ಯ ಮುಖ್ಯಮಂತ್ರಿಯವರು ಚಿತ್ರನಗರಿಯನ್ನು ಬೆಂಗಳೂರಿನಲ್ಲಿಯೇ ಸ್ಥಾಪಿಸುವುದಾಗಿ ಘೋಷಿಸಿದ್ದಾರೆ. ಆದರೆ, ಇಲ್ಲೂ ಕೂಡ ಚಿತ್ರನಗರಿಯ ಸ್ಥಾಪನೆಯ ವಿಷಯ ಪ್ರಗತಿಯನ್ನು ಕಾಣುತ್ತಿಲ್ಲ.

ಮೈಸೂರು ನಮ್ಮ ರಾಜ್ಯದ ಸಾಂಸ್ಕೃತಿಕ ರಾಜಧಾನಿಯಾಗಿರುತ್ತದೆ. ಮೈಸೂರು ಜಿಲ್ಲೆ ಹಾಗೂ ಸುತ್ತಮುತ್ತಲ ಜಿಲ್ಲೆಗಳಾದ, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು, ಮೊದಲಾದ ಕಡೆಗಳಲ್ಲಿ ಸುಮಾರು 200 ಕ್ಕೂ ಹೆಚ್ಚು ಪ್ರವಾಸಿತಾಣಗಳು, ಪ್ರಕೃತಿ ರಮ್ಯ ತಾಣಗಳೂ ಇವೆ. ಮೈಸೂರಿನಲ್ಲಿ ಫಿಲ್ಮ್ ಸಿಟಿಗಾಗಿ ಸ್ವಾಧೀನಪಡಿಸಿಕೊಂಡಿದ್ದ ಜಾಗವೂ ಇದೆ. ಮೈಸೂರು ಸದ್ದು-ಗದ್ದಲವಿಲ್ಲದ ಪ್ರಶಾಂತ, ರಮ್ಯ ನಗರವಾಗಿದ್ದು, ಚಿತ್ರನಗರಿ ಸ್ಥಾಪನೆಗೆ ಅತ್ಯಂತ ಸೂಕ್ತವಾದ ಸ್ಥಳವಾಗಿದೆ. ಮೈಸೂರಿನಲ್ಲಿ ಚಿತ್ರನಗರಿ ಸ್ಥಾಪನೆಯಾದರೆ, ಮೈಸೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳ ಸಹಸ್ರಾರು ಜನರಿಗೆ ಉದ್ಯೋಗಾವಕಾಶ, ಜೀವನೋಪಾಯ ದೊರೆಯುತ್ತದೆ. ಬೆಂಗಳೂರು ಈಗಾಗಲೇ ಕಿಕ್ಕಿರಿದು ತುಂಬಿದ್ದು, ಸಾಫ್ಟ್‌ವೇರ್ ಸಿಟಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಲಿಕಾನ್‌ಸಿಟಿ, ಇತ್ಯಾದಿ ಹೆಸರನ್ನು ತೆಗೆದುಕೊಂಡು, ಮೇರೆ ಮೀರಿ ಬೆಳೆದಿದೆ. ಆದಕಾರಣ, ಚಿತ್ರನಗರಿಯನ್ನು ಮೈಸೂರಿನಲ್ಲಿಯೇ ಸ್ಥಾಪಿಸಿದರೆ ಬೆಂಗಳೂರಿನ ಮೇಲಿನ ಒತ್ತಡ ಕಡಿಮೆಯಾಗಿ ಮೈಸೂರಿನ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಯವರು ಗಮನಹರಿಸಿ ಕೂಡಲೇ ಸೂಕ್ತ ಕ್ರಮ ತೆಗೆದುಕೊಂಡು, ಈಗಿನ ಆಯವ್ಯಯದ ಮೇಲಿನ ಚರ್ಚೆಗೆ ನೀಡುವ ಉತ್ತರದಲ್ಲಿಯೇ ಇದರ ಬಗ್ಗೆ ಘೋಷಣೆ ಮಾಡಬೇಕೆಂದು ಶೂನ್ಯವೇಳೆಯಲ್ಲಿ ಸನ್ಮಾನ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಚಿವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

**(ಮುಂದು)**

**(417)16.3.2021/1.20/ಎಂ.ಎಂ-ಎಂ.ಡಿ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಂದೇಶ ನಾಗರಾಜುರವರು ಶೂನ್ಯವೇಳೆಯಲ್ಲಿ ಕೇಳಿರುವ ಪ್ರಶ್ನೆಗೆ ಸಣ್ಣ ಕೈಗಾರಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಇ) ವಿಷಯ:- ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಳ ಮಾಡುವ ಕುರಿತು**

\- - - - -

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾಡಿನ ದಿನಪತ್ರಿಕೆಗಳಲ್ಲಿ ಪ್ರಕಟವಾದ ಮತ್ತೆ ಅಂಗನವಾಡಿ ಸಿಬ್ಬಂದಿ ಹೋರಾಟ ಎಂಬ ಶೀರ್ಷಿಕೆಯ ವಿಷಯವನ್ನು ಪ್ರಸ್ತಾಪಿಸುತ್ತಾ ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ತಮ್ಮ ವಿವಿಧ ಬೇಡಿಕೆಗಳಾದಂತಹ ಸೇವಾ ಹಿರಿತನದ ಆಧಾರದ ಮೇಲೆ ಗೌರವಧನವನ್ನು ಹೆಚ್ಚಳ ಮಾಡಬೇಕು, ಅಂಗನವಾಡಿ ಕಾರ್ಯಕರ್ತೆಯರನ್ನು ಇ.ಎಸ್.ಐ. ಯೋಜನೆಯಡಿ ತಂದು ವೈದ್ಯಕೀಯ ಸೇವೆಯನ್ನು ನೀಡಬೇಕು, 2015 ರಿಂದ ಇಲ್ಲಿಯವರೆಗೆ ನಿವೃತ್ತಿ ಹೊಂದಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ತಲಾ 1.50 ಲಕ್ಷ ರೂಗಳ ಇಡಗಂಟು ನೀಡಬೇಕು ಜೊತೆಗೆ ಮಾಸಿಕವಾಗಿ ರೂ.5,000/-ಗಳ ಪಿಂಚಣಿ ನೀಡಬೇಕು ಜೊತೆಗೆ ಅಂಗನವಾಡಿ ಕೇಂದ್ರಗಳಲ್ಲಿ ಎಲ್.ಕೆ.ಜಿ. ಯು.ಕೆ.ಜಿ. ತರಗತಿಗಳನ್ನು ಪ್ರಾರಂಭಿಸಬೇಕು, ಮಿನಿ ಅಂಗನವಾಡಿ ಕೇಂದ್ರಗಳಿಗೆ ಸಹಾಯಕಿಯರನ್ನು ನೇಮಕ ಮಾಡಬೇಕು ಮತ್ತು ಪ್ರಸ್ತುತ ರೂ. 6000/- ಗಳಿರುವ ಗೌರವಧನವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕನಿಷ್ಟ ರೂ. 10,000/- ಗಳಿಗೆ ಹೆಚ್ಚಳ ಮಾಡಬೇಕು ಹಾಗೂ ಕರೋನದಿಂದ ಮೃತಪಟ್ಟಿರುವ ಕಾರ್ಯಕರ್ತೆಯರಿಗೆ ಸರ್ಕಾರದಿಂದ ರೂ. 30,00,000/- ಗಳ (ಮೂವತ್ತು ಲಕ್ಷ ರೂಪಾಯಿಗಳು) ಪರಿಹಾರವನ್ನು ಅವರ ಕುಟುಂಬಸ್ಥರಿಗೆ ನೀಡಬೇಕೆಂದು ಒತ್ತಾಯಿಸಿ ನಗರದ ಆನಂದರಾವ್ ವೃತ್ತದಲ್ಲಿ ಸಾವಿರಾರು ಜನರು ಭಾಗವಹಿಸಿ ಪ್ರತಿಭಟನೆಯನ್ನು ನಡೆಸಿದ್ದಾರೆ.

ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯರಿಗೆ ಅವರ ಬೇಡಿಕೆಗಳನ್ನು ಈಡೇರಿಸುವುದಾಗಿ ಅನೇಕ ಬಾರಿ ಆಶ್ವಾಸನೆ ನೀಡಲಾಗಿದ್ದು, ಇದುವರೆಗೂ ಅವರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಿರುವುದಿಲ್ಲ. ಈ ಬಗ್ಗೆ ಪ್ರಸ್ತುತ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪವು ಸಹ ಆಗಿರುವುದಿಲ್ಲ. ಆದ್ದರಿಂದ ಸರ್ಕಾರ ಈ ಬಗ್ಗೆ ಗಂಭೀರವಾಗಿ ಗಮನಹರಿಸಿ ಅಂಗನವಾಡಿ ಕಾರ್ಯಕರ್ತೆಯರ ನ್ಯಾಯಯುತ ಬೇಡಿಕೆಗಳನ್ನು ಶೀಘ್ರವಾಗಿ ಈಡೇರಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡರು ಕೇಳಿದ ಅಂಗನವಾಡಿ ಕಾರ್ಯಕರ್ತೆಯರ ಸಮಸ್ಯೆಗಳನ್ನು ಕುರಿತು ಶೂನ್ಯವೇಳೆಯಲ್ಲಿ ಕೇಳಿದ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುತ್ತೇನೆ.

**ಈ) ವಿಷಯ:- ಕಲ್ಯಾಣ ಕರ್ನಾಟಕ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸೌಲಭ್ಯ ದೊರಕದೇ ಇರುವ ಬಗ್ಗೆ.**

- - - - -

**ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೋಟಿ ರೂಪಾಯಿಗಳನ್ನು ಸುರಿದರೂ ಗ್ರಾಮಗಳಿಗೆ ಬಾರದ ನೀರು. ಗ್ರಾಮೀಣ ಪ್ರದೇಶದ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಪೂರೈಸಲು ರೂಪಿಸಿರುವ "ಬಹು ಗ್ರಾಮ ಕುಡಿಯುವ ನೀರು" ಯೋಜನೆಗಳಲ್ಲಿ ಕಳಪೆ ಕಾಮಗಾರಿ ಹಾಗೂ ಸಮನ್ವಯ ಮತ್ತು ನಿರ್ವಹಣೆ ಕೊರತೆಯ ಕಾರಣದಿಂದ ಯಶಸ್ಸನ್ನು ಕಂಡಿರುವುದಿಲ್ಲ. ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದ ಕೆಲವು ತಾಲ್ಲೂಕುಗಳಲ್ಲಿ, ಅದರಲ್ಲೂ ಬೀದರ್ ಜಿಲ್ಲೆ, ಔರಾದ್ ತಾಲ್ಲೂಕು, ಆಲಹಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ ಪೂರ್ಣಗೊಂಡಿದ್ದರೂ ಗ್ರಾಮಗಳಿಗೆ ಕುಡಿಯುವ ನೀರಿನ ಭಾಗ್ಯ ದೊರೆತಿಲ್ಲ. ಅದೇ ರೀತಿ ಬಸವ ಕಲ್ಯಾಣ ತಾಲ್ಲೂಕಿನ ಜನತೆ ಈ ಯೋಜನೆಯಿಂದಲೇ ವಂಚಿತರಾಗಿದ್ದಾರೆ. ಕಲಬುರಗಿ ಜಿಲ್ಲೆ, ಅಫಜಲ್‌ಪುರ ತಾಲ್ಲೂಕಿನ ಅಳ್ಳಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಇತರೇ 6 ಗ್ರಾಮಗಳಿಗೆ ನೀರು ಪೂರೈಸಲು ಕಾಮಗಾರಿ ಪೂರ್ಣವಾಗಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸದೇ ಯೋಜನೆ ಪೂರ್ಣಗೊಂಡಿರುವುದಿಲ್ಲ.

ಕಲ್ಯಾಣ-ಕರ್ನಾಟಕ ಭಾಗದ ತಾಲ್ಲೂಕುಗಳಲ್ಲಿ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಿ, ಕೋಟ್ಯಾಂತರ ರೂ.ಗಳು ವೆಚ್ಚವಾಗಿದ್ದರೂ ಆ ಭಾಗದ ಜನರಿಗೆ ಇನ್ನೂ ಕುಡಿಯುವ ನೀರಿನ ಸೌಲಭ್ಯ ದೊರೆತಿಲ್ಲ. ಆದ್ದರಿಂದ ಕೂಡಲೇ "ಬಹು ಗ್ರಾಮ ಕುಡಿಯುವ ನೀರು" ಯೋಜನೆ ಅಡಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಜನರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಬಗ್ಗೆ ಪ್ರಸ್ತಾಪಿಸಲು ಶೂನ್ಯ ವೇಳೆಯಲ್ಲಿ ಅವಕಾಶ ನೀಡಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವಿಜಯಸಿಂಗ್‌ರವರು ಕುಡಿಯುವ ನೀರಿನ ಬಗ್ಗೆ ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಉ) ವಿಷಯ:- ಬಾಲ್ಯ ವಿವಾಹ ತಡೆಗಟ್ಟುವ ಬಗ್ಗೆ.**

-ಧ-

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬಾಲ್ಯವಿವಾಹಕ್ಕೆ ರಾಜ್ಯದಲ್ಲಿ ನಿಷೇಧವಿದ್ದು, ಇದನ್ನು ತಡೆಯುವ ಸಲುವಾಗಿ ಪ್ರತ್ಯೇಕ ಇಲಾಖೆಯೂ ಇದೆ. ಇದರ ಜೊತೆಗೆ ಚೈಲ್ಡ್‌ಲೈನ್ ಎಂಬ ಹೆಲ್ಪ್ ಲೈನ್ ಇದ್ದರೂ ಕಳೆದ ಆರು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕದಲ್ಲೇ ಬಾಲ್ಯ ವಿವಾಹಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿರುವುದು ಅಚ್ಚರಿ ತಂದಿರುತ್ತದೆ.

ರಾಜ್ಯದಲ್ಲಿ ಬಾಲ್ಯ ವಿವಾಹದ ಸರಾಸರಿ ಪ್ರಮಾಣ ಶೇ.21ರಷ್ಟಿದ್ದರೆ, ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಶೇ.30ರಷ್ಟಿರುವುದು ಇತ್ತೀಚಿನ ಕೇಂದ್ರ ಸರ್ಕಾರದ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆಯಲ್ಲಿ ಬಹಿರಂಗವಾಗಿದೆ. ಇನ್ನೂ ಈ ಕಡೆ ಕೋಲಾರ, ಚಿತ್ರದುರ್ಗ, ತುಮಕೂರು, ಶಿವಮೊಗ್ಗ, ಚಿಕ್ಕಬಳ್ಳಾಪುರ, ಕೊಡಗು, ಹಾಸನ ಸೇರಿ 12 ಜಿಲ್ಲೆಗಳಲ್ಲೂ ಸಹ ಬಾಲ್ಯ ವಿವಾಹದ ಪ್ರಕರಣಗಳು ಹೆಚ್ಚಾಗಿವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಣ್ಣುಮಗಳು ಮನೆಗೆ ಹೊರೆ ಎಂಬ ಮನೋಭಾವ ಈ ಭಾಗದಲ್ಲಿ ಹೆಚ್ಚಿದ್ದು, ಬೇಗ ಮದುವೆ ಮಾಡಿಕೊಟ್ಟರೆ ಜವಾಬ್ದಾರಿ ಮುಗಿಯುತ್ತದೆ ಎಂಬ ಭಾವನೆಯಿದ್ದು, ಮುಖ್ಯವಾಗಿ ಖರ್ಚು ತಗ್ಗಿಸುವ ಸಲುವಾಗಿ ಕುಟುಂಬದ ಒಳಗಿನವರಲ್ಲೇ ಬೇಗ ಮದುವೆ ಮಾಡಿಕೊಡಲಾಗುತ್ತಿದೆ.

ಬಾಲ್ಯ ವಿವಾಹ ತಡೆಗೆ ಅಧಿಕಾರಿಗಳು, ಪೊಲೀಸ್ ಇಲಾಖೆ, ಕಠಿಣ ಕಾನೂನು ಇದ್ದರೂ ಕಳೆದ ಆರು ವರ್ಷಗಳಲ್ಲಿ ಮತ್ತೆ ಹೆಚ್ಚಾಗಿರುವುದು ಆತಂಕಕಾರಿ ವಿಷಯವಾಗಿದ್ದು, ಈ ವಿಷಯದ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಯು.ಬಿ. ವೆಂಕಟೇಶ್‌ರವರು ಶೂನ್ಯವೇಳೆಯಲ್ಲಿ ಬಾಲ್ಯವಿವಾಹದ ಬಗ್ಗೆ ಕೇಳಿದ ಪ್ರಶ್ನೆಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

**ಊ) ವಿಷಯ:– ಗ್ರಾಮೀಣ ಪ್ರದೇಶಗಳಲ್ಲಿ ಮೈಕ್ರೋ ಫೈನಾನ್ಸ್‌ಗಳು ದುಬಾರಿ ಬಡ್ಡಿ ವಿಧಿಸಿ, ಲೇವಾದೇವಿ ನಡೆಸುತ್ತಿರುವ ಬಗ್ಗೆ.**

–––

**ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಗ್ರಾಮೀಣ ಪ್ರದೇಶಗಳಲ್ಲಿ ಕೆಲವು ಕಂಪನಿಗಳು ಮೈಕ್ರೋ ಫೈನಾನ್ಸ್‌ಗಳನ್ನು ಸ್ಥಾಪಿಸಿ ಬಡವರ ಅಭಿವೃದ್ಧಿಗಾಗಿ ಆರ್ಥಿಕ ಸಹಾಯವನ್ನು ಮಾಡುವುದಾಗಿ ಆರ್.ಬಿ.ಐ ನಿಂದ ಅನುಮತಿಯನ್ನು ಪಡೆದು ಸ್ವ–ಉದ್ಯೋಗಕ್ಕಾಗಿ ಸಹಾಯ, ತರಬೇತಿ ನೀಡುವುದು, ಸಾಲ ನೀಡಿ ಅದರಿಂದ ಉತ್ಪತ್ತಿ ಬರುವಂತೆ ಮಾಡಿ ಅದರಿಂದ ನೀಡಿದ ಸಾಲವನ್ನು ವಾಪಸ್ಸು ಪಡೆಯುವ ಉದ್ದೇಶದ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗವಕಾಶವನ್ನು ಸೃಷ್ಟಿಸುವ ಉದ್ದೇಶದಿಂದ ಆರಂಭವಾದ ಈ ಮೈಕ್ರೋಫೈನಾನ್ಸ್‌ಗಳು ತಮ್ಮ ಜವಾಬ್ದಾರಿಯನ್ನು ಮರೆತು ಸೇವೆಯ ಬದಲಿಗೆ ವ್ಯಾಪಾರೀಕರಣ ಮಾಡಿ, ದುಬಾರಿ ಬಡ್ಡಿ ವಿಧಿಸಿ, ಲೇವಾದೇವಿ ವ್ಯವಹಾರ ನಡೆಸುತ್ತಿವೆ.

ಬಡ ಮಹಿಳೆಯರಿಗೆ ಶೇ.20 ರಿಂದ ಶೇ.40 ತನಕ ಬಡ್ಡಿ ವಿಧಿಸಿ ಸಾಲ ನೀಡಿ ನಂತರ ಪ್ರತಿವಾರ ಅವರಿಂದ ಬಲಪ್ರಯೋಗಿಸಿ ವಸೂಲಿ ಮಾಡುತ್ತಿವೆ, ಈ ಫೈನಾನ್ಸ್‌ಗಳ ಜನರು ರಾತ್ರಿ ಹಗಲೆನ್ನದೆ ಬಡ ಮಹಿಳೆಯರ ಮನೆಗೆ ಗುಂಪಾಗಿ ಬಂದು ಮಾನಸಿಕ ಹಿಂಸೆಯನ್ನು ನೀಡುತ್ತಿದ್ದಾರೆ, ಈ ಮೈಕ್ರೋ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಫೈನಾನ್ಸ್‌ಗಳು ಅವರ ವ್ಯಾಪ್ತಿಯನ್ನು ಮೀರಿ ಕಾರ್ಯಾಚರಣೆಯನ್ನು ನಡೆಸುತ್ತಿದ್ದರೂ ಅವರನ್ನು ಕೇಳುವವರೆ ಇಲ್ಲವಾಗಿದೆ.

ಆದ್ದರಿಂದ ಸರ್ಕಾರವು ಈ ಫೈನಾನ್ಸ್ ಕಂಪನಿಗಳ ಮೇಲೆ ನಿಗಾ ಇಡಬೇಕು, ಕಾನೂನು ಬಾಹಿರವಾಗಿ ವ್ಯವಹಾರಗಳನ್ನು ನಡೆಸುತ್ತಿದ್ದರೆ ಅವರುಗಳ ಮೇಲೆ ಕ್ರಮ ಜರುಗಿಸಬೇಕು, ಇವರುಗಳು ಬಲವಂತದ ಸಾಲ ವಸೂಲಾತಿಗಾಗಿ ಮುಂದಾದರೆ ಅವರುಗಳ ಮೇಲೆ ಆಗುವ ಕ್ರಮಗಳೇನು ಮತ್ತು ಈ ಮೈಕ್ರೋ ಫೈನಾನ್ಸ್ ಕಂಪನಿಗಳ ಬಗ್ಗೆ ಇರುವ ಸರ್ಕಾರದ ನೀತಿ, ನಿಯಮಗಳೇನು ಎಂದು ವಿವರಿಸುವಂತೆ ಮಾನ್ಯ ಮುಖ್ಯಮಂತ್ರಿಗಳನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸುನೀಲ್ ಸುಬ್ರಮಣಿಯವರು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**ಋ) ವಿಷಯ:- ಬೆಂಗಳೂರು ಮಹಾನಗರ ಪಾಲಿಕೆ ಕೆಆರ್‌ಐಡಿಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳುವ ಕಾಮಗಾರಿಗಳಲ್ಲಿ ಪಾರದರ್ಶಕತೆ ಕಾಯ್ದೆ ಉಲ್ಲಂಘನೆ ಆಗಿರುವ ಬಗ್ಗೆ.**

– – – – –

**ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು. ದಿನಾಂಕ 08-04-2020ರಂದು ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಯವರ ಅಧಿಕೃತ ಟಿಪ್ಪಣಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯ ಎಲ್ಲಾ 8 ವಲಯ ವ್ಯಾಪ್ತಿಗಳಲ್ಲಿ ಮತ್ತು ಪಾಲಿಕೆಯಡಿಯಲ್ಲಿ ಇರುವ ಇತರೆ ಇಲಾಖೆ/ವಿಭಾಗಗಳಲ್ಲಿ ಕರ್ನಾಟಕ ಗ್ರಾಮೀಣಾಭಿವೃದ್ಧಿ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) ಸಂಸ್ಥೆಯ ಮುಖಾಂತರ ಕೈಗೊಂಡಿರುವ ಕಾಮಗಾರಿಗಳಿಗೆ ಹಣವನ್ನು ಪಾವತಿಸಲು ನಿರ್ಬಂಧ ವಿಧಿಸಿರುವುದು ಸರಿಯಷ್ಟೆ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿರುವ ಪ್ರಕರಣಗಳ ಸಂ. ಡಬ್ಲ್ಯೂ.ಪಿ 747/2020 ದಿನಾಂಕ 12-03-2020 ರಂದು ಯಾವುದೇ ಬಿಬಿಎಂಪಿ ವತಿಯಿಂದ ಕೆಆರ್‌ಐಡಿಎಲ್ ಸಂಸ್ಥೆಗೆ ಹೊಸ ಕಾಮಗಾರಿಗಳ ಕಾರ್ಯಾದೇಶ ನೀಡಬಾರದೆಂದು ನ್ಯಾಯಾಲಯವು ಮಧ್ಯಂತರ ಆದೇಶ ನೀಡಿರುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಬಿಎಂಪಿಯ ಎಲ್ಲಾ 8 ವಲಯ ವ್ಯಾಪ್ತಿಗಳಲ್ಲಿ ಮತ್ತು ಪಾಲಿಕೆಯಡಿಯಲ್ಲಿ ಇರುವ ಇತರೆ ಇಲಾಖೆ/ವಿಭಾಗಗಳಲ್ಲಿ ಕರ್ನಾಟಕ ಗ್ರಾಮೀಣಾಭಿವೃದ್ಧಿ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) ಸಂಸ್ಥೆಯ ಮುಖಾಂತರ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಕರ್ನಾಟಕ ಪಾರದರ್ಶಕ ಕಾಯ್ದೆ (ಕೆಟಿಪಿಪಿ) ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿ/ದುರುಪಯೋಗಿಸಿಕೊಂಡು ಸುಮಾರು ಸಾವಿರಾರು ಕೋಟಿ ರೂಪಾಯಿಗಳ ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಯಾವುದೇ ರೀತಿಯ ಕಾಮಗಾರಿಯ ಅಳತೆ/ಗುಣಮಟ್ಟ/ಸಾಮಾಗ್ರಿಗಳ ಪರಿವೀಕ್ಷಣೆ ಅಥವಾ ತಪಾಸಣೆಯಿಲ್ಲದೆ, ಕಾಮಗಾರಿ ಪರಿಶೋಧನೆ (Work Audit), ಹಣಕಾಸು ಲೆಕ್ಕಪರಿಶೋಧನೆ (Finance Audit), ಗುಣಮಟ್ಟದ ಪರಿಶೋಧನೆ (Quality Audit) ನಡೆಸದೇ ಕೈಗೊಂಡ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವುದರ ವಿರುದ್ಧ ಸಾರ್ವಜನಿಕರಿಂದ ಹಲವಾರು ದೂರುಗಳು ದಾಖಲಾಗಿರುತ್ತದೆ ಮತ್ತು ಸದರಿ ಬಹುತೇಕ ಕಾಮಗಾರಿಗಳ ಕಳಪೆ ಗುಣಮಟ್ಟದ ಪ್ರಕರಣಗಳನ್ನು ಭೌತಿಕವಾಗಿ ಪತ್ತೆ ಹಚ್ಚಬಹುದಾಗಿರುತ್ತದೆ.

ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯ ಅಧಿಕೃತ ಟಿಪ್ಪಣಿ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದ ಹಿನ್ನಲೆಯಲ್ಲಿ ಕಳೆದ 5 ವರ್ಷಗಳಿಂದ ಬಿಬಿಎಂಪಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಎಲ್ಲಾ 8 ವಲಯ ವ್ಯಾಪ್ತಿಗಳಲ್ಲಿ ಮತ್ತು ಪಾಲಿಕೆಯಡಿಯಲ್ಲಿ ಇರುವ ಇತರೆ ಇಲಾಖೆ/ವಿಭಾಗಗಳಲ್ಲಿ ಕರ್ನಾಟಕ ಗ್ರಾಮೀಣಾಭಿವೃದ್ಧಿ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) ಸಂಸ್ಥೆಯ ಮುಖಾಂತರ ಕೈಗೆತ್ತಿಕೊಂಡಿರುವ ಕಾಮಗಾರಿಗಳ ನಿರ್ಮಾಣದಲ್ಲಿ ಅಕ್ರಮಗಳನ್ನು ಸಮಗ್ರವಾಗಿ ತನಿಖೆಗೆ ಒಳಪಡಿಸಲು ಪ್ರಸ್ತಾಪಿಸಿ ಅಗತ್ಯ ಮತ್ತು ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪಿ.ಆರ್. ರಮೇಶ್‌ರವರು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸಲಾಗುವುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(418) 16–03–2021/ 1–30/ ಕೆಹೆಚ್–ಎಕೆ**

## 5. ವರದಿಯನ್ನೊಪ್ಪಿಸುವುದು

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, 2019–20 ಹಾಗೂ 2020–21ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ 50ನೇ ವರದಿಯನ್ನು ಸಮಿತಿಯ ಸದಸ್ಯನಾದ ನಾನು ಸಮಿತಿಯ ಪರವಾಗಿ ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಉಪ ಸಭಾಪತಿಯವರು:–** ವರದಿಯನ್ನೊಪ್ಪಿಸಲಾಯಿತು.

**ಸದನದಲ್ಲಿ ಕಡ್ಡಾಯವಾಗಿ ಇರಬೇಕಾದಂತಹ ಸಚಿವರುಗಳು ಮತ್ತು ಅಧಿಕಾರಿಗಳ ಪಟ್ಟಿ**

**ಉಪ ಸಭಾಪತಿಯವರು:–** ಈ ದಿನ ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಮಾನ್ಯ ಸಚಿವರುಗಳೆಂದರೆ:

ಡಾ॥ ಸಿ.ಎನ್. ಅಶ್ವತ್ಥನಾರಾಯಣ, ಮಾನ್ಯ ಉಪ ಮುಖ್ಯಮಂತ್ರಿಯವರು (ಉನ್ನತ ಶಿಕ್ಷಣ, ಐಟಿ & ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ) ಇವರು ಕಾರಣಾಂತರಗಳಿಂದ ಸದನಕ್ಕೆ ಹಾಜರಾಗುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಪತ್ರವನ್ನು ಕೊಟ್ಟಿದ್ದಾರೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಸಭಾನಾಯಕರು (ಮುಜರಾಯಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)

ಶ್ರೀ ಶ್ರೀಮಂತ ಬಾಳಾ ಸಾಹಿಬ್ ಪಾಟೀಲ್, (ಜವಳಿ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಶ್ರೀ ಎಸ್.ಅಂಗಾರ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಶ್ರೀ ಆರ್.ಶಂಕರ್, (ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

ಶ್ರೀ ಸಿ.ಪಿ.ಯೋಗೇಶ್ವರ್ (ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಇಷ್ಟು ಜನ ಮಾನ್ಯ ಸಚಿವರುಗಳು ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕು.

ವಿಧಾನ ಪರಿಷತ್ತಿನ ಅಧಿವೇಶನ ಪ್ರಾರಂಭದಿಂದ ಮಧ್ಯಾಹ್ನದವರೆಗೆ ಸದನದಲ್ಲಿ ಹಾಜರಿರಬೇಕಾದ ಇಲಾಖೆಯ ಅಧಿಕಾರಿಗಳೆಂದರೆ:

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಶಾಮ್ಲಾ ಇಕ್ಬಾಲ್, ಭಾ.ಆ.ಸೇ. ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ,

ಶ್ರೀ ಜಿಯಾವುಲ್ಲಾ ಎಸ್, ಭಾ.ಆ.ಸೇ. ಸಹಕಾರ ಸಂಘಗಳ ನಿಬಂಧಕರು, ಅಲಿ ಅಸ್ಕರ್ ರಸ್ತೆ, ವಸಂತನಗರ, ಬೆಂಗಳೂರು,

ಶ್ರೀಮತಿ ಜ್ಯೋತಿ, ಆರ್.ಜೆ, ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರ್ರದ ಉಪ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಇಲಾಖೆ,

ಶ್ರೀ ಎಸ್.ಆರ್.ಬಸವರಾಜಯ್ಯ, ಸರ್ಕಾರದ ಉಪ ಕಾರ್ಯದರ್ಶಿಗಳು, (ಸೇವೆಗಳು) ಜಲಸಂಪನ್ಮೂಲ ಇಲಾಖೆ

ವಿಧಾನ ಪರಿಷತ್ತಿನ ಅಧಿವೇಶನ ಮಧ್ಯಾಹ್ನದಿಂದ ಮುಕ್ತಾಯವಾಗುವವರೆಗೆ ಸದನದಲ್ಲಿ ಹಾಜರಿರಬೇಕಾದ ಇಲಾಖೆಯ ಅಧಿಕಾರಿಗಳೆಂದರೆ:

ಶ್ರೀ ವೆಂಕಟರಾಜು, ಭಾ.ಆ.ಸೇ. ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು,

ಶ್ರೀಮತಿ ಎಂ.ದೀಪಾ, ಭಾ.ಪೊ.ಸೇ. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು,

ಶ್ರೀ ಕೆ.ಬೀರೇಶ್, ಸರ್ಕಾರದ ಉಪ ಕಾರ್ಯದರ್ಶಿಗಳು-4, ನಗರಾಭಿವೃದ್ಧಿ ಇಲಾಖೆ,

ಶ್ರೀಮತಿ ಸಂಧ್ಯಾ ಎಲ್.ನಾಯಕ್, ಸರ್ಕಾರದ ಉಪ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ

## 6. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ

**ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ಸರಹದ್ದಿನಲ್ಲಿ ಬರುವ ಹಿರೇನಾಗವಲ್ಲಿ ಗ್ರಾಮದ ಬಳಿ ಕಾನೂನು ಬಾಹಿರವಾಗಿ ನಡೆಯುತ್ತಿರುವ ಗಣಿಗಾರಿಕೆ ಕುರಿತು.**

----

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕಿನ ಗುಡಿಬಂಡೆ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಬರುವ ಹಿರೇನಾಗವಲ್ಲಿ ಗ್ರಾಮದ ಬಳಿ ಕಾನೂನು ಬಾಹಿರವಾಗಿ ನಡೆಯುತ್ತಿರುವ ಗಣಿಗಾರಿಕೆಗಾಗಿ ಸಂಗ್ರಹಿಸಿದ್ದ ಜಿಲೆಟಿನ್ ಹಾಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತಿತರ ಸ್ಫೋಟಕ ವಸ್ತುಗಳಿಂದ 6 ಜನರು ಮರಣ ಹೊಂದಿದ್ದಾರೆ. ಸರ್ಕಾರದ ಬಿಗಿ ನಿಯಮಾವಳಿಗಳು ಇಲ್ಲದೇ ಇರುವುದು ಮತ್ತು ಬಳಕೆದಾರರ ಮಾರ್ಗಸೂಚಿಗಳು ಇದ್ದರೂ, ಇದನ್ನು ಕಠಿಣವಾಗಿ ಜಾರಿಗೊಳಿಸುವಲ್ಲಿ ಮತ್ತು ಸಾರ್ವಜನಿಕರ ಜೀವಗಳು ಹಾಗೂ ಭೂ ಸಂಪತ್ತನ್ನು ಸರ್ಕಾರವು ಮತ್ತು ಜಿಲ್ಲಾಡಳಿತಗಳು ಸಂರಕ್ಷಿಸುವಲ್ಲಿ ವಿಫಲವಾಗಿರುವ ಕಾರಣ, ಒಂದು ತಿಂಗಳ ಅವಧಿಯಲ್ಲಿ 2ನೇ ಬಾರಿ ರಾಜ್ಯದಲ್ಲಿ ಜಿಲೆಟಿನ್ ಸ್ಫೋಟ ಸಂಭವಿಸಿದೆ. ಈ ದುರಂತಗಳ ಕುರಿತು ರಾಜ್ಯದಲ್ಲಿ ನಡೆಯುತ್ತಿರುವಂತಹ ಅಕ್ರಮ ಗಣಿಗಾರಿಕೆಗಳ ವಿಷಯ ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ನಿಯಮ-59 ರಡಿಯಲ್ಲಿ 4ನೇ ತಾರೀಖಿನಂದು ನಾನು ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿದಂತಹ ಸಂದರ್ಭದಲ್ಲಿ ತಾವು ಅದನ್ನು ನಿಯಮ-68 ಕ್ಕೆ ಪರಿವರ್ತನೆ ಮಾಡಿ ಚರ್ಚಿಸುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಇದರ ಬಗ್ಗೆ ಇವತ್ತು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ತಮಗೆ ವಂದಿಸಿ, ನಾನು ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕಿನ ಗುಡಿಬಂಡೆ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಬರುವ ಹಿರೇನಾಗವಲ್ಲಿ ಗ್ರಾಮ ಪ್ರದೇಶದಲ್ಲಿ ಶ್ರೀ ಭ್ರಮರವಾಸಿನಿ ಎಂ.ಸ್ಯಾಂಡರ್ಸ್ ಎಲ್.ಎಲ್.ಪಿ. ಕ್ರಷರ್ಸ್ ಸ್ಥಳದಿಂದ ಸುಮಾರು ಒಂದರಿಂದ ಒಂದೂವರೆ ಕಿ.ಮೀ ದೂರದಲ್ಲಿ ಸ್ಫೋಟಕ ವಸ್ತುಗಳನ್ನು ಸಾಗಿಸಿದ ನಂತರ ಅಲ್ಲಿ ಯಾವುದೋ ಆಚಾತುರ್ಯದಿಂದ ಸ್ಫೋಟಗೊಂಡಿದೆ ಎಂದು ಪ್ರಾಥಮಿಕ ವರದಿಯಿಂದ ತಿಳಿದು ಬಂದಿದೆ. ಶ್ರೀ ಭ್ರಮರವಾಸಿನಿ ಎಂ.ಸ್ಯಾಂಡರ್ಸ್ ಎಲ್.ಎಲ್.ಪಿ. ಕ್ರಷರ್ಸ್ ಇವರಿಗೆ ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕಿನ ಜನಲಕುಂಟೆ ಗ್ರಾಮದ ಸರ್ವೆ ನಂಬರ್ 24 ರಲ್ಲಿ 3 ಎಕರೆ, 10 ಗುಂಟೆ ಜಮೀನು ಭೂ ಪರಿವರ್ತನೆಯಾಗಿರುವ ಖಾಸಗಿ ಜಮೀನಿನಲ್ಲಿ ದಿನಾಂಕ:28-12-2015 ರಿಂದ ಜಾರಿಗೆ ಬರುವಂತೆ 20 ವರ್ಷಗಳ ಅವಧಿಗೆ ಕ್ರಷರ್ ಘಟಕಕ್ಕೆ ಫಾರಂ-ಸಿ ಪ್ರಕಾರ ಅನುಮತಿ ನೀಡಲಾಗಿದೆ. ಸದರಿ ಫಾರಂ-ಸಿ ಲೈಸೆನ್ಸ್ ಅವಧಿಯು ದಿನಾಂಕ:31-03-2036 ರವರಗೆ ಇರುತ್ತದೆ. ಈ ಕ್ರಷರ್ಸ್ ಘಟಕದ ಪಾಲುದಾರರು ಯಾರೆಂದರೆ, ಶ್ರೀ ರಾಘವೇಂದ್ರ ರೆಡ್ಡಿ, ಶ್ರೀಮತಿ ಜಿ.ಚಂದ್ರಕಲಾ, ಶ್ರೀ ಲಕ್ಷ್ಮೀಪತಿ ರೆಡ್ಡಿ, ಶ್ರೀ ದಯಾಳ್ ನರಸಿಂಹ ರೆಡ್ಡಿ, ಶ್ರೀ ದಯಾಳ್ ವೆಂಕಟಶಿವ ರೆಡ್ಡಿ, ಹಾಗೂ ಶ್ರೀ ಸುಬ್ಬಯ್ಯ ನಾರಪ್ಪ ಶ್ರೀನಿವಾಸನ್ ಈ 7 ಜನರು ಶ್ರೀ ಭ್ರಮರವಾಸಿನಿ ಎಂ.ಸ್ಯಾಂಡರ್ಸ್ ಎಲ್.ಎಲ್.ಪಿ. ಕ್ರಷರ್ಸ್ ಘಟಕದ ಪಾಲುದಾರರಾಗಿರುತ್ತಾರೆ. ಮೆ॥ ಶ್ರೀ ಶಿರಡಿಸಾಯಿ ಅಗ್ರಿಗೇಟ್ಸ್ ಎಂಬ ಹೆಸರಿಗೆ ಕಟ್ಟಡ ಕಲ್ಲು ಗಣಿ ಗುತ್ತಿಗೆ ಸಂಖ್ಯೆ-100 ರಲ್ಲೂ, ಶ್ರೀ ಹೆಚ್.ಮಧುಸೂದನ್ ರೆಡ್ಡಿ ಎಂಬ ಹೆಸರಿನಿಂದ ದಿನಾಂಕ:01-03-2014 ರಂದು ವರ್ಗಾವಣೆಯಾಗಿದೆ. ಪ್ರಸ್ತುತ ಮೆ॥ ಶ್ರೀ ಶಿರಡಿಸಾಯಿ ಅಗ್ರಿಗೇಟ್ಸ್ ಎಂಬ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಸರಿನಲ್ಲಿ ಗುತ್ತಿಗೆ ಚಾಲ್ತಿಯಲ್ಲಿ ಇದೆ. ಮೆ॥ ಶ್ರೀ ಶಿರಡಿಸಾಯಿ ಅಗ್ರಿಗೇಟ್ಸ್ ಇದು ಕಲ್ಲು ಗಣಿ ಗುತ್ತಿಗೆ. ಶ್ರೀ ಭ್ರಮರವಾಸಿನಿ ಎಂ.ಸ್ಯಾಂಡರ್ಸ್ ಎಲ್.ಎಲ್.ಪಿ. ಕ್ರಷರ್ ಘಟಕವಾಗಿದೆ. ರಾಜ್ಯದಲ್ಲಿ ನಡೆಯುವಂತಹ ಅಕ್ರಮ ಗಣಿಗಾರಿಕೆ ಇರಬಹುದು, ಸಕ್ರಮ ಗಣಿಗಾರಿಕೆ ಇರಬಹುದು, ಈ ರೀತಿ ಅನಾಹುತಗಳು ಆಗುತ್ತಾ ಬಂದಿವೆ. ಇದೇನು ಹೊಸದಲ್ಲ ಎನ್ನುವಂತಹ ಮಟ್ಟಿಗೆ ಘಟನೆಗಳು ನಡೆಯುತ್ತಿವೆ. ಇದಕ್ಕೆ ಸರ್ಕಾರ ಕಾರಣವಲ್ಲವೇ? ಇದಕ್ಕೆ ರಾಜಕಾರಣಿಗಳು ಕಾರಣರಾಗಿದ್ದಾರೆ. ಇದರಲ್ಲಿ ಅಧಿಕಾರಿಗಳ ಬೇಜವಾಬ್ದಾರಿತ್ವನ ಎದ್ದು ತೋರಿಸುತ್ತಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿಯಾಗಿ ಮೇಲಿಂದ ಮೇಲೆ ಅನಾಹುತಗಳು ಆಗುವುದಕ್ಕೆ ನನಗೆ ಅನಿಸಿರುವ ಮಟ್ಟಿಗೆ ಮತ್ತು ನಾನು ಅಲ್ಲಿಗೆ ಭೇಟಿ ಕೊಟ್ಟು, ಸ್ಥಳ ಪರಿಶೀಲನೆ ಮಾಡಿ, ಅಲ್ಲಿರುವ ಅನೇಕರಿಂದ ಮಾಹಿತಿ ಸಂಗ್ರಹ ಮಾಡಿ ಅಧ್ಯಯನ ಮಾಡಿದ ಪ್ರಕಾರ ಇದು ರಾಜಕೀಯ ಭ್ರಷ್ಟಾಚಾರಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಾನು ಬಹಳ ಜವಾಬ್ದಾರಿಯಿಂದ ಈ ಮಾತನ್ನು ಬಳಕೆ ಮಾಡುತ್ತಿದ್ದೇನೆ. ಇದರಿಂದ ಬಹಳಷ್ಟು ಅಮಾಯಕ ಜೀವಗಳು ಬಲಿಯಾಗುತ್ತಿವೆ. ಇದು ಹಾಗೆಯೇ ಮುಂದುವರೆಯುತ್ತಾ ಬಂದಿದ್ದು ಸರ್ಕಾರವಾಗಲಿ, ಅಧಿಕಾರಿಗಳಾಗಿ ಏನಾದರೂ ಕಠಿಣ ಕ್ರಮವನ್ನು ಜರುಗಿಸಿ ಇನ್ನು ಮುಂದೆ ಈ ರೀತಿಯಾಗದೇ ಇರುವ ಹಾಗೆ ಪ್ರತಿಬಂಧಿಸುವಂತಹ ವ್ಯವಸ್ಥೆಯಾಗಬೇಕು. ಇದಕ್ಕೆ ಯಾವುದೇ ವ್ಯವಸ್ಥೆ ಆಗುತ್ತಲೇ ಇಲ್ಲ. ಇದು ಮೊದಲನೆಯ ಘಟನೆ ಅಲ್ಲ. ಇದೇ ಸದನದಲ್ಲಿ ಈ ಪೂರ್ವದಲ್ಲಿ ನಾನು ಒಂದು ಘಟನೆಯ ಬಗ್ಗೆ ಚರ್ಚೆ ಮಾಡಿದ್ದೆ. ಆ ಘಟನೆ ಜನವರಿ 21ನೇ ತಾರೀಖು ಶಿವಮೊಗ್ಗ ಜಿಲ್ಲೆಯ ಹುಣಸೂರಿನಲ್ಲಿ ಕಲ್ಲು ಗಣಿಗಾರಿಕೆ ಪ್ರದೇಶದಲ್ಲಿ ನಡೆದಂತಹ ಘಟನೆಯಾಗಿದ್ದು, ಇದರ ನೆನಪು ಇನ್ನು ಹೋಗಿಲ್ಲ. ಈ ಘಟನೆ ಇನ್ನು ಅಚ್ಚಳಿಯದೇ ಉಳಿದಿದೆ. ನಂತರ ಫೆಬ್ರವರಿ–22ನೇ ತಾರೀಖು ಮಧ್ಯ ರಾತ್ರಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕಿನ ಗುಡಿಬಂಡೆ ಸರಹದ್ದಿನಲ್ಲಿ ಹಿರೇನಾಗವಲ್ಲಿ ಎನ್ನುವಂತಹ ಕ್ರಷರ್ ಮತ್ತು ಕಲ್ಲು ಗಣಿಗಾರಿಕೆ ಪ್ರದೇಶದಲ್ಲಿ ಅಲ್ಲಿನ ಕ್ರಷರ್ ಮಾಲೀಕರ ಮತ್ತು ಕೂಲಿ ಕಾರ್ಮಿಕರ ನಿರ್ಲಕ್ಷ್ಯತನದಿಂದ ಈ ಘಟನೆ ನಡೆದಿದೆ. ಒಂದೇ ತಿಂಗಳಿನಲ್ಲಿ ಇದು ಎರಡನೇ ಘಟನೆಯಾಗಿದೆ. ಮೊದಲನೆಯ ಘಟನೆಯಲ್ಲಿಯೂ 6 ಜನ ಅಮಾಯಕರು ಪ್ರಾಣವನ್ನು ಕಳೆದುಕೊಂಡಿದ್ದಾರೆ. ಈಗಲೂ 6 ಜನ ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಈ ಘಟನೆಯಲ್ಲಿ ಮೃತಪಟ್ಟವರ ದೇಹಗಳು ಎಷ್ಟರಮಟ್ಟಿಗೆ ಛಿದ್ರ ಛಿದ್ರವಾಗಿವೆ ಎಂದರೆ, ಊಹಿಸುವುದಕ್ಕೂ ಅಸಾಧ್ಯವಾಗಿದೆ. ಶ್ರೀ ಭ್ರಮರವಾಸಿನಿ ಎಂ.ಸ್ಯಾಂಡರ್ಸ್ ಎಲ್.ಎಲ್.ಪಿ. ಕ್ರಷರ್ಸ್ ಘಟಕದ ಮಾಲೀಕರ ವಿರುದ್ಧ ಏನೋ ಒಂದು ಆರೋಪ ಇದೆ ಎಂದು ನಾನು ಭೇಟಿ ಕೊಟ್ಟಾಗ ಅಲ್ಲಿನ ಪೊಲೀಸ್ ವರಿಷ್ಠಾಧಿಕಾರಿಗಳು ಆ ಸ್ಥಳಕ್ಕೆ ಬಂದಿದ್ದರು. ಅವರು ಮತ್ತು ಇನ್ನು ಅನೇಕ ಅಧಿಕಾರಿಗಳು ಇದ್ದರು. ಅವರ ಜೊತೆಯಲ್ಲಿ ಚರ್ಚೆ ಮಾಡಿದಾಗ ಫೆಬ್ರವರಿ 7ರಂದು ಈ ಕ್ರಷರ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘಟಕಕ್ಕೆ ನಾನು ಭೇಟಿ ಕೊಟ್ಟಿದ್ದೆ. ಇಲ್ಲಿ ಕಾನೂನು ಬಾಹಿರವಾಗಿ ಕೆಲವು ಸ್ಫೋಟಕ ವಸ್ತುಗಳನ್ನು ಇಟ್ಟಿದ್ದಾರೆ ಎಂದು ಅವರು ಹೇಳಿದರು. ಆ ದಿವಸ ಅವರು ಭೇಟಿ ಕೊಟ್ಟಾಗ ಅಲ್ಲಿ ಏನಾಗಿದೆಯೆಂದರೆ, ಈ ಕ್ರಷರ್ ಘಟಕದಿಂದ 14 ಜಿಲೆಟಿನ್ ಜೆಲ್ ಟ್ಯೂಬ್ ಮತ್ತು 17 electronic detonator, wire ಹಾಗೂ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ ಮತ್ತು ಅವರ ಮೇಲೆ ಪ್ರಕರಣ ಕೂಡ ದಾಖಲಿಸಿದ್ದಾರೆ. ಸ್ಫೋಟಕ ಕಾಯ್ದೆ ಅಡಿಯಲ್ಲಿ death penalty ಇದೆ. ಇದರಲ್ಲಿ ಒಬ್ಬರನ್ನಾದರೂ ಅರೆಸ್ಟ್ ಮಾಡಬಹುದಾಗಿತ್ತಲ್ಲವೇ? ಫೆಬ್ರವರಿ–7ನೇ ತಾರೀಖಿಗೆ ಹೋದಾಗ ಪೊಲೀಸರಿಗೆ ಸ್ಫೋಟಕ ವಸ್ತುಗಳು ದೊರೆತಿವೆಯಲ್ಲವೇ; ಅಲ್ಲಿ ಏನು ಇಲ್ಲ ಎಂದು ಅವರೇನೂ ಬರಿಗೈನಲ್ಲಿ ವಾಪಸಾಗಿಲ್ಲ. 14 ಜಿಲೆಟಿನ್ ಜೆಲ್ ಟ್ಯೂಬ್ ಮತ್ತು 17 electronic detonator, wire ಇವೆಲ್ಲಾ ಸಿಕ್ಕಿವೆ. ಅಲ್ಲಿನ ವಾಹನಗಳನ್ನು ಕೂಡ ಜಪ್ತಿ ಮಾಡಿ, ಅವರ ಮೇಲೆ ಪ್ರಕರಣ ಕೂಡ ದಾಖಲು ಮಾಡಿದ್ದಾರೆ. ಪ್ರಕರಣ ದಾಖಲಿಸಿದ ಮೇಲೆ ಅವರನ್ನು ಅರೆಸ್ಟ್ ಮಾಡಬಹುದಾಗಿತ್ತಲ್ಲವೇ?

**(ಮುಂದು)**

**(419) 15/03/2021/ಎಸ್‌ಪಿಆರ್/ಎಕೆ/1:40**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಸ್ಫೋಟಕ ಕಾಯ್ದೆ ಅಡಿಯಲ್ಲಿ ಆ offence ಗೆ death penalty ಇದೆ. Capital punishment ಇದೆ. ಬಹಳ ದೊಡ್ಡ ಶಿಕ್ಷೆಯಿದೆ. ಆ ಸಂದರ್ಭದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು, ಗಣಿಗಾರಿಕೆಯ ಮಾಲೀಕರನ್ನು ದಸ್ತಗಿರಿ ಮಾಡಿದ್ದರೆ, ಮುಂದಾಗಬಹುದಾದ ಪರಿಸ್ಥಿತಿಯು ತಪ್ಪುತ್ತಿತ್ತು. ಆದರೆ ಸರ್ಕಾರವು ಈ ರೀತಿಯಾಗಿ ಏಕೆ ಮಾಡಿಲ್ಲ? ಇದಾದ ನಂತರ, ಗಣಿ ಮಾಲೀಕರ ಹತ್ತಿರ ಇದ್ದ ಇನ್ನೂ ಕೆಲವು ಸ್ಫೋಟಕ ಸಾಮಗ್ರಿಗಳನ್ನು ಅವರು ಎಲ್ಲಿಯೋ ಮುಚ್ಚಿಟ್ಟಿರಬಹುದು ಅಥವಾ ಬೇರೆ ಸ್ಥಳದಲ್ಲಿಟ್ಟಿರಬಹುದು. ಮತ್ತೊಂದು ಬಾರಿ ದಾಳಿ ನಡೆಯುತ್ತದೆ ಎನ್ನುವ ಅಂಜಿಕೆಯಿಂದಾಗಿ ಸ್ಫೋಟಕ ಸಾಮಗ್ರಿಗಳ ಸಾಗಾಣಿಕೆ ಮಾಡಿದ್ದಾರೆ. ನಾನು ಆ ಸ್ಥಳಕ್ಕೆ ಭೇಟಿ ನೀಡಿ, ಅಲ್ಲಿನ ಸಂಗತಿಗಳನ್ನು ನೋಡಿದ್ದೇನೆ. ನನಗನ್ನಿಸಿದಂತೆ ಗಣಿ ಮಾಲೀಕರು ಹೇಳಿದಂತೆ, ಜೆಲಟಿನ್ ಮತ್ತು ಡೆಟೋನೇಟರ್‌ಗಳನ್ನು ಪೊಲೀಸರ ಕಣ್ಣು ತಪ್ಪಿಸಿ, ಅವುಗಳನ್ನು ಎಲ್ಲಿಯಾದರೂ ಕುರುಚಲು ಗುಡ್ಡದ ಒಳಗೆ ತೆಗೆದುಕೊಂಡು ಹೋಗಿ ಒಗೆದಿರಬಹುದು. ಪುನಃ ಆ ಸ್ಫೋಟಕ ಸಾಮಗ್ರಿಗಳು ಅವರ ಬಳಿಯೇ ದೊರೆತರೆ, ಅವರ ಮೇಲೆ ಮತ್ತೊಂದು ಪ್ರಕರಣ ದಾಖಲಾಗುತ್ತದೆ ಎಂದು ಗಣಿ ಮಾಲೀಕರು ತಿಳಿಸಿರಬಹುದು. ನನಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದ ಮಾಹಿತಿಯಂತೆ, ಅದು ಸರಿಯೋ ಅಥವಾ ತಪ್ಪೋ, it is subject to correction. ಆ ಪ್ರದೇಶದಲ್ಲಿ ಬೆಂಕಿಯನ್ನು ಹಚ್ಚಿ ಸ್ಫೋಟಕ ಸಾಮಗ್ರಿಗಳನ್ನು ಅದರೊಳಗೆ ಹಾಕಿದ್ದಾರೆ. ಆ ಕೂಡಲೇ ಅಲ್ಲಿದ್ದ ಆರು ಜನರು ಸ್ಫೋಟಗೊಂಡಿದ್ದು, ಅವರುಗಳ ದೇಹಗಳೆಲ್ಲಾ ಛಿದ್ರ ಛಿದ್ರಗೊಂಡಿವೆ. ಈ ಘಟನೆಯು ಬೇರೆ ರೀತಿಯಿಂದಲೂ ಆಗಿರಬಹುದು. ಸ್ಫೋಟದ ತೀವ್ರತೆಯಿಂದ ಅವರುಗಳ ದೇಹವು ಯಾವ ರೀತಿಯಾಗಿ ಛಿದ್ರಗೊಂಡಿದೆ ಎಂದರೆ, ಅದನ್ನು ಗುರ್ತಿಸುವುದಕ್ಕೂ ಸಹ ಸಾಧ್ಯವಿಲ್ಲ; ಅಂಗಾಂಗಗಳೆಲ್ಲವೂ ಬೇರ್ಪಡೆಯಾಗಿ ದೂರ ದೂರಕ್ಕೆ ಹೋಗಿವೆ. ಅದೃಷ್ಟವಶಾತ್ ಸ್ಫೋಟಕ ಸಾಮಗ್ರಿಗಳನ್ನು ಸಾಗಿಸಿದ ವಾಹನದ ಚಾಲಕನೊಬ್ಬನು ಉಳಿದುಕೊಂಡಿದ್ದಾನೆ; ಅವನಿಗೂ ಅಲ್ಪ-ಸ್ವಲ್ಪ ಗಾಯಗಳಾಗಿವೆ. ಅವನು ಈ ಘಟನೆ ನಡೆದ ಸ್ಥಳದಿಂದ ದೂರದಲ್ಲಿ ವಾಹನವನ್ನು ನಿಲ್ಲಿಸಿದ್ದನು. ಇವನೇ ಈ ಪ್ರಕರಣದ ಜೀವಂತ ಸಾಕ್ಷಿಯಾಗಿದ್ದಾನೆ. ಬಹುತರವಾಗಿ ಇವನಿಂದಲೇ ಎಲ್ಲಾ ಸಾಕ್ಷಿಗಳು ಸಿಕ್ಕಿರಬಹುದು. ಸದರಿ ವಾಹನದ ಚಾಲಕನು ಬದುಕುಳಿದಿದ್ದಾನೆ, ಇದೇ ಒಂದು ಪುಣ್ಯವಾಗಿದೆ. ಈ ಘಟನೆಯಲ್ಲಿ ಆರು ಜನರ ಪೈಕಿ ಮೂರು ಜನರು ನೆರೆಯ ಆಂಧ್ರಪ್ರದೇಶ ರಾಜ್ಯಕ್ಕೆ ಸೇರಿದವರಾಗಿದ್ದು; ಇಬ್ಬರು ಸ್ಥಳೀಯರು; ಒಬ್ಬ ವ್ಯಕ್ತಿಯು ನೇಪಾಳ ಮೂಲದವನಾಗಿದ್ದು, ಮತ್ತೋರ್ವನು ಬಡ ಕಾರ್ಮಿಕನಾಗಿದ್ದಾನೆ.

ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರದ ಎರಡು ಪ್ರತ್ಯೇಕ ಘಟನೆಗಳನ್ನು ನೋಡಿದಾಗ ಅಲ್ಲಿನ ಅಧಿಕಾರಿಗಳು ನೇರವಾಗಿ ಜವಾಬ್ದಾರರಾಗಿರುತ್ತಾರೆಂದು ನನಗನ್ನಿಸುತ್ತದೆ. ಅಧಿಕಾರಿಗಳ ಬೇಜವಾಬ್ದಾರಿತನದಿಂದ ಈ ಘಟನೆಗಳು ನಡೆದಿವೆ ಎಂದು ನನಗೆ ತಿಳಿದು ಬಂದಿದೆ. ಈ ಘಟನೆಯಲ್ಲಿ ನನಗನ್ನಿಸಿದಂತೆ, ಮಾಸಿಕ 'ಹಫ್ತಾ ವಸೂಲಿ' ಯ ಕೆಲಸವು ನಡೆಯುತ್ತಿದೆ. ನಾನು ನೇರವಾಗಿ ಇಲಾಖೆಯ ಮಂತ್ರಿಗಳ ಮೇಲೆ ಆಪಾದನೆಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹಫ್ತಾ ವಸೂಲಿ ಮಾಡಲು 'ಉಸ್ತಾದ್'ಗಳು ಎನ್ನುವವರಿರುತ್ತಾರೆ. ಇವರುಗಳು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿರುತ್ತಾರೆ. ಹಫ್ತಾ ವಸೂಲಿ ಮಾಡುವುದರಿಂದ ಗಣಿ ಮಾಲೀಕರಿಗೆ ಸಡಿಲು ದೊರೆಯುತ್ತದೆ. ಅವರುಗಳು ತಾವು ಮಾಸಿಕ ಹಫ್ತಾ ನೀಡಿದ್ದೇವೆ ಎಂದು ಹೇಳಿ, ಬೇಕಾಬಿಟ್ಟಿ, ತಮ್ಮ ಮನಸೋಇಚ್ಛೆ, ಕಾನೂನು ಬಾಹಿರವಾಗಿ ಸ್ಫೋಟಕಗಳನ್ನು ತರುವ ಕೆಲಸಗಳನ್ನು ಮಾಡುತ್ತಾರೆ. ಇದು ಯಾವ ರೀತಿಯಾಗಿ ಹೇಗೆ ನಡೆಯುತ್ತದೆ ಎಂದು ನಾನು ನಂತರದಲ್ಲಿ ಸೂಕ್ಷ್ಮವಾದ ವಿವರಗಳೊಂದಿಗೆ ತಿಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದಾದ್ಯಂತ ಇರುವ ಕಲ್ಲು ಗಣಿಗಾರಿಕೆಯ ಮಾಹಿತಿಯನ್ನು ಹೇಳುವುದಾರೆ, ರಾಜ್ಯದಲ್ಲಿ ಒಟ್ಟು 2,493 ಕಲ್ಲು ಗಣಿಗಾರಿಕೆಗಾಗಿ ಗುತ್ತಿಗೆಯು ಮಂಜೂರಾಗಿರುತ್ತದೆ. It is subject to correction. ಇದರಲ್ಲಿ ಸ್ವಲ್ಪ ವ್ಯತ್ಯಾಸಗಳಿರಬಹುದು. ಈ ಪೈಕಿ 1,861 ಕಲ್ಲು ಗಣಿಗಾರಿಕೆಯ ಗುತ್ತಿಗೆ ಪ್ರದೇಶದಲ್ಲಿ ಸ್ಫೋಟಕ ಬಳಸಿ, ಗಣಿಗಾರಿಕೆ ಮಾಡಲು ಅವಕಾಶ ನೀಡಲಾಗಿದೆ. 477 ಕಲ್ಲು ಗಣಿಗಾರಿಕೆಯನ್ನು ಸ್ಫೋಟಕ ರಹಿತವಾಗಿ ನಡೆಸಲು ಅನುಮತಿಸಲಾಗಿದೆ. ಆ ಪೈಕಿ ಕೇವಲ 344 ಕಲ್ಲು ಗಣಿಗಾರಿಕೆಯ ಗುತ್ತಿಗೆದಾರರು ಮಾತ್ರವೇ ಕಲ್ಲು ಗಣಿಯ ಗುತ್ತಿಗೆ ಪ್ರದೇಶದಲ್ಲಿ ಸ್ಫೋಟಕ ಬಳಕೆ ಮಾಡಲು ಪರವಾನಿಗೆಯನ್ನು ಪಡೆದಿದ್ದಾರೆ. 1,059 ಗುತ್ತಿಗೆದಾರರು ಪರವಾನಿಗೆಯನ್ನು ಹೊಂದಿದವರ ಜೊತೆ ಒಡಂಬಡಿಕೆಯನ್ನು ಮಾಡಿಕೊಂಡು ಸ್ಫೋಟ ನಡೆಸುತ್ತಾರೆ. ಅಂದರೆ ಇವರುಗಳಿಗೆ ಸ್ಫೋಟ ನಡೆಸಲು ಪರವಾನಿಗೆ ಇರುವುದಿಲ್ಲ. ಪರವಾನಿಗೆ ಹೊಂದಿದವರ ಜೊತೆಗೆ ಕರಾರು ಮಾಡಿಕೊಳ್ಳುತ್ತಾರೆ. ಇದು ಕಾನೂನಾತ್ಮಕವಾಗಿ ನಡೆಯುತ್ತದೆಯೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ನಾನು ಅಲ್ಲಿನ ಪೊಲೀಸ್ ವರಿಷ್ಠಾಧಿಕಾರಿಯ ಜೊತೆ ಚರ್ಚಿಸಿದ್ದೇನೆ. ನನಗನ್ನಿಸಿದಂತೆ, ಯಾರು ಪರವಾನಿಗೆಯನ್ನು ಪಡೆದಿರುತ್ತಾರೋ, ಅವರುಗಳು ಸ್ಫೋಟಕಗಳನ್ನು ಖರೀದಿಸಿ, ಅಲ್ಲಿ ಅವುಗಳನ್ನು ಸಂಗ್ರಹಿಸಿಡಲು ಮ್ಯಾಗಜೀನ್ ನಿರ್ಮಿಸಬೇಕಾಗಿರುತ್ತದೆ. ಆ ಮ್ಯಾಗಜೀನ್‌ನಲ್ಲಿ ಅವಶ್ಯಕವಿರುವಷ್ಟು ಸ್ಫೋಟಕಗಳನ್ನು ಅಂದರೆ ಜೆಲಟಿನ್ ಮತ್ತು ಡೆಟೋನೇಟರ್‌ಗಳನ್ನು ಅಲ್ಲಿ ಸಂಗ್ರಹಿಸಿಡಬಹುದು. ಸ್ಫೋಟಕಗಳನ್ನು ಬಳಸದೇ ಕಲ್ಲು ಗಣಿಗಾರಿಕೆ ಮಾಡುವವರು ಕರಾರು ಮಾಡಿಕೊಂಡಿರುತ್ತಾರೆ. ಅಂತಹವರು ಇಲ್ಲಿಂದ ಸ್ಫೋಟಕಗಳನ್ನು ತೆಗೆದುಕೊಂಡು ಹೋಗಿ ತಜ್ಞರ ಕಡೆಯಿಂದ ಸ್ಫೋಟಗೊಳಿಸಬೇಕಾಗುತ್ತದೆ. ಇದು ಕಾನೂನಾತ್ಮಕವಾಗಿದೆ. ಆದರೆ ಇದು ಕಾನೂನಾತ್ಮಕವಾಗಿ ನಡೆಯುತ್ತದೆಯೋ ಅಥವಾ ಇಲ್ಲವೋ ಎನ್ನುವುದು ನನಗೆ ಬಹಳವಾಗಿ ಸಂಶಯವಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 174 ಕಲ್ಲು ಗಣಿಗಾರಿಕೆಗಳಿವೆ. ಆ ಪೈಕಿ ಕೇವಲ 111 ಮಾತ್ರವೇ ಚಾಲ್ತಿಯಲ್ಲಿವೆ. ಇಲ್ಲಿ ಕೇವಲ 21 ಗಣಿಗಾರಿಕೆಗಳಿಗೆ ಸ್ಫೋಟಕಗಳ ಪರವಾನಿಗೆಯನ್ನು ನೀಡಲಾಗಿದೆ. ನನಗನ್ನಿಸಿದಂತೆ, ಇನ್ನುಳಿದ 90 ಕಲ್ಲು ಗಣಿಗಾರಿಕೆಗಳು ಹೇಗೆ ನಡೆಯುತ್ತವೆ? ಇವರುಗಳು ಕರಾರು ಮಾಡಿಕೊಂಡು ಗಣಿಗಾರಿಕೆ ಮಾಡುತ್ತಾರೆಯೇ? ಇವರುಗಳು ಯಾವುದೇ ರೀತಿಯ ಕರಾರು ಮಾಡಿಕೊಂಡಿರುವುದಿಲ್ಲ. ಅದರ ಬದಲಾಗಿ, ತಮ್ಮ ಮನಸೋಇಚ್ಛೆ ಪರವಾನಿಗೆ ಇಲ್ಲದೇ ಅವ್ಯಾಹುತವಾಗಿ ಮತ್ತು ಕಾನೂನುಬಾಹಿರವಾಗಿ ಸ್ಫೋಟಕಗಳನ್ನು ಬಳಸಿಕೊಳ್ಳುತ್ತಾರೆ. ಇಲ್ಲಿ ಅಚಾತುರ್ಯವಾದಾಗ ಇಂತಹ ಘಟನೆಗಳಾಗುತ್ತವೆ. ಸ್ಫೋಟಕ ಸಾಗಾಣಿಕೆಗೆ ಕೆಲವು ನಿಯಮಗಳಿವೆ. ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಪೈಕಿ ನಿರ್ದಿಷ್ಟ ವಾಹನವಿರಬೇಕು. ಪರವಾನಿಗೆಯನ್ನು ಪಡೆದು, ನಿರ್ದಿಷ್ಟ ವಾಹನದಲ್ಲಿಯೇ ಸಾಗಿಸಬೇಕು. ಇವುಗಳು ಜನನಿಬಿಡ ಪ್ರದೇಶದಲ್ಲಿ ಸಂಚರಿಸುವುದನ್ನು ನಿಷೇಧಿಸಲಾಗಿದೆ. ಇವುಗಳು ಜನನಿಬಿಡ ಪ್ರದೇಶಗಳಲ್ಲಿ ಬರಬಾರದು. ಇತ್ತೀಚಿಗೆ, ಶಿವಮೊಗ್ಗ ಜಿಲ್ಲೆಯ ಹೊರವಲಯದಲ್ಲಾದ ಘಟನೆಯ ಪ್ರದೇಶಕ್ಕೆ ಭೇಟಿ ನೀಡಿ ನಾನು ನೋಡಿದ್ದೇನೆ. ಅಲ್ಲಿನ ಪ್ರಖ್ಯಾತ ಹೋಟೇಲ್‌ವೊಂದರಲ್ಲಿ ಸ್ಫೋಟಕಗಳನ್ನು ತುಂಬಿದ ವಾಹನದಾರರು ಟೀ ಕುಡಿದಿದ್ದಾರೆ. ಒಂದು ವೇಳೆ ಸದರಿ ಜನನಿಬಿಡ ಪ್ರದೇಶದಲ್ಲಿ ಆ ಸ್ಫೋಟಕಗಳನ್ನು ತುಂಬಿದ ವಾಹನವು ಸ್ಫೋಟಗೊಂಡಿದ್ದರೆ, ನೂರಾರು ಜನರು ಸಾವಿಗೀಡಾಡುವ ಪರಿಸ್ಥಿತಿ ಉದ್ಭವವಾಗುತ್ತಿತ್ತು. ಸದರಿ ಸ್ಫೋಟಕದಿಂದಾಗಿ ಆ ಭಾಗದ ಐದಾರು ಜಿಲ್ಲೆಗಳಲ್ಲಿ ಭೂಕಂಪನವಾಗುವಷ್ಟು ದೊಡ್ಡ ಪ್ರಮಾಣದಲ್ಲಿ ಅಲ್ಲಿ ಸ್ಫೋಟವಾಗಿದೆ. ನನಗೆ ಸದರಿ ಹೋಟೆಲ್ ಹೆಸರು ನೆನಪಿಲ್ಲ. ಒಂದು ವೇಳೆ, ಶಿವಮೊಗ್ಗ ಜಿಲ್ಲೆಯ ಮಧ್ಯಭಾಗದಲ್ಲಿರುವ ಹೋಟೆಲ್‌ನ ಬಳಿ ಅಚಾತುರ್ಯವಾಗಿ ಸದರಿ ವಾಹನವು ಸ್ಫೋಟಗೊಂಡಿದ್ದರೆ, ಶಿವಮೊಗ್ಗ ಜಿಲ್ಲೆಯ ಕಥೆಯು ಮುಗಿದು ಹೋಗುತ್ತಿತ್ತು. ಇದು ವಿಶ್ವಮಟ್ಟದಲ್ಲಿನ ವಾರ್ತೆಯಾಗುತ್ತಿತ್ತು. ಸ್ಫೋಟಕಗಳ ಸಾಗಾಣಿಕೆಯ ಸಂದರ್ಭದಲ್ಲಿ ವಾಹನದ ಎರಡೂ ಬದಿಗಳಲ್ಲಿ ಅಂದರೆ ಹಿಂದೆ ಮತ್ತು ಮುಂದೆ ಅಂಗರಕ್ಷಕರಿರಬೇಕು ಮತ್ತು ಅದಕ್ಕೆ ಕೆಂಪು ಬಣ್ಣದ ಬಾವುಟವಿರಬೇಕು. ಇದು ಅಪಾಯದ ಚಿಹ್ನೆಯಾಗಿದೆ. ಪರವಾನಿಗೆ ಇಲ್ಲದೇ ಸ್ಫೋಟಕ ವಸ್ತುಗಳನ್ನು ಬೇಕಾಬಿಟ್ಟಿಯಾಗಿ ಯಾವುದೇ ವಾಹನದಲ್ಲಿ ಸಾಗಾಣಿಕೆಯಾಗುತ್ತವೆ. ಇದಕ್ಕೆ ಯಾವುದೇ ರೀತಿಯ ಅಂಗರಕ್ಷಕರು ಇರುವುದಿಲ್ಲ; ಯಾವುದೇ ರೀತಿಯಾದ ಬಾವುಟಗಳನ್ನು ಹೊಂದಿರುವುದಿಲ್ಲ. ಒಂದು ವೇಳೆ ಹೀಗೆ ಮಾಡಿದರೆ, ಇದರ ಬಗ್ಗೆ ವಿಚಾರಣೆಯಾಗುತ್ತದೆ. ಸ್ಫೋಟಕಕ್ಕೆ ನಿಗದಿಪಡಿಸಿದ ನಿರ್ದಿಷ್ಟ ಸಾಮಗ್ರಿಗಳನ್ನು ಮಾತ್ರವೇ ಸಾಗಾಣಿಕೆ ಮಾಡಬೇಕು. ನಿಗದಿಪಡಿಸಿದ್ದಕ್ಕಿಂತ ಹೆಚ್ಚಿಗೆ ತೆಗೆದುಕೊಂಡು ಹೋಗುವುದಕ್ಕೆ ಬರುವುದಿಲ್ಲ. ಈ ರೀತಿಯ ನಿಯಮಗಳನ್ನು ಯಾರು ಪಾಲಿಸುತ್ತಾರೆ? ನಮ್ಮ ರಾಜ್ಯದ ಗಡಿಯನ್ನು ದಾಟಿ ಈ ರೀತಿಯ ಸ್ಫೋಟಕಗಳು ಪರವಾನಿಗೆಯಿಲ್ಲದೇ ಹೇಗೆ ಒಳಬರುತ್ತವೆ ಎನ್ನುವುದೇ ಇಲ್ಲಿರುವ ನನ್ನ ಮೂಲಭೂತ ಪ್ರಶ್ನೆಯಾಗಿದೆ. ಬೇರೆ ಬೇರೆ ರಾಜ್ಯಗಳಿಂದ ಜೆಲಟಿನ್, ಡೆಟೋನೇಟರ್‌ಗಳಂತಹ ಸ್ಫೋಟಕಗಳು ನಿಯಂತ್ರಣವಿಲ್ಲದೇ ಹೇಗೆ ಬೇಕೋ ಹಾಗೇ ನಮ್ಮ ರಾಜ್ಯದೊಳಗೆ ಬರುತ್ತವೆ. ನಮ್ಮ ರಾಜ್ಯದಲ್ಲಿ ಗುಪ್ತದಳ ಇಲಾಖೆಯು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಇವರುಗಳೆಲ್ಲರ ಕಣ್ಣುಗಳನ್ನು ತಪ್ಪಿಸಿ, ನಮ್ಮ ರಾಜ್ಯದೊಳಗೆ ಬರುವುದಕ್ಕೆ ಸಾಧ್ಯವಿದೆಯೇ? ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಘಟನೆಗಳಾದ ನಂತರ ಅಲ್ಲಿ ಅಪಾರ ಪ್ರಮಾಣದ ಸ್ಫೋಟಕ ವಶವಾಗಿರುವ ಸುದ್ದಿಯು ದಿನಾಂಕ 08/03/2021 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಬೆಳಗಾವಿ ಜಿಲ್ಲೆಯ ಹೊನಗಾ ಎಂಬ ಪ್ರದೇಶದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

6,675 ಕೆ.ಜಿ. ಮತ್ತು ಯಾದಗಿರಿ ಜಿಲ್ಲೆಯ ಕೆಂಭಾವಿ ಎನ್ನುವಲ್ಲಿ 750 ಕೆ.ಜಿ. ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ. Is it a small quantity? It is a very big quantity of explosives. ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನವರು ಬೆಳಗಾವಿ ಜಿಲ್ಲೆಯನ್ನು ಪ್ರತಿನಿಧಿಸುತ್ತಾರೆ. **(ಮುಂದು)**

**(420)/16–3–2021/1–50/ಎಲ್ಎಂ/ಎಲ್ಎಂ**

**ಶ್ರೀ ಎಸ್.ಆರ್.ಪಾಟೀಲ್(ಮುಂದು):–**

ಬೆಳಗಾವಿ ಜಿಲ್ಲೆಯ ಹೊನಗಾದಲ್ಲಿ 6675 ಕೆ.ಜಿ ಮತ್ತು ಯಾದಗಿರಿ ಜಿಲ್ಲೆಯ ಕೆಂಭಾವಿಯಲ್ಲಿ 750 ಕೆ.ಜಿ. ಸ್ಫೋಟಕವನ್ನು ವಶಪಡಿಸಕೊಳ್ಳಲಾಗಿದೆ. Is it a small quantity? It is a big quantity of explosives. ನಮ್ಮ ಸರ್ಕಾರಿ ಮುಖ್ಯ ಸಚೇತಕರು ಸ್ಪರ್ಧಿಸುವಂತಹ ಬೆಳಗಾವಿ ತಾಲ್ಲೂಕಿನ ಹೊನಗಾ ಗ್ರಾಮದ ಬಳಿ ನಿಯಮ ಉಲಂಘಿಸಿ ಸಾಗಿಸುತ್ತಿದ್ದ 4 ಲಕ್ಷ ರೂಪಾಯಿತಳ ಮೌಲ್ಯದ 6.675 ಕೆ.ಜಿ ಸ್ಫೋಟಕ ವಸ್ತುಗಳನ್ನು ಕಾಕತಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮಾಲೀಕರನ್ನು ಬಂಧಿಸಬೇಕಾಗಿದೆ ಎಂದು ಡಿಸಿಪಿ ವಿಕ್ರಂ ಅಮಟೆ ತಿಳಿಸಿದ್ದಾರೆ. ಯಾವ ಮಾಲೀಕರೊ ಏನೊ ಗೊತ್ತಿಲ್ಲ, ಅವರನ್ನು ಬಂಧಿಸಲು ಜಾಮೀನವನ್ನು ಕೇಳಿ ಬಂಧಿಸುತ್ತಾರೊ ಎನು ಗೊತ್ತಿಲ್ಲ. 750 ಕೆ.ಜಿ ಸ್ಫೋಟಕ ವಸ್ತು ಜಪ್ತಿಯಾಗಿದೆ. ಯಾದಗಿರಿ ಜಿಲ್ಲೆಯ ಕೆಂಭಾವಿ ಸಮೀಪದ ಆಲ್ದಾಳ ಗ್ರಾಮದ ಕಲ್ಲು ಕ್ವಾರಿಯಲ್ಲಿ ಭಾನುವಾರ ಕಲ್ಲು ಸಿಡಿಗಾರಿಕೆಗೆ ಬಳಸಲ್ಪಡುವ 750 ಕೆ.ಜಿ. ತೂಕದ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆಲ್ದಾಳ ಗ್ರಾಮದಲ್ಲಿ 750 ಕೆ.ಜಿ. ಮತ್ತು ಬೆಳಗಾವಿ ಜಿಲ್ಲೆಯ ಹೊನಗಾ ಗ್ರಾಮದಲ್ಲಿ 6,675 ಕೆ.ಜಿ ಸ್ಫೋಟಕವನ್ನು ವಶಪಡಿಸಿಕೊಂಡಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ತವರೂರಾದ ಶಿವಮೊಗ್ಗದಲ್ಲಿ ನಡೆದಿರುವ ಒಂದು ಘಟನೆ ಬಗ್ಗೆ ಉದಯವಾಣಿಯಲ್ಲಿ ವರದಿ ಬಂದಿದೆ. ಸ್ವಲ್ಪ ದಿನಗಳ ಹಿಂದೆ ಅಲ್ಲಿಯೇ ಸ್ಫೋಟವಾಗಿ 6 ಜನ ಸತ್ತಿದ್ದಾರೆ. ಮತ್ತೆ ಶಿವಮೊಗ್ಗ ವಿಮಾನ ನಿಲ್ದಾಣದ ಬಳಿ ಭಾರೀ ಪ್ರಮಾಣದ ಸ್ಫೋಟಕ ಪತ್ತೆಯಾಗಿರುವ ವರದಿ ಬಂದಿದೆ. ಶಿವಮೊಗ್ಗದ ಸೋಗಾನೆ ವಿಮಾನ ನಿಲ್ದಾಣದ ಬಳಿ ಭಾರೀ ಪ್ರಮಾಣದ ಸ್ಫೋಟಕ ತುಂಬಿದ್ದ ಎರಡು ವಾಹನಗಳು ಸೋಮವಾರ ಪತ್ತೆಯಾಗಿವೆ. ಇವುಗಳಲ್ಲಿ 904 ಕಡ.ಜಿ. ಜಿಲೆಟಿನ್ ಕಡ್ಡಿಗಳು, 3,267 ಡಿಟೋನೇಟರ್‌ಗಳು ಸೇರಿದಂತೆ ಹಲವಾರು ಸ್ಫೋಟಕ ವಸ್ತುಗಳು ಇದ್ದವು ಎಂದು ತಿಳಿದು ಬಂದಿದೆ. ಇವೆಲ್ಲವು ಹಿಂದೆ ಸ್ಫೋಟಕಗೊಂಡು 6 ಜನ ಮರಣಹೊಂದಿದೆ ಮಾನ್ಯ ಮುಖ್ಯಮಂತ್ರಿಗಳ ಊರಿನಲ್ಲಿಯೇ ನಡೆದಿರುವುದು. ಟಾಟಾ 407

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಾಹನದಲ್ಲಿ ಜಿಲೆಟಿನ್ ಕಡ್ಡಿಗಳ 36 ಬಾಕ್ಸ್ ಪತ್ತೆಯಾಗಿವೆ. ಪಿಕ್-ಅಪ್ ವಾಹನದಲ್ಲಿ 3,267ಇಲೆಕ್ಟ್ರಾನಿಕ್ ಡಿಟೋನೇಟರ್‌ಗಳು, 9 ಮೀಟರ್‌ನ 79 ಎಕ್ಸೆಲ್‌ಗಳು, 3 ಮೀಟರ್ ಉದ್ದದ 105 ಎಕ್ಸೆಲ್‌ಗಳು ಇದ್ದವು ಎಂದು ತಿಳಿದುಬಂದಿದೆ. ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿ ಸ್ಥಳದ ಸಮೀಪದಲ್ಲಿ ಕಪ್ಪುಕಲ್ಲಿನ ಕ್ವಾರಿ ಇದೆ. ಇಲ್ಲಿಯೇ ಬಂಡೆ ಸ್ಫೋಟಿಸಿ, ಕಾಮಗಾರಿಗೆ ಜಲ್ಲಿ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಬಳಸುವ ಸ್ಫೋಟಕಗಳ ಪೂರೈಕೆಗೆ ಚಿಕ್ಕಬಳ್ಳಾಪುರದ ಸ್ಫೋಟಕ ಪೂರೈಕೆ ಕಂಪನಿಯೊಂದರ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಬಂಡೆ ಸ್ಫೋಟಿಸಲು ಈ ಒಂಪನಿಯವರು ಸ್ಫೋಟಕಗಳನ್ನು ತಂದಿದ್ದರು. ಸ್ಫೋಟಕಗಳಿದ್ದ ಎರಡು ವಾಹನಗಳನ್ನು ಹಾಗೆ ಬಿಟ್ಟು ಹೋಗಿದ್ದರಿಂದ ಅಂತಕ ಸೃಷ್ಟಿಯಾಗಿತ್ತು. ಇಷ್ಟು ಅಪಾರ ಪ್ರಮಾಣದ ಸ್ಫೋಟಕಗಳು ಹೇಗೆ ಬರುತ್ತವೆ? ಗುಪ್ತದಳದವರು ಇಲ್ಲವೆ? ಇದರ ಬಗ್ಗೆ ಬಿಗಿ ಕ್ರಮವನನ್ನು ತೆಗೆದುಕೊಳ್ಳುತ್ತೇವೆ, ಇದು ಮತೆ ಪುನರಾರ್ತನೆಯಾಗದಂತೆ ಕ್ರಮ ತೆಗೆದುಕೊಳ್ಳುತ್ತೇವೆ, ಇದರ ಬಗ್ಗೆ ಜಬರದಸ್ತ್ ತನಿಖೆ ಮಾಡಿಸುತ್ತೇವೆ ಎಂದು ಮಾನ್ಯ ಗೃಹ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರು ಹೇಳಿ ಒಂದು ತಿಂಗಳಲ್ಲಿಯೇ ಹೀಗೆ ಆಗಿದೆ. ಮತ್ತೆ ಈ ರೀತಿಯಾಗಲು ಕಾರಣಗಳು ಇರಬಹುದಲ್ಲವೆ? There should be a valid reasons. ಇದರ ಹಿನ್ನೆಲೆ ಏನು ಇರಬಹುದು? ನನ್ನ ಮಾಹಿತಿ ಪ್ರಕಾರ ಗಣಿ ಮತ್ತು ಕ್ರಷರ್, ಕಲ್ಲು ಮಾಲೀಕರು ಅಧಿಕಾರಿಗಳಿಗೆ monthly fix ಮಾಡಿರುತ್ತಾರೆ. ನಾನು ಇಲಾಖಾ ಮಂತ್ರಿಗಳಿಗೆ ಹೇಳುವುದಿಲ್ಲ. ತನಿಖೆ ಮಾಡಿಸಿ ಯಾರು ಹಫ್ತಾ ವಸೂಲಿ ಮಾಡುತ್ತಾರೆ ಎನ್ನುವುದು ನಿಮಗೆ ಗೊತ್ತಾಗುತ್ತದೆ.

**ಶ್ರೀ ಮುರುಗೇಶ್ ಆರ್.ನಿರಾಣಿ( ಗಣಿ ಮತ್ತು ಭೂವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಗಳೆ, ವಸೂಲಿ ಮಾಡುತ್ತಿರುವವರು ಯಾರು ಎನ್ನುವುದನ್ನು ಅವರು ಹೇಳಿದರೆ ಅಂತವರ ಮೇಲೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಅಥವಾ ಇಲಾಖೆಯ ಮುಖ್ಯಸ್ಥರಿಗೆ ಮುಟ್ಟುತ್ತಿದೆ ಎನ್ನುವುದಾದರೆ ಅದನ್ನು ಹೇಳಿ.

**ಶ್ರೀ ಕೆ.ಗೋವಿಂದರಾಜು:-** ಸರ್ಕಾರಕ್ಕೆ ಎಲ್ಲಾ ಮಾಹಿತಿ ಇರುತ್ತದೆ. ನೀವೆ ಅದನ್ನು ಕಂಡುಹಿಡಿಯಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ತಾವು ಕ್ಯಾಬಿನೆಟ್ ಮಂತ್ರಿಗಳು, ಇಲಾಖೆ ನಿಮ್ಮ ಕೈಯಲ್ಲಿ ಇದೆ. ನಿಮ್ಮ ಇಲಾಖೆಯಲ್ಲಿ ಯಾರೆ ಹಫ್ತಾ ವಸೂಲಿ ಮಾಡಲಿ ultimately your name will be spoiled.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಗಳೆ, ನನ್ನ ಒಂದು ಪ್ರಶ್ನೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಹಫ್ತಾ ವಸೂಲಿ ಬಗ್ಗೆ ಹೇಳಿದರು ಅದು ನಡೆಯುತ್ತಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ಇವತ್ತು-ನಿನ್ನೆಯ ಪ್ರಶ್ನೆಯಲ್ಲ ಹಿಂದಿನಿಂದಲೂ ಎಲ್ಲಾ ಕಡೆಗಳಲ್ಲಿಯು ನಡೆದುಕೊಂಡು ಬರುತ್ತಿದೆ. ಇದನ್ನು ನಿಲ್ಲಿಸಲು ಪ್ರಯತ್ನ ಮಾಡುತ್ತಿದ್ದೇವೆ. ತಪ್ಪು ಮಾಡಿದವರನ್ನು suspend ಕೂಡಾ ಮಾಡಿದ್ದೇವೆ.

**ಶ್ರೀ ಕೆ.ಗೋವಿಂದರಾಜು:-** ಯಾರನ್ನು suspend ಮಾಡಿದ್ದೀರಿ ಎನ್ನುವ ಮಾಹಿತಿಯನ್ನು ದಯಮಾಡಿ ಸದನಕ್ಕೆ ಕೊಡಿ.

**ಶ್ರೀ ಎಸ್.ಆರ್.ಪಾಟೀಲ್:-** ಹಫ್ತಾ ವಸೂಲಿ ನಡೆಯುತ್ತಿದೆ ಎಂದು ಮಂತ್ರಿಗಳೆ ಒಪ್ಪಿಕೊಂಡ ಮೇಲೆ ಮುಗಿಯಿತು.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಯಾರು ಹಫ್ತಾ ವಸೂಲಿ ಮಾಡುವವರ ವಿಚಾರ ನಮ್ಮ ಗಮನಕ್ಕೆ ಬಂದಾಗ suspend ಮಾಡಿದ್ದೇವೆ. ಸಂಶಯ ಇರುವವರಿಗೆ ನೋಟಿಸ್ ಕೊಟ್ಟಿದ್ದೇವೆ. ಇನ್ನು ಹೆಚ್ಚಿನ ಮಾಹಿತಿ ನಿಮ್ಮ ಹತ್ತಿರ ಇದ್ದರೆ ಸದನದ ಗಮನಕ್ಕೆ ತಂದಿದರೆ ಅಂತವರ ಮೇಲೆ ಕ್ರಮ ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಹಫ್ತಾ ವಸೂಲಿ ನಡೆಯುತ್ತಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ:-** ನಿಮಗೆ ಎಲ್ಲವೂ ಗೊತ್ತಿರುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ನೀವೆ ಆ ಇಲಾಖೆಯ ಮಂತ್ರಿಗಳು. ಆ department ನಿಮಗೆ concern ಇದೆ. ರಾಜ್ಯದಲ್ಲಿ ಇಂತಹ ಘಟನೆಗಳು ಎಲ್ಲಿಯಾದರೂ ನಡೆದರೆ..

**ಉಪಸಭಾಪತಿಯವರು:-** ನಿಮ್ಮ ಸಹಕಾರವು ಬೇಕು ಎಂದು ಅವರು ಕೇಳುತ್ತಿರುವುದು. ನಿಮ್ಮ ಸಹಕಾರವನ್ನು ಕೊಟ್ಟರೆ ಇನ್ನು ಸೀರಿಯಸ್ ಆಗಿ ಕ್ರಮ ತೆಗೆದುಕೊಳ್ಳಬಹುದು ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಸರ್ಕಾರದಲ್ಲಿ ಎಲ್ಲ ವ್ಯವಸ್ಥೆಯು ಇದೆ. Investigation Agency ಇದೆ. ಎಲ್ಲಿ ಏನು ನಡೆಯುತ್ತಿದೆ ಎನ್ನುವ ಬಗ್ಗೆ ನಿಮಿಷ ನಿಮಿಷದ ಮಾಹಿತಿ ಮಂತ್ರಿಗಳಿಗೆ ಸಿಗುತ್ತಿರುತ್ತದೆ. ನಾನು ಮಂತ್ರಿಯಾಗಿ, ಸಭಾನಾಯಕನಾಗಿ ಕೆಲಸ ಮಾಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿ ಇರುವುದಿಲ್ಲವೆ ಸರ್ಕಾರಕ್ಕೆ? ಅಲ್ಲಿ Superintendent of Police and Deputy Commissioner ಅವರ ಕೈಗೊಂಬೆಯಾಗಿದ್ದಾರೆ. ಅವರಿಗೆ independent status ಇದ್ದೆಯೇ ಇಲ್ಲವೆ ಅನ್ನಿಸುತ್ತಿದೆ. They are the representatives of the State Government. They should act very judiciously. ಎಲ್ಲ ಕೆಲಸಗಳನ್ನು ಕಾನೂನುಬದ್ಧವಾಗಿ ಮಾಡಬೇಕು. ಯಾರದಾದರೂ ಕೈಗೊಂಬೆಯಾಗಿ ಅವರು ಕೆಲಸ ಮಾಡಿದರೆ ಇಂತಹ ಘಟನೆಗಳಾಗುತ್ತವೆ. ಈ ಘಟನೆಯಾಗಬೇಕಾದರೆ, ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಮಾಲೀಕರಿಗೆ 35% ಪಾಲುದಾರಿಕೆಯನ್ನು ಅಧಿಕಾರಿಗಳು ಕೇಳಿದ್ದಾರೆ, it is subject to correction. ಅದಕ್ಕೆ ಅವರು ಒಪ್ಪದೆ ಇರುವುದರಿಂದ raid ಮಾಡಲಾಗಿದೆ ಎನ್ನುವ ಸುದ್ದಿ ಇದೆ. 111 ಕಲ್ಲು ಗಣಿಗಾರಿಕೆಗಳು ಚಾಲ್ತಿಯಲ್ಲಿವೆ ಎಂದು ನಾನು ಹೇಳಿದ್ದೇನೆ. 111ರಲ್ಲಿ ನಾನು quote ಮಾಡಿದ ಗಣಿಗೆ ಫೆಬ್ರವರಿ 11ನೇ ತಾರೀಖಿನಂದು ಅಧಿಕಾರಿಗಳು ಭೇಟಿ ಕೊಟ್ಟಿದ್ದಾರೆ. 111ರಲ್ಲಿ ಇದೊಂದು ಗಣಿ ಕಣ್ಣಿಗೆ ಕಂಡಿದ್ದೇಯೆ? ಎಲ್ಲ ಗಣಿಗಳ ಮೇಲೆ ದಾಳಿ ಮಾಡಬೇಕಾಗಿತ್ತು? Pinpoint instructions, ಇಲ್ಲಿಯೇ ಹೋಗಿ ತನಿಖೆ ಮಾಡಿ ಎಂದು ಅವರಿಗೆ ಯಾರು ಹೇಳಿಕೊಟ್ಟರು. ಸ್ಫೋಟಕ್ ವಸ್ತುಗಳಿದ್ದರೆ ಜಪ್ತಿ ಮಾಡಿ, ಅವರ ಮೇಲೆ ಕೇಸ್ ಹಾಕಬಹುದು ಎಂದು ಹೀಗೆ ಮಾಡಿದ್ದಾರೆ. ಗಣಿ ಮಾಲೀಕರಿಗೆ ಅಧಿಕಾರಿಗಳು ಡಿಮ್ಯಾಂಡ್ ಮಾಡುತ್ತಾರೆ. ಅದಕ್ಕೆ ಅವರು ಒಪ್ಪದಿದಾಗ ಈ ರೀತಿ ಮಾಡುತ್ತಾರೆ. ಗಣಿ ಮಾಲೀಕರು ಸಾಕಷ್ಟು ಬಂಡವಾಳವನ್ನು ಹಾಕಿ ಕೆಲಸವನ್ನು ಪ್ರಾರಂಭ ಮಾಡಿರುತ್ತಾರೆ. ಜಲ್ಲಿ ಮತ್ತು ಮರಳು. ಕಲ್ಲು ರಸ್ತೆ ನಿರ್ಮಾಣಕ್ಕೆ, ಕಟ್ಟಡಗಳಿಗೆ, ಸೇತುವೆಗಳ ನಿರ್ಮಾಣಕ್ಕೆ ಬೇಕು it is inevitable. ಕಲ್ಲು ಕ್ವಾರಿಗಳನ್ನು, Crushers, Manufacturing Sand Units ಗಳನ್ನು ಬಂದ್ ಮಾಡಲು ಆಗುವುದಿಲ್ಲ. ಇಡೀ stand-still ಆಗುತ್ತದೆ. ಸರ್ಕಾರದ ಅನೇಕ ಕೆಲಸಗಳು, ಖಾಸಗಿಯವರು ನಡೆಸುವುದು, ಇವೆಲ್ಲವು ಕಾನೂನುಬದ್ಧವಾಗಿ ನಡೆಯಬೇಕು. ಆದರೆ ಈ ರೀತಿ ಪ್ರಾಣ ಹಾನಿಯಾಗುವಂತಹ ಪ್ರಕರಣಗಳು ನಡೆಯಬಾರದು. ಇಂತಹ ಸ್ಫೋಟಕಗಳು ಶಿವಮೊಗ್ಗದಲ್ಲಿ ಮತ್ತೆ ಸಿಕ್ಕಿವೆ, ಬೆಳಗಾವಿ, ಯಾದಗಿರಿ ಜಿಲ್ಲೆಯಲ್ಲಿ ಸಿಕ್ಕಿವೆ. ಇದು ನನಗೆ ಬಂದಿರುವ ಮಾಹಿತಿ ಪ್ರಕಾರ ಇಷ್ಟು. ಅದರೆ ಇಂತಹ ನೂರಾರು ಪ್ರಕರಣಗಳು ಇನ್ನು ಇವೆ. ಇದೇನು vegetable ಮಾರಾಟ ಮಾಡಿದ ಹಾಗೆ ಮಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ ನಿಮಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ನೀವು ಮುಗಿಸಿ ಎಂದರೆ ಮುಗಿಸುತ್ತೇನೆ.

**ಉಪಸಭಾಪತಿಯವರು:–** ಇಷ್ಟು ಸಮಯ ಬೇಕು ಎಂದರೆ ಲಂಚ್‌ಗೆ ಬ್ರೇಕ್ ಮಾಡಬಹುದು.

**ಶ್ರೀ ಎಸ್.ಆರ್.ಪಾಟೀಲ್:–** ಊಟವಾದ ನಂತರ ಮಾತನಾಡುತ್ತೇನೆ.

**ಉಪಸಭಾಪತಿಯವರು:–** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3–00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(421) 16.3.2021 3.20 ಪಿಕೆ:ವಿಕೆ**

**(ಮಧ್ಯಾಹ್ನ 1 ಗಂಟೆ 59 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಉಪಸಭಾಪತಿಯವರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರು ಪೀಠಾಸೀನರಾದರು)**

**ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಮುಂದುವರೆದ ಚರ್ಚೆ**

**ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ಸರಹದ್ದಿನಲ್ಲಿ ಬರುವ ಹಿರೇನಾಗವಲ್ಲಿ ಗ್ರಾಮದ ಬಳಿ ಕಾನೂನುಬಾಹಿರವಾಗಿ ನಡೆಯುತ್ತಿರುವ ಗಣಿಗಾರಿಕೆ ಕುರಿತು**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಬೆಳಿಗ್ಗೆ ಕೆಲವು ವಿಚಾರಗಳನ್ನು ಹೇಳಿದೆ. ಇದಕ್ಕೆ ಪರಿಹಾರ ಕಂಡುಹಿಡಿಯುವುದು ಬಹಳ ಮುಖ್ಯವಾದುದು. ನಾನು ಮಾನ್ಯ ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ, ಅವರು ಪ್ರಾಮಾಣಿಕವಾಗಿ, ಹಫ್ತಾ ಎನ್ನುವುದು ಅವ್ಯಾಹತವಾಗಿ ನಡೆಯುತ್ತಿದೆ ಎಂದು ಒಪ್ಪಿಕೊಂಡರು. He did not deny it. I appreciate his honesty. Because I think he is true to his conscious ಎಂದು ನಾನು ಭಾವಿಸುತ್ತೇನೆ. ಇಲ್ಲ, ಉಂಟು, ಹಾಗೆ–ಹೀಗೆ ಎಂದು ಹೇಳಿದ್ದರೆ ಮತ್ತೆ ಅದರ ಬಗ್ಗೆ ಹತ್ತು ಮಾತುಗಳನ್ನು ಹೇಳಬೇಕಾಗುತ್ತಿತ್ತು. ಎಲ್ಲಿಯವರೆಗೆ ಈ ಹಫ್ತಾ ದಂಧೆ ನಿಲ್ಲುವುದಿಲ್ಲವೋ ಅಲ್ಲಿಯ ತನಕ ಯಾವುದೇ ರೀತಿಯಿಂದ ಇದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಯಂತ್ರಣ ಮಾಡುವುದಕ್ಕೆ ಅಸಾಧ್ಯ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ರೀತಿ ಯಾರು ಮಾಡುತ್ತಾರೆ, ಏನು ಎಂಬುದಾಗಿ ಕೇಳಿದರು. ತಾಲ್ಲೂಕು ಉಸ್ತಾದ್‌ಗಳು, ಜಿಲ್ಲಾ ಉಸ್ತಾದ್‌ಗಳಿರುತ್ತಾರೆ. ಆ ಉಸ್ತಾದ್‌ಗಳು ಯಾರು ಎನ್ನುವುದು ಮಾನ್ಯ ಸಚಿವರಿಗೆ ಗೊತ್ತಿರುತ್ತದೆ. ಪ್ರತಿಪಕ್ಷದವರಿಗೆ ಹೇಗೆ ಮಾಹಿತಿಗಳು ಇರುತ್ತವೆಯೋ ಹಾಗೆಯೇ ಮಾನ್ಯ ಸಚಿವರಿಗೂ ಆ ಕುರಿತು ಮಾಹಿತಿಗಳು ಇರುತ್ತವೆ. ಯಾರು, ಏನು, ಎಲ್ಲಿ recovery ಮಾಡುತ್ತಾರೆ, ಎಷ್ಟು recovery ಮಾಡುತ್ತಾರೆ, ಹೇಗೆ recovery ಮಾಡುತ್ತಾರೆ ಎನ್ನುವುದು ಗೊತ್ತಿರುತ್ತದೆ. ಇಂಥದ್ದನ್ನು ನೀವು ನಿಲ್ಲಿಸಬಹುದು ಅಲ್ಲವೇ? ಹೋದ ಅಧಿವೇಶನದಲ್ಲಿ ಶಿವಮೊಗ್ಗದಲ್ಲಿ ಆದಂತಹ ಘಟನೆ ಬಗ್ಗೆ ಮಾತನಾಡಿದೆವು. ಇವತ್ತು ಈ ಪ್ರಕರಣದ ಬಗ್ಗೆ ಮಾತನಾಡುತ್ತಿದ್ದೇವೆ. ಇನ್ನು ಮುಂದಿನ ಅಧಿವೇಶನದಲ್ಲಿ ಇಂತಹ ಒಂದು ಪ್ರಕರಣಗಳು ಬರುತ್ತದೆಯೋ ಅಥವಾ ಎರಡು ಪ್ರಕರಣಗಳು ಬರುತ್ತದೆಯೋ ಗೊತ್ತಿಲ್ಲ. ಇದಕ್ಕೊಂದು ಪರಿಹಾರ ಕಂಡುಕೊಳ್ಳಬೇಕು ಅಲ್ಲವೇ? ಪರಿಹಾರ ಕಂಡುಹಿಡಿಯದೇ ಹೋದರೆ ನಾವು ಇಲ್ಲಿ ಯಾವ ಪುರಷಾರ್ಥಕ್ಕೆ ಬಂದು ಮಾತನಾಡಬೇಕು? ಕಲ್ಲು ಗಣಿಗಾರಿಕೆಯ ಅವಶ್ಯಕತೆ ಬಹಳ ಇದೆ. Crusher, it is quite essential material. ರಸ್ತೆ ಮಾಡಬೇಕಾಗುತ್ತದೆ, ಸೇತುವೆ, ಕಟ್ಟಡಗಳ ನಿರ್ಮಾಣಕ್ಕೆ ಎಂ–ಸ್ಯಾಂಡ್ ಬೇಕು, ಜಲ್ಲಿ ಬೇಕು. ಆದರೆ ಕಾನೂನುಬದ್ಧವಾಗಿ ಎಲ್ಲವೂ ನಡೆಯಬೇಕು.

ಮಾನ್ಯ ಸಭಾಪತಿಯವರೇ, ತರಕಾರಿ ಮಾರ್ಕೆಟ್‌ಗೆ ಹೋದಾಗ ಒಂದೊಂದು ಸಲ ತರಕಾರಿ ಸಿಗುವುದು ಕಷ್ಟವಾಗುತ್ತದೆ. ಆದರೆ ಈ ಸ್ಫೋಟಕಗಳು ಎಲ್ಲಿ ಬೇಕಾದರೂ ಅಲ್ಲಿ ಸಿಗುತ್ತದೆ. ದುಡ್ಡು ಕೊಟ್ಟು ಇಂತಹ ಕಡೆ ತಂದುಕೊಡಿ ಎಂದು ಹೇಳಿದರೆ ಅಲ್ಲಿಗೆ ತಂದು ಕೊಡುತ್ತಾರೆ. ಇದು ಅವ್ಯಾಹತವಾಗಿ ರಾಜ್ಯದ ಉದ್ದಗಲಕ್ಕೂ ನಡೆಯುತ್ತಿದೆ. ಶಿವಮೊಗ್ಗದಲ್ಲಿ ಏರ್‌ಪೋರ್ಟ್ ಪಕ್ಕದಲ್ಲೇ ಒಂದು ದೊಡ್ಡ ಘಟನೆ ಆಯಿತು. ನಾನು ಇದರ ಬಗ್ಗೆ ಬೆಳಿಗ್ಗೆ ಹೇಳಿರುವುದರಿಂದ ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಭಾಪತಿಯವರೇ, ಆ ಜಿಲ್ಲೆಯಲ್ಲಿ ಒಂದೆರಡು ಕನ್‌ಸ್ಟ್ರಕ್ಷನ್ ಕಂಪನಿಗಳಿವೆ. ಆ ಕಂಪನಿಗಳಿಗೆ ಪುಕ್ಕಟೆಯಾಗಿ ಜಲ್ಲಿ ಮತ್ತು ಎಂ–ಸ್ಯಾಂಡ್ ಸಪ್ಲೈ ಮಾಡಬೇಕು, ಇಲ್ಲವಾದರೆ ಅದನ್ನು ರೇಡ್ ಮಾಡಲಾಗುತ್ತದೆ. I think these bureaucrats have become puppets in hands of Politicians. ಇದು most lucrative business ಆಗಿದೆ. ಅಧಿಕಾರಿಗಳು ಮತ್ತು Non-officials ದುಡ್ಡು ಹೊಡೆಯುತ್ತಾರೆ. ಅಧಿಕಾರಿಗಳು ಮತ್ತು ಅಧಿಕಾರೇತರರು ಒಂದಾಗಿ ಭ್ರಷ್ಟಾಚಾರದಲ್ಲಿ ಭಾಗಿಯಾದರೆ ಇದನ್ನು ಭಗವಂತ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದರೂ ನಿಲ್ಲಿಸುವುದಕ್ಕೆ ಆಗುವುದಿಲ್ಲ. It is humanly impossible to stop such an illegal activity. It will go on. ಇದು ಅವ್ಯಾಹತವಾಗಿ ನಡೆಯುತ್ತದೆ. ಕೆಲವು ರಾಜಕಾರಣಿಗಳು construction company own ಮಾಡಿರುತ್ತಾರೆ. ಆ ಕನ್‌ಸ್ಟ್ರಕ್ಷನ್ ಕಂಪನಿಗೆ, ನೀವು ಇಷ್ಟು ಜಲ್ಲಿ ಕೊಡಬೇಕು, ನೀನು ಇಷ್ಟು ಎಂ–ಸ್ಯಾಂಡ್ ಕೊಡಬೇಕು, ಇಲ್ಲದೇ ಇದ್ದರೆ ನಿನ್ನ ಗತಿ ಏನಾಗುತ್ತದೆ ನೋಡು ಎಂದು ಹೇಳಿ, ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ರೇಡ್ ಮಾಡಿಸುತ್ತೇವೆ ಎಂದು ಹೇಳುತ್ತಾರೆ. ಹಫ್ತಾ ಕೊಡದೇ ಇದ್ದರೆ, ಪಾರ್ಟ್‌ನರ್‌ಶಿಪ್ ಕೊಡದೇ ಇದ್ದರೆ ಮತ್ತೆ, ಅವರ ಕನ್‌ಸ್ಟ್ರಕ್ಷನ್ ಕಂಪನಿಗೆ ಉಚಿತವಾಗಿ ಜಲ್ಲಿ ಕೊಡಬೇಕು, ಎಂ–ಸ್ಯಾಂಡ್ ಕೊಡಬೇಕು ಎಂದು ಹೇಳಿದರೆ ಪಾಪ ಆ ಕಲ್ಲು ಗಣಿ ಮಾಲೀಕರು ಏನು ಮಾಡಬೇಕು? ಯಾರಿಗೆ ಕೊಡುತ್ತೇವೆ, ಎಷ್ಟು ಕೊಡುತ್ತೇವೆ, ಏನು ಕೊಡುತ್ತೇವೆ ಎಂದು ಅವರಿಗೆ ಹೇಳುವುದಕ್ಕೂ ಆಗುವುದಿಲ್ಲ. ಫೆಬ್ರವರಿ 7 ರಂದು ವಿಸಿಟ್ ಮಾಡಿದ್ದಾರೆ. 111 ಕಲ್ಲು ಗಣಿಗಾರಿಕೆಗಳು ಅಲ್ಲಿ ಚಾಲ್ತಿಯಲ್ಲಿವೆ. But they are not agreed for the terms. ನೀನು ಹೀಗೆಯೇ ಮಾಡಬೇಕು, ಇಷ್ಟೇ ಮಾಡಬೇಕು; ಪಾರ್ಟ್‌ನರ್‌ಶಿಪ್ ಮಾಡಬೇಕು ಇದಕ್ಕೆ ಒಪ್ಪದೇ ಇದ್ದರೆ ನಿನ್ನನ್ನು ಏನು ಮಾಡುತ್ತೇವೆ ನೋಡು, ನಮ್ಮ ಜಿಲ್ಲೆಯಲ್ಲಿ, ನಮ್ಮ ಕ್ಷೇತ್ರದಲ್ಲಿ ಹೇಗೆ ಈ ಕಲ್ಲು ಗಣಿಗಾರಿಕೆಯನ್ನು ನಡೆಸಿಕೊಂಡು ಹೋಗುತ್ತಿಯಾ we will see, how you will run ಎಂದು ಹೇಳುತ್ತಾರೆ. ನಾವು 5–6 ವರ್ಷಗಳು ಮಾತ್ರ ಇರುತ್ತೇವೆ. ಅಧಿಕಾರಿಗಳು 60 ವರ್ಷಗಳವರೆಗೆ ಸೇವೆಯಲ್ಲಿರುತ್ತಾರೆ. ಅವರು ಪ್ರಾಮಾಣಿಕತೆಯಿಂದ, ಬದ್ಧತೆಯಿಂದ, ನಿಷ್ಠೆಯಿಂದ, ಸೇವಾ ಮನೋಭಾವದಿಂದ, ಕರ್ತವ್ಯ ಪ್ರಜ್ಞೆಯಿಂದ ಕೆಲಸ ಮಾಡಬೇಕು, ಕರ್ತವ್ಯವೇ ದೇವರು ಎಂದು ಭಾವಿಸಿ ಕೆಲಸ ಮಾಡಬೇಕು. ಅವರ ಜೊತೆ ಏಕೆ ಕೈಜೋಡಿಸಬೇಕು? ಕೈಜೋಡಿಸುವುದಲ್ಲ, ಅವರೂ–ಇವರೂ ಕೂಡಿಯೇ ವ್ಯವಹಾರಗಳನ್ನು ಮಾಡುವುದರಿಂದ ಈ ರೀತಿ ಆಗುತ್ತದೆ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಭ್ರಷ್ಟಾಚಾರ ನಿಗ್ರಹವನ್ನು ಕುರಿತು ಎರಡೂ ಕಡೆಯಿಂದಲೂ ನಾವು ಆಗಾಗ ಚರ್ಚೆ ಮಾಡುತ್ತಿರುತ್ತೇವೆ. ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಹಿರಿಯರಾದಂತಹ ಎಸ್.ಆರ್.ಪಾಟೀಲ್‌ರವರು ಮಾತನಾಡುವಾಗ ನಮ್ಮಂಥವರು ಕೆಲವು ಮಾಹಿತಿಗಳನ್ನು ಪಡೆದುಕೊಳ್ಳಬಯಸುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಮತ್ತು ಮಾನ್ಯ ಮಂತ್ರಿಗಳ ಬಗ್ಗೆ ಒಂದು ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ನಿರ್ದಿಷ್ಟವಾಗಿ ಹೇಳಿದರೆ ಕ್ರಮ ಕೈಗೊಳ್ಳುವಂತಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾಧ್ಯತೆಗಳು ಹೆಚ್ಚಿರುತ್ತವೆ. ಯಾವುದಾದರೂ ಅಂತಹ ಕಂಪನಿಗಳು ಮೌಖಿಕವಾಗಿ ಶೋಷಣೆ ಮಾಡುತ್ತಿದ್ದರೆ ಅಂಥದ್ದನ್ನು ಉಲ್ಲೇಖ ಮಾಡಬೇಕು ಎಂದು ನಮ್ಮಂಥವರು ಬಯಸುತ್ತೇವೆ. ನಾವು ಅವರ ಪ್ರತಿಯೊಂದು ಶಬ್ದವನ್ನು ಕೇಳಿಸಿಕೊಳ್ಳುತ್ತಿದ್ದೇವೆ. ಏಕೆಂದರೆ ಪ್ರತಿಪಕ್ಷದಿಂದ ಬರುವಂತಹ ಗಂಭೀರವಾದಂತಹ ಆರೋಪಗಳು ತುಂಬಾ ಮುಖ್ಯವಾಗಿರುತ್ತವೆ. ದಯವಿಟ್ಟು ಅದರ ಬಗ್ಗೆ ಸಾಕ್ಷಿ ಸಹಿತ ಉಲ್ಲೇಖ ಮಾಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಈ ವಿಷಯ ಗೊತ್ತಿಲ್ಲ ಎಂದಲ್ಲ. ಸರ್ಕಾರಕ್ಕೆ ಗೊತ್ತಿದೆ. ಮಾನ್ಯ ಮಂತ್ರಿಗಳು ಮನಸ್ಸು ಮಾಡಿದರೂ ಇದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ ಎನ್ನುವಂತಹ ಸ್ಥಿತಿಗೆ ಈ ಸರ್ಕಾರ ತಲುಪಿದೆ. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಮುಖ್ಯಮಂತ್ರಿಗಳೇ ಇದನ್ನು ನಿಲ್ಲಿಸುವುದಕ್ಕೆ ಅಸಹಾಯಕರಾಗಿದ್ದಾರೆ ಎಂದರೆ ಅಷ್ಟರ ಮಟ್ಟಿಗೆ ಇದು ಅವ್ಯಾಹತವಾಗಿ ನಡೆಯುತ್ತಿದೆ. It is humanly impossible even for the Hon'ble Chief Minister to control and to curb these illegal activities and the corruptions. ಆ ಹಂತಕ್ಕೆ ಹೋಗಿದೆ. ಈ ಸರ್ಕಾರದಲ್ಲಿ ಮುಖ್ಯಮಂತ್ರಿಗಳಿಗೆ ಚಾಲೆಂಜ್ ಮಾಡುವಂತಹ ಕುಳಗಳಿವೆ. ನಮ್ಮ ಸಹೋದರಿಯವರು, ಅಂಥವರ ಹೆಸರುಗಳನ್ನು ಹೇಳಿ ಎಂದು ಕೇಳುತ್ತಿದ್ದರು. ಆದರೆ ನಾನು ನಿಯಮಗಳಿಗೆ ಬದ್ಧನಾಗಿ ನಡೆಯುವಂತಹ ಒಬ್ಬ ರಾಜಕಾರಣಿಯಾಗಿದ್ದೇನೆ. ಈ ಸದನದ ಒಬ್ಬ ಸದಸ್ಯ. ಇಲ್ಲಿ ನಾನು ಕೆಲವು ಹೆಸರುಗಳನ್ನು ಉಲ್ಲೇಖ ಮಾಡುವುದಕ್ಕೆ ಆಗುವುದಿಲ್ಲ. ಈ ಸದನದ ಸದಸ್ಯರಲ್ಲದವರ ಹೆಸರನ್ನು ನಾನು ಹೇಳುವುದಕ್ಕಾಗುವುದಿಲ್ಲ. ಹೇಳಿದರೆ ನಾನು ನಿಯಮಕ್ಕೆ ವಿರುದ್ಧವಾಗಿ ನಡೆದುಕೊಂಡ ಹಾಗಾಗುತ್ತದೆ. ಈ ಸದನದ ಸದಸ್ಯರು ಆಗಿದ್ದರೆ ಅದು ಬೇರೆ ಮಾತಾಗುತ್ತಿತ್ತು. ಈ ಸದನದ ಸದಸ್ಯರಲ್ಲದವರ ಬಗ್ಗೆ ಉಲ್ಲೇಖ ಮಾಡಿ ಆಪಾದನೆ ಮಾಡುವುದು, it is not fair on my part and it is going to violate the rules framed by us only. ನಾವೇ ರಚಿಸಿಕೊಂಡಂಥ ನಿಯಮಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡಂತಾಗುತ್ತದೆ. ಒಬ್ಬ ಪ್ರತಿ ಪಕ್ಷದ ನಾಯಕನಾಗಿ ನಾನು ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಮೈತುಂಬಾ ಎಚ್ಚರಿಕೆಯನ್ನಿಟ್ಟುಕೊಂಡು, ನಿಯಮಗಳನ್ನು ಮುಂದಿಟ್ಟುಕೊಂಡು, ಈ ಸದನದ ಘನತೆ-ಗೌರವವನ್ನು ಕಾಪಾಡಿಕೊಂಡು ಮಾತನಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಕೆಲವನ್ನು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಮುರುಗೇಶ್ ನಿರಾಣಿಯವರಿಗೆ ಇದು ಗೊತ್ತಿಲ್ಲ ಎಂದೇನಿಲ್ಲ. Because he is handling the very important portfolio and

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

he is the senior most Minister. ಅವರಿಗೆ ಗೊತ್ತಿದೆ, ಆದರೆ ಅದನ್ನು ಹೇಳುವುದಕ್ಕಾಗುವುದಿಲ್ಲ. ಮುಖ್ಯಮಂತ್ರಿಗಳೇ ಅಸಹಾಯಕರಾಗುವಷ್ಟರ ಮಟ್ಟಿಗೆ ಇದು ಬೆಳೆದುಬಿಟ್ಟಿದೆ. ಇದನ್ನು ನಿಲ್ಲಿಸುವುದಕ್ಕೂ ಕೂಡ ಅಸಾಧ್ಯವಾದಂತಹ ವ್ಯವಸ್ಥೆಗೆ ಬಂದು ತಲುಪಿದೆ. ಇದನ್ನು ನಾವು ಏಕಾದರೂ ಚರ್ಚೆ ಮಾಡಬೇಕೋ ಎನ್ನುವಂತಹ ವಿಚಾರಕ್ಕೆ ಬಂದಿದ್ದೇವೆ. ಜನವರಿಯಲ್ಲಿ ಒಂದು ಘಟನೆಯಾಯಿತು, ಫೆಬ್ರವರಿಯಲ್ಲಿ ಚಿಕ್ಕಬಳ್ಳಾಪುರದಲ್ಲಿ ಘಟನೆಯಾಯಿತು. ನಂತರ ಶಿವಮೊಗ್ಗದಲ್ಲಿ ಅನೇಕ ಸ್ಫೋಟಕ ವಸ್ತುಗಳು ದೊಡ್ಡ ಪ್ರಮಾಣದಲ್ಲಿ ಸಿಕ್ಕಿದೆ.

(ಮುಂದು)

**(422) 16-03-2021 3.30 ಡಿಎಸ್-ಬಿಎನ್ಎಸ್ (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಇವೇನು toys ಇದ್ದ ಹಾಗೆಯೇ? Vegetables, food grains ಮಾರಾಟ ಮಾಡಿದ ಹಾಗೆ ಮಾಡುತ್ತಿದ್ದಾರೆ. ಈಗ ಏರ್‌ಪೋರ್ಟ್ ಪಕ್ಕದಲ್ಲಿ ಏನಾದರೂ ಘಟನೆಯಾಗಿದ್ದರೆ ಏನು ಮಾಡಬೇಕಾಗಿತ್ತು? ಅದಕ್ಕೆ ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ಸರಹದ್ದಿನಲ್ಲಿ ಬರುವ ಹಿರೇನಾಗವಲ್ಲಿ ಗ್ರಾಮದಲ್ಲಿ ನಡೆದಂತಹ ಘಟನೆಗೆ ಮತ್ತು 6 ಜನ ಅಮಾಯಕರು ಸತ್ತಿರುವುದು ಸರ್ಕಾರದ ವೈಫಲ್ಯವಲ್ಲವೇ? It is an utter failure of Government machinery. ಕಳೆದ ಸಲ ಶಿವಮೊಗ್ಗದಲ್ಲಿ ನಡೆದಂತಹ ಘಟನೆ ಬಗ್ಗೆ ನಮ್ಮ ಸದನದಲ್ಲಿ ಅನೇಕ ಮಾನ್ಯ ಸದಸ್ಯರು ಚರ್ಚೆ ಮಾಡಿದಾಗ ಇನ್ನೊಮ್ಮೆ ಈ ರೀತಿಯ ಘಟನೆ ಮರುಕಳಿಸದಂತೆ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎನ್ನುವಂತಹ ಮಾತನ್ನು ಮಾನ್ಯ ಸಚಿವರು ಹೇಳಿದ್ದರು. "I will not allow such incident to repeat." ಎಂದು ನಮ್ಮ ಸಚಿವರು ಹೇಳಿದರು. ಅದಕ್ಕೆ ನಾವು appreciate ಮಾಡಿದ್ದೇವೆ. ಆಯಿತು, ಇನ್ನೊಮ್ಮೆ ಆಗದಿದ್ದರೆ ಸಾಕು. ನಾವು ಇಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದರಿಂದ ನಮಗೇನು ದೊಡ್ಡಸ್ತಿಕೆ ಬರುವುದಿಲ್ಲ. ರಾಜ್ಯದಲ್ಲಿ ಉತ್ತಮ ರೀತಿಯಲ್ಲಿ ಕಲ್ಲು ಗಣಿಗಾರಿಕೆ, crushing units ಚೆನ್ನಾಗಿ ನಡೆಯಲಿ, ಕಾನೂನು ಬದ್ಧವಾಗಿ ನಡೆಯಲಿ, ಅವರು ಉದ್ಯೋಗ ಮಾಡುತ್ತಾರೆ, ಅವರಿಗೆ ಚೆನ್ನಾಗಿ ಲಾಭ ಬರಲಿ, ಅವರು ಚೆನ್ನಾಗಿ ಮಾಡಿಕೊಂಡು ಹೋಗಲಿ, ಇದೊಂದು ಉದ್ಯಮವಾಗಿದೆ. ಮೋಕ್ಷಗುಂಡಂ ಸರ್.ಎಂ.ವಿಶ್ವೇಶ್ವರಯ್ಯನವರು 'Industrialise or perish' ಎಂದು ಹೇಳಿದ್ದಾರೆ. 'ಔದ್ಯಮೀಕರಣ ಮಾಡಿ ಇಲ್ಲ ನಶಿಸಿ ಹೋಗಿ' ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ಉದ್ಯಮದಿಂದ ಅನೇಕ ನಿರುದ್ಯೋಗಿಗಳಿಗೆ ಉದ್ಯೋಗ ಸಿಗುತ್ತದೆ. ಆ ಉದ್ಯಮ ಚೆನ್ನಾಗಿ ನಡೆಯಬೇಕು, ಅದು ರಾಜ್ಯಕ್ಕೆ ಅವಶ್ಯಕತೆ ಕೂಡ ಇದೆ. ಆದರೆ ಈ ರೀತಿಯಾಗಿ ಮಾಡಿ ಜೀವ ಕಳೆದುಕೊಳ್ಳುವ ಮಟ್ಟಕ್ಕೆ ಹೋಗುತ್ತದೆಂದರೆ ಹೇಗೆ? ಹಿಂದೆ ಈ ಘಟನೆ ನಡೆದು ಒಂದು ವರ್ಷ ಮೇಲಾಗಿದೆ ಎಂದರೆ ಆ ಮಾತು ಬೇರೆಯಾಗಿತ್ತು, ಆದರೆ ಒಂದೇ ತಿಂಗಳಿನಲ್ಲಿ ಮತ್ತೆ ಈ ರೀತಿಯ ಘಟನೆ ನಡೆದಿದೆ ಎಂದರೆ ಹೇಗೆ? ಮಾನ್ಯ ಸಚಿವರಿಗೂ ಇದು, he is not comfortable. I know his pulse. ಅವರು comfortable ಆಗಿದ್ದಾರೆ ಎಂದು ನಾನು ಹೇಳುವುದಿಲ್ಲ. ಮಾನ್ಯ ಸಚಿವರಿಗೂ ಬಹಳ ನೋವಾಗಿದೆ. ಆದರೆ, ಇದಕ್ಕೇನಾದರೂ ಪರಿಹಾರ ಕಂಡುಕೊಳ್ಳಬೇಕಲ್ಲವೇ? ಚಿಕ್ಕಬಳ್ಳಾಪುರದಲ್ಲಿ ಆದ ಘಟನೆಯ ಬಗ್ಗೆಯಾಗಲಿ, ಶಿವಮೊಗ್ಗದಲ್ಲಿ ನಡೆದ ಘಟನೆಯ ಬಗ್ಗೆಯಾಗಲಿ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಅದನ್ನು ನಿಲ್ಲಿಸುವುದಕ್ಕೆ ಏನು ಮಾಡಿದ್ದಾರೆ? ಇದಕ್ಕೆ ಯಾರು ಹೊಣೆಗಾರರು? ಇದಕ್ಕೆ ನೇರವಾಗಿ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ. ಇವರ ಇಲಾಖೆ ಏನು ಮಾಡುತ್ತಿದೆ? What is the duty of the Department? ಸ್ಫೋಟಕ ತೆಗೆದುಕೊಂಡು ಬರಲಿ, ಎಲ್ಲಿ ಬೇಕಾದರೂ ಬ್ಲಾಸ್ಟ್ ಮಾಡಲಿ, ಯಾರಾದರೂ ಸತ್ತು ಹೋಗಲಿ, ನಮಗೆ ಸಂಬಂಧವಿಲ್ಲ ಎಂದು ಇಲಾಖೆ ಇದ್ದರೆ ಹೇಗೆ? ಈ ರೀತಿಯಾದರೆ ಇಲಾಖೆಗೆ ಕೆಟ್ಟ ಹೆಸರಲ್ಲವೇ? Let them be firm and assertive. Let them take stringent action. ಮಾನ್ಯ ಸಚಿವರು ಎಲ್ಲಾ ಅಧಿಕಾರಿಗಳ ಸಭೆಯನ್ನು ಕರೆದಿದ್ದಾರೆಯೇ? ಶಿವಮೊಗ್ಗದ ಘಟನೆಯಾದ ನಂತರ ಎಲ್ಲಾ ಅಧಿಕಾರಿಗಳ ಸಭೆ ಕರೆದು ಅವರ ಜೊತೆ ವಿಸ್ತೃತವಾಗಿ ಚರ್ಚೆ ಮಾಡಿ ಈ ರೀತಿಯ ಘಟನೆ ಆಗದಂತೆ ನೋಡಿಕೊಳ್ಳುವುದಕ್ಕೆ ಎಷ್ಟು ಸಭೆಯನ್ನು ಕರೆದಿದ್ದಾರೆ? ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಏನು ಕ್ರಮವನ್ನು ಜರುಗಿಸಿದ್ದಾರೆ? ಅದಕ್ಕೆ ಯಾರು ಹೊಣೆಗಾರರು? ಹೂಂ are responsible for it? ಕೊನೆ ಪಕ್ಷ ಅವರನ್ನು ಅಮಾನತ್ತು ಮಾಡುವುದಾಗಲಿ ಮಾಡಬಹುದಾಗಿತ್ತಲ್ಲವೇ? ಒಂದು ಜವಾಬ್ದಾರಿಯುತ ಸರ್ಕಾರ ಇದೆ. ಈ ಹಿಂದೆ ನಡೆದಂತಹ ಘಟನೆ ಬಗ್ಗೆ ನಾವು ಹೇಳಿದಾಗ ಇಲ್ಲ, ನಾವು ನಿಶ್ಚಿತವಾಗಿ ಕ್ರಮ ಜರುಗಿಸುತ್ತೇವೆಂದು ಹೇಳಿದ ಮೇಲೆ ಕ್ರಮ ಜರುಗಿಸಿಲ್ಲ. ಕಲ್ಲುಗಣಿ ಕ್ವಾರಿ ಮಾಲೀಕರು, ಕ್ರಷರ್ ಮಾಲೀಕರು, ಇವರನ್ನು ಕರೆದು ಸಭೆ ಮಾಡಿ ಪ್ರಾಮಾಣಿಕವಾಗಿ, ನಿಷ್ಠೆಯಿಂದ ಮಾಡಿ ಎಂದು ಅವರಿಗೆ ಹೇಳಬೇಕು. ಕಾನೂನು ಬದ್ಧವಾಗಿ ಸ್ಫೋಟಕ ಲೈಸೆನ್ಸ್ ತೆಗೆದುಕೊಂಡು ಮಾಡಿ, ಆ ಸ್ಫೋಟಕವನ್ನು ಆಪರೇಟ್ ಮಾಡುವುದಕ್ಕೆ ಟೆಕ್ನಿಕಲ್ ಹ್ಯಾಂಡ್‌ಗಳ ಉಪಯೋಗ ತೆಗೆದುಕೊಳ್ಳಿ, ಯಾರು ಸ್ಫೋಟಕ ಲೈಸೆನ್ಸ್ ತೆಗೆದುಕೊಂಡಿದ್ದೀರಿ, ನೀವು magazine

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

construction ಮಾಡಿ, ಎಷ್ಟು ಅವಶ್ಯಕತೆ ಇದೆಯೋ ಅಷ್ಟನ್ನು ಯಾವ ವಾಹನದಲ್ಲಿ ತೆಗೆದುಕೊಂಡು ಬರಬೇಕೋ ಆ ವಾಹನದಲ್ಲಿ ತೆಗೆದುಕೊಂಡು ಬನ್ನಿ, I am here to protect you all people ಎಂದು ಮಾನ್ಯ ಸಚಿವರು ಹೇಳಬೇಕು as it is his responsibility. ಅವರ ಇಲಾಖೆಯಲ್ಲಿ ಕಲ್ಲು ಗಣಿಗಾರಿಕೆ, ಕ್ವಾರಿ, ಇವೆಲ್ಲಾ ಬರುತ್ತದೆ. ಇದಕ್ಕೆ ಬೇರೆ ಬೇರೆ ಮಂದಿ ಉಸ್ತಾದ್‌ಗಳಿರುತ್ತಾರೆ, I and he know it. ಆದರೆ ಅವರು ಇವರಿಗೆ ಧೈರ್ಯ ತುಂಬಬೇಕಲ್ಲವೇ? ನೀವು ಪ್ರಾಮಾಣಿಕವಾಗಿ, ಕಾನೂನು ಬದ್ಧವಾಗಿ ನಡೆಸಿಕೊಂಡು ಹೋಗಿ, I am here to protect your interest ಎಂದು ಇವರಿಗೆ ಹೇಳಬೇಕಲ್ಲವೇ? ಇವರ ಜವಾಬ್ದಾರಿ ತೆಗೆದುಕೊಳ್ಳದಿದ್ದರೆ ಹೇಗೆ ನಡೆಯುತ್ತದೆ? ಯಾರೋ ಕಲ್ಲು ಗಣಿಗಾರಿಕೆ ಮಾಲೀಕರ ಹತ್ತಿರ ಬಂದು ನೀವು ಇಷ್ಟು ಕೊಡಪ್ಪಾ ಎಂದು ಕೇಳುವುದು, ಆಮೇಲೆ ಕ್ರಷರ್ ಮಾಲೀಕರ ಹತ್ತಿರ ಹೋಗುವುದು, ಈ ತಿಂಗಳು ಬಂದಿಲ್ಲ ನೋಡು, ಕಳೆದ ತಿಂಗಳದ್ದು ಬಾಕಿ ಉಳಿದಿದೆ ಎಂದು ಹೇಳುವುದು, ಅವರು ಕೊಡದಿದ್ದರೆ ಅಧಿಕಾರಿಗಳನ್ನು ಅವರ ಮೇಲೆ 'ಚೂ' ಬಿಡುವುದು, how long it will go? ನನಗನಿಸುವುದೇನೆಂದರೆ, ಇದು ಖಂಡಿತವಾಗಿಯೂ ಸರ್ಕಾರದ ವೈಫಲ್ಯವೆಂದು ನಾನು ನೇರವಾಗಿ ಈ ಸರ್ಕಾರಕ್ಕೆ ಹೇಳಬೇಕಾಗುತ್ತದೆ. It is an utter failure of Government machinery and it is a repeated occurrence not for the first time. ಅಲ್ಲಿಯೂ ಸಹ ಆರು ಜನರು ಸತ್ತಿದ್ದಾರೆ, ಇಲ್ಲಿಯೂ ಆರು ಜನರು ಸತ್ತಿದ್ದಾರೆ, ಇವರೆಲ್ಲಾ ಅಮಾಯಕರು ಜೀವ ಕೊಟ್ಟಿದ್ದಾರೆ. ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದೇನೆಂದರೆ, ನಾನು ಅಲ್ಲಿಗೆ ಭೇಟಿ ಮಾಡಿದಾಗ, ಪೊಲೀಸ್ ವರಿಷ್ಠಾಧಿಕಾರಿಗಳು ಹೇಳಿದರು, ನಾವು ಇವರಿಗೆ ತಿಳುವಳಿಕೆ ಕೊಟ್ಟಿದ್ದೇವೆ. ಅವರನ್ನು ಸಭೆಗೆ ಕರೆದಿದ್ದೇವೆ ಎಂದು ಹೇಳಿದರು. ಇದು ಹೇಗಾಯಿತು ಎಂದು ನಾನು ಕೇಳಿದೆ, why it has happened? ಫೆಬ್ರವರಿ 7ನೇ ತಾರೀಖಿಗೆ Superintendent of Police ರವರು ಇದೊಂದು ಕ್ವಾರಿಗೆ ಭೇಟಿ ಕೊಟ್ಟಿದ್ದಾರೆ. ಅದೊಂದನ್ನೇ ಏಕೆ ಟಾರ್ಗೆಟ್ ಮಾಡಿದರು? ನಾನು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಅದೊಂದನ್ನೇ ಏಕೆ ಟಾರ್ಗೆಟ್ ಮಾಡಿದರು ಎನ್ನುವುದಕ್ಕೆ ನನಗೆ ಉತ್ತರ ಸಿಕ್ಕಿತು. ಆ ಉತ್ತರ ಏನು ಎನ್ನುವುದು ಮಾನ್ಯ ಸಚಿವರಿಗೆ ಗೊತ್ತಿದೆ. ಅಲ್ಲಿದ್ದ ಬಹುತೇಕ ಜನರಿಗೂ ಇದು ಗೊತ್ತಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ 2019–20ನೇ ಸಾಲಿನಲ್ಲಿ ಕೃಷ್ಣಾ ನದಿಯಲ್ಲಿ ಪ್ರವಾಹ ಬಂದು ಲಕ್ಷಾಂತರ ಎಕರೆ ಭೂಮಿಯಲ್ಲಿ ಪೈರು ಹೋಯಿತು, ಅಸಂಖ್ಯಾತ ಮನೆಗಳು ಕೊಚ್ಚಿಕೊಂಡು ಹೋಗಿವೆ. ಹಳ್ಳಿಗಳನ್ನೇ ಕೊಚ್ಚಿಕೊಂಡು ಹೋಗಿದೆ. ಮತ್ತೊಂದು ಸಲ ಪ್ರವಾಹ ಬಂತು. ಅದಕ್ಕೆ ಅವರೇ ಹೊಣೆ ಎಂದು ನಾನು ಹೇಳುವುದಿಲ್ಲ. ಪ್ರಕೃತಿ ವಿಕೋಪದಿಂದ ಈ ರೀತಿಯಾಗಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಸರಿಯಿಲ್ಲವೆಂದು ಕಾಣುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪ್ರವಾಹ ಬಂದಾಗ ಅದರ ನಿರ್ವಹಣೆ ಹೇಗೆ ಮಾಡಿದರು ಎಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಬೇಕಾಗುತ್ತದೆ. ಈ ಸರ್ಕಾರ ಬಂದ ಮೇಲೆ ಪ್ರವಾಹ ಬಂತು, ಎರಡನೇ ಸಲ ಪ್ರವಾಹ ಬಂತು, ಅತಿವೃಷ್ಟಿ ಬಂತು, ಇವೆಲ್ಲಾ ಸರಿಯಿದೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಸರ್ಕಾರ ಅದನ್ನು ನಿಭಾಯಿಸಿರುವುದರ ಬಗ್ಗೆ ಒಂದು ವಾಕ್ಯವನ್ನಾದರೂ ಹೇಳಬೇಕಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದೇ ಸದನದಲ್ಲಿ ಇಲ್ಲೇ ನಿಂತು ಅವತ್ತು ಚೆನ್ನಾಗಿ ನಿಭಾಯಿಸಿದಂತಹ ಅಧಿಕಾರಿಗಳ ಪರವಾಗಿ ನಾನು ಅಭಿನಂದನೆಯನ್ನು ಸಲ್ಲಿಸಿದ್ದೇನೆ. ಬಹಳ ಚೆನ್ನಾಗಿ ಮಾಡಿದ್ದಾರೆ. ಇನ್ನು ಅನೇಕ ರೈತರಿಗೆ ಎಟಿರಿಣಾಣ, ಣಾಭುಜಥಿ ಕೊಟ್ಟಿಲ್ಲ. ಮನೆಗಳನ್ನು ಕಟ್ಟುವುದಕ್ಕೆ ಹಣ ಕೊಟ್ಟಿಲ್ಲ.

**ಶ್ರೀ ಮುರುಗೇಶ್ ಆರ್.ನಿರಾಣಿ(ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, 2008 ರಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಅದರ ಹಿಂದೆ 2–3 ವರ್ಷ heavy drought ಬಂದು ಕುಡಿಯುವುದಕ್ಕೆ ನೀರು ಇರಲಿಲ್ಲ. ಕೃಷ್ಣಾ ನದಿ, ಘಟಪ್ರಭಾ ನದಿ ಪಕ್ಕದಲ್ಲಿದ್ದರು ಟ್ಯಾಂಕರ್‌ನಲ್ಲಿ ನೀರು ಒದಗಿಸುವಂತಹ ಪರಿಸ್ಥಿತಿ ಇತ್ತು. ಮೂರು ದಿವಸ ಸುತ್ತೂರಿನಲ್ಲಿ ಎಲ್ಲಾ ಮಂತ್ರಿಗಳು ತರಬೇತಿಯನ್ನು ತೆಗೆದುಕೊಂಡಿದ್ದರು. ಪ್ರವಾಹ ಬಂದಿರುವ ಅಫೆಕ್ಟೆಡ್ ಏರಿಯಾಗಳಿಗೆ ಏನು ನಷ್ಟವಾಗಿದೆ ಎಂದು ನೋಡಬೇಕೆಂದಾಗ ಒಂದೊಂದು ಕುಟುಂಬಕ್ಕೆ 37,000 ರೂಪಾಯಿಗಳನ್ನು within three days ಕೊಟ್ಟಿದ್ದೇವೆ. ಆಗ ದೀಪಾವಳಿ ಹಬ್ಬ ಇತ್ತು. ಹಿಂದಿನ ಯಾವುದೇ ಸರ್ಕಾರಗಳನ್ನು ಹೋಲಿಸಿ ನೋಡಿದಾಗ 1,000 ರೂಪಾಯಿಗಿಂತ ಜಾಸ್ತಿ ಯಾರು ಕೊಟ್ಟಿಲ್ಲ. ಮಾನ್ಯ ಯಡಿಯೂರಪ್ಪನವರು broad minded ಆಗಿ ಮನೆ ಬಿದ್ದಂಥವರು ಇರಲಿ, ಮನೆ ಬೀಳಲಾರದಂಥವರು ಇರಲಿ ಎಲ್ಲರಿಗೂ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಯುದ್ಧೋಪಾದಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂರೇ ದಿವಸದಲ್ಲಿ ಇಡೀ ರಾಜ್ಯಕ್ಕೆ 37,000 ರೂಪಾಯಿಗಳನ್ನು ಕೊಟ್ಟಿದ್ದೇವೆ. ಕಾಂಗ್ರೆಸ್‌ನ ಇತಿಹಾಸದಲ್ಲೇ 1,000 ರೂಪಾಯಿ ಮೇಲೆ ಯಾವಾಗಲೂ ಕೊಟ್ಟಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಇದೇ ಸದನದಲ್ಲಿ ಮಾಹಿತಿ ಕೊಡಬೇಕಾದರೆ ಹೇಳಿದರು. ಯುದ್ಧೋಪಾದಿಯಲ್ಲಿ ಒಂದೊಂದು ಕುಟುಂಬಕ್ಕೆ 10,000 ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆಂದು ಹೇಳಿದರು. ಈಗ ಮಾನ್ಯ ಸಚಿವರು 37,000 ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಾವು ಯಾರನ್ನು ನಂಬಬೇಕು?

**ಶ್ರೀ ಮರುಗೇಶ್ ಆರ್.ನಿರಾಣಿ:–** 37,000 ರೂಪಾಯಿ ಕೊಟ್ಟಿದ್ದೇವೆಂದು ನಾನೇ ಹೇಳುತ್ತಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಕಂದಾಯ ಸಚಿವರು ಇದೇ ಸದನದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಪ್ರವಾಹ ಬಂದಾಗ ಎಷ್ಟು ನಷ್ಟವಾಗಿದೆ ಎಂಬುದನ್ನು ನಾವು ನೋಡಲಿಲ್ಲ. ನಾವು ಪ್ರತಿಯೊಂದು ಕುಟುಂಬಕ್ಕೂ 10,000 ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕೆಲವು ಕಡೆ ನೀರು ನುಗ್ಗಿ ಸಮಸ್ಯೆಗಳಾಗಿವೆ, ಗೋಡೆ ಬಿದ್ದಿದೆ ಎಂಬುದನ್ನು ನೋಡಲಿಲ್ಲ, ನೀರು ನುಗ್ಗಿರುವಂತಹ ಯಾವುದೇ ಮನೆ ಇದ್ದರೂ ಕೂಡ ತುರ್ತಾಗಿ 10,000 ರೂಪಾಯಿ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆಂದರೆ, ಮನೆ ಬಿದ್ದಿರಲಿ, ಬಿದ್ದಿರದೆ ಇರಲಿ, ದೀಪಾವಳಿ ಹಬ್ಬ ಇದ್ದರಿಂದ ಎಲ್ಲರಿಗೂ 37,000 ರೂಪಾಯಿ ಕೊಟ್ಟಿದ್ದೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ನಾವು ಯಾವುದನ್ನು ನಂಬಬೇಕು?

**ಶ್ರೀ ಎಸ್.ಆರ್.ಪಾಟೀಲ್:–** ಈಗ ವಿಷಯವನ್ನು divert ಮಾಡುವುದು ಬೇಡ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಇಲ್ಲಿ ಕ್ರಷರ್‌ಗಿಂತ ಪ್ರವಾಹವೇ ಸೇಫ್ ಎಂದು ಕಾಣುತ್ತಿದೆ.

ತಿದ್ದುಪಡಿಯಾಗದ ಪ್ರತಿ. ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(423)16-03-2021/3-40/bkp-bns

**ಶ್ರೀ ಮರುಗೇಶ್ ಆರ್.ನಿರಾಣಿ (ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, 2008ರ ಆಗಸ್ಟ್‌ನಲ್ಲಿ 37 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದು ನಿಜ. ಮತ್ತೊಂದು ಬಾರಿ flood ಬಂದಾಗ average ಆಗಿ ಎಲ್ಲರಿಗೂ 10 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದು ನಿಜ. ಎರಡು ಸಲ ಬೇರೆ ಬೇರೆ ಸಂದರ್ಭಗಳಲ್ಲಿ ಆಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):** ಮಾನ್ಯ ಸಭಾಪತಿಯವರೇ, ದಾಖಲೆಗಳಿಗೆ ಇಲ್ಲಿ ತಪ್ಪಾಗಿ ಹೋಗಬಾರದು. ನನಗೆ ಗೊತ್ತಿದೆ. ಈ ಮನೆಗಳು ಬಿದ್ದದ್ದು ಪೂರ್ತಿಯಾಗಿ above 75% ಇದ್ದದ್ದನ್ನು A-Category ಗೆ, ಆಮೇಲೆ partial, B-category ಗೆ, ಸ್ವಲ್ಪಮಟ್ಟಿಗೆ below 25% ಇದ್ದದ್ದನ್ನು C-Category ಗೆ ಮಾಡಿ, ಪೂರ್ತಿ ಬಿದ್ದದ್ದಕ್ಕೆ ರೂ.5 ಲಕ್ಷಗಳನ್ನು, partially ಬಿದ್ದದ್ದಕ್ಕೆ ರೂ.3 ಲಕ್ಷಗಳು, ಸ್ವಲ್ಪ less than 25%, ಅಂದರೆ above 15% and less than 25%, C-Category ಗೆ ರೂ.50 ಸಾವಿರಗಳು. ಹೀಗೆಲ್ಲಾ ಮಾಡಿದ್ದಾರೆ. ಮಾನ್ಯ ಸಭಾಪತಿಗಳೇ, ಪ್ರತಿ ಕುಟುಂಬಕ್ಕೂ ರೂ.10 ಸಾವಿರಗಳನ್ನು ಕೊಟ್ಟಿದ್ದಾರೆ. ಅದು 35 ಸಾವಿರ ರೂಪಾಯಿಗಳು ಯಾವುದು ಇದೆ ಎಂಬ ಐಡಿಯಾ ನನಗಿಲ್ಲ. ಕೊಟ್ಟಿದ್ದರೆ ಬಹಳ ಒಳ್ಳೆಯದು, ನಿಮ್ಮನ್ನು ಅವರು ನೆನಪಿಸಿಕೊಳ್ಳುತ್ತಾರೆ ಪಾಪ, ಕಷ್ಟದಲ್ಲಿದ್ದಾಗ ಸರ್ಕಾರದ ಒಂದು welfare Government duty ಅದು. ಯಾರು ನೋವಿನಲ್ಲಿದ್ದಾರೆ, ಯಾರು ಕಷ್ಟದಲ್ಲಿದ್ದಾರೆ, ಯಾರು ದು:ಖದಲ್ಲಿದ್ದಾರೆ, ಯಾರು ದುಮ್ಮಾನದಲ್ಲಿದ್ದಾರೆ ಅಂತಹವರ ಬಳಿ ಹೋಗಿ ಸಾಂತ್ವನ ಹೇಳುವುದು, ಸಹಾಯ ಮಾಡುವುದು ಧರ್ಮವಾಗುತ್ತದೆ. ಧರ್ಮವೆಂದರೆ ಏನು? ಧರ್ಮದ ಕೆಲಸವೆಂದರೆ ನನ್ನ ದೃಷ್ಟಿಯಲ್ಲಿ ಯಾರು ಹಸಿದವರು ಇರುತ್ತಾರೆಯೋ ಅವರಿಗೆ ಒಂದು ತುತ್ತು ಊಟ ಕೊಡುವುದು, ಬಾಯಾರಿಕೆಯಾದವರಿಗೆ ಒಂದು ಗುಟುಕು ನೀರು ಕೊಡುವುದು ಅಥವಾ ಬಿಸಿಲಿನಲ್ಲಿದ್ದಂತಹವರನ್ನು ನೆರಳಿಗೆ ಕರೆದುಕೊಂಡು ಬರುವುದು. ಆಮೇಲೆ ಕಷ್ಟದಲ್ಲಿರುವಂತಹವರಿಗೆ ಪರಿಹಾರ ಕೊಡುವುದೇ ಧರ್ಮ. ಧರ್ಮದ ವ್ಯಾಖ್ಯಾನವಿದೆ. Welfare Government ಧರ್ಮದ ಕೆಲಸ ಮಾಡಬೇಕು. Welfare Government should do the work of Dharma. 'ನಡೆದಾಡುವ ದೇವರು' ಎಂದೇ ಖ್ಯಾತರಾದಂತಹ ಪೂಜ್ಯ ಶ್ರೀ ಶ್ರೀ ಶ್ರೀ ಸಿದ್ಧಗಂಗಾ ಶಿವಕುಮಾರ ಸ್ವಾಮಿಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದಂತಹ ಮಾತು ಇದು. ಅಂತಹ ಕೆಲಸ ಮಾಡಬೇಕು. We are meant for that. ಜನರು ನಮಗೆ ಆಶೀರ್ವಾದ ಮಾಡಿ ಇಲ್ಲಿಗೆ ಕಳುಹಿಸಿದ್ದು ಏಕೆ? ಜನರು ಕಷ್ಟದಲ್ಲಿದ್ದಾಗ ಅವರ ಕಷ್ಟದಲ್ಲಿ ನಾವು ಭಾಗಿಯಾಗಬೇಕು. ಇನ್ನೂ ಬಹಳಷ್ಟು input subsidy ಬಂದಿಲ್ಲ, ಮನೆಗಳದ್ದು ಆಗಿಲ್ಲ. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದರ ಪ್ರಸಂಗ ಬಂದಾಗ ನಾವು ಮಾತನಾಡೋಣ. ಒಳ್ಳೆಯದನ್ನು ಮಾಡಿಲ್ಲ ಅಥವಾ ಏನನ್ನೂ ಮಾಡಿಯೇ ಇಲ್ಲ ಎಂದು ನಾನು ಹೇಳಿಲ್ಲ. ಒಳ್ಳೆಯದನ್ನು ಮಾಡಿದರೆ ನಿಮ್ಮನ್ನು ಅಭಿನಂದಿಸುತ್ತೇವೆ. ನೀವು ಒಳ್ಳೆಯದನ್ನು ಮಾಡಿದರೆ ನಿಮ್ಮ ಕೊರಳಿಗೆ ನನ್ನದೇ ಮೊದಲನೆಯ ಹಾರ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಒಳ್ಳೆಯದನ್ನು ಮಾಡಿದರೆ ಒಳ್ಳೆಯದು ಮಾಡಿ. ಪ್ರತಿಪಕ್ಷದಲ್ಲಿದ್ದುಕೊಂಡು ಹಾಗೆಯೇ ಟೀಕೆ ಮಾಡುವುದು. Our criticism must be constructive. It should not be destructive. We know very well. ನೀವು flood ಇದ್ದಹಾಗೆ. ನಿಮ್ಮನ್ನು ನಾವು ನಿಲ್ಲಿಸಬೇಕು. Embankment ಹಾಕಿ ಹಾಕಿ ನಿಲ್ಲಿಸಬೇಕು. ಮದ ಬಂದ ಆನೆ ಇದ್ದ ಹಾಗೆ. ಮಾವುತನ ಕೆಲಸ ನಾವು ಮಾಡಬೇಕು. ನೀವು ಎಲ್ಲಿ ತಪ್ಪಿದ್ದೀರಿ ಅದನ್ನು ನಾವು ಹೇಳಬೇಕಾಗುತ್ತದೆ. ಅಂತೂ ಸರಿಯಾಗಿ ಜನರಿಗೆ ಒಳ್ಳೆಯದಾಗಲಿ ಎನ್ನುವ ಸಲುವಾಗಿ ಪ್ರತಿಪಕ್ಷವಿದೆ. We are also part of Government. ನಮ್ಮ ಸಲಹೆ-ಸೂಚನೆಗಳನ್ನು ತೆಗೆದುಕೊಂಡರೆ ನೀವು ಪರಿಣಾಮಕಾರಿಯಾಗಿ ಜನಪ್ರಿಯವಾಗಿ ಕೆಲಸ ಮಾಡಲಿ ಎಂದು ನಿಮಗೆ ನಾವು ಹೇಳುತ್ತೇವೆ. ಜನರ ಕಲ್ಯಾಣವಾಗಲಿ ಎಂದು ನಾವು ಹೇಳುತ್ತೇವೆ. ಅದಕ್ಕೆ ನಾನು ಏನು ಹೇಳಿದ್ದೇನೆ ಎಂದರೆ ಒಂದು ಸಲ flood .... ಅಂದರೆ ಏನು? ಈ ಮುಹೂರ್ತ ಅಂದರೆ ಈ ಕಡೆಗಳಲ್ಲಿ ಏನೋ ಹೇಳುತ್ತಾರಲ್ಲಾ? ಯಮಗಂಡ ಕಾಲ, ರಾಹುಕಾಲ, ಗುಳಿಕಕಾಲ, ಪೂಜೆ-ಪುನಸ್ಕಾರ, ಹೋಮ-ಹವನ ಎಂದು ಹೇಳುತ್ತಾರೆ. ನಾನು 12ನೇ ಶತಮಾನದ ಬಸವಾದಿ-ಶರಣರ ವಿಚಾರದಲ್ಲಿ ಆನಗೊಳದಲ್ಲಿ ಬೆಳೆದಂತಹವನು ನಾನು. ಇವುಗಳ ಮೇಲೆ ನನಗೆ ಬಹಳ ನಂಬಿಕೆಯಿಲ್ಲ. ಈಗ ನಿಮ್ಮ ಸರ್ಕಾರದಲ್ಲಿ ಮುಹೂರ್ತವೇ ಸರಿಯಿಲ್ಲ ಎಂದು ನಾನು ಹೇಳುತ್ತಿಲ್ಲ. ಮುಹೂರ್ತದ ಬಗ್ಗೆ ನನಗೆ ನಂಬಿಕೆಯಿಲ್ಲ. ಯಾವ ಸಮಯದಲ್ಲಿ ಬೇಕಾದರೂ ಅಂದರೆ ಒಳ್ಳೆಯ ಕೆಲಸ ಮಾಡುವ ಸಮಯದಲ್ಲಿ ಮುಹೂರ್ತ ಅದು ಇದು ನೋಡದೇ ಹೋಗಿ ಒಳ್ಳೆಯ ಕೆಲಸ ಮಾಡಬೇಕು. ಏಕೆ ಈ ಸರ್ಕಾರ ಅದರ ಬಗ್ಗೆ ಹೇಳುವುದಿಲ್ಲ? ಹಿಂದೆ ಒಮ್ಮೆ ಸಹಿತ flood ಆಯಿತು. ಈ ಸಲ ಕೂಡ ಅಂದರೆ ಎರಡು ಸಲ flood ಆಯಿತು. ಶತಮಾನಗಳಿಂದಲೂ ಕಂಡರಿಯದ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳರಿಯದ ಮಹಾಪೂರ. ಆಮೇಲೆ ಅತಿವೃಷ್ಟಿ ಇಡಿ ರಾಜ್ಯ ತತ್ತರಿಸಿ ಹೋಯಿತು, ಸುಮಾರು ರೂ.35 ಸಾವಿರ ಕೋಟಿಗಳಷ್ಟು ಹಾನಿಯಾಯಿತು. ಅದು ಆದಮೇಲೆ ಕೋವಿಡ್ ಬಂತು. . . .

**ಡಾ॥ ತೇಜಸ್ವಿನಿ ಗೌಡ:** . . .

**ಶ್ರೀ ಎಸ್.ಆರ್.ಪಾಟೀಲ್:–** ಅದನ್ನೂ ಹೇಳುತ್ತೇನೆ ಮೇಡಮ್. ಈಗ legitimacy ಎಂಬು ಇರುತ್ತದೆ.

**ಶ್ರೀ ಯು.ಬಿ.ವೆಂಕಟೇಶ್:–** . . . .

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** . . . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:** . . . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:** . . . . ಮೊನ್ನೆ ಸುಪ್ರೀಂಕೋರ್ಟ್‌ನವರು ರೂಲಿಂಗ್ ಕೊಟ್ಟಿದ್ದಾರೆ ಮೇಡಮ್. ವಿವಾಹೇತರ ಸಂಬಂಧ ಅಪರಾಧವಲ್ಲ ಎಂದು ಈ ದೇಶದ ಸರ್ವೋಚ್ಚ ನ್ಯಾಯಾಲಯದ ನಿರ್ಣಯವಿದೆ.

**Mr. DEPUTY CHAIRMAN** :- Just living together.

**ಶ್ರೀ ಮಾನೆ ಶ್ರೀನಿವಾಸ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** . . . .

**ಶ್ರೀ ಎಸ್.ಆರ್.ಪಾಟೀಲ್:** . . . .

**(ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರಾದ ಡಾ:ತೇಜಸ್ವಿನಿಗೌಡ, ಶ್ರೀ ಯು.ಬಿ.ವೆಂಕಟೇಶ್, ಶ್ರೀ ಮಾನೆ ಶ್ರೀನಿವಾಸ್ ಹಾಗೂ ವಿರೋಧಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಮಾತನಾಡಿದ್ದು ದಾಖಲಿಸಲಿಲ್ಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪ ಸಭಾಪತಿಯವರು:** ನಂಬಿಕೆ ಯಾವುದರಲ್ಲಿ ಇದೆ? ನಂಬಿಕೆಯಿಲ್ಲ ಎಂದು ಹೇಳಿದ್ದೀರಲ್ಲಾ? ನಂಬಿಕೆ ಯಾವುದರಲ್ಲಿದೆ ನಿಮಗೆ?

**ಶ್ರೀ ಎಸ್.ಆರ್.ಪಾಟೀಲ್:-** Rational thinking ಎಂದರೆ ತಾವು ತಿಳಿದುಕೊಂಡಿದ್ದೀರಲ್ಲಾ.

**ಉಪ ಸಭಾಪತಿಯವರು:-** ಅದರಲ್ಲಿಯೂ ನಂಬಿಕೆಗಳಿವೆ.

**ಶ್ರೀ ಎಸ್.ಆರ್.ಪಾಟೀಲ್:-** ನಮ್ಮ ಜಿಲ್ಲೆಯಲ್ಲಿ ಹೇಳುತ್ತಾರೆ, 'ಮುಹೂರ್ತ ನೋಡಿ ಮಂಗನನ್ನು ಹಡೆದರು' ಎಂದು ಹೇಳುತ್ತಾರೆ. ಮುಹೂರ್ತದ ಬಗ್ಗೆ ನಮ್ಮ ಕಡೆ ಮಾತನಾಡುತ್ತಾರೆ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** . . . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** . . . .

**ಉಪ ಸಭಾಪತಿಯವರು:** ಈ ಚರ್ಚೆಯನ್ನು ಬಜೆಟ್ ಮೇಲಿನ ಚರ್ಚೆಯಲ್ಲಿ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:** ಮಾನ್ಯ ಸಭಾಪತಿಯವರೆ, within a minute I will complete. . . . .

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ( ಪದವೀಧರರ ಕ್ಷೇತ್ರ):-** . . . .

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** . . . .

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** . . . . .

**ಶ್ರೀ ಯು.ಬಿ ವೆಂಕಟೇಶ್:-** . . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮಾನ್ಯ ಉಪಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರುಗಳಾದ ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ, ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಯು.ಬಿ.ವೆಂಕಟೇಶ್, ಶ್ರೀ ಮಾನೆ ಶ್ರೀನಿವಾಸ್ ಹಾಗೂ ವಿರೋಧಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಮಾತನಾಡಿದ್ದು ದಾಖಲಿಸಲಿಲ್ಲ)**

**(ಗೊಂದಲ)**

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ,..

**ಶ್ರೀ ಎಸ್.ಆರ್.ಪಾಟೀಲ್:** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:–** ಶ್ರೀಮತಿ ಭಾರತಿ ಶೆಟ್ಟಿಯವರೆ, ಶ್ರೀ ಎಸ್.ಆರ್. ಪಾಟೀಲ್‌ರವರೆ, ಕುಳಿತುಕೊಳ್ಳಿ. ವಿಷಯಾಂತರ ಆಗುವುದು ಬೇಡ.

**(ಮುಂದು)**

**(424) 16.03.2021 03.50 ಎಸ್‌ವಿ–ಜಿಆರ್**

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ನಿರ್ಭಯಾ ಪ್ರಕರಣ ಏನಾಯಿತು? 'ಬೇಟಿ ಬಚಾವೋ ಬೇಟಿ ಪಢಾವೋ' ಕಾರ್ಯಕ್ರಮ ಏನಾಯಿತು?

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಹರಿಪ್ರಸಾದ್ ಅವರೇ, . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಭಾರತಿಶೆಟ್ಟಿಯವರೇ, . . .

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಹರಿಪ್ರಸಾದ್ ಅವರೇ, . . . .

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** . . . .

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್ ಅವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಭಾರತಿ ಶೆಟ್ಟಿಯವರೇ, ತಾವು ಕುಳಿತುಕೊಳ್ಳಿ. ವಿಷಯಾಂತರ ಆಗುವುದು ಬೇಡ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು conclude ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆರ್ಥಿಕ ಸ್ಥಿತಿ ಹದಗೆಟ್ಟು ಹೋಗಿದೆ. ಇಂತಹ illegal activities ಹೆಚ್ಚಾಗಿದೆ. ಭ್ರಷ್ಟಾಚಾರ ಮಿತಿ ಮೀರಿದೆ. ಪ್ರಕೃತಿ ವಿಕೋಪದ ಅನೇಕ ಘಟನೆಗಳಾಗಿವೆ. ಇಡೀ ಮನುಕುಲದ ನಾಶಕ್ಕಾಗಿ ಹುಟ್ಟಿದಂತಹ ಕೊರೊನಾ ವೈರಸ್‌ನಿಂದಾಗಿ ನಮ್ಮ ರಾಜ್ಯ ತತ್ತರಿಸಿ ಹೋಗಿದೆ. . . . .

**(ಮಾನ್ಯ ಉಪಸಭಾಪತಿಯವರ ಅದೇಶಾನುಸಾರ ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ಬಿ.ಕೆ.ಹರಿಪ್ರಸಾದ್ ಹಾಗೂ ವಿರೋಧಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಮಾತನಾಡಿದ್ದು ದಾಖಲಿಸಿರುವುದಿಲ್ಲ)**

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, . . . .

**(ಮಾನ್ಯ ಉಪಸಭಾಪತಿಯವರ ಅದೇಶಾನುಸಾರ ಮಾನ್ಯ ಸದಸ್ಯರಾದ ಡಾ:ತೇಜಸ್ವಿನಿ ಗೌಡರವರು ಮಾತನಾಡಿದ್ದು ದಾಖಲಿಸಿರುವುದಿಲ್ಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಹೇಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ತೆಗೆದುಕೊಂಡಿರುವ ವಿಚಾರ ಎಲ್ಲಿಯೋ ಒಂದು ಕಡೆ ಪ್ರಸ್ತಾಪ ಮಾಡಿದ್ದು, ಅದನ್ನೇ ಮುಂದುವರೆಸುವುದು ಸೂಕ್ತವಲ್ಲ. ದಯವಿಟ್ಟು ತಮ್ಮ ವಿಷಯವನ್ನು ಮುಂದುವರೆಸಿ. ವಿಷಯಾಂತರ ಆಗುವುದು ಬೇಡ. ಮಾನ್ಯ ಸಚಿವರು ಇಲ್ಲಿ ಕುಳಿತಿದ್ದಾರೆ. ತಮ್ಮ ಮಾತಿನ ನಂತರ ಅವರು ಉತ್ತರ ಕೊಡುವವರಿದ್ದಾರೆ. ಅದರ ಮೇಲೆ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಿಪಕ್ಷ ನಾಯಕರು ಗಣಿ ವಿಚಾರದಲ್ಲಿ ಕೊಟ್ಟಂತಹ ನೋಟಿಸ್ ಅನ್ನು ನಿಯಮ 68ಕ್ಕೆ ಪರಿವರ್ತಿಸಿ ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಸಾಮಾನ್ಯವಾಗಿ ಪ್ರತಿಪಕ್ಷದ ನಾಯಕರು ಮಾತನಾಡುವಾಗ ಆಚೆ-ಈಚೆ ಮಾತನಾಡುವುದು ಇದೆ. ಇಲ್ಲವೆಂದು ನಾವು ಹೇಳುವುದಿಲ್ಲ. ಆದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಕಷ್ಟು ಸಮಯ ಕೊಟ್ಟ ನೋಟಿಸ್‌ಗೆ ವ್ಯತಿರಿಕ್ತವಾಗಿ ಅವರು ಮಾತನಾಡುತ್ತಾ ಹೋದರೆ ನಾವು ಸಹ ಎದ್ದು ಮಾತನಾಡಬೇಕಲ್ಲವೆ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ನಾನು ವ್ಯತಿರಿಕ್ತವಾಗಿ ಏನೂ ಮಾತನಾಡಿಲ್ಲ. ಈ ಸರ್ಕಾರ, ಇದರ ಭವಿಷ್ಯತ್ತು...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಈ ಸರ್ಕಾರದ ಬಗ್ಗೆ ಈಗ ಮಾತನಾಡುವುದು ಬೇಡ. ಈಗ ಗಣಿಯ ಬಗ್ಗೆ ಮಾತನಾಡಿ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದಕ್ಕೆ ಆಯವ್ಯಯದ ಬಗ್ಗೆ ಮಾತನಾಡಲು ಅವಕಾಶವಿದ್ದಾಗ ಮಾತನಾಡಿ. ಈಗ ವಿಷಯದ ಬಗ್ಗೆ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ವಿಷಯ ಬಿಟ್ಟು ಹೋಗಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿಷಯ ಬಿಟ್ಟು ಹೋಗಿದ್ದೀರೋ ಇಲ್ಲವೋ ಎಂಬುದನ್ನು ತಾವೇ ಯೋಚನೆ ಮಾಡಬೇಕು. ನಾವು ಏನೂ ಹೇಳುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರ ಅನುಭವದ ದೃಷ್ಟಿಯಿಂದ ನಾವು ಕೇಳುತ್ತಿದ್ದೇವೆ. ಆದರೆ ಅವರು ಹೆಚ್ಚಿನ ಸಮಯವನ್ನು ಬೇರೆ ವಿಷಯದ ಬಗ್ಗೆ ಮಾತನಾಡುವುದಕ್ಕಾಗಿಯೇ ತೆಗೆದುಕೊಂಡರೆ ಹೇಗೆ? ನೋಟಿಸ್ ಕೊಟ್ಟಿರುವ ಮೂಲ ವಿಷಯದ ಬಗ್ಗೆ ಮಾತನಾಡಬೇಕೆಂದು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ಮಾನ್ಯ ಸಭಾಪತಿಯವರ ಮುಖಾಂತರ ಏಕೆ ಹೇಳುತ್ತೀರಿ? ನೀವು ಹೇಳಿದ್ದಕ್ಕೆಲ್ಲಾ ನಾವು ಒಪ್ಪಿದ್ದೇವೆ. ಯಾವುದನ್ನು ಕೇಳಿಲ್ಲ? ಸಭಾನಾಯಕರು ಹೇಳಿದ್ದೇ ನಮಗೆ ಅಂತಿಮ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ ಮುಗಿಸಿ. ಇನ್ನೂ ಇದೇ ವಿಷಯದ ಬಗ್ಗೆ ಸುಮಾರು ಜನ ಮಾತನಾಡುವವರಿದ್ದಾರೆ.

**ಶ್ರೀ ಶ್ರೀಮಂತ ಬಾಳಾಸಾಹೇಬ್ ಪಾಟೀಲ್ (ಮಾನ್ಯ ಜವಳಿ ಮತ್ತು ಕೈಮಗ್ಗ ಸಚಿವರು):-** ಮಾನ್ಯ ಸಭಾಪತಿಯವರೇ, . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರೇ, ನಿಮ್ಮದೇನು ಇಲ್ಲ. ನೀವು ನಮ್ಮ ಸ್ನೇಹಿತರಿದ್ದೀರಿ.

**ಶ್ರೀ ಶ್ರೀಮಂತ ಬಾಳಾಸಾಹೇಬ್ ಪಾಟೀಲ್:-** ಮಾನ್ಯ ಸಭಾಪತಿಯವರೇ, . . ..

**(ಮಾನ್ಯ ಉಪಸಭಾಪತಿಯವರ ಆದೇಶಾನುಸಾರ ಶ್ರೀ ಶ್ರೀಮಂತ ಬಾಳಾಸಾಹೇಬ್ ಪಾಟೀಲ್, ಜವಳಿ ಮತ್ತು ಕೈಮಗ್ಗ ಸಚಿವರು ಮಾತನಾಡಿದ್ದು ದಾಖಲಿಸಿರುವುದಿಲ್ಲ)**

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಆ ವಿಷಯವನ್ನು ಬಿಟ್ಟುಬಿಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಂತೆ ದಯವಿಟ್ಟು ಕಾಲಾವಕಾಶವನ್ನು ಕೊಡಿ.

**(ಗೊಂದಲ)**

**ಉಪ ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈಗಾಗಲೇ ಸಾಕಷ್ಟು ವಿಚಾರಗಳು ಚರ್ಚೆಗೆ ಇರುವ ದಿಸೆಯಿಂದ ಅದನ್ನು ಮುಗಿಸಿ ನಂತರ ನೋಡೋಣ. ಸಮಯ ಸಿಕ್ಕರೆ ಅದಕ್ಕೆ ಅವಕಾಶವನ್ನು ಕೊಡೋಣ. ಈಗ ಇನ್ನೂ ಆಯವ್ಯಯದ ಮೇಲಿನ ಚರ್ಚೆಯಾಗಬೇಕಿದೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ದಯವಿಟ್ಟು ತಮ್ಮ ಮಾತನ್ನು ಮುಗಿಸಿ. ಮಾನ್ಯ ಹರಿಪ್ರಸಾದ್ ಅವರೇ, ತಾವು ಸಮಯವನ್ನು ವ್ಯರ್ಥ ಮಾಡುತ್ತಿದ್ದೀರಿ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ವಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್ ಅವರು ಪ್ರತಿಯೊಂದು ವಿಷಯಕ್ಕೂ emotional ಆಗುತ್ತಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಿದ್ದಾರೆ ಎನ್ನುವ ಸೌಜನ್ಯವಾದರೂ ಬೇಡವೇ?

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, . . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮಾನ್ಯ ಉಪಸಭಾಪತಿಯವರ ಆದೇಶಾನುಸಾರ ಶ್ರೀ ಎಂ.ನಾರಾಯಣಸ್ವಾಮಿ, ವಿರೋಧಪಕ್ಷದ ಮುಖ್ಯ ಸಚೇತಕರು ಮಾತನಾಡಿದ್ದು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಉಪ ಸಭಾಪತಿಯವರು:-** ಅದಕ್ಕಾಗಿಯೇ ಸಮಯವನ್ನು ಕೊಟ್ಟಾಗ ಅದರ ಬಗ್ಗೆ ಚರ್ಚೆ ಮಾಡೋಣ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಕುಳಿತುಕೊಳ್ಳಿ. ಮಾನ್ಯ ನಾರಾಯಣಸ್ವಾಮಿಯವರೇ, ಕುಳಿತುಕೊಳ್ಳಿ.

**(ಗೊಂದಲ)**

**ಉಪ ಸಭಾಪತಿಯವರು:-** **ವಿಷಯಾಂತರ ಮಾಡಿ ಮಾತನಾಡಿರುವುದು ಯಾವುದೂ ಕಡತಕ್ಕೆ ಹೋಗಬಾರದು. ಇದು ಯಾವುದನ್ನೂ ದಾಖಲಿಸಬೇಡಿ. ವಿಷಯಕ್ಕೆ ಸಂಬಂಧಿಸಿದಂತೆ ಒಬ್ಬೊಬ್ಬರೇ ಮಾತನಾಡಿರುವುದನ್ನು ಮಾತ್ರ ದಾಖಲಿಸಿ. ಬೇರೆ ಯಾವುದೂ ಕಡತಕ್ಕೆ ಹೋಗಬಾರದು.**

ಮಾನ್ಯ ವಿರೋಧ ಪಕ್ಷದ ನಾಯಕರೇ, ವಿಷಯಾಂತರಗಳಾದರೆ ಈ ಸಮಸ್ಯೆಗಳು ಉದ್ಭವವಾಗುತ್ತದೆ. ಮಾನ್ಯ ಸಚಿವರು ಇಲ್ಲಿ ಕುಳಿತಿದ್ದಾರೆ. ಅವರೊಟ್ಟಿಗೆ ನಿಮ್ಮ ವಿಚಾರಗಳನ್ನು ಮಂಡಿಸುತ್ತಿದ್ದೀರಿ. ನೀವು ಮಾತನಾಡಿ ಮುಗಿಸಿ. ನಂತರ ಅವರು ಉತ್ತರಗಳನ್ನು ಕೊಡುತ್ತಾರೆ. ಈಗ ನೀವು ಮಾತನಾಡಿರುವುದಕ್ಕೆಲ್ಲಾ ಅವರು ಉತ್ತರ ಕೊಡುವುದಕ್ಕಾಗುತ್ತದೆಯೇ? ಅವರಿಗೆ ಸಂಬಂಧಪಟ್ಟ ವಿಚಾರವನ್ನು ತಾವು ಮಂಡಿಸುತ್ತಿದ್ದೀರಿ. ಈ ಅವಧಿಯು ಅದಕ್ಕೆ ಸೀಮಿತವಾಗಿದೆ. ಸಮಯವನ್ನೊಮ್ಮೆ ಗಮನಿಸಿ. ಇನ್ನೂ ಆಯವ್ಯಯದ ಮೇಲೆ ಚರ್ಚೆಯಾಗಬೇಕಾಗಿದೆ. ವಿರೋಧ ಪಕ್ಷದ ನಾಯಕರೇ ಹೀಗಾದರೆ ಇನ್ನೇನಾಗುತ್ತದೆ? 'ಯಥಾ ರಾಜಾ ತಥಾ ಪ್ರಜಾ' ಎಂಬಂತಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ಸಮಯದ ವ್ಯವಧಾನವಿದೆ. ನಾನು casual ಆಗಿ ಒಂದು ಮಾತನಾಡಬೇಕಾಗುತ್ತದೆ. ಟಾಂಗಾಗೆ ಕಟ್ಟಿರುವ ಕುದುರೆಯ ರೀತಿ strictly ಹೋಗುವುದಕ್ಕಾಗುವುದಿಲ್ಲ. ಅಲ್ಪಸ್ವಲ್ಪ ವಿಷಯಾಂತರವಾಗುತ್ತದೆ. . . . .

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮಾನ್ಯ ಉಪಸಭಾಪತಿಯವರ ಅದೇಶಾನುಸಾರ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಮಾತನಾಡಿದ್ದು ದಾಖಲಿಸಲಿಲ್ಲ)**

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿಚಾರಕ್ಕೆ ಬನ್ನಿ. ಒಂದು ಗಂಟೆಗೂ ಹೆಚ್ಚು ಸಮಯವಾಯಿತು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಗಣಿಗೆ ಸಂಬಂಧಿಸಿದಂತೆ ನಾನು ಬಹಳಷ್ಟು ಮಾತನಾಡಿದ್ದೇನೆ. ಸರ್ಕಾರ ಇದನ್ನು ಬಹಳ ಹಗುರವಾಗಿ ಕಾಣಬಾರದು. ಈ ಘಟನೆಗಳು ಮೇಲಿಂದ ಮೇಲೆ ಮರುಕಳಿಸುತ್ತಿವೆ. ಮುಗ್ಧ ಕಾರ್ಮಿಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. Property loss ಆಗಿದೆ. ಕಾನೂನುಬದ್ಧವಾಗಿ, ಕಾನೂನಿನ ಚೌಕಟ್ಟಿನಲ್ಲಿ ಕಲ್ಲುಗಣಿ ನಡೆಯಬೇಕು. ಅದೇ ರೀತಿ ಕ್ರಷರ್ ಕೂಡ ಕಾನೂನುಬದ್ಧವಾಗಿ ನಡೆಯಬೇಕು. ಕಾನೂನು ಮೀರಿ ನಡೆಯುತ್ತಿರುವವರ ಕಡೆಯಿಂದ harassment ನಡೆಯುತ್ತಿದ್ದು, ಅವರಿಂದ ದುಡ್ಡು ವಸೂಲಿಯಾಗುತ್ತದೆ ಎಂದರೆ, ಅವರು ಕಾನೂನು ಮೀರಿ ಮನಸೋ ಇಚ್ಛೆ ಹೇಗೆ ಬೇಕೋ ಹಾಗೆಯೇ ಮಾಡುತ್ತಾರೆ. ಆದ್ದರಿಂದ ರಾಜ್ಯಾದ್ಯಂತ ಇರುವ ಕಲ್ಲುಗಣಿ, ಕ್ರಷರ್ ಮಾಲೀಕರ ಒಂದು ಸಭೆಯನ್ನು ಕರೆಯಿರಿ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳಬಯಸುತ್ತೇನೆ.

**(ಮುಂದು)**

(425) 16.03.2021, 4.00 KG.GR

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಎಲ್ಲಾ ಅಧಿಕಾರಿಗಳನ್ನು ಕರೆಯಿರಿ. You give them protection. ಅವರಿಗೆ ಕಾನೂನು ಬದ್ಧವಾಗಿ ಮಾಡಬೇಕೆಂದು ಹೇಳಿ. ಅದನ್ನು ತಪ್ಪಿಸಿದರೆ, death penalty ಇದೆ ಎಂದು ಹೇಳಿ. ಈ ಸ್ಫೋಟಕಕ್ಕೆ Explosive Substances Act apply ಯಾದರೆ, ಅದಕ್ಕೆ death penalty ಇದೆ. ಇದಕ್ಕೆ ಜಾಮೀನು ಸಹ ಸಿಗುವುದಿಲ್ಲ. ಅಂತಹ ಕಠಿಣವಾದಂತಹ ಕಾನೂನುಗಳು ಇವೆ. ಅದಕ್ಕೆ ಅವರು ಕ್ರಮಬದ್ಧವಾಗಿ ನಡೆಯಲಿ. 'I am here to protect your interest' ಎಂದು ಹೇಳಲಿ. Hon'ble Minister is a responsible person. ಮಾನ್ಯ ಸಚಿವರು ಮೊದಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾರಿಗೆ ಸಚಿವರದವರಲ್ಲ. ಮಾನ್ಯ ಸಚಿವರಿಗೆ ಬಹಳ ಅನುಭವವಿದೆ. ಅಲ್ಲದೇ, ಮಾನ್ಯ ಸಚಿವರು ಹಿರಿಯ ಸಚಿವರಾಗಿದ್ದಾರೆ. ಮಾನ್ಯ ಸಚಿವರಲ್ಲಿ ಸತ್ಯವನ್ನು ಒಪ್ಪಿಕೊಳ್ಳುವಂತಹ ಗುಣವಿದೆ. ನಾನು ಅವರ ಗುಣವನ್ನು ಮೆಚ್ಚಿಕೊಳ್ಳುತ್ತೇನೆ. ನಾನು ಮತ್ತು ಮಾನ್ಯ ಸಚಿವರು ಒಂದೇ ತಾಲ್ಲೂಕಿನಿಂದ ಬಂದವರು. ಅದಕ್ಕೆ ಅವರೆಲ್ಲರನ್ನೂ ಒಳಗೊಂಡಂತೆ ಒಂದು ಸಭೆಯನ್ನು ಕರೆಯಲಿ. ಅಧಿಕಾರಿಗಳಿಗೆ ಸೂಕ್ತವಾದಂತಹ ನಿರ್ದೇಶನವನ್ನು ಕೊಡಿ. ಅವರಿಗೆ ಅದರಿಂದ ಅಪಾಯ ಏನಿದೆ, ಕಾನೂನು ಏನಿದೆ ಎಂಬುದರ ಬಗ್ಗೆ ಜಾಗೃತಿ ಮೂಡಿಸುವಂತಹ ಕೆಲಸ ಮಾಡಿ. Ignorance of law is not an excuse. Ignorance of fact is excusable. ಈ ರೀತಿಯ ಕಾನೂನಿದೆ ಎಂದು ಗೊತ್ತಿಲ್ಲ, ನಾವು ಇದನ್ನು ಮಾಡಿದ್ದೇವೆಂದರೆ, ಅದಕ್ಕೆ death penalty ಇದೆ ಎಂದು ಅವರಿಗೆ ತಿಳಿಸಿ ಹೇಳಬೇಕಾಗುತ್ತದೆ. ಅವರಿಗೆ gravity of offence ಬಗ್ಗೆ ತಿಳಿಸಿ ಹೇಳಬೇಕು. ಈ ರೀತಿ ಆಗದಂತೆ ನೋಡಿಕೊಳ್ಳಿ. ಕಲ್ಲುಗಣಿಗಾರಿಕೆ ಮಾಲೀಕರು ಇಂತಹ ಸ್ಫೋಟಕಗಳನ್ನು ಯಾವ ರೀತಿ ತರುತ್ತಾರೆ? ಅವರಿಗೆ monthly, ಹಫ್ತಾ, ಮಣ್ಣು-ಮಸಿ, ಸುಡಗಾಡು, partnership, ಪುಕ್ಕಟೆಯಾಗಿ ಕೊಡು ಎಂದರೆ, ಅವರು ಇವುಗಳನ್ನು ಹೇಗೆ ನಡೆಸಬೇಕು? Hon'ble Minister should take the responsibility to give them confidence. ಮಾನ್ಯ ಸಚಿವರು ಇಲಾಖೆಯ ಮುಖ್ಯಸ್ಥರಾಗಿ ಅವರಿಗೆ ಧೈರ್ಯ ತುಂಬುವಂತಹ ಕೆಲಸ ಮಾಡಬೇಕು. ಕಾನೂನಿನಲ್ಲಿ ಏನಿದೆ ಎಂಬುದನ್ನು ಅವರಿಗೆ ತಿಳಿಸಿ ಹೇಳಬೇಕಾಗುತ್ತದೆ. ಅವರಿಗೆ ತಪ್ಪು ಮಾಡಿದರೆ, death sentence ಆಗುತ್ತದೆ ಎಂಬುದನ್ನು ಹೇಳಬೇಕಾಗುತ್ತದೆ. ಅಲ್ಲದೇ, ಹಫ್ತಾ ವಸೂಲಿ ಮಾಡುವಂತಹ ತಾಲ್ಲೂಕು ಮತ್ತು ಜಿಲ್ಲಾ ಉಸ್ತುವಾರಿಯವರನ್ನು ನಿಯಂತ್ರಣ ಮಾಡಬೇಕು. ಮಾನ್ಯ ಸಚಿವರ ಕೈಯಲ್ಲಿ ಆಗಲಿಲ್ಲವೆಂದರೆ, ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿ ಅದನ್ನು ನಿಯಂತ್ರಣ ಮಾಡಬೇಕು. ಇಲ್ಲವೆಂದರೆ, ಮಾನ್ಯ ಸಚಿವರು ನನ್ನ ಇಲಾಖೆ ಕೆಟ್ಟ ಹೆಸರು ತೆಗೆದುಕೊಳ್ಳುತ್ತದೆ ಎಂಬ ಮಾತನ್ನು ಹೇಳಬೇಕು.

ಮಾನ್ಯ ಸಭಾಪತಿಯವರೇ, ಈಗಾಗಲೇ ಈ ಪ್ರಕರಣವನ್ನು ಸಿ.ಓ.ಡಿ., ತನಿಖೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ನಾವು ಘಟನೆ ನಡೆದ ಜಾಗಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿಯೇ ಅಲ್ಲಿ ಸಿ.ಓ.ಡಿ., ತನಿಖೆ ನಡೆಯುತ್ತಿತ್ತು. 'We are going to hand over our files to the C.o.D.,' ಎಂದು S.P., of Chikballapur ನಮಗೆ ಹೇಳಿದರು. ಕಳೆದ ಬಾರಿ ಶಿವಮೊಗ್ಗದಲ್ಲಿ ಇಂತಹ ಘಟನೆ ನಡೆದಾಗ ಯಾರಿಂದ ತನಿಖೆ ಮಾಡಿಸಿದ್ದಾರೆ? ಪೊಲೀಸ್ ಇಲಾಖೆಯವರು ತನಿಖೆ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದರು. ಈ ಬಾರಿ C.o.D., enquiry. This C.o.D., as well as police are working right under the nose of the Hon'ble Chief Minister. ಈ ಸಂಸ್ಥೆಗಳು ಮಾನ್ಯ ಮುಖ್ಯಮಂತ್ರಿಯವರ ಮೂಗಿನ ಕೆಳಗೆ ಕೆಲಸ ಮಾಡುತ್ತವೆ. ಇವರು ಏನು ಮಾಡುತ್ತಾರೆಂದರೆ, ಇವರು ಅನುಕೂಲ ಸಿಂಧು, ತನಿಖೆಯಾಗುತ್ತದೆ. ಆದರೆ, ಸತ್ಯ ಹೊರಗೆ ಬರುವುದಿಲ್ಲ. ಅದಕ್ಕೆ ನಾನು ಮಾನ್ಯ ಸಚಿವರ ಹಿತಕ್ಕೆ ಹೇಳುತ್ತಿದ್ದೇನೆ. I have got a special interest in him.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸಚಿವರು ಒಂದೇ ಜಿಲ್ಲೆಯವರು ಮತ್ತು ಒಂದೇ ತಾಲ್ಲೂಕಿನವರು. ಅದಕ್ಕೆ ಅವರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಒಂದೇ ಜಿಲ್ಲೆ ಮತ್ತು ಒಂದೇ ತಾಲ್ಲೂಕಿನವರು ಇರಬಹುದು, ನಾವು ಗೆಳೆಯರಾಗಿ ಪ್ರೀತಿಯಿಂದ ಇರಬಹುದು. ಆದರೆ, ನಾವು ರಾಜಕಾರಣದಲ್ಲಿ ಅವರ ತತ್ವ ಸಿದ್ಧಾಂತಕ್ಕೆ ಅವರು adhere ಆಗಿರಬಹುದು, ನನ್ನ ಪಕ್ಷದ ಸಿದ್ಧಾಂತಕ್ಕೆ ನಾನು ಇದ್ದೇನೆ. ಚುನಾವಣೆ ಬಂದಾಗ, ಅವರ ಚಡ್ಡಿ ನಮಗೆ ಬೇಡ. ನಮ್ಮ ಚಡ್ಡಿ ಅವರಿಗೆ ಬೇಡ. ನಾವು ಖಡಾಖಂಡಿತವಾಗಿ ಇದ್ದೇವೆ. ಆದರೆ, ಉಳಿದೆಲ್ಲಾ aspects ಗಳಲ್ಲಿ ನಾವು ಗೆಳೆಯರೆಂದು ವರ್ತನೆ ಮಾಡುತ್ತೇವೆ. He has come from my taluk. I am proud of him. Let him be an efficient Minister and capable Minister. ಅವರು ಹೆಸರು ತೆಗೆದುಕೊಂಡು ಬರಲಿ. Ultimately, we will get a good name. ಅದು ನಮ್ಮ ಜಿಲ್ಲೆಗೆ ಮತ್ತು ನಮ್ಮ ತಾಲ್ಲೂಕಿಗೆ ಗೌರವ ಸಲ್ಲುವಂತಹ ಕೆಲಸವಾಗುತ್ತದೆ. ಅದಕ್ಕೆ ಮಾನ್ಯ ಸಚಿವರು ಸ್ವಲ್ಪ ಖಡಕ್ಕಾಗಿ ಇರಬೇಕಾಗುತ್ತದೆ. ಇಂತಹ curb ಮಾಡಿ. ಹಲ್ಲೆ ನಡೆಯದಂತೆ ನೋಡಿಕೊಳ್ಳಲಿ. He will get a very good name. I am telling this in his own interest. ನಾನು ಇದನ್ನು ರಾಜಕಾರಣಕ್ಕಾಗಿ ಮಾತನಾಡುವುದಿಲ್ಲ. All these words are coming out from the bottom of my heart, not from my lips or tongue. ಇಷ್ಟು ವಿಚಾರಗಳು ಇವೆ. ಕಳೆದ ಘಟನೆಯಲ್ಲಿ ಪೊಲೀಸರು ತನಿಖೆ ಮಾಡಿದ್ದಾರೆ ಈ ಘಟನೆಯಲ್ಲಿ ಸಿ.ಓ.ಡಿ., ಯವರು ತನಿಖೆ ಮಾಡುತ್ತಿದ್ದಾರೆ. ಇದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

outcome ಬರುವುದಿಲ್ಲ. ಇದನ್ನು ಮಾನ್ಯ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಂದ ತನಿಖೆ ಮಾಡಿಸಿದರೆ, ಇದರ ಸತ್ಯ ಹೊರಗಡೆ ಬರುತ್ತದೆ. ಆಗ ಎಲ್ಲೆಲ್ಲಿ ತಪ್ಪುಗಳು ಇವೆ ಎನ್ನುವುದು ಕಂಡುಬರುತ್ತದೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಅಡಗೂರು ಹೆಚ್.ವಿಶ್ವನಾಥ್‌ರವರು ಪೀಠವನ್ನು ಅಲಂಕರಿಸಿದರು)**

Judge of the High Court will be an impartial officer. This Police Department, C.o.D., all these are working... ಇವು ಸರ್ಕಾರದ ಅಂಗ ಸಂಸ್ಥೆಗಳು. ಹೆಚ್ಚು ಕಡಿಮೆ ನಮಗೆ ರಾಜಕಾರಣದಲ್ಲಿ ಗೊತ್ತಿದೆ. ಇದನ್ನು ಹೀಗೆ ಮಾಡು ಎಂದರೆ, ಅದೇರೀತಿ ಮಾಡುತ್ತಾರೆ. ಇದನ್ನು ಇದೇ ರೀತಿಯಲ್ಲಿ ತನಿಖೆ ಮಾಡು ಎಂದರೆ, ಹಾಗೆ ಮಾಡುವವರು ಇದ್ದಾರೆ. ನನಗೆ ಅವರನ್ನು demoralise ಮಾಡಬೇಕೆಂದಿಲ್ಲ. I am proud of our Police Department and I am proud of our C.o.D., But, they will be brought under the political pressure. ಸತ್ಯ ಹೊರಗೆ ಬರುವುದಿಲ್ಲ.

ಮಾನ್ಯ ಸಭಾಪತಿಯವರೇ, ಅದಕ್ಕೆ ಇದನ್ನು ಮಾನ್ಯ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತೇನೆ. ಆಗ ಸತ್ಯ ಹೊರಗೆ ಬರುತ್ತದೆ. ಸತ್ಯ ಹೊರಗೆ ಬರುವಂತಹ fact finding ಅವರು investigation ಅಂತಲ್ಲ, fact finding machine ಇದ್ದಂಗೆ ಅದು. ಅವರು ನಿಷ್ಪಕ್ಷಪಾತವಾಗಿ ಯಾವುದೇ ಮರ್ಜಿ, ಬಿಡೆ, ಮುಲಾಜಿಗೆ ಒಳಗಾಗದೆ ಮಾನ್ಯ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಂದ ಇದನ್ನು ತನಿಖೆ ಮಾಡಿಸಿದರೆ, ಆ ತನಿಖೆಯಿಂದ ಬಹಳ clean report ಬರುತ್ತದೆ. ಅವರು ಸತ್ಯವನ್ನು ಹೊರಗೆ ಚೆಲ್ಲುತ್ತಾರೆ. ಆ ಮೇಲೆ ಇದಕ್ಕೆ ಯಾರು ಹೊಣೆಗಾರರು ಇರುತ್ತಾರೆ ಎಂಬುದು ಇರುತ್ತದೆ. ನಂತರ ಇದನ್ನು ಸುಧಾರಣೆ ಮಾಡುವುದಕ್ಕೆ ಆಗುತ್ತದೆ. ನಮ್ಮ ರಾಜ್ಯದಲ್ಲಿರುವಂತಹ ಕಲ್ಲುಗಣಿಗಾರಿಕೆಗಳ ಕ್ವಾರಿಗಳಾಗಲಿ ಅಥವಾ M-sand, ಜಲ್ಲಿ ತಯಾರು ಮಾಡುವಂತಹ ಕ್ರಷರ್‌ಗಳಾಗಲಿ, ಇವು ನಮ್ಮ ದೇಶಲ್ಲಿಯೇ ಕರ್ನಾಟಕ Number one ಆಗಬೇಕು. ನಮ್ಮ ದೇಶದ ಎಲ್ಲಾ ರಾಜ್ಯದವರು ನಮ್ಮ ರಾಜ್ಯದ ಕಡೆಗೆ ಬೆರಳು ಮಾಡಿ ತೋರಿಸಬೇಕು. It is number one in this department ಎನ್ನುವಂತಹ ರೀತಿಯಲ್ಲಿ ಆಗುತ್ತದೆ. To get that feedback,

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಚಿವರಿಗೆ ಆ ಮಾಹಿತಿ ಸಿಗಬೇಕೆಂದರೆ, ಮಾನ್ಯ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕೆಂದು ನಿಶ್ಚಿತವಾಗಿಯೂ ನಾನು ಈ ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಮಾನ್ಯ ಸಚಿವರೇ ಒಪ್ಪಿಕೊಂಡಿದ್ದಾರೆ. Openly he has agreed that haftha is going on everywhere in the State. I do appreciate him.

**ಶ್ರೀ ಮುರುಗೇಶ್ ನಿರಾಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು):** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತಿದ್ದಾರೆ. ಉಳಿದ ಸದಸ್ಯರು ಹೊಸ ಹೊಸ ವಿಷಯವನ್ನು ಮಾತನಾಡಲಿ. ನಮಗೆ ಪ್ರತಿಪಕ್ಷದ ಸದಸ್ಯರುಗಳು ಸಲಹೆಗಳನ್ನು ಕೊಟ್ಟರೆ, ಅದನ್ನು implement ಮಾಡುವುದಕ್ಕೆ ಸುಲಭವಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಅಡ್ಡಿಪಡಿಸಬಾರದು ಇನ್ನಷ್ಟು ಮಾತನಾಡಲಿ ಎಂದು ಹೇಳಬೇಕು. ನನಗೆ time limit ಇಲ್ಲ. ಇದು ಮಾನ್ಯ ಸಚಿವರ ಗಮನಕ್ಕೆ ಇರಲಿ. ಮಾನ್ಯ ಸಭಾಪತಿಯವರು ಸಹ ಮಾರ್ಗದರ್ಶನ ಮಾಡುವುದಕ್ಕೆ ಬರುವುದಿಲ್ಲ. ನಾಳೆಗೆ ಆಗಲಿ, ನಾಡಿದ್ದೇ ಆಗಲಿ. ಮಾನ್ಯ ಸಭಾಪತಿಯವರಿಗೆ ಮತ್ತು ಪ್ರತಿಪಕ್ಷದ ನಾಯಕರಿಗೆ time limit ಇಲ್ಲ. ನಮ್ಮ ಗೆಳೆಯರು ಇದರ ಬಗ್ಗೆ ಹೇಳುತ್ತಾರೆ. ಇರಲಿ, let it be. ಮಾನ್ಯ ಸಭಾನಾಯಕರು ಮಾತನಾಡಲು ಎದ್ದರೆ, ನಮ್ಮ ಕಡೆಯವರು ಎದ್ದುಬಿಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಏನಾದರೂ ಸಮಾಧಾನ ಮಾಡಬೇಕೆಂದರೆ, ಅದು ನನ್ನಿಂದ ಮಾತ್ರ ಸಾಧ್ಯ. ಅವರನ್ನು ಬೇರೆ ಯಾರೂ ಸಹ ಸಮಾಧಾನ ಪಡಿಸುವುದಕ್ಕೆ ಸಾಧ್ಯವಿಲ್ಲ. ಸಂಘರ್ಷಕ್ಕೆ ಬರುವುದಕ್ಕೆ ಹೆಚ್ಚು ಜನ ಸದಸ್ಯರು ಇದ್ದಾರೆ. ಈಗ ನಿಯಮ 68 ರಡಿಯಲ್ಲಿ ಕಾಲಾವಕಾಶ ಕೊಟ್ಟಿದೆ. ಅವರಿಗೆ time limit ಇಲ್ಲ. ಅದರೆ, ಬೇರೆ ಸದಸ್ಯರು ಮಾತನಾಡುವವರು ಇದ್ದಾರೆ. ಹಾಗಾಗಿ, ಮಾನ್ಯ ವಿರೋಧ ಪಕ್ಷದ ನಾಯಕರೇ ಮಾತನಾಡುತ್ತಿದ್ದರೆ ಇವತ್ತಿನ ಅವಧಿ ಮುಗಿದು ಹೋಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತೇ ಮುಗಿಯಬೇಕೆಂದು ಇದೆಯೇ? I know it very well. Nobody can ask me to conclude. Even the Chair cannot tell me. Let it be. ಮಾನ್ಯ ಸಚಿವರು ಹೇಳಿದ್ದನ್ನು I will take in a

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

good spirit. ನಾನು ಅದರ ಬಗ್ಗೆ ಹೇಳಲು ಹೋಗುವುದಿಲ್ಲ. ನಾವು ಕಳೆದ ಬಾರಿ ಶಿವಮೊಗ್ಗದಲ್ಲಿ ನಡೆದ ಘಟನೆಯಲ್ಲಿಯೂ ಸಹ ಹೇಳಿದ್ದೆವು. ಆದರೆ, ಸರ್ಕಾರ ನಮ್ಮ ಮಾತನ್ನು ಕೇಳಿಲ್ಲ. ಈ ಬಾರಿ ಆದರೂ ಸಹ, ಈ ಸರ್ಕಾರಕ್ಕೆ ಬುದ್ದಿ ಬಂದು ಮಾನ್ಯ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರ ಮುಖಾಂತರ ಈ ಘಟನೆಯ ಬಗ್ಗೆ ತನಿಖೆ ಮಾಡಿಸಲಿ. ಅದರ ಸತ್ಯವನ್ನು ಹೊರಗೆ ಹಾಕುವುದರ ಜೊತೆಗೆ ಈ ಇಲಾಖೆಯಲ್ಲಿ ನಡೆಯುವಂತಹ ಎಲ್ಲಾ ಅನ್ಯಾಯ, ಅನೀತಿ ಮತ್ತು ಅವ್ಯವಹಾರಗಳನ್ನು ನಿಲ್ಲಿಸುವುದಕ್ಕೆ ಸರ್ಕಾರಕ್ಕೆ ಸಹಾಯವಾಗುತ್ತದೆ. ಆದ್ದರಿಂದ, ಇದನ್ನು ಮಾನ್ಯ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಂದ ತನಿಖೆಗೆ ಒಳಪಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಿ ನಾನು ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದಕ್ಕಾಗಿ ಧನ್ಯವಾದಗಳು. ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ಸರಹದ್ದಿನಲ್ಲಿ ಬರುವ ಹಿರೇನಾಗವಲ್ಲಿ ಗ್ರಾಮದ ಬಳಿ ಕಾನೂನು ಬಾಹಿರವಾಗಿ ನಡೆಯುತ್ತಿರುವಂತಹ ಗಣಿಗಾರಿಕೆ ಕುರಿತು ಪ್ರಸ್ತಾಪ ಮಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಸುಧೀರ್ಘವಾಗಿ ಮಾತನಾಡಿದ್ದಾರೆ. ಈ ಘಟನೆ ಮೊದಲನೆಯದಲ್ಲ. ಇವು ಆಗಾಗ ಪುನರಾವರ್ತನೆಯಾಗುವಂತಹ ಘಟನೆಗಳು. ದಿನಾಂಕ 21.01.2021 ರಂದು ಶಿವಮೊಗ್ಗ ಜಿಲ್ಲೆಯ ಹುಣಸೋಡಿನಲ್ಲಿ ಆದಂತಹ ಘಟನೆಯ ಬಗ್ಗೆ ಅಂದು ಈ ಸದನದಲ್ಲಿ ಬಹಳ ಗಂಭೀರವಾಗಿ ಚರ್ಚೆ ಮಾಡಿ ನಾವು ಪರಿಪರಿಯಾಗಿ ವಿಷಯವನ್ನು ತಿಳಿಸಿದ್ದೆವು. ಆಗ ಸರ್ಕಾರ ಮುನ್ನಚ್ಚರಿಕೆ ವಹಿಸಿದ್ದರೆ, ಈ ಘಟನೆಯನ್ನು ತಪ್ಪಿಸಬಹುದಾಗಿತ್ತು. ಏಕೋ ಏನೋ ಈ ಇಲಾಖೆಯಲ್ಲಿರುವಂತಹ ಅಧಿಕಾರಿಗಳು ಸರ್ಕಾರದ ಮೇಲೆ ಸವಾರಿ ಮಾಡುತ್ತಿದ್ದಾರೆಯೇ ಎನ್ನುವಂತಹ ಅನುಮಾನ ನಮಗೆ ಬರುತ್ತಿದೆ. ಸರ್ಕಾರದ ಕೈಯಲ್ಲಿ ಏಕೆ ಕಡಿವಾಣ ಹಾಕುವುದಕ್ಕೆ ಆಗುತ್ತಿಲ್ಲ? ಇಂತಹ ಘಟನೆಗಳಿಂದ ಕಲ್ಲುಗಣಿಗಾರಿಕೆ ಮತ್ತು ಕ್ರಷರ್‌ಗಳು ಏನು ನಡೆಯುತ್ತಿವೆ ಅವು ಮಾಫಿಯಾ ಆಗಿಹೋಗಿವೆ. ಸರ್ಕಾರಗಳನ್ನು, ಅಧಿಕಾರಿಗಳನ್ನು ಮತ್ತು ರಾಜಕಾರಣಿಗಳನ್ನು ನಿಯಂತ್ರಣ ಮಾಡುವ ಮಟ್ಟಕೆ ಈ ಮಾಫಿಯಾ ಬೆಳೆಯುತ್ತಿದೆ.

(ಮುಂದು)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(426)16-03-2021(4-10)ಎಂವಿ-ಎಂಡಿ(ವಿಕೆ)** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ನಮ್ಮ ಕಣ್ಣು ಮುಂದೆಯೇ ಕೇವಲ ಒಂದು ತಿಂಗಳ ಅವಧಿಯಲ್ಲಿ ಹತ್ತಾರು ಜನರ ಸಾವುಗಳನ್ನು ನೋಡಿದ್ದೇವೆ. ಅವರ ದೇಹಗಳು ಯಾವ ರೀತಿ ಆಯಿತು ಎಂದರೆ, ಕೈಗಳಿಗೆ ಸಿಗದ ರೀತಿ ವಿಕಾರವಾಗಿ ಛಿದ್ರ ಛಿದ್ರವಾಗಿವೆ. ಈ ರೀತಿಯಾಗಿರುವುದು ನಮ್ಮ ಕಣ್ಣು ಮುಂದೆ ಕಾಣುತ್ತಿದೆ. ಈ ರೀತಿಯಾಗಿ ಇನ್ನು ಎಷ್ಟು ಘಟನೆಗಳು ಆಗಬೇಕೆಂದು ಸರ್ಕಾರ ಅಲ್ಲಿಯವರೆಗೆ ಕಾಯ್ದುಕೊಂಡು ಕುಳಿತಿದೆಯೇ? ನಾನು ದಯಮಾಡಿ ಸರ್ಕಾರಕ್ಕೆ ಮನವಿ ಮಾಡುತ್ತಿರುವುದು ಏನೆಂದರೆ, ಚಿಕ್ಕಬಳ್ಳಾಪುರ ಜಿಲ್ಲೆ, ಹಿರೇನಾಗವಲ್ಲಿ ಗ್ರಾಮದಲ್ಲಿ 'ಶ್ರೀ ಭ್ರಮರವಾಸಿನಿ ಎಂ. ಸ್ಯಾಂಡಲ್ಸ್ ಎಲ್‌ಎಲ್‌ಪಿ ಕ್ರಷರ್' ಇವರು ಪರವಾನಿಗೆಯನ್ನು ಪಡೆದಿರುವಂತಹವರು. ಇವರಿಗೆ ಸರ್ವೆ ನಂಬರ್ 24ರಲ್ಲಿ 3 ಎಕರೆ 10 ಗುಂಟೆ ವಿಸ್ತೀರ್ಣದ ಪರಿವರ್ತನೆಯಾಗಿರುವಂತಹ ಜಾಗವನ್ನು ಮಂಜೂರು ಮಾಡಿಕೊಟ್ಟಿದ್ದಾರೆ. ದಿನಾಂಕ 28.12.2015ರಿಂದ 20 ವರ್ಷಗಳ ಅವಧಿಗೆ ಅವರಿಗೆ ಗುತ್ತಿಗೆ ನೀಡಿದ್ದಾರೆ. ಪರವಾನಿಗೆಯ Form-C ಅವಧಿ 31.03.2031ರವರೆಗೆ ಅವರ ಬಳಿ ಇರುತ್ತದೆ. ಆದರೆ, ಸದರಿ ಕ್ರಷರ್ ಘಟಕದಲ್ಲಿ ಯಾರ್ಯಾರು ಪಾಲುದಾರರು ಇದ್ದಾರೆಂದರೆ; ಶ್ರೀ ಜಿ.ಎಸ್.ನಾಗರಾಜ್, ಶ್ರೀ ರಾಘವೇಂದ್ರ ರೆಡ್ಡಿ, ಶ್ರೀಮತಿ ಚಂದ್ರಕಲಾ, ಶ್ರೀ ಲಕ್ಷ್ಮಿಪತಿ ರೆಡ್ಡಿ ಪೈಯಾಲಾ, ಶ್ರೀ ಪೈಯಾಲಾ ರಾಮಲಿಂಗ ರೆಡ್ಡಿ, ಶ್ರೀ ಪೈಯಾಲಾ ವೆಂಕಟಶಿವ ರೆಡ್ಡಿ ಹಾಗೂ ಶ್ರೀ ಸುಬ್ಬಯ್ಯ ನಾರಪ್ಪ ಶ್ರೀನಿವಾಸುಲು ಇವರು ಇಷ್ಟು ಜನರು ಸೇರಿ ಆ ಕಂಪನಿಯನ್ನು ಸ್ಥಾಪನೆ ಮಾಡಿಕೊಂಡಿರುತ್ತಾರೆ. ಅದಾದ ಮೇಲೆ ಇವರು 20 ವರ್ಷಗಳಿಗೆ ಗುತ್ತಿಗೆ ತೆಗೆದುಕೊಂಡು, ಅದನ್ನು ಉಪಗುತ್ತಿಗೆ ಕೊಡುವುದಕ್ಕೆ ಹೋಗುತ್ತಾರೆ. ಕಾನೂನಾತ್ಮಕವಾಗಿ ಸರ್ಕಾರದ ಇಲಾಖೆಯ ವತಿಯಿಂದ ಈ ಕಂಪನಿಗೆ ಇಷ್ಟು ಜನ ಪಾಲುದಾರರು ಸೇರಿಕೊಂಡು, ಪರವಾನಿಗೆಯನ್ನು ಪಡೆದುಕೊಂಡ ಮೇಲೆ ಉಪಗುತ್ತಿಗೆ ಕೊಡುವುದಕ್ಕೋಸ್ಕರ ಆ ಪರವಾನಿಗೆಯನ್ನು ಬೇರೆಯವರಿಗೆ ಮಾರಾಟ ಮಾಡುತ್ತಾರೆ. ಅವರು ಯಾರು ಎಂದರೆ, 'ಮೆ॥ ಶಿರಡಿ ಸಾಯಿ ಅಗ್ರಿಗೇಟ್ಸ್' ಎಂಬ ಹೆಸರಿಗೆ, ದಿನಾಂಕ 01.03.2014ರಂದು ಪರವಾನಿಗೆಯನ್ನು ವರ್ಗಾವಣೆ ಮಾಡುತ್ತಾರೆ. ಆ ನಂತರ ಇವರು ಇದನ್ನು ಗುತ್ತಿಗೆ ನಡೆಸುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈಗ ಸದ್ಯಕ್ಕೆ ಮೆ॥ ಶಿರಡಿ ಸಾಯಿ ಅಗ್ರಿಗೇಟ್ಸ್ ರವರು ಈ ಗುತ್ತಿಗೆಯನ್ನು ಮಾಡುತ್ತಿರುವಂತಹ ಸಂದರ್ಭದಲ್ಲಿ, ಈಗ ಕಾನೂನು ಪ್ರಕಾರವಾಗಿ ಕಲ್ಲುಗಣಿ ಮಾಡುವುದಕ್ಕೆ ಒಂದು ರೀತಿಯ ಪರವಾನಿಗೆ. ಕ್ರಷರ್ ಮಾಡುವುದಕ್ಕೆ ಒಂದು ರೀತಿಯ ಪರವಾನಿಗೆ ಮತ್ತು ಅದನ್ನು ಸ್ಫೋಟ ಮಾಡುವುದಕ್ಕೆ ಬೇರೆ ರೀತಿಯ ಪರವಾನಿಗೆಯನ್ನು ತೆಗೆದುಕೊಳ್ಳಬೇಕು. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸುಮಾರು ಕಲ್ಲುಗಣಿ ಮತ್ತು ಕ್ರಷರ್‌ಗಳಿವೆ. ಆದರೆ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

174 ಕಲ್ಲು ಗಣಿಗಾರಿಕೆಗೆ ಪರವಾನಿಗೆ ಪಡೆದಿದ್ದಾರೆ. ಇದರಲ್ಲಿ ಪ್ರಸ್ತುತ 111 ಕಲ್ಲುಗಣಿಗಳು ಚಾಲ್ತಿಯಲ್ಲಿವೆ. ಇದರಲ್ಲಿ 21 ಜನರು ಮಾತ್ರ ಬಂಡೆಗಳನ್ನು ಸ್ಫೋಟ ಮಾಡುವುದಕ್ಕೆ ಅನುಮತಿ ತೆಗೆದುಕೊಂಡಿದ್ದಾರೆ. ಅಂದರೆ, 174 ಜನರಲ್ಲಿ ಕೇವಲ 21 ಜನರು ಮಾತ್ರ ಅನುಮತಿ ತೆಗೆದುಕೊಂಡಿದ್ದಾರೆ. ಆ 21 ಜನರಿಗೆ ಪರವಾನಿಗೆ ನೀಡಿದ್ದಾರೆ. ಕಾನೂನಾತ್ಮಕವಾಗಿ ಆ ಬಂಡೆಗಳನ್ನು ಸಿಡಿಸುವುದಕ್ಕೆ ಜಿಲೆಟಿನ್ ಸ್ಟಿಕ್‌ಗಳು, ಕೇಪು ಮತ್ತು ತೋಟಾಯಿ ಎಂದು ಕರೆಯುತ್ತೇವೆ. ಅವುಗಳನ್ನು ತರುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಇನ್ನುಳಿದಿರುವಂತಹ ಸುಮಾರು 150 ಕಲ್ಲು ಗಣಿಗಾರಿಕೆಗಳು ಅದೇ ಜಿಲ್ಲೆ ಅಥವಾ ತಾಲ್ಲೂಕಿನಲ್ಲಿ ನಡೆಯುತ್ತಿರುವಂಥದ್ದು. ಈ ರೀತಿಯ ಸ್ಫೋಟ ಮಾಡುವುದಕ್ಕೆ ಏನು ಈ 21 ಜನರು ಪರವಾನಿಗೆಯನ್ನು ತೆಗೆದುಕೊಂಡಿದ್ದಾರೆ, ಅವರ ಬಳಿಗೆ ಇವರು ಹೋಗಿ ರಾತ್ರೋರಾತ್ರಿ ಹೆಚ್ಚು ಬೆಲೆ ಕೊಟ್ಟು, ಕಾನೂನುಬಾಹಿರವಾಗಿ ಅ ಸ್ಫೋಟಕ ವಸ್ತುಗಳನ್ನು ಖರೀದಿ ಮಾಡಿಕೊಳ್ಳುತ್ತಾರೆ. ಕೈಯಲ್ಲಿ ಒಡೆದು ಕಲ್ಲನ್ನು ತೆಗೆಯುವಂತಹ ಗಣಿಗಾರಿಕೆಗೆ ಸರ್ಕಾರ ಅನುಮತಿ ನೀಡಿದೆ. ಅಲ್ಲೂ ಕೂಡ ಈ ರೀತಿಯ ಸ್ಫೋಟವನ್ನು ಮಾಡುವ ಮುಖಾಂತರ ಕಲ್ಲು ಗಣಿಗಾರಿಕೆಯನ್ನು ಪ್ರಾರಂಭ ಮಾಡಿದ್ದಾರೆ. ಈ ಸ್ಫೋಟಕ ವಸ್ತುಗಳು ಎಲ್ಲಿಂದ ಬರುತ್ತವೆಂದರೆ, ಒರಿಸ್ಸಾ, ಆಂಧ್ರಪ್ರದೇಶ ಮತ್ತು ತಮಿಳುನಾಡು ಈ ರಾಜ್ಯಗಳಿಂದ ರಾತ್ರೋರಾತ್ರಿ ಅವುಗಳನ್ನು ತಂದು ಇಲ್ಲಿ ಮಾರಾಟ ಮಾಡುತ್ತಾರೆ. ಇದಕ್ಕೆ ಯಾರೂ ಕೂಡ ಕಡಿವಾಣ ಹಾಕುವುದಿಲ್ಲ. ಆಂಧ್ರಪ್ರದೇಶದಿಂದ ಬರಬೇಕಾದರೆ, ಅವರ ಗಡಿ ಭಾಗದಲ್ಲಿ ಟೋಲ್‌ಗೇಟ್ ಇದೆ. ಅಲ್ಲಿ ಯಾರೂ ಸಹ ಅದರ ಪರಿಶೀಲನೆ ಮಾಡುವುದಿಲ್ಲವೇ? ಕರ್ನಾಟಕ ರಾಜ್ಯಕ್ಕೆ ಬರುತ್ತಿದ್ದ ಹಾಗೆಯೇ ಅಲ್ಲೂ ಸಹ ಟೋಲ್ ಇದೆ. ಅಲ್ಲಿ ನಮ್ಮ ಅಧಿಕಾರಿಗಳು ಯಾರೂ ಕೂಡ ಅದನ್ನು ಪರಿಶೀಲನೆ ಮಾಡುವುದಿಲ್ಲವೇ? ಅಲ್ಲಿಂದ ಇಷ್ಟು ದೂರ ನಿರ್ಭಯವಾಗಿ ಇಷ್ಟೊಂದು ಸ್ಫೋಟಕಗಳು ಬರುತ್ತಿದೆ ಎಂದರೆ, ಎಲ್ಲೋ ಒಂದು ಕಡೆ ಪೊಲೀಸ್ ಇಲಾಖೆ, ಸಾರಿಗೆ ಇಲಾಖೆ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಗಳು ವಿಫಲವಾಗಿವೆ ಎಂದು ಹೇಳಬಹುದು ಅಲ್ಲವೇ? ಪರವಾನಿಗೆದಾರರಿಗೆ ತಿಂಗಳಿಗೆ ಇಷ್ಟು ಸ್ಫೋಟಕಗಳನ್ನು ತರಬೇಕೆಂದು ಪರವಾನಿಗೆಯಲ್ಲಿ ತಿಳಿಸಿರುತ್ತಾರೆ. ಅದರೆ, ಅವರು ಸ್ಫೋಟಕ ವಸ್ತುಗಳನ್ನು ಲಾರಿಗಟ್ಟಲೆ ತಂದು, ಯಾರಿಗೆ ಸ್ಫೋಟಕದ ಪರವಾನಿಗೆ ಇದೆ, ಅವರನ್ನು ಬಿಟ್ಟು, ಪರವಾನಿಗೆ ಇಲ್ಲದೆ ಗಣಿಗಾರಿಕೆ ಮಾಡುತ್ತಿರುವಂತಹರಿಗೆ ಸರಬರಾಜು ಮಾಡುತ್ತಿದ್ದಾರೆ. ಇಂತಹವರಿಗೆ ಯಾವಾಗ ಕಡಿವಾಣ ಹಾಕುವುದು. ಶಿವಮೊಗ್ಗ ಜಿಲ್ಲೆಯಲ್ಲಿ ಆಗಿರುವ ಘಟನೆ ಇನ್ನು ನಮ್ಮ ಕಣ್ಣು ಮುಂದೆ ಹಾಗೆಯೇ ಹಸಿರಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಜನವರಿ 21, 2021ರಂದು ಈ ರೀತಿಯ ಘಟನೆಯಾಯಿತು. ಈ ಘಟನೆಯಾಗಿ ಸರಿಯಾಗಿ ಒಂದು ತಿಂಗಳಿಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಫೆಬ್ರವರಿ 22, 2021ರಂದು ಮತ್ತೆ ಈ ರೀತಿಯ ಘಟನೆಯಾಗಿದೆ. ಈ ಗಣಿಗಾರಿಕೆಯನ್ನು ಯಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೋ ಅವರ ವಿರುದ್ಧ ಇಲಾಖೆಗೆ ಒಂದು ದೂರು ಬರುತ್ತದೆ. ಅಂದರೆ, ಮೆ॥ ಶಿರಡಿ ಸಾಯಿ ಅಗ್ರಿಗೇಟ್ಸ್‌ನವರು ಏನು ಸ್ಫೋಟಕ ವಸ್ತುಗಳನ್ನು ಶೇಖರಣೆ ಮಾಡಿ ಇಟ್ಟುಕೊಂಡಿದ್ದಾರೋ ಅಲ್ಲಿಗೆ ಅಧಿಕಾರಿಗಳು inspection ಹೋಗುತ್ತಾರೆ. ಅಧಿಕಾರಿಗಳು ಅಲ್ಲಿಗೆ inspection ಹೋದಾಗ ಅಧಿಕಾರಿಗಳಿಗೆ ಕೆಲವು ಸ್ಫೋಟಕ ವಸ್ತುಗಳು ಕೈಗೆ ಸಿಕ್ಕಿವೆ. ದಿನಾಂಕ ಫೆಬ್ರವರಿ 7, 2021ರಂದು ಅಧಿಕಾರಿಗಳು ಆ ಸ್ಫೋಟಕ ವಸ್ತುಗಳನ್ನು seize ಮಾಡಿಕೊಂಡು ಬರುತ್ತಾರೆ. ಈ 22ನೇ ತಾರೀಖಿನ ಘಟನೆಗೆ ಸಂಬಂಧಿಸಿದಂತೆ ನಾಳೆ ಮತ್ತೆ ಅಧಿಕಾರಿಗಳು ಸ್ಫೋಟಕಗಳನ್ನು seize ಮಾಡುವುದಕ್ಕೆ inspection ಬರುತ್ತಿದ್ದಾರೆಂದು ಅವರಿಗೆ ಮಾಹಿತಿ ಹೋಗುತ್ತದೆ.  ಆ ಮಾಹಿತಿ ಬೇರೆ ಯಾರಿಂದಲೋ ಹೋಗುವುದಿಲ್ಲ, ಇಲಾಖೆಯಲ್ಲಿ ಕೆಲಸ ಮಾಡುತ್ತಿರುವಂತಹ ಯಾರೋ ಅಧಿಕಾರಿಗಳೇ ಅದರ ಮಾಹಿತಿಯನ್ನು ಕೊಡುತ್ತಾರೆ. ಈಗ ಮತ್ತೆ inspection ಬರುತ್ತಿದ್ದಾರೆ, ಈಗ ನಿಮ್ಮಲ್ಲಿರುವಂತಹ ಸ್ಫೋಟಕ ವಸ್ತುಗಳನ್ನು ಬೇರೆ ಕಡೆಗೆ ಬಚ್ಚಿಟ್ಟುಕೊಳ್ಳಿ ಎಂದು ಅವರಿಗೆ ಮಾಹಿತಿಯನ್ನು ನೀಡುತ್ತಾರೆ. ಅದರ ಆಧಾರದ ಮೇಲೆ ರಾತ್ರಿ 12 ಗಂಟೆ 40 ನಿಮಿಷಕ್ಕೆ ಅವರ ಹತ್ತಿರ ಇದ್ದಂತಹ ಸ್ಫೋಟಕ ವಸ್ತುಗಳನ್ನು ಚಕ್ರದ ಟ್ಯೂಬ್‌ನಲ್ಲಿ ಇಟ್ಟುಕೊಂಡು, ಅದನ್ನು ತೆಗೆದುಕೊಂಡು ಹೋಗಿ ಪಕ್ಕದಲ್ಲಿರುವಂತಹ ಗೋಮಾಳ ಜಮೀನಿನಲ್ಲಿ ಹಳ್ಳ ತೆಗೆದು ಅದನ್ನು ಇಡುವುದಕ್ಕೆ ಹೋಗುತ್ತಾರೆ. ದುರ್ದೈವ ಅವುಗಳು ಸ್ಫೋಟವಾಗುತ್ತವೆ. ಸ್ಫೋಟವಾಗಿ ಅದರಿಂದ ಸುಮಾರು ಆರು ಜನರು ಸಾಯುತ್ತಾರೆ. ಅವರಲ್ಲಿ ಇಬ್ಬರು ಆಂಧ್ರಪ್ರದೇಶದವರು, ಒಬ್ಬರು ನೇಪಾಳದವರು, ಇನ್ನುಳಿದವರು ಚಿಕ್ಕಬಳ್ಳಾಪುರ ಜಿಲ್ಲೆಯವರು. ಅವರುಗಳೆಲ್ಲರೂ ಸಹ ಅಮಾಯಕರು.  ಅವರಿಗೆ ಕೆಲಸ ಕಾರ್ಯವಿಲ್ಲ. ಅವರಿಗೆ ತಮ್ಮ ಕುಟುಂಬವನ್ನು ಸಾಕಬೇಕು. ಅದಕ್ಕೆ ಯಾವುದೇ ಕಠಿಣವಾದ ಕೆಲಸವಾದರೂ ಪರವಾಗಿಲ್ಲ, ಕೆಲಸ ಸಿಕ್ಕಿದರೆ ಸಾಕು ಎಂದು ಅಷ್ಟೂ ಜನರು ಬಹಳ ದೂರದಿಂದ ಬಂದು ಇಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಾರೆ.  ಸ್ಫೋಟವಾದರೆ ಏನು ಆಗುತ್ತದೆ ಎನ್ನುವಂತಹ ಭಯ ಕೂಡ ಅವರಿಗೆ ಇಲ್ಲ. ಅವರು ಕೂಲಿ ಮಾಡಿದರೆ ಮಾತ್ರ ಒಪ್ಪತ್ತು ಊಟ ಮಾಡುವುದಕ್ಕೆ ಸಾಧ್ಯವಾಗುತ್ತದೆ.  ಅವರನ್ನು ನಂಬಿಕೊಂಡು ಅವರ ಕುಟುಂಬಗಳಿವೆ.  ಅವರು ತಮ್ಮ ಹೆಂಡತಿ–ಮಕ್ಕಳು ಮತ್ತು ತಂದೆ–ತಾಯಿಯನ್ನು ಸಾಕಬೇಕಾಗಿದೆ. ಅವರಿಗೆ ಏನಾದರೂ ಅನಾಹುತ ಆಗಬಹುದು ಎನ್ನುವಂತಹ ಅರಿವು ಇದ್ದರೂ ಕೂಡ, ಅವರು ಆ ಕಠಿಣ ಕೆಲಸಕ್ಕೆ ಕೈ ಹಾಕಿರುತ್ತಾರೆ.  ಆ ರಾತ್ರಿ 12 ಗಂಟೆ 40 ನಿಮಿಷದಲ್ಲಿ ಆರು ಜೀವಗಳು ಛಿದ್ರ ಛಿದ್ರವಾಗಿ ಹೋಗುತ್ತವೆ. ಇದು ಏಕೆ ಆಯಿತು? ಹದಿನೈದು ದಿವಸದ ಹಿಂದೆ ಕಾನೂನಾತ್ಮಕವಾದ ಕ್ರಮವನ್ನು ಕೈಗೊಳ್ಳುತ್ತೇವೆಂದು ಇಲಾಖೆಯವರು ಅಲ್ಲಿಗೆ ಹೋಗಿ ಧಾಳಿ ಮಾಡಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯವರು ಧಾಳಿ ಮಾಡಿದರೂ ಕೂಡ ಮತ್ತೆ ರಾಜಾರೋಷವಾಗಿ ಈ ಕೆಲಸವನ್ನು ಪುನರಾವರ್ತನೆ ಮಾಡುತ್ತಿರುತ್ತಾರೆಂದರೆ, ಇದಕ್ಕೆ ಕುಮ್ಮಕ್ಕು ಕೊಟ್ಟವರು ಯಾರು? ಇದು ಯಾರ ಕುಮ್ಮಕ್ಕು ಎಂದು ಹೇಳಿ ನೋಡೋಣ. ಅಲ್ಲಿನ ಸ್ಥಳೀಯ ಒಬ್ಬ ವ್ಯಕ್ತಿ ಏನು ಹೇಳುತ್ತಾನೆಂದರೆ, ಇದು 'ಡೆಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಬಂದಿರುವಂಥದ್ದು; "Villagers accuses Minister of abetting illegal quarrying..." ಎಂದು ಅವರು ಹೇಳುತ್ತಾರೆ. ಆತನ ಹೆಸರು ರಾಘವೇಂದ್ರ ಎಂದು. ಆ ರಾಘವೇಂದ್ರ ನೇರವಾಗಿ ಡಾ॥ಕೆ.ಸುಧಾಕರ್‌ರವರು ಈ illegal mining ಗೆ ಸಂಪೂರ್ಣವಾದ ಸಹಕಾರವನ್ನು ಕೊಡುತ್ತಿದ್ದಾರೆಂದು ಅಧಿಕಾರಿಗಳ ಮತ್ತು ಮೀಡಿಯಾದವರ ಮುಂದೆ ಹೇಳಿದ್ದಾರೆ. ಇದನ್ನು ನಾನು ಹೇಳುತ್ತಿರುವುದು ಅಲ್ಲ. ಇದು 'ಡೆಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಬಂದಿರುವಂಥದ್ದು. ಅವರು ಪತ್ರಿಕೆಯ ಮುಂದೆ complaint ಮಾಡುತ್ತಿರುವಾಗ, ನೀನು ಅವರ ಮೇಲೆ ಸುಳ್ಳು ದೂರನ್ನು ಹೇಳುತ್ತಿದ್ದಿಯಾ ಎಂದು ಅವರ follower ಒಬ್ಬ ಬಂದು ಅವರನ್ನು ಹೊಡೆಯುವುದಕ್ಕೆ ಹೋಗುತ್ತಾನೆ. ಹೌದು ಇದು ಸತ್ಯ. ಇದು ದಿನನಿತ್ಯ ನಡೆಯುವಂಥದ್ದು. ಈ ರೀತಿಯ ಗಣಿಗಾರಿಕೆ ರಾಜಾರೋಷವಾಗಿ ನಡೆಯುವುದಕ್ಕೆ ಇವರೆ ಮೂಲ ಕಾರಣ.

**(ಮುಂದು)**

**(427) 04.20 16.03.2021 ಎಲ್‌ಎಲ್/ಎಂಡಿ(ವಿಕೆ)**

**ಶ್ರೀ ಎಂ. ನಾರಾಯಣಸ್ವಾಮಿ(ಮುಂದು):-**

ಎಲ್ಲಾ ಗಣಿಗಾರಿಕೆಗಳು ಮತ್ತು ಕ್ರಷರ್‌ಗಳ ಮಾಲೀಕರು ಹಫ್ತಾ ಕೊಡಬೇಕಾಗಿದೆ ಎಂದು ಆತ ಹೇಳಿರುವಂಥದ್ದು ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಹಾಗಾಗಿ, ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇದರಲ್ಲಿ ಯಾರೇ ಆಗಿರಲಿ, ಈ ರೀತಿಯ ಕಾನೂನುಬಾಹಿರ ಗಣಿಗಾರಿಕೆಗಳನ್ನು ನಡೆಸುತ್ತಿದ್ದರೆ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ಸರ್ಕಾರ ಇರಬಹುದು ಅಥವಾ ನಮ್ಮ ಸರ್ಕಾರ ಇರಬಹುದು, ಇಡೀ ರಾಜ್ಯಾದ್ಯಂತ ನಡೆಯುತ್ತಿರುವಂತಹ ಕಾನೂನುಬಾಹಿರ ಗಣಿಗಾರಿಕೆಗಳನ್ನು ಏತಕ್ಕೆ ನಮ್ಮಿಂದ ತಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ? ಇದರಿಂದಾಗಿ, ಇನ್ನು ಎಷ್ಟು ಜೀವಗಳನ್ನು ನಾವು ಕಳೆದುಕೊಳ್ಳಬೇಕು? ಆದುದರಿಂದ, ದಯಮಾಡಿ ನಾನು ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇಂತಹ ಘಟನೆಗಳನ್ನು ತಡೆಯುವುದಕ್ಕಾಗಿ ಮೊದಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯನ್ನು ಭದ್ರಪಡಿಸಬೇಕು; ಅಲ್ಲಿರುವ ನ್ಯೂನತೆಗಳನ್ನು ಸರಿಪಡಿಸಬೇಕು; ಕಾನೂನಾತ್ಮಕವಾಗಿ ಯಾವ ರೀತಿ ಗಣಿಗಾರಿಕೆ ಆಗಬೇಕೋ ಅದಕ್ಕೆ ಅವಕಾಶ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿಕೊಡಬೇಕು; ಕಾನೂನುಬಾಹಿರವಾಗಿ ಏನು ಗಣಿಗಾರಿಕೆ ನಡೆಯುತ್ತಿದೆ ಅದನ್ನು ತಡೆಯಬೇಕು; ಇದರಲ್ಲಿ ಏನು ಕೆಟಗರಿ ಮಾಡಲಾಗಿದೆ ಅಂದರೆ, ಸ್ಫೋಟಕ ವಸ್ತುಗಳನ್ನು ಇಟ್ಟು ಬ್ಲಾಸ್ಟ್ ಮಾಡಿ ಕಲ್ಲು ಗಣಿಗಾರಿಕೆ ಮಾಡುವುದಕ್ಕೆ ಎಷ್ಟು ಜನರಿಗೆ ಲೈಸೆನ್ಸ್ ನೀಡಲಾಗಿದೆಯೋ ಅಷ್ಟು ಜನರು ಮಾತ್ರ ಅದನ್ನು ಉಪಯೋಗ ಮಾಡಬೇಕು; ಬೇರೆಯವರು ಕೈಯಿಂದ ಕಲ್ಲನ್ನು ಹೊಡೆದು ಗಣಿಗಾರಿಕೆ ಮಾಡುವುದಕ್ಕಾಗಿ ಲೈಸೆನ್ಸ್ ಕೊಡಲಾಗಿದೆಯೋ ಅವರು ಅದೇ ರೀತಿಯ ಕೆಲಸವನ್ನು ಮಾಡಬೇಕು. ಆದರೆ, ಪ್ರಸ್ತುತ ನಮ್ಮಲ್ಲಿ ಅಂತಹ ಗಣಿಗಾರಿಕೆ ಮಾಡುವವರಿಗೂ ಕೂಡ ಈ ಸ್ಫೋಟಕ ವಸ್ತುಗಳನ್ನು ಪೂರ್ವೈಕೆ ಮಾಡಿ ಬ್ಲಾಸ್ಟ್ ಮಾಡುವಂಥದ್ದಾಗಿದೆ. ಈ ಘಟನೆಗೆ ಸಂಬಂಧಪಟ್ಟಂತೆ, ಅದೇ ಊರಿನವರಾದ ಮತ್ತೊಬ್ಬರು, "ರಾತ್ರಿ 12 ಗಂಟೆ 40 ನಿಮಿಷದಲ್ಲಿ ಆದಂತಹ ಸ್ಫೋಟಕ ವಸ್ತುವಿನ ಬ್ಲಾಸ್ಟ್ ಎಷ್ಟು ತೀವ್ರವಾಗಿತ್ತೆಂದರೆ, ಆ ಸಮಯದಲ್ಲಿ ನಾವೆಲ್ಲರೂ ನಿದ್ದೆ ಮಾಡುತ್ತಿದ್ದೆವು. ಆದರೆ, ಆ ಶಬ್ಧಕ್ಕೆ ಎಲ್ಲೋ ಭೂಕಂಪ ಆಯಿತು ಎನ್ನುವ ಅನುಭವ ನಮಗೆ ಆಯಿತು" ಎಂದು ಹೇಳಿಕೆ ನೀಡುತ್ತಾರೆ. ಅವೊತ್ತಿನ ದಿವಸ ಅಷ್ಟು ಜೋರಾಗಿ ಸ್ಫೋಟಕ ವಸ್ತು ಬ್ಲಾಸ್ ಆಗಿರುತ್ತದೆ. ಆ ಘಟನೆ ರಾತ್ರಿ 12–30 ಗಂಟೆಗೆ ಆಗಿದ್ದಕ್ಕೆ ಅದರಲ್ಲಿ 6 ಜನ ಮಾತ್ರ ಸಾವನ್ನಪ್ಪಿರುತ್ತಾರೆ. ಒಂದು ವೇಳೆ ಅದೇ ಘಟನೆ ಹಗಲಿನಲ್ಲಿ ಆಗಿದ್ದರೆ ಎಷ್ಟು ಜನ ಸಾಯುತ್ತಿದ್ದರು? ಇದೇ ರೀತಿಯಾಗಿ ಹೋಗಲಿ ಎಂದು ಬಿಟ್ಟುಕೊಂಡು ಹೋದರೆ, ಕೊನೆಯದಾಗಿ ಯಾವ ಸ್ಥಿತಿಗೆ ಹೋಗಿ ಮುಟ್ಟುತ್ತೇವೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

**ವೈಸ್ ಚೇರ್ಮನ್‌ರವರು:–** ಮಾನ್ಯ ನಾರಾಯಣಸ್ವಾಮಿಯವರೇ, ಸಮಯ ಆಗುತ್ತಿದೆ ದಯಮಾಡಿ ಬೇಗ ಮುಗಿಸಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಹದಿನೈದು ನಿಮಿಷ ಮಾತನಾಡಿರುವುದಿಲ್ಲ.

**Mr. VICE CHAIRMAN:-** No... ನಮ್ಮ ನಿಯಮದ ಪ್ರಕಾರ ನಿಯಮ 68 ರಡಿಯಲ್ಲಿನ ಚರ್ಚೆಗೆ 60 ನಿಮಿಷಗಳ ಕಾಲ ಮಾತ್ರ ಅವಕಾಶ ಇರುತ್ತದೆ. ಅದರಲ್ಲಿ 40 ನಿಮಿಷಗಳ ಕಾಲ ಮಾನ್ಯ ವಿರೋಧ ಪಕ್ಷದ ನಾಯಕರೇ ಮಾತನಾಡಿದ್ದು, ಬಹಳ ಸುದೀರ್ಘವಾಗಿ ಎಲ್ಲವನ್ನೂ ಹೇಳಿದ್ದಾರೆ. ಮಂತ್ರಿಗಳು ಸಹ ಅವರು ಹೇಳಿದ್ದನ್ನು ಕೇಳಿರುತ್ತಾರೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಈಗ ಪ್ರಾರಂಭ ಮಾಡಿದ್ದೇನೆ.

**Mr. VICE CHAIRMAN:-** It is a repetition.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಮ್ಮ ವಿವೇಚನೆಗೆ ನಾವೆಲ್ಲರೂ ಗೌರವ ಕೊಡುತ್ತೇವೆ. ಆದರೆ, ಯಾವುದೇ ಸೂಚನೆಯನ್ನು ಅಂಗೀಕರಿಸುವ ಮತ್ತು ಕಾಲವನ್ನು ನಿರ್ಣಯಿಸುವಂತಹ ವಿಚಾರದಲ್ಲಿ ಕನಿಷ್ಠ 60 ನಿಮಿಷಗಳಿಗಿಂತ ಅವಧಿ ಮೀರಬಾರದು ಎಂಬುದು ನಾವೇ ಮಾಡಿಕೊಂಡಂತಹ ನಿಯಮ ಆಗಿರುತ್ತದೆ. ಇಲ್ಲ, ನಮ್ಮ ಮಾತಿಗೆ ನಮಗೆ ವಿರಾಮವೇ ಕೊಡಬಾರದು, ನಮಗೆ ಸಮಯ ನಿಗದಿಪಡಿಸಬಾರದು ಎನ್ನುವಂತಹ ವಿಚಾರಗಳು ಇದ್ದರೆ ಅದನ್ನು ಪೀಠದ ತೀರ್ಮಾನಕ್ಕೆ ಬಿಡುತ್ತೇವೆ. ಒಟ್ಟಾರೆಯಾಗಿ, ಮಾನ್ಯ ವಿರೋಧ ಪಕ್ಷದ ನಾಯಕರೂ ಸೇರಿದಂತೆ, ಇಡೀ ಚರ್ಚೆಗೆ ಒಂದು ಗಂಟೆಗೆ ಮೀರದಂತೆ ಅವಕಾಶ ನೀಡುವುದು ಎಂದು ನಿಯಮದಲ್ಲಿದೆ.

**ವೈಸ್ ಚೇರ್ಮನ್‌ರವರು:-** ಹೌದು. ಈ ವಿಷಯದ ಬಗ್ಗೆ ಮಾತನಾಡುವವರು ಇನ್ನೂ 4 ಜನ ಇದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ನನ್ನ ಪ್ರಶ್ನೆ ಏನು ಇರುವುದಿಲ್ಲ. ತಾವು ಏನು ಹೇಳುತ್ತಿರೋ ಅದೇ ರೀತಿ ಮಾಡೋಣ. ಆದರೆ, 'ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ' ಎಂದು ನಿಯಮದಲ್ಲಿ ಇರುವುದಿಲ್ಲ. ಇದು ನಾವು ಮಾಡಿಕೊಂಡಿರುವ ವ್ಯವಸ್ಥೆ. ಆದರೆ, ಈ ನಿಯಮದಲ್ಲಿರುವುದು, ಇಡೀ ವಿಷಯದ ಮೇಲಿನ ಚರ್ಚೆಗೆ 60 ನಿಮಿಷ ಕಾಲಾವಕಾಶ ಮಾತ್ರ ಇರುತ್ತದೆ. ಅದು ಅಲ್ಲವೆಂದು ಪೀಠದಿಂದ ಏನು ಆದೇಶ ಬರುತ್ತದೋ ಅದಕ್ಕೆ ನಾವು ಬದ್ಧರಿದ್ದೇವೆ. ಆದರೆ, ನಿಯಮದಲ್ಲಿರುವುದಕ್ಕಿಂತ ಅವಧಿ ಮೀರಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವ ವಿಷಯದಲ್ಲಿ ಏನಾದರೂ divert ಮಾಡಿದ್ದೇನೆಯೇ? ಈ ವಿಷಯದ ಬಗ್ಗೆ ನನಗೆ ಇರತಕ್ಕಂತಹ ಕಾಳಜಿ ಏನು ಎಂಬುದರ ಬಗ್ಗೆ ಹೇಳುತ್ತಿದ್ದೇನೆ; ಇಂತಹ ವಿಷಯಗಳಲ್ಲಿ ಸರ್ಕಾರ ಯಾವರೀತಿ ಮುನ್ನೆಚ್ಚರಿಕೆ ವಹಿಸಬೇಕೆಂದು ಹೇಳುವುದಕ್ಕೆ ಬರುತ್ತಿದ್ದೇನೆ ಹಾಗೂ ಈ ವಿಷಯವನ್ನು ಬಿಟ್ಟು ಬೇರೆ ಯಾವುದೇ ವಿಷಯಕ್ಕೆ ಹೋಗುತ್ತಿಲ್ಲ. ಹಾಗಾಗಿ, ದಯಮಾಡಿ ನನಗೆ ಸ್ವಲ್ಪ ಕಾಲಾವಕಾಶ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ವೈಸ್ ಚೇರ್ಮನ್‌ರವರು:–** ನಿಯಮ 68ರಡಿಯಲ್ಲಿ ಮಾತನಾಡುವುದಕ್ಕೆ ಇನ್ನೂ 4 ಜನ ಇದ್ದಾರೆ. ತಮ್ಮ ಪಕ್ಷದವರೇ 4 ಜನ ಇದ್ದಾರೆ. ನಮ್ಮ ನಿಯಮಾವಳಿಗಳ ಪ್ರಕಾರ ಇನ್ನು ಕೇವಲ 10 ನಿಮಿಷ ಉಳಿದಿರುತ್ತದೆ. ಆದುದರಿಂದ, ಈ ವಿಷಯದಲ್ಲಿ ಸರ್ಕಾರದಿಂದ ಏನು ಆಗಬೇಕೆಂದು ಬಯಸುತ್ತೀರೋ ದಯಮಾಡಿ ಅಷ್ಟನ್ನು ಮಾತ್ರ ತಾವು ಮಾತನಾಡಿ ಮುಗಿಸಬೇಕು.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಾನು ಕೂಡ ಮಾತನಾಡಬೇಕು.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಾರದ ಹಿಂದೆ ಈ ವಿಷಯವನ್ನು adjournment motion ನಲ್ಲಿ ತಂದಿರುತ್ತಾರೆ. ಅದನ್ನು ತಾವು ಪರಿವರ್ತನೆ ಮಾಡಿ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಇವೊತ್ತಿನ ದಿವಸ ನಮಗೆ ಭಾಗ್ಯ ಬಂದಿರುತ್ತದೆ. ಈ ಪ್ರಕರಣ ಹಳೆಯದಾಗುತ್ತಿದ್ದು, ಎಲ್ಲರೂ ಈ ವಿಷಯವನ್ನು ಮರೆಯುತ್ತಿದ್ದಾರೆ.

**ವೈಸ್ ಚೇರ್ಮನ್‌ರವರು:–** ಯಾವ ಭಾಗ್ಯ ಬಂತು? ಅಂದರೆ, ಅನ್ನಭಾಗ್ಯನಾ ಅಥವಾ ಯಾವುದು?

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅನ್ನಭಾಗ್ಯದ ಜೊತೆ ಈ ಭಾಗ್ಯವನ್ನು ಸಹ ನಾವು ನೋಡಬೇಕಲ್ಲವೇ? ಅನ್ನಭಾಗ್ಯ ಕೊಡತಕ್ಕಂತಹವರು ನಾವು. ಭಾಗ್ಯಗಳ ಸರದಾರರು ನಾವು. ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಈ ಘಟನೆ ಬಗ್ಗೆ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, “ಇಡೀ ರಾಜ್ಯದಲ್ಲಿಯೇ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಜನಪ್ರತಿನಿಧಿಗಳೇ ಗಣಿ ನಡೆಸುತ್ತಿದ್ದಾರೆ. ಹೆಚ್ಚಿನ ಹಣ ಸಿಗುತ್ತದೆಯೆಂದು ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ” ಎಂದು. ಇದು ಸತ್ಯ. ಇದರಲ್ಲಿ ನಾವು, ನೀವು ಎಂದು ಪರ ವಹಿಸಿಕೊಳ್ಳುವುದು ಬೇಕಾಗಿರುವುದಿಲ್ಲ. ಆದರೆ, ಆಗುತ್ತಿರುವಂತಹ ಅನ್ಯಾಯಗಳು ಮತ್ತು ಅವುಗಳನ್ನು ಯಾರು ಕಾನೂನನ್ನು ಮೀರಿ ಮಾಡುತ್ತಿದ್ದಾರೋ ಅವರಿಗೆ ಶಿಕ್ಷೆ ಆಗಬೇಕೆನ್ನುವುದು ನಮ್ಮ ಕಾಳಜಿ. ಅದನ್ನು ಬಿಟ್ಟು ಬೇರೆ ಏನು ಹೇಳುವುದಕ್ಕೆ ನಾವು ಹೋಗುವುದಿಲ್ಲ. ಈ ಘಟನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಮಾತನಾಡುತ್ತಾರೆ; ಅವರು ಏತಕ್ಕೆ ಆ ರೀತಿ ಹೇಳಿರುತ್ತಾರೆಂದು ನನಗೆ ಅರ್ಥವಾಗಲಿಲ್ಲ. ಅವರಿಗೆ ನಿಜಕ್ಕೂ ಇದರ ಬಗ್ಗೆ ಬಹಳಷ್ಟು ಕಾಳಜಿ ಇದ್ದು, ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುವಂತಹವರು ಅವರು. ಆದರೆ, ಅವರು ಮಾತನಾಡುತ್ತಾ, “ಇದು ಜಿಲೆಟಿನ್ ಸ್ಫೋಟದ ಎರಡನೇ ಘಟನೆ ಎನ್ನುವುದು

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಗೊತ್ತಿದೆ. ನಾನೇನು ಮಾಡಲಾಗುತ್ತದೆ? ನನ್ನ ಜಾಗದಲ್ಲಿ ನೀವಿದ್ದರೆ ಏನು ಮಾಡುತ್ತಿದ್ದಿರಿ? ಅಷ್ಟಕ್ಕೂ ಬೆಳಗಿನ ಜಾವ ಹೋಗಿ ಹೀಗೆಲ್ಲಾ ಮಾಡಿ ಎಂದು ನಾನು ಅವರಿಗೆ ಹೇಳಿದ್ದೇನೇನು?” ಎಂದು ಹೇಳುತ್ತಾರೆ. ಇದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಏತಕ್ಕಾಗಿ ಈ ರೀತಿ ಹೇಳಿದ್ದಾರೆಂದು ನಮಗೆ ಇವೊತ್ತಿಗೂ ಸಹ ಅರ್ಥವಾಗುತ್ತಿಲ್ಲ. ಆ ದಿನ ರಾತ್ರಿ 12 ಗಂಟೆ 40 ನಿಮಿಷಕ್ಕೆ ಆದಂತಹ ಘಟನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ವಿಷಾದವನ್ನು ವ್ಯಕ್ತಪಡಿಸಿ ಕೂಡಲೇ ಸಂಬಂಧಪಟ್ಟ ಸಚಿವರನ್ನೂ ಕಳುಹಿಸಿ...

**ವೈಸ್ ಚೇರ್ಮನ್‌ರವರು:–** ಮಾನ್ಯ ಮುರುಗೇಶ್ ನಿರಾಣಿಯವರು ತಮಗೆ ಮಾನ್ಯ ಮುಖ್ಯಮಂತ್ರಿಯವರ ರೀತಿ ಕಾಣಿಸುತ್ತಿದ್ದಾರೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಸಹ ಮುಖ್ಯಮಂತ್ರಿಯಾಗಲಿ; ಸಂತೋಷ.

**ವೈಸ್ ಚೇರ್ಮನ್‌ರವರು:–** ಪಾಪ! ತಾವು ಅವರನ್ನು ಪ್ರಶ್ನೆ ಮಾಡುತ್ತಿದ್ದೀರಲ್ಲಾ, ಅದಕ್ಕೆ ನಾನು ಕೇಳುತ್ತಿದ್ದೇನೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಾಳಜಿ ಇರುವಂತಹ ಒಬ್ಬ ಸಚಿವರು ಅಥವಾ ಯಾವುದೇ ವ್ಯಕ್ತಿ ಮುಖ್ಯಮಂತ್ರಿಯವರಾಗಲಿ; ಸಂತೋಷ. ಯಾರ ಹಣೆಬರಹದಲ್ಲಿ ಏನು ಬರೆದಿದೆಯೋ ಅದನ್ನು ಯಾರೂ ಕಿತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ಆಗಲೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸಚಿವರ ಬಗ್ಗೆ ಮಾತನಾಡುತ್ತಾ, “ಅವರು ನಮ್ಮ ಜಿಲ್ಲೆಯವರು, ನಮ್ಮ ತಾಲ್ಲೂಕಿನವರು; ಅವರಿಗೆ ಬದ್ಧತೆ ಇದೆ, ಕಾಳಜಿ ಇದೆ, ಅದಕ್ಕಾಗಿ ಶಹಬ್ಬಾಸ್” ಎನ್ನುವಂತಹ ಮಾತನ್ನು ಸಹ ಅವರು ಹೇಳಿದರು. ನಮಗೂ ಸಹ ಆ ಗೌರವ ಇದೆ. ಸಚಿವರಾಗಿ ಒಂದು ಸ್ಥಾನಕ್ಕೆ ಬಂದು ಇಲಾಖೆಯಲ್ಲಿ ಕುಳಿತಾಗ ನಾವು ಎಷ್ಟು ದಿನ ಅಧಿಕಾರದಲ್ಲಿರುತ್ತೇವೆ ಎನ್ನುವುದು ಮುಖ್ಯವಲ್ಲ, ನಾನು ಅಧಿಕಾರದಲ್ಲಿದ್ದಂತಹ ಅವಧಿಯಲ್ಲಿ ಏನು ಕೆಲಸ ಮಾಡಿದೆ ಎನ್ನುವುದು ಶಾಶ್ವತವಾಗಿ ಉಳಿಯುತ್ತದೆ. ಆ ಕೆಲಸ ನಿಮ್ಮಿಂದ ಆಗಲಿ ಎಂದು ಬಯಸತಕ್ಕಂತಹವರು ನಾವು.

**ವೈಸ್ ಚೇರ್ಮನ್‌ರವರು:–** ಮಾನ್ಯ ನಾರಾಯಣಸ್ವಾಮಿಯವರೇ, ತಡವಾಗುತ್ತಿದೆ. ದಯಮಾಡಿ, ತಮ್ಮ ಮಾತನ್ನು ಬೇಗ ಮುಗಿಸಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಏತಕ್ಕೆ ಈ ಹೇಳಿಕೆ ಕೊಟ್ಟಿದ್ದಾರೆನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಈ ಹಿಂದೆ ಶಿವಮೊಗ್ಗದಲ್ಲಿ ಒಂದು ಘಟನೆ ನಡೆದಿದ್ದು, ಅದಾದ ಒಂದು ತಿಂಗಳ ನಂತರ ಚಿಕ್ಕಬಳ್ಳಾಪುರದಲ್ಲಿ ಒಂದು ಘಟನೆ ನಡೆದಿರುತ್ತದೆ. ಬಹುಶಃ ನಿನ್ನೆಯ ದಿವಸ ಅಥವಾ ಮೊನ್ನೆಯ ದಿವಸದ ದಿನಪತ್ರಿಕೆಯಲ್ಲಿ ಬಂದಿರುವ ವರದಿಯನ್ನು ಮಾನ್ಯ ಸಚಿವರು ಗಮನಿಸಿರಬಹುದು. ಅದೇನೆಂದರೆ, ಮಾಲೂರು ತಾಲ್ಲೂಕಿನ ಟೇಕಲ್ ಎನ್ನತಕ್ಕಂತಹ ಊರಿನಲ್ಲಿ ಗಣಿಗಾರಿಕೆ ನಡೆಯುತ್ತಿರುತ್ತದೆ. ಆ ರಸ್ತೆಗಳು ಯಾವ ಮಟ್ಟಕ್ಕೆ ಹಾಳಾಗಿವೆಯೆಂದರೆ, ಪ್ರತಿ ಗಂಟೆಗೆ ನೂರರಿಂದ ಇನ್ನೂರು ಲಾರಿಗಳು ಮೆಟೀರಿಯಲ್‌ಗಳನ್ನು ತುಂಬಿಕೊಂಡು ಹೋಗುತ್ತವೆ. ಅನಾಹುತ ಅತೀ ಶೀಘ್ರದಲ್ಲಿ ಆ ಟೇಕಲ್ ಪ್ರದೇಶದಲ್ಲಿ ಆಗುತ್ತದೆ. ಆ ರೀತಿ ಅನಾಹುತಗಳು ಆಗಬಾರದೆಂದು ನಾನು ಭಗವಂತನಲ್ಲಿ ಕೇಳಿಕೊಳ್ಳುತ್ತೇನೆ. ಅದು ಆಗಬಾರದು. ಆದರೆ, ಅಲ್ಲಿಯೂ ಕೂಡ ಈ ರೀತಿಯ ಗಣಿಗಾರಿಕೆಗಳು ಯಥೇಚ್ಛವಾಗಿ ನಡೆಯುತ್ತಿರುತ್ತದೆ. ಅಲ್ಲಿ ಯಾವತ್ತು ಏನಾಗುತ್ತದೆಯೆಂದು ನಮಗೆ ಗೊತ್ತಿರುವುದಿಲ್ಲ. ಈ ಎಲ್ಲಾ ಅನಾಹುತಗಳು ಆಗುವುದಕ್ಕೆ ಮುಂಚಿತವಾಗಿ ಸರ್ಕಾರ ಯಾವರೀತಿ ಕ್ರಮ ಕೈಗೊಳ್ಳುತ್ತದೆ ಎನ್ನುವುದು ಮುಖ್ಯವಾಗಿದೆ ಮತ್ತು ವಿರೋಧ ಪಕ್ಷದವರಾಗಿ ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇಂತಹ ಅನಾಹುತಗಳಿಂದ ಯಾವುದೇ ಒಂದು ಬಡಜೀವ ಹೋದ ಮೇಲೆ ಆ ಜೀವವನ್ನು ವಾಪಸ್ಸು ತರುವುದಕ್ಕೆ ನಮ್ಮಿಂದಲೂ ಸಾಧ್ಯವಿಲ್ಲ ಮತ್ತು ಸರ್ಕಾರದಿಂದಲೂ ಸಾಧ್ಯವಿರುವುದಿಲ್ಲ. ಆ ಜೀವ ಹೋಗುವುದಕ್ಕೆ ಮುಂಚಿತವಾಗಿ ನಾವು ಯಾವ ಕ್ರಮ ಕೈಗೊಳ್ಳಬೇಕು ಮತ್ತು ಯಾವ ಎಚ್ಚರಿಕೆ ತೆಗೆದುಕೊಳ್ಳಬೇಕು ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ದಯಮಾಡಿ, ಕರ್ನಾಟಕ ರಾಜ್ಯದ ಯಾವ್ಯಾವ ಜಿಲ್ಲೆಗಳಲ್ಲಿ ಹೆಚ್ಚಾಗಿ ಈ ರೀತಿಯ ಕಾನೂನುಬಾಹಿರ ಗಣಿಗಾರಿಕೆಗಳು ಮತ್ತು ಮೈನಿಂಗ್‌ಗಳು ನಡೆಯುತ್ತಿವೆಯೋ ಹಾಗೂ ಸ್ಫೋಟಕ ವಸ್ತುಗಳಿಗೆ ಲೈಸೆನ್ಸ್ ಇಲ್ಲದೇ ಗಣಿಗಾರಿಕೆ ಮಾಡುತ್ತಿದ್ದಾರೋ ಅದನ್ನು ತಡೆಯುವುದಕ್ಕೆ ಕೂಡಲೇ ಸರ್ಕಾರ ಸಭೆ ಕರೆಯಬೇಕು; ಅದಕ್ಕಾಗಿ, ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಮಂತ್ರಿಗಳ ನೇತೃತ್ವದಲ್ಲಿ ಸಭೆಗಳು ಆಗಬೇಕು; ಅಲ್ಲಿ ಏನೇನು ಆಗುತ್ತಿದೆ ಎಂಬ ಬಗ್ಗೆ ಸರ್ಕಾರ ತಿಳಿದುಕೊಳ್ಳಬೇಕು; ದಯಮಾಡಿ, ಕಾನೂನುಬಾಹಿರವಾಗಿ ನಡೆಯುತ್ತಿರುವ ಗಣಿಗಾರಿಕೆಗಳನ್ನು ನಿಲ್ಲಿಸಬೇಕು; ಇಂತಹ ವಿಷಯಗಳಲ್ಲಿ ಕಠಿಣ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ; ಈ ಇಲಾಖೆಯಲ್ಲಿ ಅಧಿಕಾರಿಗಳು ಒಂದೇ ಸ್ಥಾನದಲ್ಲಿ ಬಹಳ ವರ್ಷಗಳಿಂದ ಕುಳಿತಿದ್ದಾರೋ ಅವರೇ ಇಂತಹ ಘಟನೆಗಳಿಗೆ ಮೂಲ ಕಾರಣರಾಗಿರುವಂಥದ್ದು. ಈ ಘಟನೆಯಾದ ನಂತರ ಸರ್ಕಾರ ಯಾರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು? ಇದರಲ್ಲಿ ಬಡಪಾಯಿಗಳಾದಂತಹ ಒಬ್ಬ ಸಬ್ ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್‌ರವರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಸಸ್ಪೆಂಡ್ ಮಾಡುತ್ತಾರೆ. ಈ ಘಟನೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲಾಧಿಕಾರಿಗಳು ನೇರವಾಗಿ ಕಾರಣ; ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ನೇರ ಕಾರಣ; ಆ ಇಲಾಖೆಯ ಅಧಿಕಾರಿಗಳು ನೇರ ಕಾರಣ; ಅವರಲ್ಲಿ ಯಾರನ್ನೂ ಸಹ ಸರ್ಕಾರ ಟಚ್ ಮಾಡುವುದಿಲ್ಲ. ಇಂತಹ ದೊಡ್ಡ ಘಟನೆಯಾದರೂ ಸಹ ಬಡಪಾಯಿಯಾದಂತಹ ಒಬ್ಬ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಂದರೆ, ಕಾನೂನಾತ್ಮಕವಾಗಿ ಬೇರೆಯವರನ್ನು ನಾವು ಶಿಕ್ಷೆಗೆ ಗುರಿಪಡಿಸುವುದಕ್ಕಾಗಿ ಸಾಧ್ಯವಾಗುತ್ತದೆಯೇ?

**ವೈಸ್ ಚೇರ್ಮನ್‌ರವರು:–** ಮಾನ್ಯ ನಾರಾಯಣಸ್ವಾಮಿಯವರೇ, ಸಾಕು.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೇ?

**ವೈಸ್ ಚೇರ್ಮನ್‌ರವರು:–** ಇಲ್ಲ, ನನ್ನ ಬಳಿ ಸಮಯ ಇರುವುದಿಲ್ಲ. ಈ ವಿಷಯದ ಮೇಲೆ ಇನ್ನೂ 6 ಜನ ಮಾತನಾಡುವವರು ಇದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಿಜ ಹೇಳುವುದಾದರೆ ನಾನು ಈ ವಿಷಯದ ಬಗ್ಗೆ ಮಾತನಾಡುವುದಕ್ಕಾಗಿ ತಯಾರಾಗಿರುವುದರಲ್ಲಿ, I have not even completed 25 per cent of it.

**ವೈಸ್ ಚೇರ್ಮನ್‌ರವರು:–** ಅದನ್ನು ತಾವು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡಿ. ಅದನ್ನು ಅವರು ಓದಿಕೊಳ್ಳುತ್ತಾರೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಈ ವಿಷಯದ ಬಗ್ಗೆ ಮಾತನಾಡಲು ಈಗ ಪ್ರಾರಂಭ ಮಾಡಿದ್ದೇನೆ. ಆದರೆ, ತಾವು ಬೇಡವೆಂದು ಹೇಳುತ್ತಿದ್ದೀರಿ. ಏಕೆಂದರೆ, ಈ ವಿಷಯದ ಮೇಲೆ ಸ್ವಲ್ಪ ಬೆಳಕು ಚೆಲ್ಲಬೇಕೆಂದು ನಾವೆಲ್ಲರೂ ತಯಾರಾಗಿ ಬಂದಿರುತ್ತೇವೆ. ನಾನು ಬೇರೆ ಯಾವುದೇ ವಿಷಯವನ್ನು ಮಾತನಾಡುವುದಕ್ಕೆ ಹೋಗುತ್ತಿಲ್ಲ. ನಾನು ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಮಾತನಾಡುತ್ತಿದ್ದೇನೆ.

**ವೈಸ್ ಚೇರ್ಮನ್‌ರವರು:–** ತಾವು ಹೇಳಿದಷ್ಟು ವಿಷಯವನ್ನು ಮಾತನಾಡಿರುತ್ತೀರಿ. ಸರ್ಕಾರಕ್ಕೆ ಅದೆಲ್ಲವೂ ಕೂಡ ವೇದ್ಯವಾಗಿರುತ್ತದೆ. ಇದರಲ್ಲಿ ಬೇರೆ ಸದಸ್ಯರಿಗೂ ಸಹ ಅವಕಾಶ ನೀಡಬೇಕಲ್ಲವೇ?

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ನಿಯಮ 68 ರಡಿಯಲ್ಲಿನ ವಿಷಯದ ಮೇಲೆ 2 ಗಂಟೆ ಸಮಯ ಮಾತನಾಡಿದರೆ ಹೇಗೆ?

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾನಾಯಕರೇ, ನಾನು ಮಾತನಾಡುವುದು ಬೇಡವೆಂದು ತಾವು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ಅದರಲ್ಲಿ ಯಾವುದೇ ತೊಂದರೆ ಇರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ನಾರಾಯಣಸ್ವಾಮಿಯವರೇ, ತಮ್ಮ ಮಾತಿನ ಮೇಲೆ ನಮ್ಮ ಆಕ್ಷೇಪವೇನೂ ಇಲ್ಲ.

**(428) 16.03.2021 4.30 ವೈಎಲ್–ಎಕೆ**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ವೇಳೆ ಮಾನ್ಯ ಸಭಾನಾಯಕರು ನಾನು ಮಾತನಾಡುವುದು ಬೇಡ ಎಂದು ಹೇಳಿದರೆ, ಸುಮ್ಮನೆ ಕುಳಿತುಕೊಂಡು ಬಿಡುತ್ತೇನೆ, ನನ್ನದೇನು ಅಭ್ಯಂತರವೇನಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಆ ರೀತಿ ಏನಿಲ್ಲ. ಈಗಾಗಲೇ ಮಾನ್ಯ ಸಭಾಪತಿಯವರು ಬೇಗ ಮಾತನ್ನು ಮುಗಿಸಿ ಎಂದು ಆಕ್ಷೇಪ ವ್ಯಕ್ತಪಡಿಸಿರುವುದರಿಂದ ನಾನು ಸಹ ಆ ರೀತಿ ಹೇಳಿದೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ತಾವು ಹಿರಿಯರಾಗಿದ್ದು, ನಮಗೆಲ್ಲಾ ಗುರುಗಳು ಇದ್ದ ಹಾಗೆ. ಹಾಗಾಗಿ ತಮ್ಮ ಮಾತಿಗೆ ಬೆಲೆ ನೀಡಿ, ನನ್ನ ಮಾತಿಗೆ ಕಡಿವಾಣ ಹಾಕಿಕೊಳ್ಳುತ್ತೇನೆ. ದಯವಿಟ್ಟು ಸರ್ಕಾರಕ್ಕೆ ನನ್ನ ಮನವಿಯೇನೆಂದರೆ, ಸಿ.ಐ.ಡಿ. ಯವರಿಗೆ ತನಿಖೆ ನಡೆಸಲು ತಿಳಿಸಿದ್ದು, ಸಿ.ಐ.ಡಿ. ಯಿಂದ ನ್ಯಾಯ ಸಿಗುವುದಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಅಥವಾ ಹಾಲಿ ನ್ಯಾಯಾಧೀಶರಿಂದ ಇದರ ತನಿಖೆ ಆಗಬೇಕು. ಅವರುಗಳಿಂದ ತನಿಖೆಯಾದರೆ ಮಾತ್ರ ನ್ಯಾಯ ದೊರಕುತ್ತದೆ. ಈ ವಿಚಾರದಲ್ಲಿ ಯಾರ ಪ್ರತಿಷ್ಠೆಯನ್ನು ನೋಡುವುದಕ್ಕೆ ಹೋಗಬಾರದು. ಈ ಘಟನೆಗೆ ಕಾರಣಕರ್ತರಾಗಿರುವವರಿಗೆ ನಿಜವಾಗಿಯು ಶಿಕ್ಷೆಯಾಗಬೇಕೆನ್ನುವುದಷ್ಟೇ ನಮ್ಮ ಕಾಳಜಿ. ಅದಕೋಸ್ಕರ ದಯವಿಟ್ಟು ಈಗಾಗಲೇ ಸಿ.ಐ.ಡಿ. ಯವರಿಗೆ ತನಿಖೆ ನಡೆಸಲು ತಿಳಿಸಿದ್ದು, ಅದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಲ್ಲಿಸಬೇಕು. ಸರ್ಕಾರ ಯಾರ ಪ್ರತಿಷ್ಠೆಯನ್ನು ತೆಗೆದುಕೊಳ್ಳದೇ, ನಿವೃತ್ತ ಅಥವಾ ಹಾಲಿ ನ್ಯಾಯಾಧೀಶರಿಂದ ತನಿಖೆಯಾಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ವೈಸ್ ಛೇರ್ಮನ್:–** ಈಗಾಗಲೇ ಸಹಿ ಮಾಡಿರುವಂಥ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ, ಶ್ರೀ ನಸೀರ್ ಅಹ್ಮದ್, ಶ್ರೀ ಬಸವರಾಜ ಪಾಟೀಲ್ ಇಟಗಿ, ಶ್ರೀ ಕೆ.ಹರೀಶ್ ಕುಮಾರ್, ಶ್ರೀ ಪ್ರಕಾಶ್ ಕೆ.ರಾಥೋಡ್ ಇಷ್ಟು ಜನರು ಈ ವಿಚಾರವಾಗಿ ಮಾತನಾಡಬೇಕಾಗಿದ್ದು, ಈಗಾಗಲೇ ಸಮಯ ಮುಗಿದಿದೆ. ಸದಸ್ಯವು ಮಧ್ಯಾಹ್ನ 3.30 ಕ್ಕೆ ಪ್ರಾರಂಭವಾಗಿ ಸಂಜೆ 4.32 ಆಗಿದ್ದು, ಸುಮಾರು 1 ಗಂಟೆ 10 ನಿಮಿಷಗಳ ಕಾಲ ಸಮಯವನ್ನು ತೆಗೆದುಕೊಳ್ಳಲಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿರುವುದಕ್ಕೆ ಸಮಯವನ್ನು ಗಣನೆಗೆ ತೆಗೆದುಕೊಳ್ಳುವುದು ಬೇಡ. ಬೇರೆ ಸದಸ್ಯರು ಮಾತನಾಡಿದರೆ ಅವರ ಸಮಯವನ್ನು ಬೇಕಾದರೆ ಗಣನೆಗೆ ತೆಗೆದುಕೊಳ್ಳಿ. ವಿರೋಧ ಪಕ್ಷದ ನಾಯಕರು ಮಾತನಾಡಿದರೆ ಸಮಯವನ್ನು ನಿಗದಿಪಡಿಸುವ ಹಾಗಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿಯಮದ ಪ್ರಕಾರ ಒಟ್ಟು ಚರ್ಚೆಗೆ ಅವಕಾಶ ಇರುವುದು ಒಂದು ಗಂಟೆ ಮಾತ್ರ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸಭಾನಾಯಕರು ವಿರೋಧ ಪಕ್ಷದ ನಾಯಕರಾಗಿದಂತಹ ಸಂದರ್ಭದಲ್ಲಿ ನಿಯಮ ಇರಲಿಲ್ಲ. ಈಗ ನಿಯಮವನ್ನು ತಂದಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಇವರು ನನಗೆ ಮಾತನಾಡಲು ಬಿಡುತ್ತಿರಲಿಲ್ಲ.

**ವೈಸ್ ಛೇರ್ಮನ್:–** ಇನ್ನು 6 ಜನರು ಮಾತನಾಡಬೇಕಾಗಿದೆ. ಒಬ್ಬೊಬ್ಬರು ಐದೈದು ನಿಮಿಷ ಮಾತನಾಡಿದರೆ ಸಾಕು ಇನ್ನೂ ಅರ್ಧ ಗಂಟೆ ಸಮಯವಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಿಯಮ 68 ಕ್ಕೆ ಸೇರ್ಪಡೆಗೊಂಡರೆ, ಕೇವಲ ಸಹಿ ಮಾಡಿದವರು ಮಾತ್ರ ಮಾತನಾಡಬೇಕೆಂದು ಏನಿಲ್ಲ. It will become the property of

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

the House. ಆಡಳಿತ ಪಕ್ಷದವರು ಸಹ ಮಾತನಾಡಬಹುದು. ಯಾರು ಬೇಕಾದರೂ ಮಾತನಾಡಬಹುದು. There is no limitation.

**ವೈಸ್ ಛೇರ್ಮನ್:–** ನಾನು ಮಾನ್ಯ ಸದಸ್ಯರಲ್ಲಿ ವಿನಂತಿಸುವುದೇನೆಂದರೆ, ವಿತ್ತೀಯ ಕಾರ್ಯಕಲಾಪದ ಮೇಲೆ ಚರ್ಚೆ ನಡೆಯಬೇಕಾಗಿದೆ. ಇದು ಬಜೆಟ್ ಅಧಿವೇಶನ. ಈ ಬಜೆಟ್ ಅಧಿವೇಶನವನ್ನು ನಾವ್ಯಾರು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಪ್ರತಿ ಇಲಾಖೆಗೆ ಸಂಬಂಧಿಸಿದಂತೆ ಚರ್ಚೆ ನಡೆಯಬೇಕಾಗಿದೆ. ಈಗಾಗಲೇ ಸಂಜೆ 4 ಗಂಟೆ 30 ನಿಮಿಷ ಸಮಯವಾಗಿದ್ದು, ಇನ್ನೂ ಅರ್ಧ ಗಂಟೆಗಳ ಕಾಲ ನಿಯಮ 68ರ ಮೇಲೆ ಚರ್ಚೆ ಮಾಡುವುದಾದರೆ, ವಿತ್ತೀಯ ಕಾರ್ಯಕಲಾಪ ಯಾವಾಗ ತೆಗೆದುಕೊಳ್ಳುವುದು. ದಯವಿಟ್ಟು ಇನ್ನು ಹಲವಾರು ಇಲಾಖೆಗಳಿಗೆ ಸಂಬಂಧಿಸಿದಂತೆ ವಿತ್ತೀಯ ಕಾರ್ಯಕಲಾಪದಲ್ಲಿ ಚರ್ಚೆಯಾಗಬೇಕಾಗಿದೆ. ಮತ್ತು ಅಧಿವೇಶನ prepone ಸಹ ಆಗುತ್ತಿದೆ ಎಂಬ ಮಾಹಿತಿ ಇದೆ. ಆದ್ದರಿಂದ ದಯವಿಟ್ಟು ಮಾನ್ಯ ಸದಸ್ಯರಲ್ಲಿ ವಿನಂತಿಸುವುದೇನೆಂದರೆ, they must confine; ಎಷ್ಟು ಮಾತನಾಡಬೇಕೆಂದು ಬಯಸಿದ್ದೀರಿ, ಅಷ್ಟೇ ಮಾತನಾಡಿ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಿಸಿದಂತೆ, ನಿಲುವಳಿ ಸೂಚನೆ ಮುಖಾಂತರ ಪ್ರಸ್ತಾಪ ಮಾಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡಿದ್ದೆವು. ಅದರ ಪ್ರಕಾರ 4ನೇ ತಾರೀಖು ನೋಟಿಸ್ ನೀಡಿದ್ದೆವು. ಆದರೆ, ಘಟನೆಯಲ್ಲಿ 6 ಜನ ಸಾವನ್ನಪ್ಪಿದ ಕಾರಣದಿಂದ ಈ ವಿಚಾರ ನಿಯಮ 68 ಕ್ಕೆ ಪರಿವರ್ತಿಸಿರುವುದರಿಂದ ಚರ್ಚೆಗೆ ಬರಲು ಇಷ್ಟು ದಿವಸವಾಗಿದೆ. ಮಾನ್ಯ ಸಚಿವರೇ ಸ್ವತಃ ಬಂದು ಹೇಳಿಕೆ ನೀಡಿದ್ದರೆ, ಇಷ್ಟು ಚರ್ಚೆ ಮಾಡುವಂತಹ ಅವಕಾಶವೇ ಇರುತ್ತಿರಲಿಲ್ಲ.

**ಶ್ರೀ ಮುರುಗೇಶ್ ಆರ್.ನಿರಾಣಿ(ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಸುಮಾರು 2–3 ದಿವಸಗಳಿಂದ ಉತ್ತರ ನೀಡಲು ಕಾಯುತ್ತಿದ್ದೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡಲು ಕಾಯುತ್ತಿದ್ದಾರೆ ಎಂಬ ವಿಚಾರ ನಮಗೆ ಹೇಗೆ ಗೊತ್ತಾಗಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಉತ್ತರ ನೀಡಲು ತಯಾರಿದ್ದೇನೆ ದಯವಿಟ್ಟು ಚರ್ಚೆ ಮಾಡಿ ಎಂದು ಬೆಳಗ್ಗೆ ಸಹ ಹೇಳಿದ್ದೇನೆ, ನಿನ್ನೆಯೂ ಸಹ ಹೇಳಿದ್ದೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಏತಕ್ಕಾಗಿ ಹೇಳುತ್ತಿದ್ದೇನೆ ಎಂದರೆ, ಬೇರೆ–ಬೇರೆ ಮಾಧ್ಯಮಗಳಲ್ಲಿ ಬಂದಿರುವ ವರದಿಯ ಆಧಾರದ ಮೇಲೆ ನಾವು ಮಾತನಾಡುತ್ತಿದ್ದೇವೆ. ಸರ್ಕಾರ ತನ್ನ ಬಳಿ ಇರುವ ವಿಚಾರವನ್ನು ಮೊದಲೇ ಹೇಳಿದರೆ, ಅದೇ ವಿಚಾರದ ಮೇಲೆ ಚರ್ಚೆ ಮಾಡಲು ಅವಕಾಶವಾಗುತ್ತಿತ್ತು ಮತ್ತು ಪರಿಣಾಮಕಾರಿಯಾಗಿ ಚರ್ಚೆ ಮಾಡಲು ಅವಕಾಶ ಸಿಗುತ್ತಿತ್ತು. ಇವತ್ತಿನ ವ್ಯವಸ್ಥೆ ಯಾವ ರೀತಿ ಇದೆ ಎಂಬುದರ ಬಗ್ಗೆ ಎಲ್ಲರಿಗೂ ತಿಳಿದಿದ್ದೆ, ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ, ಮೊದಲನೆಯದಾಗಿ, ಕ್ವಾರಿ. ಎರಡನೆಯದಾಗಿ, ಕ್ರಷರ್, ಮೂರನೆಯದಾಗಿ M-Sand. ಬಹುಶಃ ಇವೆಲ್ಲವೂ ಒಂದಕ್ಕೊಂದು ಸಂಪರ್ಕ ಹೊಂದಿರುತ್ತದೆ. ಕಲ್ಲು ಗಣಿಗಾರಿಕೆ ನಡೆಸಲು ಕ್ರಷರ್ ಅವಶ್ಯಕತೆ ಇರುತ್ತದೆ. ಕ್ರಷರ್ ಅವಶ್ಯಕತೆಯಿಂದಾಗಿ M-Sand ಮಾಡಲು ಸಾಧ್ಯವಾಗುತ್ತದೆ. ಹಾಗಾಗಿ ಇದರ ಬಗ್ಗೆ ನಮ್ಮಲ್ಲಿ ನಿಖರವಾದ ಅಂಕಿ–ಅಂಶಗಳಿರಬೇಕು. ಕ್ವಾರಿ, ಕ್ರಷರ್, M-Sand ಎಷ್ಟೆಷ್ಟು ಇವೆ ಎಂಬುದರ ಮಾಹಿತಿ ನಿಖರವಾಗಿದರೆ ಮಾತ್ರ ಯಾವುದಕ್ಕೆ ಎಷ್ಟೆಷ್ಟು ಉಪಯೋಗವಾಗುತ್ತದೆ ಎಂಬುದರ ಬಗ್ಗೆ ಮಾಹಿತಿ ಮಾನ್ಯ ಸಚಿವರಿಗೆ ತಿಳಿದಿರುತ್ತದೆ. ಆದರೆ, ಆ ಲೆಕ್ಕಚಾರಕ್ಕೆ ಮಾನ್ಯ ಸಚಿವರು ಹೋಗಿಲ್ಲ. ರಾಜ್ಯದಲ್ಲಿ 2493 ಕಲ್ಲು ಗಣಿಗಾರಿಕೆ ಇದ್ದು, ಅದರಲ್ಲಿ 2861 ಕಲ್ಲು ಗಣಿಗಾರಿಕೆ ಗುತ್ತಿಗೆದಾರರು ಸ್ಫೋಟಕವನ್ನು ಬಳಸಿ, ಗಣಿಗಾರಿಕೆ ಮಾಡಲು ಅವಕಾಶ ಇದೆ ಎನ್ನುವಂಥ ಮಾಹಿತಿ ಇದೆ. 477 ಗಣಿಗಳಿಗೆ ಸ್ಫೋಟಕಗಳನ್ನು ಬಳಸದೆ ಗಣಿಗಾರಿಕೆ ನಡೆಸಲು ಅವಕಾಶ ಇದೆ. 344 ಗುತ್ತಿಗೆದಾರರು ಕಲ್ಲು ಗಣಿಗಾರಿಕೆ ಪ್ರದೇಶದಲ್ಲಿ ಸ್ಫೋಟಕ ವಸ್ತುಗಳನ್ನು ಬಳಕೆ ಮಾಡಲು ಪರವಾನಗಿಯನ್ನು ಹೊಂದಿದ್ದಾರೆ ಎಂದು ಮಾಹಿತಿಯಲ್ಲಿ ತಿಳಿಸಿದ್ದಾರೆ. ಅಂದರೆ 344 ಗುತ್ತಿಗೆದಾರರು ಸ್ಫೋಟಕ ವಸ್ತುಗಳನ್ನು ಬಳಸಲು ಪರವಾನಗಿ ಹೊಂದಿದ್ದಾರೆ. ಉಳಿದವರೆಲ್ಲರೂ ಅಕ್ರಮವಾಗಿ ಸ್ಫೋಟಕ ವಸ್ತುಗಳನ್ನು ಬಳಸುತ್ತಿದ್ದಾರೆ ಎಂಬುದನ್ನು ಮಾನ್ಯ ಸಚಿವರು ಒಪ್ಪುತ್ತಾರೆ ಎಂದು ಭಾವಿಸುತ್ತೇನೆ. ಬಹುಶಃ ಅಧಿಕಾರಿಗಳ ಮೇಲೆ ಅಥವಾ ಕಲ್ಲು ಗಣಿಗಾರಿಕೆ ಗುತ್ತಿಗೆದಾರರೇನಿದ್ದಾರೆ, ಅವರ ತಪ್ಪು ಇದೆ ಎಂದು ಹೇಳುವುದಕ್ಕಿಂತ ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವ, ಈ ಇಲಾಖೆಯನ್ನು ನಿಭಾಯಿಸುತ್ತೇವೆ ಎಂಬ ಹುಮಸ್ಸಿನಿಂದ ಬಂದಿರುವಂಥ ಮಾನ್ಯ ಸಚಿವರ ವೈಫಲ್ಯವೇ ಕಾರಣ ಎಂದು ಹೇಳಲೇಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಕಳೆದ 15 ದಿವಸಗಳಿಂದ coastal area ದಲ್ಲಿ ನಮ್ಮ ಶೆಟ್ಟರ್ ಊರಿನ ಅಕ್ಕ–ಪಕ್ಕದಲ್ಲಿರುವಂಥವರು ಗಣಿಗಾರಿಕೆ ಮಾಡಲು ಪ್ರತಿ ದಿವಸ ಬೆಳಗ್ಗೆಯೇ ಬರುತ್ತಾರೆ. ಅಲ್ಲಿ 160 ಗುತ್ತಿಗೆದಾರರು ಕಲ್ಲು ಗಣಿಗಾರಿಕೆ ನಡೆಸುತ್ತಿದ್ದಾರೆ. ಈ 160 ಗುತ್ತಿಗೆದಾರರಲ್ಲಿ ಒಬ್ಬರು ಮಾತ್ರ ಪರವಾನಗಿಯನ್ನು ತೆಗೆದುಕೊಂಡಿದ್ದಾರೆ. ಅತ್ಯಂತ ಬುದ್ಧಿವಂತರೇ ಇರುವಂಥ ಜಾಗವಾಗಿದೆ. ಕಡ್ಡಾಯವಾಗಿ ಸ್ಫೋಟಕ ವಸ್ತು ನಡೆಸಲು DGMS (Directorate General of Mines Safety) ವತಿಯಿಂದ ಪರವಾನಗಿಯನ್ನು ಪಡೆದುಕೊಂಡ ನಂತರವೇ ಕಲ್ಲು ಗಣಿಗಾರಿಕೆ ಮಾಡಬೇಕೆಂಬ ಸುತ್ತೋಲೆಯನ್ನು ಡಿಸಿ, ಎಸ್.ಪಿ., Senior Geologist ರವರಿಗೆ ಕಳುಹಿಸಲಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಸುತ್ತೋಲೆ ಕಳುಹಿಸಿದ ನಂತರ ಎಲ್ಲವೂ ನಿಂತಿದೆ. ಇದರಿಂದಾಗಿ ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರಿಗೆ ಉದ್ಯೋಗ ಇಲ್ಲದಂತಾಗಿದೆ. ಕಲ್ಲು ಗಣಿಗಾರಿಕೆ ನಡೆಸುವಂಥವರು ಕೋಟ್ಯಾಂತರ ರೂಪಾಯಿ ಭರಿಸಿ, ಕ್ರಷರ್ ನಡೆಸುತ್ತಿದ್ದರು. ಅಂಥವರಿಗೆ ಲೋನ್ ಕಟ್ಟಲು ಸಾಧ್ಯವಾಗುತ್ತಿಲ್ಲ. ಈಗಾಗಲೇ ಮಾರ್ಚ್ ಅಂತಿಮ ಮಾಹೆಗೆ ಬಂದಿದ್ದಾರೆ. ಎರಡನೆ ಭಾಗ ಏನೆಂದರೆ, ಸಿಮೆಂಟ್ ರಸ್ತೆ, ಕಟ್ಟಡ ನಿರ್ಮಾಣ, ಕಮರ್ಷಿಯಲ್ ಇಂತಹ ಯಾವುದೇ ಅಭಿವೃದ್ಧಿ ಕೆಲಸಗಳಿಗೆ ಕಡಿಉಸುಕು ಅವಶ್ಯಕವಾಗಿದೆ. ಕಡಿಉಸುಕು ಇಲ್ಲದೇ ಯಾವುದೇ ಕೆಲಸ ನಡೆಯುತ್ತಿಲ್ಲ. ಈ ಸಂಬಂಧ ತಾವುಗಳೆಲ್ಲಾ ಒಳ್ಳೆಯ ಸಲಹೆಯನ್ನು ನೀಡಬೇಕಾಗಿದೆ. ಒಂದೇ ಪರವಾನಗಿ ನೀಡಿ, 160 ಗುತ್ತಿಗೆದಾರರು ಕೆಲಸ ನಡೆಸಬೇಕೇ ಅಥವಾ ಎಲ್ಲರೂ ಪರವಾನಗಿ ಪಡೆದುಕೊಂಡ ಮೇಲೆ ಕೆಲಸ ನಡೆಸಬೇಕೇ ಎನ್ನುವುದನ್ನು ತಿಳಿಸಬೇಕು. ನಮ್ಮ ರಾಜ್ಯದಲ್ಲಿ ಸಾವಿರಕ್ಕಿಂತ ಹೆಚ್ಚು ಜನರು ಪರವಾನಗಿ ಪಡೆಯದೇ ಕಲ್ಲು ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಇದು ಇವತ್ತಿನ ಸಮಸ್ಯೆಯಾಗಿಲ್ಲ. ತಲತಲಾಂತರದಿಂದ ಬಂದಿರುವಂಥದ್ದು. ನಾನು ಕಳೆದ 2 ತಿಂಗಳುಗಳಿಂದ ಈ ಇಲಾಖೆಯ ಜವಾಬ್ದಾರಿಯನ್ನು ಹೊಂದಿದ್ದೇನೆ. ಈಗಾಗಲೇ ತಿಳಿಸಿದ ಹಾಗೆ ಈ ಘಟನೆ 2 ತಿಂಗಳ ಹಿಂದೆಯೇ ನಡೆದಿದೆ. ಅಂದರೆ, ದಿನಾಂಕ: 13ನೇ ಜನವರಿ 2021 ರಂದು ರಾತ್ರಿ ನಡೆದಿರುವಂಥ ಘಟನೆಯಾಗಿದೆ. ಅದರ ನಂತರ ನಡೆದಂಥ ಘಟನೆ ಬಗ್ಗೆ ಎಲ್ಲಾ ಗೊತ್ತಿದೆ. ಒಂದು ಸಾವಿರ ಗುತ್ತಿಗೆದಾರರು ಪರವಾನಗಿ ಪಡೆದುಕೊಂಡ ನಂತರವೇ ನಾವು ಕಲ್ಲು ಗಣಿಗಾರಿಕೆ ಮಾಡಬೇಕೆಂದು ಒತ್ತಾಯ ಮಾಡಿದರೆ,...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಉತ್ತರ ನೀಡುವಾಗ ಹೇಳಲಿ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ವಿಷಯಾಂತರವಾಗುವುದರಿಂದ ಹೇಳುತ್ತಿದ್ದೇನೆ. ಸರ್ಕಾರದ ಮತ್ತು ಇಲಾಖೆಯ ವೈಫಲ್ಯ ಏನಿದೆ,... ತಾವು ಒಪ್ಪಲಿಲ್ಲವೆಂದರೆ ನಾವು ಒಪ್ಪಿಕೊಳ್ಳುತ್ತೇವೆ. ನಾನು ಸಹ ಅವರ ಸಲಹೆಯನ್ನು ಕೇಳುತ್ತಿದ್ದೇನೆ. ಒಂದು ಸಾವಿರ ಜನರು ಪರವಾನಗಿಯನ್ನು ತೆಗೆದುಕೊಳ್ಳಬೇಕಾದರೆ, ಪರಿಶೀಲನೆ ಮಾಡಿ, checklist ಪ್ರಕಾರ scrutiny ಮಾಡುವುದಕ್ಕೆ ಕನಿಷ್ಠ 3 ತಿಂಗಳುಗಳಾದರೂ ಸಮಯಬೇಕು. 3 ತಿಂಗಳುಗಳವರೆಗೂ ಎಲ್ಲಾ ಕಲ್ಲು ಗಣಿಗಾರಿಕೆಯನ್ನು ಬದಿಯಲ್ಲಿಟ್ಟರೆ, ಆ ಸಮಯಕ್ಕೆ ಮಳೆಗಾಲ ಪ್ರಾರಂಭಗೊಳ್ಳುತ್ತದೆ. ಮಳೆಗಾಲ ಬಂದ ನಂತರ ಯಾವುದೇ ರೀತಿಯಲ್ಲಿ ಬಿಲ್ ಮಾಡಲು ಸಾಧ್ಯವಾಗುವುದಿಲ್ಲ. ರಸ್ತೆಗಳ ಕೆಲಸವು ಸಹ ಅರ್ಧದಲ್ಲಿಯೇ ನಿಂತಿರುತ್ತದೆ. ಸರ್ಕಾರದಿಂದ ಟೆಂಡರ್ ತೆಗೆದುಕೊಂಡ ಕೆಲಸಗಳೆಲ್ಲಾ ಹಾಗೆಯೇ ಬಾಕಿ ಉಳಿಯುತ್ತದೆ. ಆದ್ದರಿಂದ ಅವರೆಲ್ಲರೂ ಮಹತ್ತರವಾದ ಸಲಹೆಯನ್ನು ನೀಡಬೇಕು. ನಾನು ಸಹ ಉತ್ತರ ನೀಡುವಾಗ ಸಂಕ್ಷಿಪ್ತವಾಗಿ ತಿಳಿಸುತ್ತೇನೆ. ಈಗಾಗಲೇ ಅವರು ಕೇಳಿರುವ ಬಗ್ಗೆ ಟಿಪ್ಪಣಿ ಮಾಡಿಟ್ಟುಕೊಂಡಿದ್ದೇನೆ. ಇದು ಬಹಳ burning issue. ವಿರೋಧ ಪಕ್ಷದ ಗೌರವಾನ್ವಿತ ಸದಸ್ಯರು ಸಲಹೆಯನ್ನು ನೀಡಿದರೆ, ಒಂದು ಷರತ್ತನ್ನು ವಿಧಿಸಿ, ಅವರ ಕಡೆಯಿಂದ undertaking ತೆಗೆದುಕೊಂಡು, ಯಾರ ಹತ್ತಿರ ಪರವಾನಗಿ ಇದೆ ಅವರಿಂದ ಕರಾರು ಒಪ್ಪಂದ ಪಡೆದು, ಕೆಲಸವನ್ನು ಮುಂದುವರೆಸಲು ತಯಾರಿದ್ದೇವೆ. ಇದಕ್ಕೆ ಅವರು ಸಹ ಮಾರ್ಗದರ್ಶನ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**(ಮುಂದು)**

**(429) 16.03.2021/4.40/ಎಸ್‌ಕೆ-ಎಕೆ**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಷ್ಟು ಕಲ್ಲು ಗಣಿಗಾರಿಕೆ ಇದೆ ಮತ್ತು ಸ್ಫೋಟಕಗಳು ಸುಮಾರು 3344 ಮಾತ್ರ ಇರುವಂತಹದ್ದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಹಾಗಾದರೆ ಒಂದಕ್ಕೊಂದು ಹೊಂದಾಣಿಕೆ ಇಲ್ಲ, ಏಕೆಂದರೆ, ಅದು ಕಡಿಮೆ. ಪ್ರತಿಯೊಂದಕ್ಕೂ ಮಾಡಬೇಕೋ ಅಥವಾ ಬೇಡವೋ ಎಂಬ ಬಗ್ಗೆ ತಮ್ಮಲ್ಲಿ ಒಂದು ಚಿಂತನೆ ಇದೆ. ಬಹುಶಃ ಇವತ್ತು ಅಲ್ಲದೇ ಇದ್ದರೂ ಮುಂದಾದರೂ ಬೇಕೇ ಬೇಕು. ಏಕೆ ಎಂದು ಹೇಳಿದರೆ ಈ ಹೊಣೆಗೇಡಿತನದ ವ್ಯವಸ್ಥೆಯಿಂದಾಗಿ, ಈ ಅನಾಹುತಗಳು ಆಗುತ್ತಲೇ ಇರುತ್ತದೆ. ಅವರು ಉದ್ಯೋಗ ಮಾಡದೇ, ಏನು ದೇಶ ಸೇವೆಯನ್ನು ಮಾಡುತ್ತಿಲ್ಲ. ಅವರು ಮಾಡುವಂತಹ ಉದ್ಯೋಗಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಭೂತವಾಗಿ ಅವಶ್ಯಕತೆಗಳೇನು ಎಂಬುದನ್ನು ತಿಳಿದುಕೊಂಡು ಆ ಉದ್ಯೋಗಕ್ಕೆ ಹೋದರೆ, ಆಗ ತಮಗೆ ನಿಯಂತ್ರಣ ಮಾಡುವುದಕ್ಕಾಗುತ್ತದೆ.

ಮಾನ್ಯ ಸಭಾಪತಿಯವರೇ, ನಮ್ಮ ವ್ಯವಸ್ಥೆ ಹೇಗಿದೆ ಎಂದು ಹೇಳಿದರೆ, ಒಂದು ಜಿಲ್ಲೆಯಲ್ಲಿ ಎಷ್ಟು ಜನ ಅಧಿಕಾರಿಗಳಿದ್ದಾರೆ? ತಾಲ್ಲೂಕಿಗೆ ಒಬ್ಬ ಅಧಿಕಾರಿಗಳಿದ್ದಾರಾ. ತಾಲ್ಲೂಕಿಗೆ ಒಬ್ಬ ಅಧಿಕಾರಿಯನ್ನಿಟ್ಟುಕೊಂಡು, ಇಡೀ ತಾಲ್ಲೂಕನ್ನೇ ನಿಯಂತ್ರಣ ಮಾಡುವಂತಹದ್ದು. ಇಡೀ ಜಿಲ್ಲೆಗೆ 4-5 ಅಧಿಕಾರಿಗಳನ್ನಿಟ್ಟುಕೊಂಡು, ಇಡೀ ಜಿಲ್ಲೆಯನ್ನೇ ನಿಯಂತ್ರಣ ಮಾಡಿಕೊಂಡಿರುವುದಕ್ಕೆ ಆಗುವುದಿಲ್ಲ. ಅವರನ್ನು ನಿಯಂತ್ರಣ ಮಾಡುವುದಕ್ಕಾಗುತ್ತಿಲ್ಲ ಎನ್ನುವುದರ ಬಗ್ಗೆ ನಾವು ನೋಡುತ್ತಿದ್ದೇವೆ. ಇದೇನೂ ರಾತ್ರಿ ನಡೆಯುತ್ತದೆ, ನಮಗೆ ಗೊತ್ತಿಲ್ಲದೇ ನಡೆಯುತ್ತದೆ ಎನ್ನುವುದಲ್ಲ. ಇದು ಹಗಲು ದರೋಡೆ. ಇದು ಎಲ್ಲರ ಗಮನಕ್ಕೆ ಬಂದಿರುತ್ತದೆ. ಯಾರಾದರೂ ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳುವುದಿದ್ದರೆ, ಅವನು ಸತ್ಯವನ್ನು ಹೇಳುತ್ತಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವುದಕ್ಕಾಗುತ್ತದೆ. ಹಾಗಾದರೆ ಇದಕ್ಕೆ ಪೂರಕವಾದ ವ್ಯವಸ್ಥೆಯನ್ನು ಕಲ್ಪಿಸಬೇಕಾದಂತಹ ಜವಾಬ್ದಾರಿ. ಏಕೆಂದರೆ, ಸರ್ಕಾರಕ್ಕೆ ಆದಾಯ ಬೇಕಾದಷ್ಟು ಬರುತ್ತದೆ; ಆದರೆ ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ನಾವು ಮಾಡುತ್ತಿಲ್ಲ. ನಾಲ್ಕು ಜನ ಒಬ್ಬ ಅಧಿಕಾರಿಗಳನ್ನು ತಾಲ್ಲೂಕನ್ನು ನಿಯಂತ್ರಣ ಮಾಡಬೇಕೆಂದು ಹೇಳಿದರೆ, ಸಾಮಾನ್ಯವಾಗಿ ಅಲ್ಲಿ ಸೋರಿಕೆ ಖಂಡಿತವಾಗಿಯೂ ಇರುತ್ತದೆ.

ಮಾನ್ಯ ಸಭಾಪತಿಯವರೇ, ನಾನು ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಇದೊಂದೇ ಗಣಿಗಾರಿಕೆ ಅಲ್ಲ, ಮರಳು ಇದೆ, ಬೇರೆ ಬೇರೆ ಸೋರಿಕೆಯಲ್ಲಿ, ಬೇರೆ ಬೇರೆ ಕಲ್ಲುಗಳನ್ನು ಬಳಸುತ್ತಾರೆ. ಈ ಎಲ್ಲಾ ದೃಷ್ಟಿಯಿಂದ ನೋಡುವುದಕ್ಕೆ ಹೋದರೆ, ಈ ಒಂದು ಸ್ಫೋಟಕವನ್ನು ಬಳಸುವಂತಹ ವಿಧಾನಗಳನ್ನು ತಾವು ಯಾವ ರೀತಿಯಲ್ಲಿ ನಿಯಂತ್ರಣ ಮಾಡುತ್ತೀರಿ? ಅಲ್ಲಿಯ ತನಕ ಇದನ್ನು ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಒಬ್ಬರ ಹೆಸರಿಗೆ ಪರವಾನಿಗೆ ಕೊಡುತ್ತೀರಾ. ಅವರಿಗೆ ಐದಾರು ಜನ ಸೇರಿಕೊಂಡು ಪಾಲುದಾರರನ್ನಾಗಿ ಮಾಡಿಕೊಳ್ಳುತ್ತಾರೆ. ಐದಾರು ಕ್ವಾರಿಗಳನ್ನು ನಡೆಸುತ್ತಾರೆ. ಪ್ರತಿಯೊಂದೂ ತಮಗೆ ಗೊತ್ತಿದೆ. ತಮ್ಮ ಕ್ವಾರಿಯಿಂದ ಏನೊಂದು ಕ್ರಷರ್‌ಗೆ ಬರಬೇಕಾದರೆ, ತಮ್ಮ ಇಲಾಖೆಯ ಅನುಮತಿ ಮುಖಾಂತರ ಹೋಗಬೇಕಲ್ಲವೇ. ಆಗ ಆದಮೇಲೆ ಅಲ್ಲಿಂದ ಪುನಃ ಅದು ಟ್ರಾನ್ಸ್‌ಪೋರ್ಟ್ ಆಗಬೇಕಾದರೂ ಸಹ ತಮ್ಮ ಇಲಾಖೆಯಿಂದ ಯಾವ್ಯಾವ ಹಂತದ ಮುಖಾಂತರ ಅನುಮತಿಯನ್ನು ಕೊಡುತ್ತೀರಿ. ಅದರ ಅನುಮತಿಯ ಮುಖಾಂತರವೇ ಹೋಗಬೇಕು. ಯಾವುದೂ ಕೂಡ ಸರ್ಕಾರದ ಗಮನಕ್ಕೆ ಬಾರದೇ ಏನೂ ನಡೆಯುವುದಿಲ್ಲ. ಆದ್ದರಿಂದ ಸರ್ಕಾರದ ಗಮನಕ್ಕೆ ಬಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆಲ್ಲಾ ನಡೆದಿರುವುದರಿಂದ, ಪಾಪ ಅಮಾಯಕ ಜನರು ಸಾಯುವಂತಹದ್ದನ್ನು ತಪ್ಪಿಸುವುದಕ್ಕೆ ಮತ್ತು ಇದರ ಹೊಣೆಯನ್ನು ಯಾರಾದರೂ ಹೊರಬೇಕಾಗುತ್ತದೆ. ಏಕೆಂದರೆ, ಯಾರೋ ಪೊಲೀಸರೊಬ್ಬರನ್ನು ಅಮಾನತ್ತು ಮಾಡಿರತಕ್ಕಂತಹದ್ದು. ಪೊಲೀಸರನ್ನು ಅಮಾನತ್ತು ಮಾಡುವಂತಹದ್ದು ಕೊನೆಯದು. ಬಹುಶಃ ಇದರಲ್ಲಿ ಹತ್ತಿರ ಇರುವುದು ಯಾರು ಹೇಳಿ? ಅವರ ಸುದ್ದಿಗೆ ತಾವು ಹೋಗುವುದಿಲ್ಲ. ಏಕೆಂದರೆ ಅವರು ಆ ಹುದ್ದೆಯಲ್ಲಿ ಕುಳಿತುಕೊಂಡಿದ್ದಾರೆ. ಇದರಲ್ಲಿ ಕಮಿಟಿಯ ಅಧ್ಯಕ್ಷರು ಯಾರಿದ್ದಾರೆ? ಅವರ ಸುದ್ದಿಗೆ ತಾವು ಹೋಗುವುದಿಲ್ಲ. ಅವರನ್ನು ನಿಯಂತ್ರಣ ಮಾಡುವುದಕ್ಕಾಗುವುದಿಲ್ಲವೇ? ಅಥವಾ ತಮ್ಮ ಇಲಾಖೆಯಿಂದ ನಿಯಂತ್ರಣ ಮಾಡುವುದಕ್ಕಾಗುವುದಿಲ್ಲವೇ? ಎಲ್ಲರು ಒಂದಲ್ಲ ಒಂದು ರೀತಿಯಲ್ಲಿ ಪರೋಕ್ಷವಾಗಿ ಒಬ್ಬರಿಗೊಬ್ಬರು ಶಾಮೀಲಾಗಿದ್ದುಕೊಂಡು, ಬಹುಶಃ ಜನ ಪ್ರತಿನಿಧಿಗಳು ಹೊರತಲ್ಲ. ಇವತ್ತು ತಮಗೂ ಕೂಡ ಒಂದು ರೀತಿಯ ಒತ್ತಡ ಬರುತ್ತಿದೆ. ನಮ್ಮ ಸ್ನೇಹಿತರು ಯಾರೋ ಹೇಳಿದರು. ಈಗ ಮುಷ್ಕರ ಮಾಡತಕ್ಕಂತಹ ಮನೋಭಾವನೆಯನ್ನು ಹೊಂದಿದ್ದಾರೆ. ಒಂದು ರೀತಿಯಿಂದಾಗಿ ಕ್ರಷರ್ ಮಾಲೀಕರಿಗೆ ಕಿರುಕುಳವಾಗುತ್ತಿದೆ. ಆದ್ದರಿಂದ ಅವರು ನಿಲ್ಲಿಸಬೇಕು ಎನ್ನುವಂತಹ ಒಂದು ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ ಎನ್ನುವ ವಿಚಾರಗಳು ತಾವು ಕೂಡ ಪ್ರಸ್ತಾಪ ಮಾಡಿದ್ದೀರಿ. ಅದೇ ರೀತಿಯ ವಾತಾವರಣವೂ ಸಹ ಇದೆ. ಅದರ ಅವಶ್ಯಕತೆಯೂ ಬೇಡಿಕೆ ಇರುವಾಗ, ಒತ್ತಡವನ್ನು ತರುತ್ತಾರೆ. ಒತ್ತಡವನ್ನು ಏನೇ ತಂದರೂ ಸಹ ಅದು ಶಾಸನಬದ್ಧವಾಗಿ, ಕಾನೂನುಬದ್ಧವಾಗಿ ನಡೆಸುವುದಕ್ಕೆ ತಾವು ಮಾಡಿಕೊಡಬೇಕಾಗುತ್ತದೆ. ಜನ ಸಾಮಾನ್ಯರು ದೂರು ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಎಲ್ಲಾ high level ನಲ್ಲಿಯೇ ಆಗುತ್ತದೆ. ಒಂದು ವೇಳೆ ಯಾರಾದರೂ ದೂರು ಅಥವಾ ನಾನೇ ದೂರು ಕೊಟ್ಟೆ ಅಂತಾ ಇಟ್ಟುಕೊಳ್ಳಿರಿ. ಎಲ್ಲಿ ರೀ ಬನ್ನಿ ತೋರಿಸಿ ಎಂದಾಗ, ಅಲ್ಲಿ ಹೋಗಿ ತೋರಿಸುವುದಕ್ಕೆ ಹೋದಾಗ, ಅಲ್ಲಿ ನನ್ನನ್ನು ನೂರು ಜನ ಕಾಯುತ್ತಿರುತ್ತಾರೆ. ಆ ವ್ಯವಸ್ಥೆಯ ಅಡಿಯಲ್ಲಿ ಬದುಕ ಬೇಕಾಗುತ್ತದೆ. ಪಾಪ, ಆ ಜನಸಾಮಾನ್ಯರು ಆ ಸುದ್ದಿಗೆ ಹೋಗುವುದಿಲ್ಲ. ಅವರೇ ಮಾಡುತ್ತಾರೆ, ಅವರೇ ಬಿಡುತ್ತಾರೆ ಮತ್ತು ಅವರೇ ಲೂಟಿ ಮಾಡಿಕೊಳ್ಳುತ್ತಾರೆ ಇದೆಲ್ಲವೂ high level ನಲ್ಲಿಯೇ ಆಗುತ್ತದೆ. ಶಿವಮೊಗ್ಗದಲ್ಲಿ ಆದ ಸ್ಫೋಟದಲ್ಲಿ ಪಾಪ ಅಮಾಯಕರಾಗಿರುವಂತಹ ಆರು ಜನರು ಮೃತರಾದರು. ಹಾಗೆಯೇ ಚಿಕ್ಕಬಳ್ಳಾಪುರದಲ್ಲಿ ಆದ ಸ್ಫೋಟದಲ್ಲಿ ಆರು ಜನ ಮೃತರಾದರು. ಆಗ ಇದರ ಬಗ್ಗೆ ಚರ್ಚೆಯಾಯಿತು. ಅಲ್ಲಿಗೆ ಮುಕ್ತಾಯವಾಯಿತು. ಇದರ ಬಗ್ಗೆ ಮಾನ್ಯ ಸಚಿವರು ಬಹಳ ಉತ್ಸುಕತೆಯಿಂದ ಇದ್ದಾರೆ. ಇದನ್ನು ಕಂಟ್ರೋಲ್ ಮಾಡುತ್ತೇವೆಂಬ ಭಾವನೆಯಿದೆ. ಈ ಭಾವನೆಗೆ ಪೂರಕವಾಗಿ ತಮಗೆ ಯಶಸ್ಸು ಸಿಗಲಿ. ಆದರೆ ಮುಂದಿನ ದಿನಗಳಲ್ಲಿ ಯಾವುದೇ ಅನಾಹುತವಾದರೂ ಸಹ ತಾವು ಅದರ ನೈತಿಕ ಹೊಣೆಯನ್ನು ಹೊರಬೇಕಾಗುತ್ತದೆ ಎನ್ನುವಂತಹದ್ದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ಶ್ರೀ ಆರ್. ಮುರುಗೇಶ್ ನಿರಾಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ನನ್ನ ಪ್ರಶ್ನೆಗೆ ಸಲಹೆಯನ್ನು ಕೊಡಲಿಲ್ಲ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ನಾನು ಹೇಳಿದ್ದೇನೆ.

**ಶ್ರೀ ಆರ್. ಮುರುಗೇಶ್ ನಿರಾಣಿ:–** ಇಲ್ಲ. ಒಂದು ನಿಮಿಷ. ತಮ್ಮಲ್ಲಿ 161 mining lease holders ಇದ್ದಾರೆ. ಅವರು mining ಮಾಡುತ್ತಿದ್ದಾರೆ. ಅದರಲ್ಲಿ ಒಬ್ಬರಿಗೆ ಮಾತ್ರ ಪರವಾನಿಗೆ ಇದೆ. ಸುಮಾರು 160 ಜನರು idle ಇದ್ದಾರೆ. ಈಗ ಬಂದ್ ಮಾಡಿದ್ದೇವೆ. ಕಾನೂನು ಪ್ರಕಾರವಾಗಿ DGMS (Directorate General of Mines Safety) ನಿಂದ ಪರವಾನಿಗೆಯನ್ನು ತೆಗೆದುಕೊಂಡು mining ಮಾಡಬೇಕೆಂದು ನಾವು ತಿಳಿಸಿದ್ದೇವೆ. ಎಲ್ಲರು ಬಂದ್ ಮಾಡಿದ್ದಾರೆ. ಸುಮಾರು 160 ಜನರು ಬೆಂಗಳೂರಿನಲ್ಲಿಯೇ ಇದ್ದಾರೆ. ನಮಗೆ 60 ಅಥವಾ 90 ದಿನಗಳ ಕಾಲಾವಕಾಶವನ್ನು ಕೊಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಈಗ ...

**ಶ್ರೀ ಆರ್. ಮುರುಗೇಶ್ ನಿರಾಣಿ:–** ಒಂದು ನಿಮಿಷ ಸಾರ್. ಇದು ಬಹಳ ಪ್ರಮುಖವಾದ ವಿಚಾರವಿದೆ. ಇದು ಇಡೀ ರಾಜ್ಯದ ತುಂಬಾ ನಡೆಯುತ್ತಿದೆ. ಈಗ ಅದರ ಸಲುವಾಗಿ strike ಹೇಳಿದರಲ್ಲ. ನಾನು ಮೂರು ವಿಷಯಗಳ ಬಗ್ಗೆ ಹೇಳಿದೆ. ಬಂದ್ ಮಾಡುವುದರಿಂದ disadvantages ಅಂದರೆ ತೊಂದರೆಗಳೇನು? ಅದನ್ನು DGMS license ಇರಲಾರದೇ, ನಾವು ಪರವಾನಿಗೆ ಕೊಟ್ಟಾದ ಮೇಲೆ ಏನಾಗಬಹುದು?

**(ಈ ಹಂತದಲ್ಲಿ ಉಪ ಸಭಾಪತಿಯವರಾದ ಶ್ರೀ ಎಂ.ಕೆ. ಪ್ರಾಣೇಶ್‌ರವರು ಸಭಾ ಪೀಠವನ್ನು ಅಲಂಕರಿಸಿದರು.)**

ಇಲ್ಲಿ ಬಹಳ ಮುಖ್ಯವಾಗಿರುವಂತಹದ್ದು, ನಮ್ಮ ಇಲಾಖೆಯ ಮೇಲೆ ತಾವೇನು ಅಪಾದನೆ ಮಾಡುತ್ತಿದ್ದೀರಲ್ಲ. ಇದ್ಯಾವುದೇ ಘಟನೆ ಗಣಿಗಾರಿಕೆಯಾಗಿರುವಂತಹ ಸಂದರ್ಭದಲ್ಲಿ ನಡೆದಿರುವಂತಹದ್ದಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಶಿವಮೊಗ್ಗದಲ್ಲಿ explosives ನ್ನು ಕ್ರೋಢೀಕರಣ ಮಾಡಿಟ್ಟಿರುವಂತಹ ಸಂದರ್ಭದಲ್ಲಿ ಆಯಿತು. ಗಣಿಗಾರಿಕೆ ಮಾಡಿರುವಂತಹದ್ದಲ್ಲ, ಬೇರೆ ಕಡೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಂತಹದ್ದು. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಆಗಿರುವಂತಹ ಘಟನೆ store ಮಾಡಿರುವಂತಹದ್ದನ್ನು raid ಮಾಡುವುದಕ್ಕೆ ಬರುತ್ತಾರೆ ಎನ್ನುವುದರ ಬಗ್ಗೆ ತಾವೇ ಪ್ರಸ್ತಾಪ ಮಾಡಿದ್ದೀರಾ. ಅದನ್ನು ಬೇರೆ ಕಡೆ ಸ್ಥಳಾಂತರ ಮಾಡವಾಗ ಆಗಿರುವಂತಹದ್ದು. ಈ ಎರಡು ಘಟನೆ ನಮ್ಮ ಗಣಿಗಾರಿಕೆ ಕೊಟ್ಟಿರುವಂತಹ premises ನಲ್ಲಿ ಆಗದೇ ಇರುವಂತಹದ್ದು. ಬೆಂಕಿಯಲ್ಲಿ ಹಾಕಿ ಬ್ಲಾಸ್ಟ್ ಆಯಿತು ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಎಂದು ಹೇಳಿದರು. ಅದನ್ನು ತಗ್ಗಿನ ಗುಂಡಿಯಲ್ಲಿ ಹಾಕಿ, ಮುಚ್ಚುವಂತಹ ಸಂದರ್ಭದಲ್ಲಿ ಆಯಿತು ಎಂದು ಮಾನ್ಯ ನಾರಾಯಣಸ್ವಾಮಿಯವರು ಹೇಳಿದರು. ಇಲ್ಲಿ ಪ್ರತಿ ಪಕ್ಷದ ನಾಯಕರಿಬ್ಬರೂ ಹೇಳಿದ್ದಾರೆ. ಘಟನೆ ಯಾವ ರೀತಿ ಆಯಿತು ಎಂಬ ಬಗ್ಗೆ ತನಿಖೆ ಮಾಡುತ್ತಿದ್ದಾರೆ. ತಾವು ಸ್ಪಷ್ಟವಾದ ಒಂದು ಸಲಹೆಯನ್ನು ಕೊಡಬೇಕು. ಅದಕ್ಕೆ ನಾವು ಬದ್ಧರಾಗಿರುತ್ತೇವೆ. ನಾವು 90 ದಿವಸಗಳವರೆಗೆ ಕಾಯಿಬೇಕಾ ಅಥವಾ ಅವರಿಗೆ undertaking ತೆಗೆದುಕೊಂಡು, ಅವರಿಗೆ DGMS registration ಮಾಡಿಸಿ, ಯಾರಾದರೂ license holder ಕಡೆಯಿಂದ short-term ನಲ್ಲಿ ಅಗ್ರಿಮೆಂಟ್ ಮಾಡಿಸಿ, ಅವರ ಪರ ಕೊಡಬೇಕೆಂದು ತಾವು ಸಲಹೆಯನ್ನು ಕೊಡಬೇಕು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ತಾವು ಗಂಭೀರವಾದ ವಿಚಾರವನ್ನು ಎತ್ತಿದ್ದೀರಿ. ಮಳೆಗಾಲ ಬರುವ ಮುನ್ನ ಅತ್ಯಂತ ಅಗತ್ಯವಾಗಿ ಯಾರಿಗೆ ಕೊಡಬೇಕಾಗುತ್ತದೆ ಎಂದರೆ, ಯಾರು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳಲ್ಲಿ ಗುತ್ತಿಗೆ ಕಾಮಗಾರಿಗಳನ್ನು ಸರ್ಕಾರದಿಂದ ಪಡೆದುಕೊಳ್ಳುತ್ತಾರೋ, ಅಂತಹ ಕಾಮಗಾರಿಗಳನ್ನು ನಿರ್ವಹಣೆ ಮಾಡುವಂತಹವರು, ಈ ಗಣಿಗಾರಿಕೆಯನ್ನು ನಡೆಸುತ್ತಾರೋ, ಅವರಿಗೆ ಆದ್ಯತೆ ಕೊಡಬೇಕು. ಅವರು on par with government, ಸರ್ಕಾರಿ ಕೆಲಸಗಳನ್ನು ಟೆಂಡರ್ ತೆಗೆದುಕೊಂಡು ಕೆಲಸ ಮಾಡುತ್ತಾರೆ ಅಷ್ಟೆ. ಅವರ ದಂಧೆ ಮತ್ತು ವ್ಯಾಪಾರ ಮಾಡುವುದಿಲ್ಲ. ಯಾರು ವ್ಯಾಪಾರ ಮಾಡಲ್ಲ. ಯಾರು ಸರ್ಕಾರಿ ಟೆಂಡರ್ ಕರೆದು ರಸ್ತೆ ಕಾಮಗಾರಿಗಳಂತಹದ್ದೇ ಮಾಡುತ್ತಾರೋ, ಅಂತಹವರಿಗೆ ಆದ್ಯತೆಯನ್ನು ಕೊಟ್ಟು, ತಾವು ಕ್ಲಿಯರ್ ಮಾಡಬೇಕಾಗುತ್ತದೆ. ಏಕೆಂದರೆ ಮಳೆಗಾಲಕ್ಕಿಂತ ಮುಂಚೆ ಕಾಮಗಾರಿ ಮುಗಿಯಬೇಕಲ್ಲ. ಉಳಿದವನು ಯಾವ ಏರಿಯಾದಲ್ಲಿ ಗಣಿಗಾರಿಕೆಗೆ ಗುರುತು ಮಾಡಿರುತ್ತೀರಿ ಹಾಗೂ ಎಲ್ಲವೂ ಸರಿಯಿದೆಯಾ ಎಂಬ ಬಗ್ಗೆ ನೋಡಿಕೊಂಡು ಹಂತ ಹಂತವಾಗಿ ಕೊಡುತ್ತಾ ಹೋಗಿ. ಆದರೆ ಇವರಿಗೆ ಮಾತ್ರ ಆದ್ಯತೆ ಕೊಡಬೇಕಾಗುತ್ತದೆ. ಅವರು ನಮ್ಮ ಹಿಡಿತದಲ್ಲಿರುತ್ತಾರೆ. ಕ್ಲಾಸ್–1 ಕಂಟ್ರಾಕ್ಟ್‌ದಾರರು ಅಥವಾ ನಮ್ಮ ಮೇಲ್ಪಟ್ಟವನು ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಾನೆಂದರೆ, ಅವರು ಸರ್ಕಾರದ ಹಿಡಿತದಲ್ಲಿರುತ್ತಾರೆ. ಆ materials ಅನ್ನು ಸರ್ಕಾರದ ಕೆಲಸಕ್ಕೆ ಬಳಸುತ್ತಾನೆ. ಆ ತರಹದವರಿಗೆ ಆದ್ಯತೆ ಕೊಡುವುದು ಒಳ್ಳೆಯದು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ... ಅದಕ್ಕೆ ಮುಂದಾದರೂ, ಈ ಒಂದು ವ್ಯವಸ್ಥೆಗೆ ನಾವು ಶಾಶ್ವತವಾಗಿ ಪರಿಹಾರವನ್ನು ಕಂಡುಕೊಳ್ಳಬೇಕು. ಏಕೆಂದರೆ accountability ಇರಬೇಕು. Accountability ಇಲ್ಲದೇ ಹೋದರೆ, ಯಾರೋ ಒಬ್ಬ ಬಂದ್ ಮಾಡುತ್ತಾನೆ, ನಾಲ್ಕು ಕಡೆ ಹೋಗಿ ಬ್ಲಾಸ್ಟ್ ಮಾಡುತ್ತಾನೆ. ಆಗ ಯಾರ ಮೇಲೆ accountability fix ಮಾಡುತ್ತೀರಿ? ತಾವು ಮಾಡುವುದು ಲೈಸೆನ್ಸ್ ಇರುವ ಒಬ್ಬ. ಅವನು ನಾಲ್ಕು ಕಡೆ ಬ್ಲಾಸ್ಟ್ ಮಾಡಿ ಬಂದಾಗ, ಯಾರು ಹೋಗಿ ಅಲ್ಲಿ ಬ್ಲಾಸ್ಟ್ ಮಾಡುತ್ತಾನೆ. ಅವನನ್ನು ಹಿಡಿದುಕೊಳ್ಳುವುದಕ್ಕಾಗುತ್ತದೆಯೇ? ಯಾರ ಮೇಲೆ ಮೂಲಭೂತವಾದ ಅವಶ್ಯಕತೆಗಳನ್ನು ಪೂರೈಸಿಕೊಂಡು ಬರುತ್ತಾರೋ, ಅವರಿಗೆ ಅವಕಾಶವನ್ನು ಮಾಡಿಕೊಡಲಿ. ಇವತ್ತೇ ಮಾಡಬೇಕು ಎನ್ನುವುದು ನನ್ನ ವಾದವಲ್ಲ. Overnight ಮಾಡಬೇಕು ಈ ಸಮಸ್ಯೆ ಬರಬಾರದಲ್ಲ. ಈ ಸಮಸ್ಯೆಯನ್ನು ಯಾವ ರೀತಿ ನಿಭಾಯಿಸಬೇಕು ಎನ್ನುವುದರ ಬಗ್ಗೆ ತಾವು ನಿಭಾಯಿಸಿ. ಆದರೆ ಮುಂದೆ ಒಂದು ದಿನ ಯಾರು ಬ್ಲಾಸ್ಟ್ ಮಾಡುತ್ತಾರೋ, ಅವರು ಪರವಾನಿಗೆಯನ್ನು ಹೊಂದಿರಬೇಕು ಎನ್ನುವಂತಹದ್ದನ್ನು ಮಾಡಿದರೆ, ಬಹುಶಃ ಇದಕ್ಕೆಲ್ಲ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಅನಿಸಿಕೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಬಹುದಾ?

**ಉಪ ಸಭಾಪತಿಯವರು:-** ತಾವು ಮಾತನಾಡಿ. ಅದಕ್ಕಿಂತ ಮೊದಲು ಈ ವಿಚಾರದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು 1 ಗಂಟೆ 50 ನಿಮಿಷವನ್ನು ತೆಗೆದುಕೊಂಡು ಇದರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ನಾರಾಯಣಸ್ವಾಮಿಯವರು ಸುಮಾರು 24 ನಿಮಿಷಗಳ ಸಮಯವನ್ನು ತೆಗೆದುಕೊಂಡು ಇದರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಸುಮಾರು 15 ನಿಮಿಷಗಳ ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(430)16.03.2021, 4.50, ಟಿಸಿಹೆಚ್-ಆರ್‌ಎನ್** **(ಉಪ ಸಭಾಪತಿಯವರ ಉಪಸ್ಥಿತಿ)**

**ಉಪ ಸಭಾಪತಿಯವರು (ಮುಂದು)**

ಈಗ ಬಜೆಟ್ ಮೇಲೆ ಚರ್ಚೆ ಆಗಬೇಕಾಗಿದೆ. ನೀವೆಲ್ಲಾ ಒಪ್ಪಿಗೆ ಕೊಟ್ಟರೆ, ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಹೇಳುತ್ತೇನೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ಕೇವಲ ಎರಡು ನಿಮಿಷ ಮಾತನಾಡುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಒಂದು ಕೆಲಸ ಮಾಡಿ. ಇನ್ನು ಮುಂದೆ ತಾವ್ಯಾರು ಮಾತನಾಡಬೇಡಿ ಎಂದು ಹೇಳಿಬಿಡಿ. ನಾವು ಲೆಟರ್ ಕೊಟ್ಟ ಮೇಲೂ ಕೂಡ ಮಾತನಾಡಲು ಅವಕಾಶವಿಲ್ಲವೆಂದರೆ, ನಾವು ಏಕೆ ಸದನಕ್ಕೆ ಬರಬೇಕು? ನಾವು ಸದನಕ್ಕೆ ಬಂದೂ ಮಾತನಾಡದಿದ್ದರೆ ಏನು ಪ್ರಯೋಜನ?

**ಉಪ ಸಭಾಪತಿಯವರು:-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ತಾವು ನಾನು ಮಾತನಾಡಿದ್ದನ್ನು ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ನಾನು ಇಲ್ಲಿ ಆದೇಶ ಮಾಡಿಲ್ಲ. With your permission, ಈ ತರಹದ್ದು ಈಗಾಗಲೇ ಆಗಿದೆ. ಬಜೆಟ್ ಮೇಲೆ ಚರ್ಚೆಗೆ ತೆಗೆದುಕೊಳ್ಳಬೇಕಿದೆ. ಹಾಗಾಗಿ, ನೀವೆಲ್ಲಾ ಸಹಕಾರ ಮಾಡಿ ಒಪ್ಪಿಗೆ ಕೊಟ್ಟರೆ, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಆಗ ಸಾಮಾನ್ಯ ವಿಚಾರಗಳ ಬಗ್ಗೆ ಪ್ರಸ್ತಾಪಿಸಿದಾಗ ವಿರೋಧ ಪಕ್ಷದ ನಾಯಕರು ಎಲ್ಲಾ ವಿಚಾರಗಳನ್ನು ಹೇಳಿದ್ದಾರೆಂದು ನಾನು ಹೇಳಿದ್ದೇನೆ. ಇಲ್ಲ, ನಾನು ಮಾತನಾಡುತ್ತೇನೆಂದು ಹೇಳಿದರೆ, ಖಂಡಿತವಾಗಿಯು ನಾನು ತಮಗೆ ಅವಕಾಶ ಕೊಡುತ್ತೇನೆ. ನಾನು ಕೊಡುವುದಿಲ್ಲವೆಂದು ಹೇಳಲಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಮಹತ್ವದ ವಿಚಾರವಾಗಿದೆ. ಪದೇ ಪದೇ ಈ ರೀತಿಯ ಘಟನೆಗಳು ಸಂಭವಿಸುತ್ತಿವೆ. ಅಮಾಯಕರು ಬಲಿಯಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇದಕ್ಕೆ ನಾವು ಮಹತ್ವ ಕೊಡಲೇಬೇಕಾಗಿದೆ. ಹಾಗಾಗಿ, ತಾವು ಇನ್ನೊಂದು 20 ನಿಮಿಷಗಳ ಕಾಲ ಅವಕಾಶ ಮಾಡಿಕೊಡಬೇಕು. ಯಾರ್ಯಾರು ಮಾನ್ಯ ಸದಸ್ಯರು ಮಾತನಾಡುತ್ತಾರೆ ಎಲ್ಲಾ ಪಕ್ಷದವರಿಗೂ 3 ರಿಂದ 5 ನಿಮಿಷಗಳಷ್ಟು ಅವಕಾಶ ಮಾಡಿಕೊಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಉಪ ಸಭಾಪತಿಯವರು:–** ಸಮಯ ಪ್ರಜ್ಞೆಯನ್ನಿಟ್ಟುಕೊಂಡು ಆದಷ್ಟು ಬೇಗ ಮಾತನಾಡಿ ಮುಗಿಸುವುದಾದರೆ ಮಾತನಾಡಿ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕೇವಲ 2–3 ನಿಮಿಷಗಳ ಕಾಲ ಮಾತನಾಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಈಗ ಅಲ್ಲಿ ನಡೆದಿರತಕ್ಕಂಥದ್ದನ್ನು ನೋಡಿದಾಗ, ಸರ್ಕಾರ ಒಂದು ತೀರ್ಪು ಕೊಡುತ್ತದೆ. ಒಂದು ತೀರ್ಮಾನ ಕೊಡುತ್ತದೆಂದು ನಾವು ಒಂದು ಜಾಗದಲ್ಲಿ ಕುಳಿತಿದ್ದೇವೆ. ನಾವೆಲ್ಲಾ ಪೆಟಿಷನರ್. ಇಲ್ಲಿ ಮಾನ್ಯ ಸಚಿವರು  ಪೆಟಿಷನರ್‌ಗೆ ನೀವು ಜಡ್ಜ್‌ಮೆಂಟ್ ಕೊಡಿ ಎಂದು ಕೇಳುತ್ತಿದ್ದಾರೆ. ನಾವು ಹೇಗೆ ಜಡ್ಜ್‌ಮೆಂಟ್ ಕೊಡುವುದಕ್ಕಾಗುತ್ತದೆ? ಇದು ನಿಮ್ಮಲ್ಲಿ ಇರತಕ್ಕಂಥ ಸಮಸ್ಯೆ. 160 ಜನ ಬಂದಿರಬಹುದು ಅಥವಾ 260 ಜನ ಬಂದಿರಬಹುದು. ನೀವು ಸರ್ಕಾರದಲ್ಲಿ ಇದ್ದೀರಿ. ನಿಮಗೆ ಎಲ್ಲಾ ವ್ಯವಸ್ಥೆ ಇದೆ. ನಿಮಗೆ ಸೆಕ್ರೆಟರಿಗಳು ಇದ್ದಾರೆ, ನಿರ್ದೇಶಕರುಗಳು ಇದ್ದಾರೆ, ಜಂಟಿ ನಿರ್ದೇಶಕರುಗಳು ಇದ್ದಾರೆ. ಎಲ್ಲಾ ಜಿಲ್ಲಾಧಿಕಾರಿಗಳಿದ್ದಾರೆ. Entire infrastructure ನ್ನು ನಿಮ್ಮ ಕೈಯಲ್ಲಿಟ್ಟುಕೊಂಡು ಮಾನ್ಯ ಸಚಿವರು, ಮಾನ್ಯ ಸದಸ್ಯರಾದ ಕೆ.ಪ್ರತಾಪಚಂದ್ರ ಶೆಟ್ಟಿಯವರಿಗೆ ಅವರಿಗೆ ಲೈಸೆನ್ಸ್ ಕೊಡಬೇಕೆ, ಬೇಡವೇ ಎಂದು ತೀರ್ಮಾನ ಕೊಡಿ ಎಂದು ಕೇಳಿದರೆ ಹೇಗೆ? ನೀವು ನಮಗೆ ಸಲಹೆಯನ್ನೂ ಕೂಡ ಕೇಳಬಾರದು. ಅದರ ಬಗ್ಗೆ ತೀರ್ಮಾನ ಮಾಡುವವರು ನೀವು ನಿಜವಾಗಿಯೂ ಅವರು ಸರಿಯಾದ ಸಮಯದಲ್ಲಿ ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿ ಬಂದಿದ್ದಾರೆ. ಅವರಿಗೆ ಅನುಭವ ಇದೆ.  ನೀವು industrialist ಆಗಿದ್ದೀರಿ. ತಾವು ಬರೀ sugarcane ಜೊತೆಗೆ ethanol, power ಇದನ್ನೆಲ್ಲಾ ಇಟ್ಟುಕೊಂಡಿದ್ದೀರಿ. ನಿಮಗೆ ಎಲ್ಲಾ Ministry ಬಗ್ಗೆ ಗೊತ್ತಿದೆ. ಕೇವಲ ನೀವೊಬ್ಬರೇ ಇದನ್ನು ನಿಭಾಯಿಸುತ್ತೀರೆಂದು ಹೇಳಿದರೆ ತಪ್ಪಾಗುತ್ತದೆ.  ಈ ಒಂದು ಇಲಾಖೆಯಲ್ಲಿ ಸುಮಾರು ಗಣಿ ಮತ್ತು ಭೂವಿಜ್ಞಾನ ಇಲಾಖೆ, Home Ministry, Environmental Ministry, Revenue Ministry and Transport Ministry,  ಈ ನಾಲ್ಕೈದು Ministry involve ಆಗಿದ್ದಾರೆ.  ತಮಗೆ ಚೆನ್ನಾಗಿ ಗೊತ್ತು. ತಾವು ನಮ್ಮಿಂದ ಏನು ತಿಳಿದುಕೊಳ್ಳುವುದು ಬೇಕಾಗಿರಲಿಲ್ಲ, ಬೇಕಾಗಿಯೂ ಇಲ್ಲ. ಯಾವ ರೀತಿ ವ್ಯವಸ್ಥೆ ಇದೆ, ತಿಂಗಳಿಗೆ ಎಷ್ಟು ಪಾವತಿ ಮಾಡಬೇಕು, ಅವನು ಅಲ್ಲಿ ಎಷ್ಟು ಮೈನಿಂಗ್ ಮಾಡುತ್ತಾನೆ, ಎಷ್ಟು tonnage ಬರುತ್ತದೆ, ಒಂದು ಟನ್‌ಗೆ ಎಷ್ಟು ಹಣ ಕೊಡಬೇಕು, ಒಂದು ಲಾರಿ ಲೋಡ್‌ಗೆ ಎಷ್ಟು ಹಣ ಕೊಡಬೇಕು, ಒಂದು ತಿಂಗಳಿಗೆ ಎಷ್ಟು ಹಣ ಕೊಡಬೇಕು ಇದೆಲ್ಲಾ ಫಿಕ್ಸ್ ಆಗಿರುತ್ತದೆ.  ಅದು ಒಂದು ಪ್ಯಾಕೇಜ್. ಇನ್ನೊಂದು ರೀತಿ ಪ್ಯಾಕೇಜ್ ಏನೆಂದರೆ, ಅದಕ್ಕೆ ಪರ್ಮಿಷನ್ ತೆಗೆದುಕೊಂಡು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬರುವುದಕ್ಕೆ ಒಂದು ಪ್ಯಾಕೇಜ್ ಇರುತ್ತದೆ. ಅದರಲ್ಲಿ ಎಲ್ಲಾ Ministry involve ಆಗಿರುತ್ತದೆ. Environmental Ministry ಯಿಂದ ರೆವಿನ್ಯೂ ಮಿನಿಸ್ಟ್ರಿವರೆಗೆ ಎಲ್ಲಾ ಪ್ಯಾಕೇಜ್ ಇರುತ್ತದೆ. ಇದನ್ನೆಲ್ಲಾ ನಾವು ಸುಮ್ಮನೆ ಕುಳಿತುಕೊಂಡು ಚರ್ಚೆ ಮಾಡುತ್ತಿದ್ದೇವೆ. Everybody knows that. ಅಲ್ಲಿ ಎಂಥ ಮಾಫಿಯ ಇದೆಯೆಂಬುದು ಎಲ್ಲರಿಗೂ ಗೊತ್ತು. ನಾನು ಬರೀ ಅಫಿಷಿಯಲ್ ಮಾಫಿಯಾ ಎಂದು ಹೇಳುವುದಿಲ್ಲ. ಪೊಲಿಟಿಕಲ್ ಮಾಫಿಯಾ ಎಂದು ಹೇಳುವುದಿಲ್ಲ. ಈಗ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಾನೂನು ಬಾಹಿರವಾಗಿ ನಡೆಯುತ್ತಿರುವ ಗಣಿಗಾರಿಕೆಯ ಮಾಹಿತಿ ನಿಮ್ಮ ಬಳಿ ಇಲ್ಲವೇ? ಅದು ಏಕೆ ಆಯಿತು, ಏನಾಯಿತು ಎಂದು ಸರ್ಕಾರದಲ್ಲಿ ಮಾಹಿತಿ ಇಲ್ಲವೇ? ಅಧಿಕಾರಿಗಳು ಅಲ್ಲಿಗೆ ಹೋಗಿ raid ಮಾಡಿದ್ದಾರಲ್ಲಾ, ಆ raid ಮಾಡಿರತಕ್ಕಂಥ ಪಾರ್ಟಿ ಯಾರು; ಯಾವ ಅಧಿಕಾರಿ ಅಲ್ಲಿಗೆ ಹೋಗಿದ್ದರು? ಅವರು ಎಷ್ಟರಮಟ್ಟಿಗೆ raid ಮಾಡಿದ್ದಾರೆ; ಅವರು ಅಲ್ಲಿ ಏನು ನೋಡಿದ್ದಾರೆ ಎನ್ನುವಂತಹ ಮಾಹಿತಿ ಸರ್ಕಾರದ ಬಳಿ ಇದೆಯೇ? ಆ ಮಾಹಿತಿಯೂ ಕೂಡ ಸರ್ಕಾರದಲ್ಲಿ ಇರುತ್ತದೆ. ಮತ್ತೆ raid ಮಾಡಿರತಕ್ಕಂಥ ಪಾರ್ಟಿ gelatin ನ್ನು ನೋಡದೇ ಇದ್ದಾಗ, ಅದೊಂದು ಕಡೆ ಇರುತ್ತದೆ. ಅದನ್ನು ಅವರು ನೋಡುವುದಿಲ್ಲ. ಅವರು ಅದನ್ನು ಪತ್ತೆ ಹಚ್ಚುವುದಿಲ್ಲ, ಮಾನ್ಯ ಸಚಿವರು 'ಮಾನ್ಯ ವಿರೋಧ ಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್‌ರವರು ಒಂದು ತರಹ ಹೇಳಿದರು, ಶ್ರೀ ಎಂ.ನಾರಾಯಣಸ್ವಾಮಿಯವರು ಒಂದು ತರಹ ಹೇಳಿದರು ಎಂದು ಹೇಳಿದರು. ಈಗ ನಾನು ಇನ್ನೊಂದು ರೀತಿ ಹೇಳುತ್ತಿದ್ದೇನೆ. ಪತ್ತೆಗೆ ಬಂದಿಲ್ಲವೆಂದು ಅದನ್ನು ತೆಗೆದುಕೊಂಡು ಹೋಗಿ, ಅದು ಕಾಣದಿದ್ದಂತೆ ಮಾಡೋಣವೆಂದು ಹೋಗಿದ್ದಂಥ ವ್ಯವಸ್ಥೆ. ಅದರಲ್ಲಿ ಅವರು ಸಿಕ್ಕಿಹಾಕಿಕೊಂಡಿದ್ದಾರೆ. ಹಾಗಾದರೆ, ಯಾರದ್ದು ತಪ್ಪು? ಯಾರು raiding party? ಅವರು ಯಾವ ಅಧಿಕಾರಿ. ಅವರು ರೈಡ್‌ಗೆ ಯಾವಾಗ ಹೋಗಿದ್ದರು. ಅದನ್ನೂ ನೋಡಬೇಕು ಸ್ವಾಮಿ. ನೀವು ಮೊದಲು ಅವರನ್ನು suspend ಮಾಡಿ, ವಿಚಾರಣೆ ಮಾಡಿ. ಎಲ್ಲಾ ಕಡೆ compromise ಆಗುತ್ತಿದೆ ನಿಜ, ನಾನು ಯಾವುದೇ ಪಕ್ಷದ ಬಗ್ಗೆ ಮಾತನಾಡುತ್ತಿಲ್ಲ. ಚಿಕ್ಕಬಳ್ಳಾಪುರದಲ್ಲಿರುವ ಮೈನ್ಸ್, ಕ್ರಷರ್ ಯಾರ್‍ಯಾರಿಗೆ ಸಂಬಂಧಪಟ್ಟಿದ್ದು ಎಂದು ಒಂದು ಪಟ್ಟಿ ಮಾಡಿ. ಅದರಲ್ಲಿ ಬಿ.ಜೆ.ಪಿ ಪಕ್ಷದವರು ಎಷ್ಟು ಜನ ಇದ್ದಾರೆ? ಕಾಂಗ್ರೆಸ್ ಪಕ್ಷದವರು ಎಷ್ಟು ಜನ ಇದ್ದಾರೆ ಮತ್ತು ಜೆ.ಡಿ.(ಎಸ್) ಪಕ್ಷದವರು ಎಷ್ಟು ಜನ ಇದ್ದಾರೆಂದು ಪಟ್ಟಿ ಮಾಡಿ ಆಗ ಗೊತ್ತಾಗುತ್ತದೆ. ತಿಂಗಳಿಗೆ ಎಷ್ಟು ಕೊಡುತ್ತಾರೆಂದು ಒಂದು ಪಟ್ಟಿ ಮಾಡಿ ತಿಳಿಸಿ. ನೋಡಿ, you also know this very well. 'Where there is

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

a will there is a way' ಎನ್ನುತ್ತಾರೆ. ನಿಮಗೆ will ಇದೆಯೇ? ನಿಮಗೆ ಮಾಡಬೇಕೆಂದು ಚಟ ಇದೆಯೇ? ನಾವು ಚಾಲೆಂಜ್ ಮಾಡಿ ಮಾಡುತ್ತೇವೆನ್ನುವಂತಹ ಹಠ ಇದೆಯೇ?

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 'ಚಟ' ಎಂದರೆ ಏನು ಅರ್ಥ? ಅವರು ಆ ರೀತಿ ಹೇಳಬಾರದು.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ನಾನು ಆ ಕೆಲಸವನ್ನು ಮಾಡುತ್ತೇನೆಂದು ಛಲ ಇರಬೇಕು. ಅದು ಇದೆಯೇ?

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ:–** ಮಾನ್ಯ ಸಭಾಪತಿಯವರೇ, 'ಚಟ' ಎಂದು ಹೇಳಬಾರದು.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ನಾನು ಛಲ ಎಂದು ಹೇಳಲು ಹೋಗಿ ಆ ರೀತಿ ಹೇಳಿದ್ದು, ಸ್ವಲ್ಪ adjust ಮಾಡಿಕೊಳ್ಳಿ. ನಾನು ಕನ್ನಡ ಮಾಧ್ಯಮದಲ್ಲಿ ಓದಿಲ್ಲ, ಆದರೂ ಇಷ್ಟರಮಟ್ಟಿಗೆ ನಾನು ಕನ್ನಡ ಮಾತನಾಡುತ್ತಿರುವುದಕ್ಕೆ appreciate ಮಾಡಿ. ನಾವು ಉರ್ದು ಮಾಧ್ಯಮದಲ್ಲಿ ಓದಿರತಕ್ಕಂಥವರು. ನಾವು ಕನ್ನಡ ಮಾತನಾಡುತ್ತಿರುವುದಕ್ಕೆ ನೀವು appreciate ಮಾಡಿ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ:–** ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಿದ್ದಾರೆ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಹೌದು. ಅದಕ್ಕೆ ನಾನು ಕನ್ನಡದಲ್ಲಿ ಮಾತನಾಡುತ್ತಿರುವುದು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, 'ಚಟ' ಎನ್ನುವುದು ಅಸಂಸದೀಯ ಪದ ಅಲ್ಲ. 'ಚಟ' ಎಂದರೆ ಹವ್ಯಾಸ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ನೀವು ಕ್ಲಾರಿಫಿಕೇಷನ್ ಕೊಡಿ. ಇವತ್ತಿನ context ನಲ್ಲಿ 'ಚಟ' ಸ್ವಲ್ಪ . . .

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಛಲ ಇದೆಯೇ? ಆಯಿತು, ಸರ್ಕಾರ ಒಂದೊಂದು ಏರಿಯಾದಲ್ಲಿ ಮೈನಿಂಗ್ ನಡೆಸಲು ಏನು ಪರ್ಮಿಷನ್ ಕೊಟ್ಟಿದೆ, ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏರಿಯಾದಲ್ಲೇ ಮೈನಿಂಗ್ ನಡೆಯುತ್ತಿದೆಯೇ; ಕ್ರಷಿಂಗ್ ನಡೆಯುತ್ತಿದೆಯೇ? ಎಷ್ಟೋ ಕಡೆ ಆ ಏರಿಯಾ ಬಿಟ್ಟು ಬೇರೆ ಏರಿಯಾದಲ್ಲೂ ಮೈನಿಂಗ್ ಮತ್ತು ಕ್ರಷಿಂಗ್ ಮಾಡುತ್ತಿದ್ದಾರೆ. ಇತ್ತೀಚೆಗೆ ಸರ್ಕಾರ ಕೋಟ್ಯಂತರ ರೂಪಾಯಿಗಳ ಪೆನಾಲ್ಟಿಯನ್ನು ಹಾಕಿದ್ದೇವೆಂದು ಹೇಳಿದಿರಿ. ಸರ್ಕಾರ ಅದನ್ನು ವಸೂಲಿ ಮಾಡಿದೆಯೇ? ಅದರಲ್ಲೂ compromise. ಸರ್ಕಾರ ಸುಮಾರು 30 ಕೋಟಿ ರೂಪಾಯಿಗಳ ಪೆನಾಲ್ಟಿಯನ್ನು ಹಾಕುತ್ತಾರೆ, ಕೊನೆಗೆ ಅವರ ಬಳಿ ಹೋಗಿ ವ್ಯವಹಾರ ಮಾಡಿ, ಸುಮಾರು 2-3 ಕೋಟಿ ರೂಪಾಯಿಗಳು ಕೊಟ್ಟರೆ, ಆ ಕೇಸ್ ಮುಗಿಯಿತು. ನಾನು ಇದು ಇವತ್ತಿನ ಪರಿಸ್ಥಿತಿಯಲ್ಲಿ ಆಗಿದೆಯೆಂದು ಹೇಳುತ್ತಿಲ್ಲ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಅಂತಹ ವ್ಯವಹಾರಗಳು ಅವರ ಸರ್ಕಾರದಲ್ಲಿ ಇರಬಹುದು ಅಥವಾ ಅವರ ಪಕ್ಷದಲ್ಲಿ ಇರಬಹುದು. ಮಾನ್ಯ ಸದಸ್ಯರು ಏನೇ ಮಾತನಾಡಬೇಕಾದರೂ ಬಹಳ ಜವಾಬ್ದಾರಿಯಿಂದ ಮಾತನಾಡಬೇಕು. ನಾನು ಅವರಿಗೆ ಗೌರವ ಕೊಟ್ಟು ಮಾತನಾಡುತ್ತಿದ್ದೇನೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ accuse ಮಾಡಿ ಹೇಳುತ್ತಿಲ್ಲ. ನಾನು ವ್ಯವಸ್ಥೆ ಬಗ್ಗೆ ಮಾತನಾಡುತ್ತಿದ್ದೇನೆ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ವ್ಯವಹಾರ, monthly, weekly, ದಿವಸದ್ದು ಅದು ನಮ್ಮ ಕಡೆ ನಡೆಯುವುದಿಲ್ಲ. ನಮಗೂ ಕೂಡ ಭಗವಂತ ಸಾಕಷ್ಟು ಕೊಟ್ಟಿದ್ದಾನೆ. ನಾನು ಈ ಇಲಾಖೆ ಸಚಿವನಾಗಿ ಜವಾಬ್ದಾರಿಯನ್ನು ತೆಗೆದುಕೊಂಡು, ಸುಮಾರು ಎರಡು ತಿಂಗಳಾಗಿದೆ. ಯಾರಾದರೂ ಕೂಡ . . .

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ನಾನು ನಿಮ್ಮ ಬಗ್ಗೆ ಮಾತನಾಡುತ್ತಿಲ್ಲ; ವ್ಯವಸ್ಥೆ ಬಗ್ಗೆ ಮಾತನಾಡುತ್ತಿರುವುದು.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಈ ವಿಷಯ ಮೀಡಿಯಾಗೆ ಹೋಗಬೇಕಾದರೆ ಏನು ಹೋಗುತ್ತದೆ? ದಯವಿಟ್ಟು ಮಾನ್ಯ ಸದಸ್ಯರೇ, ತಾವೇನು ಮಾತನಾಡುತ್ತಿದ್ದೀರಿ. .

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ನಾನು ವ್ಯವಸ್ಥೆ ಬಗ್ಗೆ ಮಾತನಾಡುತ್ತಿರುವುದು. ಇದು ಈಗಿನ ಮಾನ್ಯ ಸಚಿವರ ಕಾಲದಲ್ಲಿ ಆಗಿದೆ, ಎರಡು ತಿಂಗಳಿನಲ್ಲಿ ಆಗಿದೆಯೆಂದು ಹೇಳಲಿಲ್ಲ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಎಲ್ಲೆಲ್ಲಿ ಏನೇನು ನಡೆಯುತ್ತದೆಂದು ಎಲ್ಲರ ಮುಂದೆ ಹೇಳುವಂಥ . . .

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ನಾನು ಹಿಂದಿನ ಸರ್ಕಾರದಲ್ಲಿ ನಡೆಯುತ್ತಿರುವುದನ್ನು ಹೇಳುತ್ತಿರುವುದು. ಮಾನ್ಯ ಮುರುಗೇಶ್ ಆರ್.ನಿರಾಣಿಯವರು ಸಚಿವರಾಗಿ ಬಂದ ಮೇಲೆ ಪೆನಾಲ್ಟಿಯನ್ನು ಹಾಕಿಲ್ಲ, ಅದು ನನಗೂ ಗೊತ್ತು; ಎಲ್ಲರಿಗೂ ಗೊತ್ತು. 10 ವರ್ಷಗಳ ಹಿಂದೆ ಹಿಂದಿನ ಸರ್ಕಾರದಲ್ಲಿ ಪೆನಾಲ್ಟಿಯನ್ನು ಹಾಕಿರತಕ್ಕಂಥದ್ದು. ಈಗ ಮಾನ್ಯ ನಾರಾಯಣಸ್ವಾಮಿಯವರು ಹೇಳಿದಂತೆ, ನಮ್ಮ ಮಾಲೂರಿನ ಟೇಕಲ್‌ನಲ್ಲಿ ಒಂದೊಂದು ಕ್ರಷರ್‌ಗೆ 20 ಕೋಟಿ ರೂಪಾಯಿ ಅಥವಾ 30 ಕೋಟಿ ರೂಪಾಯಿಗಳಷ್ಟು ಪೆನಾಲ್ಟಿ ಹಾಕಿದ್ದಾರೆ. ಕೊನೆಗೆ settlement ಆಯಿತು. ಇದು ನಿಮ್ಮ ಕಾಲದಲ್ಲಿ ಎರಡು ತಿಂಗಳಿನಲ್ಲಿ ಆಯಿತೆಂದು ನಾನು ಹೇಳುತ್ತಿಲ್ಲ. ನಾನು ನಿಮಗೆ ಪ್ರಾರಂಭ ಮಾಡುವುದಕ್ಕೆ ಮೊದಲೇ ಹೇಳಿದ್ದೇನೆ. ಸರಿಯಾದ ಸಮಯದಲ್ಲಿ ಸೂಕ್ತವಾದಂಥ ವ್ಯಕ್ತಿ ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿ ಬಂದಿದ್ದಾರೆ. ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಆಗುತ್ತದೆ. ನಿಮಗೆ ಆ ಛಲ ಇರಬೇಕು. ನೀವು ಚಾಲೆಂಜ್ ತೆಗೆದುಕೊಂಡು ಮಾಡಿ ಎಂದು ನಾವು ನಿಮ್ಮನ್ನು ಕೇಳುತ್ತಿದ್ದೇವೆ. ನೀವು ಮಾಡುವುದಕ್ಕೆ ಸಾಧ್ಯತೆ ಇದೆ. You are capable and you can manage and knows all the issues. You can manage Chief Minister and Central Home Minister also. ಅದು ನಮಗೆ ಗೊತ್ತಿದೆ. ಹಾಗಾಗಿ, ನೀವು ಮಾಡಿ ಸ್ವಾಮಿ ಎಂದು ನಿಮ್ಮನ್ನು ಕೇಳುತ್ತಿರುವುದು. ನೋಡಿ, ಕೊಟ್ಟಿರತಕ್ಕಂಥ ಏರಿಯಾ ಯಾವುದು ಇರುತ್ತದೆ, ಆ ಏರಿಯಾದಲ್ಲಿ ಅವರು ಮೈನಿಂಗ್ ಮಾಡುತ್ತಿದ್ದಾರೆಯೇ ಎಂಬುದನ್ನು ನೋಡುವುದಕ್ಕೆ ಹೇಳಿ. ಯಾರು ಅದರಲ್ಲಿ involve ಆಗಿರುವುದು, ಜಿಲ್ಲಾಧಿಕಾರಿಗಳು involve ಆಗುವುದಿಲ್ಲವೇ? Additional Commissioner involve ಆಗುವುದಿಲ್ಲವೇ? ಅವರು ಬರೀ ಆರಾಮಾಗಿ ಪೇಪರ್‌ನಲ್ಲಿ ವರದಿಯನ್ನು ಬರೆದು ಫೈಲ್‌ನ್ನು ಕಳುಹಿಸಿಬಿಡಬಹುದೇ? ಹಾಗಾದರೆ, ಅಲ್ಲಿ ಅವರದೆಲ್ಲಾ involvement ಇಲ್ಲವೇ? ಹಾಗಾಗಿ, this

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

is a serious matter. ಪ್ರತಿಯೊಬ್ಬ ಸದಸ್ಯರು ಇದರ ಬಗ್ಗೆ ಮಾತನಾಡಬೇಕು ಅಂದುಕೊಂಡಿದ್ದಾರೆ.

**(ಮುಂದು)**

**(431)16.3.2021/5.00/ಎಂ.ಎಂ–ಆರ್.ಎನ್**

**ಶ್ರೀ ನಸೀರ್ ಅಹಮ್ಮದ್ (ಮುಂದು):–**

I am repeatedly going to tell you the people who went on raid, particularly about the Chikkaballapur issue, ಆತ ಸರಿಯಾಗಿ ಮಾಡಿದ್ದರೆ ಈ ಘಟನೆಯಾಗುತ್ತಿರಲಿಲ್ಲ. ಅವನು ಅದನ್ನು ಸೀಜ್ ಮಾಡಲಿಲ್ಲ, ಅದನ್ನು ಮುಚ್ಚುಮರೆಯಾಗಿ ತೆಗೆದುಕೊಂಡು ಹೋಗಿ ಹೇಗಾದರೂ ಮಾಡಿ ಮಾಡೋಣ ಎನ್ನುವಾಗ ಈ ಘಟನೆಯಾಯಿತು. ಯಾರು ಅಧಿಕಾರಿಗಳಿದ್ದಾರೆ ಅವರನ್ನು ಮೊದಲು ಸಸ್ಪೆಂಡ್ ಮಾಡಿ. The government will not tolerate this kind of nonsense in future ಎನ್ನುವ ಸಂದೇಶ ಹೋಗಲಿ. ನಿಮ್ಮ ಬಗ್ಗೆ ಸಾಕಷ್ಟು ನಿರೀಕ್ಷೆ ಇದೆ, ನೀವು ಮಾಡುತ್ತೀರಿ ಎಂಬ ಒಂದು ನಂಬಿಕೆ ಇದೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನೇನು ಹೆಚ್ಚು ಮಾತನಾಡುವುದಿಲ್ಲ, ಸಾಕಷ್ಟು ಜನರು, ಎಲ್ಲಾ ಹಿರಿಯರೂ ಇದರ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಒಂದೆರಡು ಅಂಶಗಳನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ. ಮೊದಲನೆಯದಾಗಿ illegal quarry ಎಂದರೇನು ಎಂಬುದನ್ನು ತಾವು ಹೇಳಬೇಕಾಗುತ್ತದೆ. ನನಗೆ ಗೊತ್ತಿರುವ ಪ್ರಕಾರ ಸರ್ಕಾರದಿಂದ ಎರಡು ಎಕರೆ ಭೂಮಿಯನ್ನು ಮಂಜೂರು ಮಾಡಿಸಿಕೊಂಡು, ಆ ಎರಡು ಎಕರೆಗೆ longitude and latitude ಗಳನ್ನು ಬರೆದಿರುತ್ತಾರೆ. ಅದನ್ನು ಬಿಟ್ಟು ಕೂಡ ಅಕ್ಕ ಪಕ್ಕದಲ್ಲಿ ಶೇ.90 ರಷ್ಟು ಗಣಿಗಾರಿಕೆ ಮಾಡುತ್ತಿದ್ದಾರೆ. ಇದು ಕಾನೂನುಬಾಹಿರ ಎಂದು ನಾನು ತಿಳಿದುಕೊಂಡಿದ್ದೇನೆ. Allotted area ಬಿಟ್ಟು un-allotted area ದಲ್ಲಿ ಸುಮ್ಮನೇ ಹೆಸರಿಗೋಸ್ಕರ ಒಂದೆರಡು ಎಕರೆ ಭೂಮಿಯನ್ನು ತೆಗೆದುಕೊಳ್ಳುವುದು, ಎಲ್ಲಿ ಬೇಕೆಂದಲ್ಲಿ ಮೈನಿಂಗ್ ಮಾಡುವುದನ್ನು ಮಾಡುತ್ತಾರೆ. It is also illegal mining. ಒಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೇಳೆ ಅವರಲ್ಲಿ ಲೈಸೆನ್ಸ್ ಇದ್ದರೂ ಕೂಡ if they encroached another portion is also illegal. ಇಂಥಹದ್ದು ಬಹಳಷ್ಟು ಇದೆ. ಒಂದು ಎಕರೆ ತೆಗೆದುಕೊಂಡವರು 10–20 ಎಕರೆಗಳಲ್ಲಿ ಕಾನೂನುಬಾಹಿರವಾಗಿ ಮೈನಿಂಗ್ ಮಾಡುವುದು ಇದೆ. ಇನ್ನೊಂದು ಪ್ರಮುಖವಾದ ಅಂಶವನ್ನು ತಾವು ಹೇಳಿದಿರಿ. ಈ ಸ್ಫೋಟ ಏತಕ್ಕೆ ಆಯಿತು? ಇದು ಗಣಿ ಪ್ರದೇಶದಲ್ಲಿ ಸ್ಫೋಟವಾಗಿಲ್ಲ, transportation ನಲ್ಲಿ ಸ್ಫೋಟವಾಗಿದೆ ಎಂದು ಹೇಳಿದಿರಿ. ತಮ್ಮ ಆ ಮಾಹಿತಿ ಸರಿಯಾಗಿದೆ. ತಮ್ಮ ಮುಖಾಂತರ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ magazine ಇತ್ತು. Magazine ಎಂದರೆ ಸ್ಫೋಟಕ ಸಾಮಾಗ್ರಿಗಳನ್ನು ಸಂಗ್ರಹಿಸಿಡುವ ಒಂದು ಜಾಗವಾಗಿದೆ. ಆ ಜಾಗವನ್ನು ನಿರ್ದಿಷ್ಟವಾಗಿ ಗಣಿ ಇಲಾಖೆ, ಕಂದಾಯ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳು ಒಂದೆಡೆ ಸೇರಿ ಎಲ್ಲಿ magazine ಮಾಡಬೇಕೆಂದು ಚರ್ಚೆ ಮಾಡಿ surrounding two-three kilometre ನಲ್ಲಿ ಅದು ಸ್ಫೋಟಗೊಂಡರೂ ಸಹ ಜನವಸತಿಗೆ ತೊಂದರೆಯಾಗದಂತಹ ಜಾಗದಲ್ಲಿ magazine ಮಾಡಿ ಇಡುತ್ತಿದ್ದರು. ಯಾವುದೇ ಗುತ್ತಿಗೆದಾರನು ಸ್ಫೋಟಕ ಸಾಮಾಗ್ರಿಗಳು ಬೇಕಾದರೆ ಅವನ ಡಿವಿಜನ್‌ಗೆ ಹೋಗಿ ಇಂಡೆಂಟ್ ಹಾಕಿಸಿಕೊಳ್ಳಬೇಕು, ತನಗೆ ಇಷ್ಟು ಜಿಲೆಟಿನ್ ಬೇಕು, ಇಷ್ಟು detonator ಬೇಕು, ಇಷ್ಟು cubic meter ಗಳಲ್ಲಿ mining ಮಾಡಬೇಕು, ಸ್ಫೋಟಿಸಬೇಕು ಎಂದು ಇರುತ್ತದೆ. ಅದಕ್ಕೆ ತಕ್ಕ ಪ್ರಮಾಣದ ಸಾಮಾಗ್ರಿಗಳನ್ನು ರಿಲೀಸ್ ಮಾಡುತ್ತಿದ್ದರು. ರಿಲೀಸ್ ಮಾಡಿದ ಸಾಮಾಗ್ರಿಗಳನ್ನು ಸಾಗಣೆ ಮಾಡುವುದಕ್ಕೂ ಒಂದು ಪದ್ಧತಿ ಇದೆ. ಅದೇನೆಂದರೆ, ಜಿಲೆಟಿನ್ ಮತ್ತು detonator ಅವೆಲ್ಲವನ್ನೂ ಒಂದೇ ವಾಹನದಲ್ಲಿ ತರುವುದಕ್ಕೆ ಆಗುವುದಿಲ್ಲ ಹಾಗೆ ತರಬಾರದು. ಇಲ್ಲಿ ತೊಂದರೆಯೇನೆಂದರೆ, ಈ ಕಾನೂನುಬಾಹಿರವಾಗಿ ಅಕ್ರಮ ಕಲ್ಲು ಗಣಿಗಾರಿಕೆಗಳನ್ನು ಏತಕ್ಕೆ ಜಾಸ್ತಿ ಮಾಡುತ್ತಿದ್ದಾರೆಂದರೆ, ಅವರಿಗೆ ಒಂದು ಸ್ಫೋಟಕಕ್ಕೆ ಸಾಕಷ್ಟು heavy materials ದೊರೆಯಬೇಕು. ಸಾಕಷ್ಟು ಸಾಮಗ್ರಿಗಳು ತುಂಡು ತುಂಡಾಗಿರಬೇಕು. ಮೊದಲು ಸ್ಫೋಟ ಮಾಡಿದರೆ ದೊಡ್ಡ ದೊಡ್ಡ ತುಂಡುಗಳಾಗುತ್ತವೆ. ಅದಕ್ಕೆ ಅಮೋನಿಯಂ ನೈಟ್ರೇಟ್‌ಗಳನ್ನು ತುಂಬುತ್ತಾರೆ. ಅದು ಲೀಗಲ್ ಅಲ್ಲ. ಅಮೋನಿಯಂ ನೈಟ್ರೇಟ್ ತುಂಬಿ ಅದಕ್ಕೆ ಡೀಸೆಲ್ ಹಾಕುತ್ತಾರೆ. ಡೀಸೆಲ್ ಅನ್ನು ಏತಕ್ಕೆ ಹಾಕುತ್ತಾರೆಂದರೆ, detonator ಅನ್ನು ಜಿಲೆಟಿನ್‌ನಲ್ಲಿ ಪ್ಯಾಕ್ ಮಾಡಿ ಅದರ ಕೆಳಗೆ ಹಾಕಿ, ಡೀಸೆಲ್ ಮತ್ತು ಅಮೋನಿಯಂ ನೈಟ್ರೇಟ್‌ಗಳನ್ನು ಹಾಕಿ ಪ್ಯಾಕ್ ಮಾಡಿದಾಗ ಆ ಕಲ್ಲು ಇಷ್ಟು ಸೈಜ್ ಆಗುವುದು ಇಷ್ಟಿಷ್ಟು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತುಂಡಾಗುತ್ತದೆ. ಏಕೆಂದರೆ, ಸಣ್ಣ ತುಂಡುಗಳಾದಷ್ಟು ಕ್ರಷರ್‌ಗೆ ಅನುಕೂಲವಾಗುತ್ತದೆ. ಆ ಎಚಿದದ ಬ್ಲೇಡ್‌ಗಳು ಕಡಿಮೆ ಹೋಗುತ್ತದೆ, ಆಗ ಮೆಟೀರಿಯಲ್ಸ್ ಜಾಸ್ತಿ ಸಿಗುತ್ತದೆ ಎಂದು ಹಾಗೆ ಮಾಡುತ್ತಾರೆ.

ನಾವು ಇತ್ತೀಚಿನ ದಿನಗಳಲ್ಲಿ ನೋಡಿದ ಹಾಗೆ rig blasting ಮಾಡುತ್ತಿದ್ದಾರೆ. ಆ rig blasting ಗೆ ಎಲ್ಲಿಯೂ ಅನುಮತಿ ಇಲ್ಲ. ಅವು ದೊಡ್ಡ-ದೊಡ್ಡ rig ಗಳಾಗಿರುತ್ತವೆ. ಹೇಗೆ ಬ್ಲಾಸ್ಟ್ ಮಾಡಬೇಕೆಂದರೆ, ಆ ಪೈಪ್ 3 ಅಡಿ, 5 ಅಡಿ ಅಥವಾ 7 ಅಡಿಗಳೆಂದು drilling ಮಾಡುವುದು ಇದೆ ಅದಕ್ಕಿಂತ ಜಾಸ್ತಿ ಬ್ಲಾಸ್ಟ್ ಮಾಡಬಾರದು. ಇತ್ತೀಚಿನ ದಿನಗಳಲ್ಲಿ ಎಲ್ಲಾ ಕಡೆಗಳಲ್ಲೂ ಕೂಡ rig blasting ಮಾಡುತ್ತಿದ್ದಾರೆ. Rig blasting ಎಂದರೆ 10-20 ಅಡಿಗಳಷ್ಟು ಹಾಗೆ ಬೋರ್‌ವೆಲ್ ಕೊರೆಯುತ್ತೇವೆ ಹಾಗೆ 20 ಅಡಿಗಳಷ್ಟು ಬೋರ್‌ವೆಲ್ ಕೊರೆಯುತ್ತಾರೆ, ಬೋರ್‌ವೆಲ್ ಕೊರೆದು ಅದರಲ್ಲಿ ಜಿಲೆಟಿನ್ ಮತ್ತು ಬ್ಲಾಸ್ಟ್ ಆಗುವುದಕ್ಕೆ ಏನು capacity ಬೇಕು ಅವೆಲ್ಲವನ್ನೂ ಹಾಕಿ ಅಮೋನಿಯಂ ನೈಟ್ರೇಟ್ ಹಾಕಿ ಬ್ಲಾಸ್ಟ್ ಮಾಡುತ್ತಾರೆ, ಆಗ ಅದು 10-20 ಊರಲ್ಲ, 10 ಜಿಲ್ಲೆಗಳಿಗೆ ಕೇಳಿಸುತ್ತದೆ. ಇದರ ಬಗ್ಗೆ ತಾವು ಹೆಚ್ಚಿನ ಅಧ್ಯಯನ ಮಾಡಬೇಕು. ತಾವು ಒಬ್ಬರಿಗೆ ಅನುಮತಿ ನೀಡಿದ್ದೇವೆಂದು ಹೇಳಿದಿರಿ. ಮೊದಲು ಅವರ ಸ್ಟೋರೇಜ್ ಎಲ್ಲಿದೆ, ಅವರು ಎಲ್ಲಿಂದ ಮೆಟೀರಿಯಲ್ಸ್ ತರುತ್ತಾರೆ, ಅವುಗಳಿಗೆ ಯಾರು ಅನುಮತಿ ನೀಡುತ್ತಾರೆ, ಜಿಲ್ಲಾಧಿಕಾರಿಯವರು ಕೊಡುತ್ತಾರೋ ಅಥವಾ ಗಣಿ ಇಲಾಖೆಯವರು ಕೊಡುತ್ತಾರೋ; ಒಂದು ತಿಂಗಳಿಗೆ ಎಷ್ಟು ಬೇಕು, 15 ದಿವಸಕ್ಕೆ ಎಷ್ಟು ಬೇಕು ಅಥವಾ ವರ್ಷಗಟ್ಟಲೆ ಲೆಕ್ಕಾಚಾರದಲ್ಲಿ ಎಷ್ಟು ಬೇಕು ಅಷ್ಟನ್ನು ತಂದು ಇಡುವುದಕ್ಕೆ ಅನುಮತಿ ಕೊಟ್ಟಿದ್ದೀರಿ. ಒಂದು ವರ್ಷದ ಸಾಮಾಗ್ರಿಗಳನ್ನು ತರುವುದಕ್ಕೆ ಅನುಮತಿ ಕೊಟ್ಟರೆ ಅವುಗಳನ್ನು ಯಾರು ಸಾಗಣೆ ಮಾಡುತ್ತಾರೆ? ಅದನ್ನು ಯಾವ ಟಚಿಂಚಿದುಟಿಜ ನಲ್ಲಿ ನಿರ್ವಹಣೆ ಮಾಡುತ್ತಾರೆ? ಇವೆಲ್ಲವನ್ನೂ ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಇಲ್ಲದಿದ್ದರೆ ಇಂತಹ ಅನಾಹುತಗಳು ಆಗುತ್ತಿರುತ್ತವೆ. ಇಲ್ಲಿ ಏನು ಮಾಡಿದ್ದಾರೆ ಎಂದರೆ, ಅದು ಸರಿ ಇರಬಹುದು ಅಥವಾ ತಪ್ಪಿರಬಹುದು. ಶಿವಮೊಗ್ಗದಲ್ಲಿ ಏನು ಬ್ಲಾಸ್ಟ್ ಆಗಿದೆ, ಅಲ್ಲಿ ಜಜಣಾಟಚಿಣಾಡಿ ಅದರಲ್ಲಿಯೇ ಇದೆ, ಜಿಲೆಟಿನ್ ಪ್ಯಾಕ್ ಕೂಡ ಅದರಲ್ಲಿಯೇ ಇತ್ತು, ಅಮೋನಿಯಂ ನೈಟ್ರೇಟ್ ಕೂಡ ಅದರಲ್ಲಿಯೇ ಇತ್ತು. ಅಮೋನಿಯಂ ನೈಟ್ರೇಟ್ ಕೆಲಸವೇನೆಂದರೆ, ಯಾವುದಾದರೂ ದೇಶದಲ್ಲಿ ಬ್ಲಾಸ್ಟ್ ಆದರೆ; ತಮಗೆ ಗೊತ್ತಿರಬಹುದು, ಇರಾನ್‌ನಂತಹ ಆ ಕಡೆ ದೇಶಗಳಲ್ಲಿ ಅದು ಬ್ಲಾಸ್ಟ್ ಆಗಿದೆ. ಅಮೋನಿಯಂ ನೈಟ್ರೇಟ್‌ನ ಒಂದು ಗೋಡೌನ್‌ನಲ್ಲಿ ಸುಮಾರು 2000 ಟನ್‌ನಷ್ಟು ಬ್ಲಾಸ್ಟ್ ಆಗಿದೆ. ಅದರ ಬಗ್ಗೆ ಓದಿದ್ದೇನೆ, ಆದರೆ ಜಾಸ್ತಿ ಹೇಳುವುದಕ್ಕಾಗುತ್ತಿಲ್ಲ. ಇದು ಕೂಡ ಅದೇ ರೀತಿಯ ಪ್ರಕರಣ. ಇಂಥವುಗಳನ್ನು ನಿಯಂತ್ರಣ ಮಾಡಿದಾಗ ಮಾತ್ರ ಸರಿಯಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ವಿಷಯವನ್ನು ಮಧ್ಯಾಹ್ನ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಕೇಂದ್ರ ಸರ್ಕಾರದವರು ಒಂದು ಪತ್ರ ಕಳುಹಿಸಿದ್ದಾರೆ. ಯಾವ ಬ್ರಿಡ್ಜ್‌ಗಳು ಅಪಾಯದಲ್ಲಿವೆ ಅಲ್ಲಿ ಕೆಲವು ಬ್ರಿಡ್ಜ್‌ಗಳಿಗೆ 50 ವರ್ಷ, 70 ವರ್ಷ ಮತ್ತೆ ಕೆಲವು 100 ವರ್ಷಗಳಾಗಿರುತ್ತವೆ. ಅಲ್ಲಿ ಮರಳಿನ ಮೈನಿಂಗ್ ಮಾಡುತ್ತಾರೆ. ಒಂದು ಕಿಲೋ ಮೀಟರ್ upstream and downstream ಅಲ್ಲಿ ಯಾರೂ mining ಮಾಡಬಾರದು ಎಂದು ಒಂದು ಆದೇಶವಿದೆ. Even blasting ಸಹ ಮಾಡಬಾರದು, sand mining ಮಾಡಬಾರದು. ಯಾವುದೇ ರೀತಿಯ ಗಣಿಗಾರಿಕೆಯಾಗಬಾರದು ಎಂದು ಇದೆ. ಆದರೂ ಕೂಡ ಅಲ್ಲಿ ಗಣಿಗಾರಿಕೆ ಆಗುತ್ತದೆ. ಒಂದು ಸಲ bridge cum barrage ಹೋದರೆ 40-50 ಸಾವಿರ ಎಕರೆಗಟ್ಟಲೆ ನೀರಾವರಿ ಪ್ರದೇಶದಲ್ಲಿರುವ ರೈತರ ಬದುಕೇ ಹಾಳಾಗಿ ಹೋಗುತ್ತದೆ. ಇಂತಹವುಗಳ ಬಗ್ಗೆ ಅತ್ಯಂತ ನಿಗಾ ವಹಿಸಬೇಕು. Blasting materials ಬಗ್ಗೆ ತಾವು ಒಂದು ಶ್ವೇತಪತ್ರವನ್ನೇ ಹೊರಡಿಸಬೇಕು. ಸ್ಫೋಟಕಗಳನ್ನು ಎಲ್ಲಿಂದ ತರಬೇಕು? ಸ್ಫೋಟಕಗಳು ಎಲ್ಲಿ ಸಿಗುತ್ತವೆ? ಅಕ್ರಮ ಕ್ವಾರಿಗಳಲ್ಲಿ ಸ್ಫೋಟಕ ಸಾಮಾಗ್ರಿಗಳು ಎಲ್ಲಿ ಸಿಗುತ್ತವೆ ಅಲ್ಲಿಗೆ ದಡದಡನೆ ಹೋಗಿ ತರುತ್ತಾರೆ. ಕಾನೂನಾತ್ಮಕವಾಗಿ ಮಾಡುವುದಕ್ಕೆ ಹೋದರೆ ಅದಕ್ಕೆ ಸುದೀರ್ಘ ಪ್ರಕ್ರಿಯೆಗಳಿವೆ. ಆದ್ದರಿಂದ ಅನೈತಿಕವಾಗಿ ತರುವುದೇ ಬಹಳ ಜಾಸ್ತಿಯಾಗುತ್ತಿದೆ. ಇತ್ತೀಚೆಗೆ ನಡೆದಂತಹ ಘಟನೆ; ಇವರು ಬಂದ ಮೇಲೆ ನಡೆಯಿತು ಎಂದು ನಾನು ಹೇಳುತ್ತಿಲ್ಲ. ಇದಕ್ಕೊಂದು ನಿಯಂತ್ರಣ ತರಬೇಕಲ್ಲವೇ? ಮಾಜಿ ಅಧ್ಯಕ್ಷರು ಹೇಳಿದರು, ಈಗಲ್ಲದಿದ್ದರೆ ಆರು ತಿಂಗಳ ನಂತರವಾದರೂ ಯಾರು ಗಣಿ ಲೈಸೆನ್ಸ್ ಕೇಳುತ್ತಾರೆ ಅಜಡಿಜಿಜಭಿಣಟಥಿ ಅವರಲ್ಲಿ ಎಲ್ಲಾ license ಇರಬೇಕು, ಅವರ ಹತ್ತಿರ magazine ಇರಬೇಕು, blasting license ಇರಬೇಕು, ಒಬ್ಬ blasting expert ಇರಬೇಕು ಮತ್ತು ಅವರು ತರಬೇತಿ ಹೊಂದಿದವರಾಗಿರಬೇಕು.

ಪೆಟ್ರೋಲ್ ಬಂಕ್‌ಗಳಲ್ಲಿ ನೋಡುವುದಾದರೆ, ಆ ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಹಾಕುವವರಿಗೆ Fire Station ನಲ್ಲಿ ಆರು ತಿಂಗಳಿನಿಂದ ಒಂದು ವರ್ಷ ತರಬೇತಿ ಕೊಡುತ್ತಾರೆ. ತರಬೇತಿ ಹೊಂದಿದ ನಂತರ ಮಾತ್ರ ಅವರನ್ನು ಪೆಟ್ರೋಲ್ ಬಂಕ್‌ಗಳಲ್ಲಿ ಕೆಲಸಕ್ಕೆ ಇಟ್ಟುಕೊಳ್ಳುವುದಕ್ಕೆ ಅನುಮತಿ ಇರುತ್ತದೆ. ಆ ರೀತಿ ಬ್ಲಾಸ್ಟಿಂಗ್ ಮಾಡುವವರು ಕೂಡ ಅವರು ಇಂಜಿನಿಯರುಗಳಾಗಲೀ ಯಾರೇ ಆಗಲಿ ಬ್ಲಾಸ್ಟಿಂಗ್ ಮಾಡುವಂತಹ ವ್ಯಕ್ತಿ ತರಬೇತಿ ಪಡೆದಿರಬೇಕು. ಯಾವ ರೀತಿ ಬ್ಲಾಸ್ಟ್ ಮಾಡಬೇಕು, ಎಷ್ಟು ಬ್ಲಾಸ್ಟ್ ಮಾಡಬೇಕು ಮತ್ತು ಯಾವ ಏರಿಯಾದಲ್ಲಿ ಎಷ್ಟು ಬ್ಲಾಸ್ಟ್ ಮಾಡಬೇಕೆಂಬ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜ್ಞಾನ ಇರಬೇಕು. Thickly populated town ಇರುವಂತಹ, ಪಕ್ಕದಲ್ಲಿ ಪಟ್ಟಣ ಪ್ರದೇಶವಿದ್ದರೆ at a time ಎಷ್ಟು ಮೆಟೀರಿಯಲ್‌ಗಳನ್ನು ಬ್ಲಾಸ್ಟ್ ಮಾಡಬಹುದೆಂದು ಕೂಡ ಅವರಿಗೆ ಮನವರಿಕೆ ಮಾಡಿಕೊಡಬೇಕಾಗುತ್ತದೆ. ಅದು ಆ ತಾಂತ್ರಿಕ ತಜ್ಞರಿಗೆ ಗೊತ್ತಿರಬೇಕಾಗುತ್ತದೆ. ಅಲ್ಲಿ ನಾಲ್ಕು ಜಜಣಂಟಿಚಿಣಂಡಿ ಗಿಂತ ಜಾಸ್ತಿ ಸ್ಫೋಟ ಮಾಡುವಂತಿಲ್ಲ.

ಇನ್ನೊಂದು ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡುವುದೇನೆಂದರೆ, ಇಲ್ಲಿ controlled blasting ಅನ್ನು ಏತಕ್ಕೆ ತರುತ್ತಿಲ್ಲ? ಕ್ವಾರಿ ಮೈನಿಂಗ್‌ಗೆ controlled blasting ತರಬೇಕಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಒಂದು ಲಿಕ್ವಿಡ್ ಇರುತ್ತದೆ. ಡ್ರಿಲ್ ಮಾಡಿದ ಮೇಲೆ ಆ ಲಿಕ್ವಿಡ್ ಹಾಕಿದರೆ ಆ ಬಂಡೆಗಳು ಸೀಳುವುದನ್ನು ನೋಡುತ್ತೇವೆ. Controlled blasting ಮಾಡಿದರೆ ಯಾರಿಗೂ ಹಾನಿಯಾಗುವುದಿಲ್ಲ. ಪರಿಣಿತರನ್ನು ಕರೆಸಿ blasting ಯಾವ ರೀತಿ slowdown ಮಾಡಬೇಕು, ಯಾವ ರೀತಿ ನಿಯಂತ್ರಣ ಮಾಡಬೇಕು ಎಂಬ ಬಗ್ಗೆ ಕೂಡ ತಾವು ಮಾಹಿತಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ನಾನು ಜಾಸ್ತಿ ಸಮಯ ಮಾತನಾಡದೇ, ಇದರ ಬಗ್ಗೆ ಸಾಕಷ್ಟು ವಿಷಯ ಮಾನ್ಯ ಸಚಿವರ ಗಮನಕ್ಕೆ ಬಂದಿದೆ. ಮುಂದಿನ ದಿನಗಳಲ್ಲಿ ಅವರು ಉತ್ತಮವಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಎಂದು ನಮಗೆ ಸಂಪೂರ್ಣ ನಂಬಿಕೆ ಇದೆ. ಮಾನ್ಯ ಸಚಿವರೇ, ನಾವು ಹೇಳುವುದೇನೆಂದರೆ ಒಂದೇ ದಿವಸದಲ್ಲಿ ನಿಮಗೆ ಮಾಡುವುದಕ್ಕಾಗುವುದಿಲ್ಲ. ಕೂಡಲೇ ಕ್ರಷರ್‌ಗಳನ್ನು ನಿಲ್ಲಿಸಿದರೆ ರಸ್ತೆಗಳಿಗೆ ಮರಳು ಸಿಗುವುದಿಲ್ಲ, ಕಟ್ಟಡ ಸಾಮಾಗ್ರಿಗಳು ಸಿಗುವುದಿಲ್ಲ, 500 ಕೋಟಿ, 1000 ಕೋಟಿ ರೂಪಾಯಿಗಳ ರಸ್ತೆ ಕಾಮಗಾರಿಗಳು ನಡೆಯುತ್ತಿವೆ, ಅವುಗಳಿಗೆ ಜಲ್ಲಿ ಇಲ್ಲದಂತಾಗುತ್ತದೆ. ತಾವು ಹೇಳುವುದು ಸರಿ ಇದೆ. ನಾವು ಹೇಳುವುದೇನೆಂದರೆ, ಆರು ತಿಂಗಳು ಅಥವಾ ಒಂದು ವರ್ಷ ಅವುಗಳನ್ನು ಮುಂದುವರೆಸಬೇಕು, ಆರು ತಿಂಗಳು ಅಥವಾ ಒಂದು ವರ್ಷದ ನಂತರ ಅವುಗಳನ್ನು ಲೀಗಲ್ ಆಗಿ ಕನ್ವರ್ಟ್ ಮಾಡಿದರೆ ಮಾತ್ರ; ನೀವು Sand Policy ಬಗ್ಗೆ ಹೇಳಿದಿರಿ. ಏನೆಂದರೆ, ಎಲ್ಲಾ ಟ್ರ್ಯಾಕ್ಟರ್‌ಗಳಿಗೆ, ರೈತರಿಗೆ ಫ್ರೀ ಬಿಡುತ್ತೇವೆ ಎಂದು ಹೇಳಿದಿರಿ. ಹಾಗೆಯೇ ಲೈಸೆನ್ಸ್‌ಗಳನ್ನು ಸ್ವಲ್ಪ liberalize ಮಾಡಿ. ಎಷ್ಟೆಷ್ಟು ಕಂಟ್ರೋಲ್ ಮಾಡುತ್ತೀರಿ ಅಷ್ಟು ಸಮಸ್ಯೆಗಳು ಉದ್ಭವವಾಗುತ್ತವೆ. ಎಷ್ಟೆಷ್ಟು liberalize ಆಗುತ್ತದೆ ಅಷ್ಟು ರೈತರಿಗೆ ಕಡಿಮೆ ದರದಲ್ಲಿ ಸಿಗುತ್ತದೆ. ಆಗ ಎಲ್ಲರಿಗೂ ಕಡಿಮೆ ದರದಲ್ಲಿ ಸಾಮಾಗ್ರಿಗಳು ಸಿಗುವಂತಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**(ಮುಂದು)**

**(432) 16–03–2021/ 05–10/ ಕೆಹೆಚ್–ವಿಕೆ (ಎಂಡಿ)**

**ಶ್ರೀ ಕೆ.ಹರೀಶ್ ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):–**ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳು. ಶಿವಮೊಗ್ಗದ ಹುಣಸೋಡುನಲ್ಲಿ ಆದ ಸ್ಫೋಟದ ಬಳಿಕ ಇವತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆಯ ಸರಹದ್ದಿನಲ್ಲಿ ನಡೆದಿರುವಂತಹ ಸ್ಫೋಟದ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆಯುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಅನೇಕ ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ನಾನು ಇನ್ಯಾವುದೇ ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ರಾಜ್ಯದಲ್ಲಿರುವ ಕಾನೂನುಬಾಹಿರ ಗಣಿಗಾರಿಕೆಯ ಬಗ್ಗೆ ಸರ್ಕಾರ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕು. ನಮ್ಮ ಸ್ನೇಹಿತರು ಮರಳು ಗಣಿಗಾರಿಕೆಯ ಬಗ್ಗೆ ಹೇಳಿದರು. ಮಂಗಳೂರಿನಲ್ಲಿ dredging ಮೂಲಕ ಮರಳು ಗಣಿಗಾರಿಕೆ ಆಗುತ್ತಿದೆ. Manual ಮೂಲಕ ಆಗುತ್ತಿತ್ತು. ತದನಂತರ ಜೆ.ಸಿ.ಬಿ., ಬಂತು. ಇದು ಇವತ್ತು ನೆನ್ನೆಯ ವಿಷಯವಲ್ಲ. ನೂರಾರು ವರ್ಷಗಳಿಂದ manually ಆಗುತ್ತಿದ್ದದ್ದು, ನಂತರ ಜೆ.ಸಿ.ಬಿ., ಬಂತು, ಈಗ dredging ಮೂಲಕ ಮರಳು ಗಣಿಗಾರಿಕೆ ಆಗುತ್ತಿರುವುದು ಬಹಳಷ್ಟು ಅಪಾಯಕಾರಿಯಾಗಿದೆ. ಏಕೆಂದರೆ, ಎರಡು ವರ್ಷಗಳ ಹಿಂದೆ ಈ ಮರಳು ಗಣಿಗಾರಿಕೆಯಿಂದಾಗಿ ಒಂದು ಸೇತುವೆ ಬಿದ್ದು ಹೋಯಿತು. ಆ ಸೇತುವೆ ಬಿದ್ದು ಹೋದ ಮೇಲೆ ಆ ಸೇತುವೆಯನ್ನು ಸಂಪೂರ್ಣವಾಗಿ ರಿಪೇರಿ ಮಾಡುವುದಕ್ಕೆ ಆಗಲಿಲ್ಲ. ಅದರ ಮಧ್ಯದಲ್ಲಿ ಈ ಗಣಿಗಾರಿಕೆಯನ್ನು dredging ಮೂಲಕ ಆಗುತ್ತಿರುವಂತಹದ್ದು ಬಹಳ ಖೇದಕರವಾದ ವಿಷಯವಾಗಿದೆ. ಇದನ್ನು ಸರ್ಕಾರ ಶೀಘ್ರವಾಗಿ ನಿಲ್ಲಿಸಬೇಕು ಮತ್ತು ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಗಮನಹರಿಸಬೇಕು. ಅದು ಸ್ಫೋಟ ಇರಬಹುದು, ಮರಳು ಗಣಿಗಾರಿಕೆ ಇರಬಹುದು, ಇದರ ಬಗ್ಗೆ ಸುಪ್ರೀಂ ಕೋರ್ಟ್ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕೆಂದು ನಾನು ಸರ್ಕಾರವನ್ನು ಅಗ್ರಹಿಸುತ್ತೇನೆ.

**ಶ್ರೀ ಆರ್.ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿಯಮ 68 ರಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲ್ಲಿಸುತ್ತಿದ್ದೇನೆ. ಶಿವಮೊಗ್ಗ ನಗರದ ಪಕ್ಕದಲ್ಲಿರುವಂತಹ ಹುಣಸೋಡುನಲ್ಲಿ ನಡೆದ ಸ್ಫೋಟದಿಂದ 6 ಜನರು ಸತ್ತಿದ್ದಾರೆ. ಇದಾದ ಒಂದು ತಿಂಗಳ ನಂತರ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಡೆದ ಸ್ಫೋಟದಿಂದ 6 ಜನರು ಸತ್ತಿದ್ದಾರೆ. ಮಾನ್ಯ ಸಚಿವರು ಅಧಿಕಾರವನ್ನು ತೆಗೆದುಕೊಂಡ ಮಾರನೇ ದಿನವೇ ನಮ್ಮ ಶಿವಮೊಗ್ಗ ಜಿಲ್ಲೆಗೆ ಆಗಮಿಸಿ, ಸ್ಫೋಟಗೊಂಡ ಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿನ ಜನರಿಗೆ ಸಾಂತ್ವನ ನೀಡಿದ್ದಾರೆ ಮತ್ತು ಅಲ್ಲಿನ ಅಧಿಕಾರಿಗಳಿಗೆ ಎಚ್ಚರಿಕೆ ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಆದರೂ ಸಹ ಇವತ್ತು ಶಿವಮೊಗ್ಗ ಜಿಲ್ಲೆಯ ಹುಣಸೋಡುನಲ್ಲಿರುವ ಸಾರ್ವಜನಿಕರಿಗೆ ಏನು ತೊಂದರೆಯಾಗಿದೆ. ಅಲ್ಲಿನ ಮನೆಗಳಿಗೆಲ್ಲಾ ಏನು ಧಕ್ಕೆಯಾಗಿದೆ. ಅವರಿಗೆಲ್ಲಾ ಯಾವುದೇ ಪರಿಹಾರ ಕೊಟ್ಟಿಲ್ಲ. ಆ ಪರಿಹಾರವನ್ನು ಕೊಡಬೇಕೆಂದು ಅಲ್ಲಿನ ಜನರು ರಸ್ತೆಗಳಲ್ಲಿ ನಿಂತುಕೊಂಡು strike ಮಾಡುವಂತಹ ಕೆಲಸ ನಡೆಯುತ್ತಲೇ ಇದೆ. ಮಾನ್ಯ ಸಚಿವರು ಆ ಕಡೆ ಗಮನಹರಿಸಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತಿದ್ದೇನೆ. ಇದರ ಜೊತೆಗೆ ಇವತ್ತು ಅಲ್ಲಿ unauthorized crushers ಇವೆ ಮತ್ತು unauthorized ಗಣಿಗಳು ಇವೆ, ಅವರಿಗೆ ತುರ್ತಾಗಿ materials ಬೇಕಾದಾಗ ಯಾವುದೇ ರೀತಿಯಲ್ಲಿ authorize ಮಾಡುವಂತಹ ಕೆಲಸವನ್ನು ಮಾಡುವುದರಿಂದ, ಈ ರೀತಿಯ ಘಟನೆಗಳು ಇನ್ನು ಹೆಚ್ಚಿಗೆ ಆಗಬಹುದು. ಅದಕ್ಕೆ ತಾವು ಯೋಚನೆ ಮಾಡುತ್ತಿರುವುದು ಸರಿ ಇದೆ. ತಾವು ಹೇಳಿದ ಹಾಗೆ ಮಳೆಗಾಲ ಬರುವಷ್ಟರಲ್ಲಿ ಸರ್ಕಾರದಿಂದ ಎಲ್ಲಾ ಕೆಲಸಗಳನ್ನು ಮುಗಿಸಬೇಕೆಂದು ಹೇಳಿದ್ದೀರಿ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಈ ಘಟನೆಯಾದ ಮೇಲೆ ಬೆಂಗಳೂರಿನಲ್ಲಿ construction materials ಶೇಕಡಾ 10 ರಿಂದ 25 ರಷ್ಟು ಜಾಸ್ತಿಯಾಗಿದೆ. ಜಲ್ಲಿ ದರ ಮತ್ತು ಎಂ.ಸ್ಯಾಂಡ್ ದರ ಜಾಸ್ತಿಯಾಗಿದೆ. ಇವತ್ತು ಜನರು ಇದರ ಬಗ್ಗೆ ಒದ್ದಾಟದಲ್ಲಿದ್ದಾರೆ. ಇವತ್ತು ಗಣಿಗಾರಿಕೆ ಮತ್ತು crusher ಗಳನ್ನು ನಿಲ್ಲಿಸಿರುವುದರಿಂದ, ಆ ರೀತಿಯಾಗುತ್ತಿದೆ ಎಂದು ಎಷ್ಟೋ ಕೆಲಸಗಳನ್ನು ನಿಲ್ಲಿಸಿಬಿಟ್ಟಿದ್ದಾರೆ. ಆದ್ದರಿಂದ, ತಾವು ಒಂದು ಕಡೆ ಇದರ ಬಗ್ಗೆ ಯೋಚನೆ ಮಾಡಬೇಕು. ಈಗಾಗಲೇ ಮಾನ್ಯ ಬಸವರಾಜ ಇಟಗಿಯವರು ಯಾವ ರೀತಿ explosive ಅನ್ನು ಉಪಯೋಗಿಸಬೇಕು. ಇದನ್ನು ಯಾವ ರೀತಿ ಮಾಡಬೇಕೆನ್ನುವುದಕ್ಕೆ ಕಾನೂನು ಜಾರಿಗೊಳಿಸುವಂತಹ ಕೆಲಸವನ್ನು ಮೊದಲು ಮಾಡಬೇಕೆಂದು ಹೇಳಿದರು. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ಫೋಟ ಆಗಿದ್ದು, ಅದು ಎಲ್ಲೋ ಹೊರಗಡೆ ಎಂದು ಅವರು ಹೇಳಿದರು. ಆದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಸ್ಫೋಟ ಆಗಿದ್ದು, ಅದು ಹೊರಗಡೆ ಅಲ್ಲ. Crusher ಇರುವಂತಹ ಜಾಗದಲ್ಲಿಯೇ ಸ್ಫೋಟವಾಗಿದೆ. ಆದ್ದರಿಂದ, ಅದನ್ನು ಅಲ್ಲಿಗೆ ತೆಗೆದುಕೊಂಡು ಬೇರೆ ಬೇರೆ ಕಡೆಗೆ ಸರಬರಾಜು ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಆದ್ದರಿಂದ, ಇದಕ್ಕೆ ತಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊದಲು ದೊಡ್ಡ ಪರಿಹಾರವನ್ನು ಸರಿಯಾದ ರೀತಿಯಲ್ಲಿ ಕಂಡುಹಿಡಿಯಬೇಕು. ತಮ್ಮಲ್ಲಿ ಮೊದಲ ತೊಂದರೆಯೇನೆಂದರೆ, ತಮ್ಮ ಇಲಾಖೆಯಲ್ಲಿ ಅಧಿಕಾರಿಗಳು ಇಲ್ಲ. ಇಬ್ಬರು–ಮೂರು ಜನ ಅಧಿಕಾರಿಗಳು ಇದ್ದು, ಅವರು ಇಡೀ ಜಿಲ್ಲೆಯನ್ನು ನೋಡುವುದಿಲ್ಲ. ನನಗೆ ತಿಳಿದಿರುವ ಹಾಗೆ ಆ ಅಧಿಕಾರಿಗಳು ದುಡ್ಡು ಮಾಡುವುದಕ್ಕೆ ತಮ್ಮ ಇಲಾಖೆಯಲ್ಲಿ ಇದ್ದಾರೆ. ಆ ಅಧಿಕಾರಿಗಳಿಗೆ ಪ್ರತಿ ತಿಂಗಳು ಮಾಮೂಲಿ ಬರುವುದನ್ನು ಬಿಟ್ಟರೆ ಬೇರೇನೂ ಬೇಕಾಗಿಲ್ಲ. ಇದರ ಬಗ್ಗೆ ನಾನು ಈ ಹಿಂದೆ ಮಾತನಾಡಿದಾಗಲೂ ಸ್ಪಷ್ಟ ಹೇಳಿದ್ದೆ. ಈ ಹಿಂದೆ ಇದ್ದಂತಹ Geologist ಅವರು ಹಣ ಮಾಡುವುದಕ್ಕೋಸ್ಕರವೇ ಅಲ್ಲಿ ಇದ್ದಾರೆ. ಅವರು ಆ ರೀತಿಯ ಕೆಲಸ ಮಾಡಿಬಿಟ್ಟರು. ಅವರು ಅಲ್ಲಿಂದ ವರ್ಗಾವಣೆಯಾದ ಮೇಲೂ ಒಂದು ವರ್ಷ ಅಲ್ಲಿಯೇ ತಳ್ಳಿಕೊಂಡು ಹೋಗಿಬಿಟ್ಟರು. ಅಧಿಕಾರಿಗಳು ಅಲ್ಲಿ ದುಡ್ಡು ಮಾಡುವುದೊಂದೇ ಕೆಲಸ. ಅಲ್ಲಿ ದುಡ್ಡು ಮಾಡುವುದು, ಬಿಡುವುದು ಬೇರೆ ಪ್ರಶ್ನೆ. ಆದರೆ ಕಾನೂನನ್ನು ಸರಿಯಾದ ರೀತಿಯಲ್ಲಿ ಜಾರಿಗೊಳಿಸುವಂತಹ ಕೆಲಸವನ್ನು ನಾವು ಮಾಡಲೇ ಇಲ್ಲ. ಆದ್ದರಿಂದ, ತಾವು ತಮ್ಮ ಇಲಾಖೆಗೆ ಮೊದಲು ಅವಶ್ಯಕತೆ ಇರುವಂತಹ ಸಿಬ್ಬಂದಿಗಳನ್ನು ಹಾಕಿಕೊಳ್ಳಬೇಕು. ಇವತ್ತು ಬೆಳಗ್ಗೆ ಉತ್ತರವನ್ನು ಕೊಡಬೇಕಾದರೆ DMF (District Mineral Fund) ಇದೆ ಎಂದು ಹೇಳಿದರು. DMF ಇದ್ದ ಮೇಲೆ ಅಲ್ಲಿನ ಜನರಿಗೆ ಏನೇನು ಧಕ್ಕೆಯಾಗಿದೆ. ಆ ಜನರಿಗೆ ಪರಿಹಾರ ಕೊಡುವಂತಹ ಕೆಲಸವನ್ನು ಆ DMF ಯಿಂದ ಮಾಡಬಹುದಾಗಿತ್ತು. ಅದೇ ಹಣವನ್ನು ಉಪಯೋಗಿಸಬಹುದಾಗಿತ್ತು. ಆದರೆ ಆ ಕೆಲಸವನ್ನು ಮಾಡಲಿಲ್ಲ. ಎಲ್ಲೆಲ್ಲಿ ಗಣಿಗಾರಿಕೆಗಳು ನಡೆಯುತ್ತವೆ, ಅಲ್ಲಿರುವಂತಹ ಕಂದಾಯ ಇಲಾಖೆಯ ಅಧಿಕಾರಿಗಳು ಇರಬಹುದು, ಪೊಲೀಸ್ ಅಧಿಕಾರಿಗಳು ಇರಬಹುದು, ಅರಣ್ಯ ಇಲಾಖೆಯ ಅಧಿಕಾರಿಗಳು ಇರಬಹುದು, ಇದರ ಬಗ್ಗೆ ಯಾವ ಅಧಿಕಾರಿಗಳು ತಲೆಕೆಡಿಸಿಕೊಳ್ಳುವುದಿಲ್ಲ. ಲೈಸೆನ್ಸ್ ಕೊಡುವಂತಹ ಸಂದರ್ಭದಲ್ಲಿ ಅವರ ಹತ್ತಿರ ಫೈಲ್ ಬಂದಾಗ ಮಾತ್ರ ಹಿಡಿದುಕೊಂಡು ಕೂರುವುದನ್ನು ಬಿಟ್ಟರೆ, ಆಮೇಲೆ ಆ ಸ್ಥಳಕ್ಕೆ ಹೋಗಿ ನೋಡುವುದೂ ಇಲ್ಲ, ಕೇಳುವುದೂ ಇಲ್ಲ, ಮಾಡುವುದೂ ಇಲ್ಲ, ಆ ಅಧಿಕಾರಿಗಳಿಗೆ ಪ್ರತಿ ತಿಂಗಳು ಮಾಮೂಲಿ ಬರುವಂತಹದ್ದು ಬಂದ ಕೂಡಲೇ ಸುಮ್ಮನಾಗಿ ಬಿಡುತ್ತಾರೆ. ಆದ್ದರಿಂದ, ದಯಮಾಡಿ ತಮ್ಮ ಇಲಾಖೆಯಲ್ಲಿ ಸಿಬ್ಬಂದಿಗಳನ್ನು ಮತ್ತು ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಂತಹ ಕೆಲಸ ಮಾಡಬೇಕು ಮತ್ತು DMF ಒಳಗೆ ಏನಾದರೂ ರಸ್ತೆಗಳು ಹಾಳಾಗಿದ್ದರೆ, ಮತ್ತಿತರ ಏನಾದರೂ ತೊಂದರೆಗಳು ಆಗಿದ್ದರೆ, ತಾವೆಲ್ಲಾ safer zone ನಲ್ಲಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಆದರೆ, ಶಿವಮೊಗ್ಗ ಜಿಲ್ಲೆಯ ಹುಣಸೋಡುನಲ್ಲಿ ಆಗಿರುವಂತಹದ್ದನ್ನು ನೋಡಿದರೆ, ಅಕ್ಕ-ಪಕ್ಕದಲ್ಲಿ ಪೂರ್ತಿಯಾಗಿ ಹಳ್ಳಿಗಳು ಇವೆ. ಇದರಿಂದ, ಅವರಿಗೆ ತೊಂದರೆಯಾಗುತ್ತಿದೆ. ಇವರಿಗೆ ಯಾವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿ ಕೊಡುತ್ತೀರಿ ಎಂಬುದು ಗೊತ್ತಿಲ್ಲ. ತಮ್ಮ ಇಲಾಖೆಯಲ್ಲಿ ಮಾತ್ರ ಯಾವ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಈಗಾಗಲೇ ಮಾನ್ಯ ನಸೀರ್ ಅಹ್ಮದ್‌ರವರು ಈ ಇಲಾಖೆಗೆ ತಾವು ಒಳ್ಳೆಯ ಮಂತ್ರಿಯಾಗಿ ಬಂದಿದ್ದೀರಿ, ತಮ್ಮ ಕಾಲದಲ್ಲಾದರೂ ಕೂಡ ಇದನ್ನು ಸರಿ ಮಾಡಿ ಎಂದು ಹೇಳಿದರು. ಇವತ್ತು 160 ಜನ ತಮ್ಮ ಹತ್ತಿರ ಬಂದು ಇದನ್ನು ನಿಲ್ಲಿಸಬೇಕೇ ಅಥವಾ strike ಮಾಡಬೇಕೇ ಎಂದು ಕೇಳಿದ್ದಾರೆ. ಇದು ಒಂದು ರೀತಿಯಲ್ಲಿ blackmail ತಂತ್ರ ಆಗಿಬಿಡುತ್ತದೆ. ಇವತ್ತು ಬಹಳ ತುರ್ತಾಗಿ ದುಡ್ಡು ಮಾಡಬೇಕೆಂದರೆ, ಯಾವುದಾದರೂ crusher ಘಟಕವನ್ನು ಮಾಡಬೇಕು. ಯಾವುದಾದರೂ ಒಂದು ಗಣಿಗಾರಿಕೆಯನ್ನು ಹಿಡಿಯಬೇಕು. ಇವತ್ತು ಎಲ್ಲೋ ಬಳ್ಳಾರಿ ಜಿಲ್ಲೆಯಲ್ಲಿ ಈ ರೀತಿಯಾಗುತ್ತಿದೆ ಎಂದು ಕೇಳುತ್ತಿದ್ದೆವು. ಈಗ ಇಡೀ ರಾಜ್ಯದಲ್ಲಿಯೇ ಈ ರೀತಿಯ ಕೆಲಸವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿಬಿಟ್ಟಿದ್ದಾರೆ. ಆದ್ದರಿಂದ, ಇಂತಹವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಸರಿಯಾದ ರೀತಿಯಲ್ಲಿ explosivesಗಳನ್ನು ಬಳಸುವಂತಹ ಕೆಲಸಕ್ಕೆ ಕಾನೂನನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಶಿವಮೊಗ್ಗ ಜಿಲ್ಲೆಯ ಹುಣಸೋಡುನ ಬಗ್ಗೆ ಗಮನಹರಿಸಬೇಕು. ಮತ್ತೊಂದು ಬಾರಿ ಅಲ್ಲಿಗೆ ಬಂದು ಅಲ್ಲಿ ಏನಾಗಿದೆ ಎಂಬುದರ ಬಗ್ಗೆ ಅಲ್ಲಿನ ಅಧಿಕಾರಿಗಳ ಜೊತೆಗೆ ಸಭೆಯನ್ನು ಮಾಡಿ, ಆ ಜನರಿಗೆ ಏನು ತೊಂದರೆಯಾಗಿದೆ ಎಂಬುದನ್ನು ತಿಳಿದುಕೊಂಡು ಅವರಿಗೆ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಧನ್ಯವಾದಗಳು.

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಿಯಮ 68 ರಡಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ವ್ಯಾಪ್ತಿಯಲ್ಲಿ ಬರುವ ಹಿರೇನಾಗವಲ್ಲಿ ಗ್ರಾಮದಲ್ಲಿ ಕಾನೂನುಬಾಹಿರವಾಗಿ ನಡೆಯುತ್ತಿರುವಂತಹ ಗಣಿಗಾರಿಕೆ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಈಗಾಗಲೇ ಸಾಕಷ್ಟು ಜನ ಹಿರಿಯರು ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ನಾನು ಕೆಲವು ಸಲಹೆಗಳನ್ನು ಕೊಡಬೇಕೆಂದು ಅಂದುಕೊಂಡಿದ್ದೇನೆ. ಇದರ ಬಗ್ಗೆ ನಾನು ಜಾಸ್ತಿ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಮೊದಲಿನಿಂದಲೂ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಈಗಾಗಲೇ ನಮ್ಮ ಗಮನಕ್ಕೆ ಬಂದಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯಿಂದ ಒಂದು ಸರ್ಕಾರವೇ ಬಿದ್ದು ಹೋಯಿತು. ಸುಪ್ರೀಂ ಕೋರ್ಟ್‌ನಿಂದ intervention ಆಗಿ SIT (Special Investigation Tean) ಯಿಂದ ತನಿಖೆ ನಡೆಯುತ್ತಿರುವುದನ್ನು ನಾವು ನೋಡಿದ್ದೇವೆ. ಅದು ಬಳ್ಳಾರಿಯಲ್ಲಿ ಆಗಿರಬಹುದು, ತದನಂತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇತ್ತೀಚಿನ ದಿನಗಳಲ್ಲಿ ಗಣಿಗಾರಿಕೆಯ crusher ಗಳಿವೆ, m-sand ಅವಶ್ಯಕತೆ ಎಲ್ಲಿ ಇದೆ. ಇದನ್ನು ದಿನನಿತ್ಯ ಬಳಸುವುದಕ್ಕೆ ನಮಗೆ ಗಣಿಗಾರಿಕೆ ಮಾಡುವಂತಹ ವ್ಯವಸ್ಥೆ ಬೇಕಾಗಿದೆ. ಅದರಲ್ಲಿಯೂ ಸಾಕಷ್ಟು ಅವ್ಯವಹಾರ, ಭ್ರಷ್ಟಾಚಾರ, ಕಾನೂನುಬಾಹಿರವಾಗಿ ಕೆಲಸ ನಡೆಯುತ್ತಿದೆ. ಇದನ್ನು ನಿಯಂತ್ರಣ ಮಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ. ಎಲ್ಲೋ ಒಂದು ಕಡೆ ನನ್ನ ಮನಸ್ಸಿಗೆ ಆತ್ಮಾವಲೋಕನ ಮಾಡಿಕೊಂಡರೆ ನಮ್ಮ ಸರ್ಕಾರಗಳು ವಿಶೇಷವಾಗಿ ಗಣಿಗಾರಿಕೆ ಇಲಾಖೆಯಲ್ಲಿ fail ಆಗಿದೆ. ಅಕ್ರಮ ಗಣಿಗಾರಿಕೆಯನ್ನು ನಿಯಂತ್ರಣ ಮಾಡುವುದಕ್ಕೆ ನಮ್ಮ ಸರ್ಕಾರ ವಿಫಲವಾಗಿದೆ. ಹಲವಾರು ಮಾನ್ಯ ಸದಸ್ಯರು ಅಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ನಡೆಯುತ್ತದೆ, ಅಲ್ಲಿ ದುಡ್ಡು ಮಾಡುವುದಕ್ಕೆ ಹೋಗುತ್ತಾರೆ ಎನ್ನುವ ವಿಚಾರವನ್ನು ನಾವು ಕೇಳುತ್ತಿದ್ದೇವೆ. ಆದರೆ, ಇವತ್ತು ಸರ್ಕಾರ ಇದನ್ನು ನಿಯಂತ್ರಣ ಮಾಡಬೇಕು. ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರಬೇಕಾದರೆ, ಸುಪ್ರೀಂ ಕೋರ್ಟ್‌ನಿಂದ SIT ಅಡಿಯಲ್ಲಿ ಏನು ತನಿಖೆಯನ್ನು ಮಾಡಲಾಯಿತು. ಅದಕ್ಕೆ ಏನು ನಿಯಂತ್ರಣ ಮಾಡಲಾಯಿತು. ಅದೇ ರೀತಿಯಾಗಿ ಇವತ್ತು crushers ಇವೆ, m-sand ಇವೆ,

**(ಮುಂದು)**

**(433) 16/03/2021/ಎಸ್‌ಪಿಆರ್/ವಿಕೆ(ಎಂಡಿ)/5:20**

**ಶ್ರೀ ಪ್ರಕಾಶ್ ಕೆ.ರಾಥೋಡ್(ಮುಂದು):-**

ಇದರ ಅವಶ್ಯಕತೆಯಿದ್ದು, ಇವುಗಳನ್ನು ನಿಷೇಧಿಸಬೇಕೆಂದು ನಾನು ಹೇಳುವುದಿಲ್ಲ. ನಮಗೆ ದಿನನಿತ್ಯದ ಉಪಯೋಗಕ್ಕಾಗಿ ಕ್ರಷರ್‌ಗಳು, ಎಂ-ಸ್ಯಾಂಡ್ ಮತ್ತು ಕಲ್ಲುಗಳ ಅವಶ್ಯಕತೆ ಇದೆ. ಆದರೆ ಇದನ್ನು ಹೇಗೆ ನಿಯಂತ್ರಿಸಬೇಕು? ಸರ್ಕಾರವು ಎಲ್ಲಿಯವರೆಗೆ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಪರವಾನಿಗೆ ಪಡೆದ ಗಣಿಗಾರಿಕೆ ಮಾಡುವವರ ಮೇಲೆ ಕಟ್ಟುನಿಟ್ಟಿನ ಮತ್ತು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಅಕ್ರಮ ಗಣಿಗಾರಿಕೆಯು ನಡೆಯುತ್ತಿರುತ್ತದೆ. ಯಾವ ಅಧಿಕಾರಿಗಳ ಮೇಲೆ ಸರ್ಕಾರವು ಕ್ರಮವನ್ನು ತೆಗೆದುಕೊಳ್ಳುತ್ತದೆ? ಇಲಾಖೆಯ ಯಾವುದೋ ಕಿರಿಯ ವರ್ಗದ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವ ಬದಲು ಆತನ ಹಿಂದಿರುವ ಉನ್ನತ ಹುದ್ದೆಯ ಅಧಿಕಾರಿಯ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇವತ್ತಿನ ದಿವಸ ಗಣಿಗಾರಿಕೆಗೊಳಪಡುವ ಜಿಲ್ಲೆಯ ಜಿಲ್ಲಾಧಿಕಾರಿಗಳಿರಬಹುದು ಅಥವಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಥವಾ ನಿರ್ದೇಶಕರಿರಬಹುದು, ಎಲ್ಲಿಯವರೆಗೆ ಅಧಿಕಾರಿಗಳ ಮೇಲೆ ನಿರ್ದಿಷ್ಟವಾದ ಕ್ರಮಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅಕ್ರಮ ಗಣಿಗಾರಿಕೆಯು ನಡೆಯುತ್ತಿರುತ್ತದೆ. ಇದರಲ್ಲಿ ಸರ್ಕಾರದಿಂದ ಯಾವುದೇ ರೀತಿಯ ನಿಯಂತ್ರಣ ಮಾಡುವುದಕ್ಕಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ.

ಇತ್ತೀಚೆಗೆ ರಾಜ್ಯದ ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸ್ಫೋಟಕ ವಸ್ತುಗಳನ್ನು ಸಾಗಾಣಿಕೆ ಮಾಡುವ ಸಂದರ್ಭದಲ್ಲಿ ಸ್ಫೋಟಗೊಂಡವು. ಇದರಿಂದಾಗಿ ಚಿಕ್ಕಬಳ್ಳಾಪುರದಲ್ಲಿ ಆರು ಜನರು ಮತ್ತು ಶಿವಮೊಗ್ಗದಲ್ಲಿ ಒಬ್ಬರು ಮೃತರಾಗಿರುತ್ತಾರೆ. ಇದನ್ನು ಸರ್ಕಾರವು ನಿಯಂತ್ರಿಸಬೇಕು. ಆದರೆ ವಾಸ್ತವವಾಗಿ ಏನಾಗಿದೆ? ಸ್ಫೋಟಕ ವಸ್ತುಗಳನ್ನು ಏಕೆ ಸಾಗಿಸುತ್ತಿದ್ದಾರೆ? ಇದಕ್ಕೆ ಪರವಾನಿಗೆ ಇದೆಯೇ? ಇದಕ್ಕೆ ಸಾರಿಗೆ ಇಲಾಖೆಯವರು ಪರವಾನಿಗೆಯನ್ನು ನೀಡಿದ್ದಾರೆಯೇ? ಒಂದೇ ಪರವಾನಿಗೆಯಲ್ಲಿ ಬೇರೆ ಬೇರೆ ರೀತಿಯ ಅನಧಿಕೃತ ಸಾಗಾಣಿಕೆಯನ್ನು ಮಾಡಲಾಗುತ್ತಿದೆಯೇ? ಇದನ್ನು ಎಲ್ಲಿಯವರೆಗೆ ನಿಯಂತ್ರಣ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ರೀತಿಯ ಘಟನೆಗಳು ಮರುಕಳಿಸುತ್ತಿರುತ್ತವೆ ಎಂದು ನಾನು ಭಾವಿಸುತ್ತೇನೆ. ಸ್ಫೋಟಕಗಳನ್ನು ತುಂಬಿದ ವಾಹನಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಸಂಚರಿಸಲು ಅವಕಾಶ ನೀಡಿದರೆ, ಜನಸಾಮಾನ್ಯರಿಗೆ ಸಾಕಷ್ಟು ತೊಂದರೆಯಾಗುವ ಭೀತಿ ಇದೆ. ಇಲ್ಲಿ ಅನಧಿಕೃತವಾಗಿ ಜನನಿಬಿಡ ಪ್ರದೇಶಗಳಲ್ಲಿ ರಾತ್ರಿ ವೇಳೆಯಲ್ಲಿ ಸಾಗಾಣಿಕೆ ಮಾಡುತ್ತಾರೆ. ಇದನ್ನು ಎಲ್ಲಿಯವರೆಗೆ ನಿಯಂತ್ರಿಸುವುದಿಲ್ಲವೋ ಅಲ್ಲಿಯವರೆಗೆ ಇಂತಹ ಸ್ಫೋಟಕವಾಗುವ ಭಯವು ನಮ್ಮಲ್ಲಿ ಇರುತ್ತದೆ. ನಿಯಂತ್ರಿಸದೇ ಇರುವವರೆಗೆ ಅಕ್ರಮ ಗಣಿಗಾರಿಕೆ ಮತ್ತು ಸ್ಫೋಟಕ ಸಾಮಗ್ರಿಗಳ ಅನಧಿಕೃತ ಸಾಗಾಣಿಕೆ ನಡೆಯುತ್ತಲೇ ಇರುತ್ತದೆ. ಸಾಗಾಣಿಕೆ ಸಂದರ್ಭದಲ್ಲಿ ರಕ್ಷಣೆಯನ್ನು ನೀಡಬೇಕಾಗುತ್ತದೆ.

**ಉಪಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ಮಾನ್ಯ ಬಸವರಾಜ ಪಾಟೀಲ ಇಟಗಿರವರು ಪ್ರಸ್ತಾಪಿಸಿದ ಅಂಶಗಳು ಇಲ್ಲಿ ಪುನರಾವರ್ತನೆಯಾಗುತ್ತಿವೆ. ಹೀಗಾಗಿ ತಾವು ಹೊಸ ವಿಚಾರಗಳ ಕುರಿತಾಗಿ ಹೇಳಿ. ಶ್ರೀಯುತರು ಸ್ಫೋಟಕ ವಿಚಾರಗಳ ಬಗ್ಗೆ ಈಗಾಗಲೇ ಬೆಳಕನ್ನು ಚೆಲ್ಲಿದ್ದಾರೆ. ಹೀಗಾಗಿ ನೀವು ಹೊಸ ವಿಚಾರಗಳ ಬಗ್ಗೆ ಮಾತನಾಡಿ.

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಸ್ಫೋಟಕ ವಸ್ತುಗಳ ನಿಯಂತ್ರಣದ ಬಗ್ಗೆ ಇತರೆ ಸದಸ್ಯರುಗಳು ಪ್ರಸ್ತಾಪಿಸಿರಬಹುದು. ಒಟ್ಟಾರೆಯಾಗಿ ಅಕ್ರಮ ಗಣಿಗಾರಿಕೆಯನ್ನು ನಿಯಂತ್ರಿಸಲು ಏನು ಮಾಡಬೇಕೆನ್ನುವುದರ ಬಗ್ಗೆ ನಾನು ಸಲಹೆಗಳನ್ನು ನೀಡುತ್ತಿದ್ದೇನೆ. ಇದರ ಬದಲಾಗಿ ಸ್ಫೋಟಕಗಳನ್ನು ಹೇಗೆ ತಯಾರಿಸುತ್ತಾರೆ ಎನ್ನುವುದರ ಬಗ್ಗೆ ನಾನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪ್ರಸ್ತಾಪಿಸುತ್ತಿಲ್ಲ. ಇದೇ ವಿಷಯವಾಗಿ ಬೇರೆ ಸದಸ್ಯರುಗಳು ಪ್ರಸ್ತಾಪಿಸಿರಬಹುದು; ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಇವತ್ತಿನ ದಿವಸ ಇದರ ಅವಶ್ಯಕತೆ ಇದೆ. ಈ ಹಿಂದೆ, ಇಡೀ ದೇಶದಲ್ಲಿಯೇ ನಮ್ಮ ರಾಜ್ಯವು ಅಕ್ರಮ ಗಣಿಗಾರಿಕೆಗೆ ಹೆಸರುವಾಸಿಯಾಗಿತ್ತು. ಎಲ್ಲಿ ಕ್ರಷರ್‌ಗಳು ಮತ್ತು ಎಂ–ಸ್ಯಾಂಡ್‌ಗಳಿವೆಯೋ ಅಲ್ಲೆಲ್ಲಾ ಅಕ್ರಮ ಗಣಿಗಾರಿಕೆ ನಡೆಯುತ್ತದೆ. ಇದರಿಂದ ನಮ್ಮ ರಾಜ್ಯಕ್ಕೆ ಕೆಟ್ಟ ಹೆಸರನ್ನು ತರುವ ಪ್ರಯತ್ನವಾಗುತ್ತದೆ. ಇದರಿಂದ ನಮ್ಮ ಸುರಕ್ಷತೆಯ ಬದುಕಿಗೆ ಧಕ್ಕೆಯಾಗುತ್ತದೆ. ಹೀಗಾಗಿ ಸರ್ಕಾರವು ಈ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಾ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಹೆಚ್.ಎಂ.ರಮೇಶ ಗೌಡ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾತನಾಡಲು ನನಗೆ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆಯಾದ ನಂತರ ಈ ರಾಜ್ಯದಲ್ಲಿನ ಗಣಿಗಾರಿಕೆ ಬಗ್ಗೆ ರಾಜ್ಯದ ಎಲ್ಲಾ ಜನತೆಗೆ ಗೊತ್ತಾಗಿತ್ತು. ಆ ನಂತರದಲ್ಲಿ ಗಣಿಗಾರಿಕೆ ಎಂದರೇನು, ಇದರಲ್ಲಿ ಬಹಳಷ್ಟು ಹಣವಿದೆ ಎಂದು ಇಡೀ ರಾಜ್ಯದ ಜನಕ್ಕೆ ಗೊತ್ತಾಯಿತು. ಪ್ರಸ್ತುತ ಸದನದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮಂತ್ರಿಗಳು ಉಪಸ್ಥಿತರಿಲ್ಲ.

**ಉಪಸಭಾಪತಿಯವರು:–** ನೀವು ಮಾತನಾಡುವುದನ್ನು ಮುಂದುವರೆಸಿ. ಅವುಗಳೆಲ್ಲವೂ ದಾಖಲೆಯಾಗುತ್ತವೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರನ್ನು ಒಳಗೊಂಡಂತೆ ಅನೇಕ ಸದಸ್ಯರು ಪ್ರಸ್ತುತ ವಿಷಯದ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ಅವರುಗಳು ತಿಳಿಸಿದ ವಿಚಾರಗಳನ್ನು ನಾನು ಪ್ರಸ್ತಾಪಿಸುವುದಿಲ್ಲ. ಮೊದಲು ಬಳ್ಳಾರಿ ಜಿಲ್ಲೆಯಲ್ಲಿ ಗಣಿಕಾರಿಕೆ ನಡೆಯಿತು. ನಂತರದಲ್ಲಿ ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಗಣಿಗಾರಿಕೆ ಪ್ರದೇಶಗಳಲ್ಲಿ ಸ್ಫೋಟ ಸಂಭವಿಸಿತು. ಎಲ್ಲಿ ಸ್ಫೋಟವಾಯಿತು ಎಂಬುದರ ಬಗ್ಗೆ ಮಾತ್ರವೇ ಕಳೆದ ಬಾರಿಯ ಅಧಿವೇಶನದಲ್ಲಿ ಸಾಕಷ್ಟು ಸದಸ್ಯರು ಪ್ರಸ್ತಾಪಿಸಿ, ಬಹಳ ದಿನಗಳವರೆಗೆ ಚರ್ಚೆ ಮಾಡಿದ್ದೇವೆ. ಆದರೆ, ಅವತ್ತಿನ ದಿವಸ ನಾವು ಕೇವಲ ಎರಡು ಜಿಲ್ಲೆಗಳ ಬಗ್ಗೆ ಮಾತ್ರವೇ ಮಾತನಾಡಿದ್ದೇವೆ. ಅಂದಿನ ದಿನ ಗೃಹ ಸಚಿವರು ಘಟನೆಗೆ ಸಂಬಂಧಪಟ್ಟಂತೆ ಇಬ್ಬರು ಪೊಲೀಸರ ಮೇಲೆ ಕ್ರಮ ಜರುಗಿಸುತ್ತೇನೆಂದು ಹೇಳಿ, ಅದೇ ರೀತಿಯಾಗಿ ಅವರ ವಿರುದ್ಧ ಕ್ರಮಗಳನ್ನು ಜರುಗಿಸಿದರು. ಇವತ್ತಿನ ದಿವಸ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿರುವ ಸ್ಥಳಗಳ ಸ್ಥಳೀಯ ಪೊಲೀಸ್ ಅಧಿಕಾರಿಗಳು ಮಾತ್ರವಲ್ಲದೇ ಕಂದಾಯ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಣಿ ಮತ್ತು ಭೂವಿಜ್ಞಾನ ಹಾಗೂ ಸಾರಿಗೆ ಇಲಾಖೆಗಳ ಅಧಿಕಾರಿಗಳು ಶಾಮೀಲಾಗಿರುತ್ತಾರೆ. ಅದರಲ್ಲೂ ಸಹ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರು, ರೌಡಿ ಶೀಟರ್‌ಗಳು ಅತೀ ಹೆಚ್ಚಾಗಿ ಗಣಿಗಾರಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಗಣಿಗಾರಿಕೆಗೆ ಸಂಬಂಧಿಸಿದಂತೆ ಸ್ಫೋಟವಾಯಿತು. ಆಗ ಇಲಾಖೆಯ ಮಂತ್ರಿಗಳು ಹೊಸದಾಗಿ ಇಲಾಖೆಯ ಪ್ರಭಾರವನ್ನು ವಹಿಸಿಕೊಂಡಿದ್ದರು. ಅವತ್ತಿನಿಂದ ಇವತ್ತಿನವರೆಗೆ ರಾಜ್ಯದಲ್ಲಿ ಅಕ್ರಮವಾಗಿ ಗಣಿಗಾರಿಕೆಯು ಎಲ್ಲೆಲ್ಲಿ ನಡೆಯುತ್ತಿದೆ ಎನ್ನುವುದರ ಬಗ್ಗೆ ಮತ್ತು ಇನ್ನಿತರೆ ಮಾಹಿತಿಯು ಇಲಾಖೆಯ ಮಂತ್ರಿಗಳಿಗಿದೆ. ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುವುದೇನೆಂದರೆ, ದೇವನಹಳ್ಳಿ ತಾಲ್ಲೂಕಿನಲ್ಲಿ ತೈಲಗೆರೆ ಮತ್ತು ಸೊಣ್ಣೇನಹಳ್ಳಿ ಎಂಬ ಗ್ರಾಮಗಳಿದ್ದು, ಇಲ್ಲಿಯೂ ಸಹ ಫಿಲ್ಟರ್ ಮರಳಿನ ಅಕ್ರಮ ಗಣಿಗಾರಿಕೆಯು ಅತೀ ಹೆಚ್ಚಾಗಿ ನಡೆಯುತ್ತಿದೆ. ಅಲ್ಲಿನ ಸರ್ವೇ ನಂ.110 ರಲ್ಲಿ ಅಕ್ರಮವಾಗಿ ಮರಳು ಫಿಲ್ಟರ್ ಗಣಿಗಾರಿಕೆಯು ನಡೆಯುತ್ತಿದ್ದು, ಅದು ಸರ್ಕಾರಿ ಸ್ವತ್ತಾಗಿರುತ್ತದೆ. ಕರ್ನಾಟಕ ಲೋಕಾಯುಕ್ತದವರು ಸ್ಥಳಕ್ಕೆ ಭೇಟಿ ನೀಡುವ ಮೂಲಕ ಸರ್ಕಾರಕ್ಕೆ ಚಾಟಿಯನ್ನು ಬೀಸಿದರು. ಹೀಗಾಗಿ ಸದರಿ ಅಕ್ರಮ ಮರಳು ಗಣಿಗಾರಿಕೆಯನ್ನು ಸ್ಥಗಿತಗೊಳಿಸಿದರು. ತಪ್ಪಿತಸ್ಥರಿಗೆ ದಂಡ ವಿಧಿಸಬೇಕು ಮತ್ತು ಅದನ್ನು ಜಾರಿಗೊಳಿಸಬೇಕೆಂದು ಈ ಹಿಂದಿನ ಗಣಿ ಮತ್ತು ಭೂವಿಜ್ಞಾನ ಸಚಿವರಿಗೆ ತಿಳಿಸಲಾಗಿತ್ತು. ಇವತ್ತಿನ ದಿವಸ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶಕ್ಕೆ ಒಬ್ಬ ದಕ್ಷ ಮತ್ತು ಪ್ರಾಮಾಣಿಕ ಪೊಲೀಸ್ ಅಧಿಕಾರಿಯು ಸ್ಥಳನಿಯುಕ್ತಿಗೊಂಡಿರುತ್ತಾರೆ. ಮಾನ್ಯ ನಾರಾಯಣಸ್ವಾಮಿಯವರು ಕೋಲಾರ ಜಿಲ್ಲೆಯ ಟೇಕಲ್ ಗ್ರಾಮದ ಬಗ್ಗೆ ಪ್ರಸ್ತಾಪಿಸಿದರು. ಇಲಾಖೆಯಲ್ಲಿ ದಕ್ಷ ಅಧಿಕಾರಿಯು ಪ್ರಭಾರ ವಹಿಸಿಕೊಂಡ ನಂತರ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಶೀಘ್ರವಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲಾಖೆಯ ಹಿರಿಯ ಅಧಿಕಾರಿಗಳು ನೀಡುವ ನಿರ್ದೇಶನದಂತೆ, ಅಧೀನಾಧಿಕಾರಿಗಳು ಕರ್ತವ್ಯ ನಿರ್ವಹಿಸುವುದಿಲ್ಲ. ಇಲಾಖೆಯ ಹಿರಿಯ ಅಧಿಕಾರಿಗಳಿಂದ ನಿರ್ದೇಶನ ಬಂದ ದಿನದಿಂದ ಒಂದೆರಡು ವಾರಗಳವರೆಗೆ ಅಕ್ರಮ ಗಣಿಗಾರಿಕೆಯನ್ನು ಸ್ಥಗಿತಗೊಳಿಸುತ್ತಾರೆ. 'ನಮ್ಮ ಇಲಾಖೆಗೆ ಬಹಳ ಶಿಸ್ತಿನ ಅಧಿಕಾರಿಯು ಬಂದಿದ್ದಾರೆ, ಹೀಗಾಗಿ ಸ್ವಲ್ಪ ದಿನಗಳ ಕಾಲ ಅಕ್ರಮ ಗಣಿಗಾರಿಕೆಯನ್ನು ಸ್ಥಗಿತಗೊಳಿಸಿ; ಎಲ್ಲವೂ ಸ್ವಲ್ಪ ತಣ್ಣಗಾಗಲಿ; ಆಮೇಲೆ ನೀವು ನಿಮ್ಮ ಕೆಲಸವನ್ನು ಮಾಡಿಕೊಳ್ಳಿ' ಎಂಬುದಾಗಿ ಪೊಲೀಸ್ ಮತ್ತು ಕಂದಾಯ ಇಲಾಖಾಧಿಕಾರಿಗಳೇ ಹೇಳುತ್ತಾರೆ. ಇದನ್ನು ನಾನು ನೋಡಿದ್ದೇನೆ. ಈ ರೀತಿಯ ಸಂಗತಿಗಳಾಗಬಾರದು. ಮಾನ್ಯ ಸಚಿವರು ಅಕ್ರಮ ಗಣಿಗಾರಿಕೆಯನ್ನು ಸ್ಥಗಿತಗೊಳಿಸಬೇಕು ಅಥವಾ ಗಣಿಗಾರಿಕೆ ಮಾಡುವವರಿಂದ ಬಾಂಡ್‌ನ್ನು ಪಡೆದು ಪರವಾನಿಗೆ ಕೊಡುವ ವಿಚಾರದಲ್ಲಿ ಸದಸ್ಯರು ಸಲಹೆಯನ್ನು ನೀಡಿ ಎಂದು ಈ ಮೊದಲೇ ತಿಳಿಸಿದರು. ಈ ರಾಜ್ಯದಲ್ಲಿ ಸುಮಾರು 2,000 ಗಣಿಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಕ್ಕೆ ಹಣ ಸಂದಾಯ ಮಾಡಿ, ಪರವಾನಿಗೆಯನ್ನು ಪಡೆದುಕೊಂಡಿವೇ ಅವುಗಳೇ ಮಾತ್ರವೇ ಕರ್ತವ್ಯ ನಿರ್ವಹಿಸುತ್ತಿವೆ. ಇದರ ಬಗ್ಗೆ ನಮ್ಮ ಬಳಿಯೂ ಸಹ ಸಾಕಷ್ಟು ಮಾಹಿತಿಗಳಿವೆ. ರಾಜ್ಯದ ವಿಜಯಪುರ ಜಿಲ್ಲೆಯ ಗಡಿ ಭಾಗದಲ್ಲಿ . . .

**ಉಪಸಭಾಪತಿಯವರು:–** ಮಾನ್ಯ ರಮೇಶ್‌ರವರೇ, ನಿಮ್ಮ ಭಾಷಣವನ್ನು ಬೇಗ ಮುಗಿಸಿ. ನಿಮಗೆ ಕೇವಲ 2–3 ನಿಮಿಷಗಳ ಕಾಲಾವಕಾಶವನ್ನು ಮಾತ್ರವೇ ನೀಡಲಾಗಿದೆ. ಪ್ರಸ್ತುತ ವಿಷಯದ ಮೇಲೆ ಚರ್ಚಿಸಲು ನೀಡಿರುವ ಪ್ರಸ್ತಾವದಲ್ಲಿ ನಿಮ್ಮ ಹೆಸರು ಇರುವುದಿಲ್ಲ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ರಾಜ್ಯದ ವಿಜಯಪುರ ಜಿಲ್ಲೆಯ ಗಡಿ ಭಾಗದಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆಯು ನಡೆಯುತ್ತಿದೆ. ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರು ಮತ್ತು ರೌಡಿ ಶೀಟರ್‌ಗಳು ಅಕ್ರಮ ಗಣಿಗಾರಿಕೆಯನ್ನು ಮಾಡಿ ಯಥೇಚ್ಛವಾದ ಹಣವನ್ನು ಪಡೆದು, ಬಡವರ ಮೇಲೆ ದಬ್ಬಾಳಿಕೆಯನ್ನು ಮಾಡುತ್ತಾರೆ. ಕೊನೆಯಲ್ಲಿ ನನಗೆ ಮಾತನಾಡಲು ಅವಕಾಶವನ್ನು ನೀಡಿದ್ದರಿಂದ ಈ ವಿಚಾರದ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ವಿಚಾರದಲ್ಲಿನ ನನ್ನ ಕಳಕಳಿ ಏನೆಂದರೆ, ಕಾನೂನುಬದ್ಧವಾಗಿ ಯಾರು ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ; ಮನೆಗಳನ್ನು ನಿರ್ಮಿಸುವುದಕ್ಕೆ, ಸರ್ಕಾರಿ ಕಾಮಗಾರಿಗಳನ್ನು ಮಾಡಲು ಈ ವಸ್ತುಗಳು ಅವಶ್ಯವಾಗಿ ಬೇಕಾಗುತ್ತದೆ. **(ಮುಂದು)**

**(434)/16–3–2021/5–30/ಎಲ್‌ಎಂ/ಬಿಎನ್‌ಎಸ್**

**ಶ್ರೀ ಎಚ್.ಎಂ.ರಮೇಶ್‌ಗೌಡ(ಮುಂದು):–**

ಅದಕ್ಕೂ ಸಹ ಅವಕಾಶ ಮಾಡಿಕೊಡಬೇಕಾಗುತ್ತದೆ. ಯಾರು ಅಕ್ರಮವಾಗಿ, ಕಾನೂನು ಬಾಹಿರವಾಗಿ, ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು, ಅಧಿಕಾರಿಗಳಿಗೆ **monthly** ಸಂದಾಯ ಮಾಡಿ ಗಣಿಗಾರಿಕೆಯನ್ನು ಯಾರು ಮಾಡುತ್ತಿದ್ದಾರೆ ಅವರ ಮೇಲೆ ಉಗ್ರವಾದ ಕಾನೂನು ಕ್ರಮವನ್ನು ಜರುಗಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರ ಅವರ ಮೇಲೆ ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರಗೇಶ್ ಆರ್.ನಿರಾಣಿ(ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ವಿಷಯವಾಗಿ ನಿಯಮ 68ರಲ್ಲಿ ಪ್ರತಿ ಪಕ್ಷದ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್‌ರವರು, ಶ್ರೀ ಎಂ.ನಾರಾಯಣಸ್ವಾಮಿಯವರು, ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು, ನಸೀರ್ ಅಹ್ಮದ್‌ರವರು, ಶ್ರೀ ಬಸವರಾಜ ಪಾಟೀಲ್ ಇಟಗಿಯವರು, ಕೆ.ಹರೀಶ್ ಕುಮಾರ್‌ರವರು, ಶ್ರೀ ಆರ್.ಪ್ರಸನ್ನಕುಮಾರ್‌ರವರು, ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ಮತ್ತು ಶ್ರೀ ಎಚ್.ಎಂ.ರಮೇಶ್‌ಗೌಡರವರು, ಒಟ್ಟು 9 ಜನ ಸದಸ್ಯರು ಸವಿಸ್ತಾರವಾಗಿ ಮಾತನಾಡಿ ಅನೇಕ ಸಲಹೆ-ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಇಲಾಖೆ ವತಿಯಿಂದ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರದಲ್ಲಿ ನಡೆದ ಘಟನೆ ಹಿನ್ನೆಲೆಯಲ್ಲಿ ಮಾತನಾಡಿ ಕೊಟ್ಟಿರುವಂತಹ ಅಂಕಿ-ಅಂಶಗಳು, ಸಲಹೆಗಳು ಬಹಳ ಸೂಕ್ತವಾಗಿವೆ ಎಂದು ನಾನು ಅಂದುಕೊಂಡಿದ್ದೇನೆ. ಆ ಎರಡು ಘಟನೆಗಳು ನಡೆದ ದಿವಸವೇ ಶಿವಮೊಗ್ಗಕ್ಕೆ ಮತ್ತು ಚಿಕ್ಕಬಳ್ಳಾಪುರಕ್ಕೆ ಹೋಗಿ ನಾನು ಭೇಟಿ ಕೊಟ್ಟಿದ್ದೇನೆ. ಚಿಕ್ಕಬಳ್ಳಾಪುರದ ಘಟನೆ ನಡೆದ ದಿವಸ ನಾಲ್ಕು ಗಂಟೆಗೆ ವಿಮಾನ ನಿಲ್ದಾಣದಲ್ಲಿಯೇ ಇದ್ದೆ. ಆ ಘಟನೆ 12-30 ಗಂಟೆಗೆ ನಡೆದಿದೆ. ಅವತ್ತು ಆ ಸುದ್ದಿ ನಮಗೆ ಬರಲಿಲ್ಲ. ನಾನು ದೆಹಲಿಯಲ್ಲಿ ಲ್ಯಾಂಡ್ ಆದ ತಕ್ಷಣವೆ ನನಗೆ ಫೋನ್ ಬಂತು. ಮುಂದಿನ ವಿಮಾನದಿಂದಲೇ ವಾಪಸ್ ಬಂದು ಚಿಕ್ಕಬಳ್ಳಾಪುರಕ್ಕೆ ಭೇಟಿ ಕೊಟ್ಟು ಜಿಲ್ಲಾಧಿಕಾರಿಗಳ ಜೊತೆಯಲ್ಲಿ, ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆಯಲ್ಲಿ ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳಿಂದ ಮಾಹಿತಿಯನ್ನು ತೆಗೆದುಕೊಂಡು ಎಲ್ಲಿ ಹೇಗೆ ನಡೆಯಿತು ಎನ್ನುವುದನ್ನು ತಿಳಿದುಕೊಂಡು ಅದರ ಬಗ್ಗೆ ತನಿಖೆ ಮಾಡಿಸುತ್ತಿದ್ದೇವೆ. ಈ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದನ್ನು ನಾನೇ ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಎಲ್ಲಾ ಕಡೆಯೂ mines owners, ಜಲ್ಲಿ crushers, sand mining ಬಗ್ಗೆ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಕಾನೂನು ಬಾಹಿರವಾಗಿ ನಡೆದುಕೊಳ್ಳುತ್ತಿದ್ದಾರೆ. ಕ್ರಷರ್ ಮಾಲೀಕರು ಓಪನ್ ಆಗಿಯೇ ತಿಂಗಳಿಗೆ ಇಷ್ಟು ಕೊಡುತ್ತೇವೆ ಎಂದು ಹೇಳುತ್ತಾರೆ. ಬಾಗಲಕೋಟೆಯಲ್ಲಿ ಹಾಗೆ ಹೇಳಿದಾಗ ಇಬ್ಬರು ಅಧಿಕಾರಿಗಳನ್ನು ತಕ್ಷಣ ಸಸ್ಪೆಂಡ್ ಮಾಡಿದ್ದೇನೆ. ಬೇರೆ ಜಿಲ್ಲೆಗೆ ಹೋಗಿ ನೋಡಿದಾಗ ಆಗ ಅಲ್ಲಿಯು ಅದೇ ಪರಿಸ್ಥಿತಿ ಇತ್ತು. ನಾನು ಇರುವ ಸತ್ಯವನ್ನು ಒಪ್ಪಿಕೊಂಡು ಅದನ್ನು ಹೇಗೆ ಸುಧಾರಣೆ ಮಾಡಬೇಕು ಎನ್ನುವುದನ್ನು ಹೇಳುತ್ತೇನೆ. ನಮ್ಮಲ್ಲಿ ಕೇವಲ 60% ಅಧಿಕಾರಿಗಳಿದ್ದಾರೆ. ಇನ್ನು 40% ಅಧಿಕಾರಿಗಳ ಕೊರತೆ ಇರುವುದರಿಂದ ಅವರನ್ನು ನೇಮಕಾತಿ ಮಾಡಿಕೊಳ್ಳಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ mines owner ಗಳನ್ನು sand ಗೆ ಸಂಬಂಧಿಸಿದಂತೆ Association, ಜಿಲ್ಲಾ ಅಧ್ಯಕ್ಷರು ಮತ್ತು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Association ರಾಜ್ಯದ ಮಟ್ಟದ ಅಧ್ಯಕ್ಷರು ಮತ್ತು Association, ಎಲ್ಲರನ್ನೂ ಕರೆಯಿಸಿ, ನಿಮ್ಮ ಜಿಲ್ಲೆಯಲ್ಲಿ ಗಣಿಗಾರಿಕೆ ಮಾಡುತ್ತಿರುವಂತವರಿಗೆ ಇವತ್ತಿನಿಂದ ಯಾವ ಅಧಿಕಾರಿಗಳಿಗೂ ಹಣವನ್ನು ಕೊಡಬೇಡಿ ಎಂದು ಕಿವಿ ಮಾತನ್ನು ಹೇಳಿ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ನಿಮಗೆ ಏನಾದರೂ ಸಮಸ್ಯೆಗಳಿದ್ದರೆ ನನಗೆ ಹೇಳಿ, ನಮ್ಮ ಇಲಾಖೆಯ ಇಬ್ಬರ ಫೋನ್ ನಂಬರ್‌ಗಳನ್ನು ಅವರಿಗೆ ಕೊಟ್ಟಿದ್ದೇವೆ. ನನಗೆ ನೇರವಾಗಿ ಫೋನ್ ಮಾಡಿ, ನಾನು ಬೇರೆ ಕೆಲಸದಲ್ಲಿದ್ದರೆ, phone call attend ಮಾಡದಿದ್ದರೆ, ಎರಡನೆ, ಮೂರನೇ ನಂಬರಿಗೆ ಇಂತವರಿಗೆ ಫೋನ್ ಮಾಡಿ ಹೇಳಿ. ಯಾವ ಅಧಿಕಾರಿಯಾದರೂ ಹಣ ಕೇಳಿದರೆ, ಇಂತಹ ಅಧಿಕಾರಿ ನಮಗೆ ಹಣ ಕೇಳುತ್ತಿದ್ದಾರೆ ಎಂದು ನೇರವಾಗಿ ನನಗೆ ಹೇಳಿ ನಾನು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಅವರು ಎಷ್ಟೇ ದೊಡ್ಡ ವ್ಯಕ್ತಿಗಳಾಗಿರಲಿ, ಅವರ ಹಿನ್ನೆಲೆ ಏನೇ ಇರಲಿ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆಂದು ಸದನಕ್ಕೆ ಹೇಳಬಯಸುತ್ತೇನೆ. ಇಷ್ಟು ಹೇಳಿದರೂ ಹಣ ಕೊಟ್ಟರೆ ತಪ್ಪು ಯಾರದಾಗುತ್ತದೆ? ಈಗ ಈ ರೀತಿಯಾಗಿದೆ, ಮುಂದಾದರೂ ಎಷ್ಟು ಸಾಧ್ಯವೋ ಅಷ್ಟು ಭ್ರಷ್ಟಾಚಾರ ರಹಿತವಾದ ಸರ್ಕಾರ ಮತ್ತು ನನ್ನ ಇಲಾಖೆಯನ್ನು ನಡೆಸಬೇಕು ಎನ್ನುವುದು ನಮ್ಮ ಕನಸು ಮತ್ತು ಗುರಿಯಾಗಿದೆ. ಇಡೀ ಜಗತ್ತೇ ಹೊಲಸಾಗಿದೆ ಎಂದು ಇಡೀ ಜಗತ್ತನ್ನೇ ನಾವು ಸ್ವಚ್ಛ ಮಾಡಲು ಆಗುವುದಿಲ್ಲ. ಕನಿಷ್ಠ ನಾವು ಕೂಡುವ ಖುರ್ಚಿ, ದೇವರ ಮನೆ, ವರಾಂಡವನ್ನಾದರೂ ಸ್ವಚ್ಛ ಮಾಡಿಕೊಳ್ಳಬಹುದು. ಆ ರೀತಿಯಾಗಿ ನಮ್ಮ ಇಲಾಖೆಯಲ್ಲಿ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಸರಿಮಾಡಿಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ, ಅದಕ್ಕಾಗಿ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಜಲ್ಲಿ, ಕ್ರಷರ್‌ನಲ್ಲಿ ಸಮಸ್ಯೆ ಎಂದರೆ DGMS (Directorate General of Mines Safety) ನ ಪರವಾನಗಿ ತೆಗೆದುಕೊಂಡ ಮೇಲೆಯೇ ಗಣಿಗಾರಿಕೆಯನ್ನು ಮಾಡಬೇಕು ಎನ್ನುವ ಸುತ್ತೋಲೆಯನ್ನು ನಮ್ಮ ಹಿರಿಯ ಅಧಿಕಾರಿಗಳು ಕಳುಹಿಸಿದ್ದಾರೆ. ನಮ್ಮ ಗಣಿಗಾರಿಕೆ ಇಲಾಖೆಯಲ್ಲಿ ಐದಾರು ಇಲಾಖೆಗಳು ಬರುತ್ತವೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸುಸೂತ್ರವಾಗಿ ನಡೆಯಬೇಕಾದರೆ ಅರಣ್ಯ ಇಲಾಖೆ, ಗೃಹ ಇಲಾಖೆ, ಸಾರಿಗೆ ಇಲಾಖೆ, ವಾಯು ಮಾಲಿನ್ಯ ನಿಯಂತ್ರಣ ಇಲಾಖೆ ಮತ್ತು ಕಂದಾಯ ಇಲಾಖೆ. ಈ ಎಲ್ಲಾ ಇಲಾಖೆಗಳಿಂದ ಎನ್.ಓ.ಸಿ. ಬಂದಮೇಲೆಯೇ ಗಣಿಗಾರಿಕೆಯನ್ನು ಪ್ರಾರಂಭ ಮಾಡಬೇಕಾಗುತ್ತದೆ. ಇವತ್ತು ಗಣಿಗಾರಿಕೆಗೆ ಲೈಸನ್ಸ್ ತುಂಬಾ ತಡವಾಗಿ ಸಿಗುತ್ತದೆ. ಒಬ್ಬ ವ್ಯಕ್ತಿ ಗಣಿಗಾರಿಕೆ ಮಾಡಬೇಕೆಂದು ಲೈಸನ್ಸ್‌ಗೆ ಅರ್ಜಿ ಹಾಕಿಕೊಂಡರೆ, ಆ ಲೈಸನ್ಸ್ ಅವನ ಮಕ್ಕಳಿಗೆ ಸಿಗುತ್ತದೆ. ಇಷ್ಟು ತಡವಾಗಿ ಲೈಸನ್ಸ್ ಕೊಡುವುದನ್ನು ಮತ್ತು ಹಿಂದೆ ನಡೆದುಕೊಂಡು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿರುವ ಕಾನೂನು ಬಾಹಿರ ಚಟುವಟಿಕೆಗಳನ್ನು ತಪ್ಪಿಸಲು ನಾವು New Mining Policy ಯನ್ನು ತರುತ್ತಿದ್ದೇವೆ. ನಾನು ಹಿಂದೆ 5 ವರ್ಷ ಕೈಗಾರಿಕಾ ಇಲಾಖೆಯ ಸಚಿವನಾಗಿ ಕೆಲಸ ಮಾಡಿದ ಅನುಭವದ ಹಿನ್ನೆಲೆಯಲ್ಲಿ ಮತ್ತು ನಾನೊಬ್ಬ ಕೈಗಾರಿಕೋದ್ಯಮಿಯಾದ ಅನುಭವದ ಹಿನ್ನಲೆಯಲ್ಲಿ ನಮ್ಮಲ್ಲಿರುವ mine owner ಗಳಿಗೆ ಬಹಳ ಸರಳೀಕರಣಗೊಂಡು ಲೈಸೆನ್ಸ್ ಸಿಗಬೇಕು. ಯಾವುದೆ ಅಧಿಕಾರಿಯಿಂದ harassment ಆಗಬಾರದು, ನಮ್ಮ ಸರ್ಕಾರಕ್ಕೆ ಒಳ್ಳೆಯ ರೀತಿಯಲ್ಲಿ ಕಂದಾಯ ಬರಬೇಕು. ಇದು ಅಲ್ಲದೆ employment generation ಜಾಸ್ತಿಯಾಗಬೇಕು. ನಮ್ಮ Mining Policy ಅಕ್ಕ-ಪಕ್ಕದ ರಾಜ್ಯದವರಿಗೆ ಮಾರ್ಗದರ್ಶಕವಾಗುವ ರೀತಿಯಲ್ಲಿ ಇರಬೇಕು. ಆ ರೀತಿಯಲ್ಲಿ ಈಗಾಗಲೇ ಡ್ರಾಫ್ಟ್ ತಯಾರು ಮಾಡಿದ್ದೇನೆ. ಅದನ್ನು ಹಾಗೆ ಜಾರಿಗೆ ತರುವುದಿಲ್ಲ. ಇನ್ನು 15 ದಿನಗಳಲ್ಲಿ ಅದನ್ನು ಎಲ್ಲರಿಗೂ ಹಂಚಿಕೆ ಮಾಡಲಾಗುತ್ತದೆ, ಅಂತಿಮ ಮಾಡುವುದಕ್ಕಿಂತ ಮುಂಚೆ ಸಾಧ್ಯವಾದರೆ ಪ್ರತಿಪಕ್ಷದ ನಾಯಕರಿಗೂ ನಾನು ಅದರ ಕಾಪಿಯನ್ನು ಕಳುಹಿಸುತ್ತೇನೆ. ತಾವು ಏನಾದರೂ ಸಲಹೆ ಕೊಡುವುದಿದ್ದರೆ ಕೊಡಿ. ಅದರಲ್ಲಿ ಏನಾದರೂ ತೆಗೆದು ಹಾಕುವುದಿದ್ದರೆ, ಮತ್ತೆ ಸೇರಿಸುವುದು ಇದ್ದರೆ ಹೇಳಿ ನಾನು ತಮ್ಮ ಸಲಹೆಗಳನ್ನು ತೆಗೆದುಕೊಳ್ಳುತ್ತೇನೆ. ಈ New Mining Policy ಯನ್ನು ತರುವುದರಿಂದ ಸಾಕಷ್ಟು ನ್ಯೂನ್ಯತೆಗಳನ್ನು ಸರಿಪಡಿಸಬಹುದು. ಒಂದೇ ರಾಜ್ಯದಲ್ಲಿ ಎರಡು ಕಾನೂನು ಇವೆ. ಪಟ್ಟಾ ಲ್ಯಾಂಡ್‌ಗೆ ಒಂದು ಕಾನೂನು ಇದೆ, ಸರ್ಕಾರಿ ಲ್ಯಾಂಡ್‌ಗೆ ಒಂದು ಕಾನೂನು ಇದೆ. ಇಳಕಲ್‌ನಿಂದ ರಫ್ತಾಗುವ ಗ್ರ್ಯಾನೈಟ್‌ಗೆ 1500 ಡಾಲರ್‌ಗೆ ಮಾರುವುದಕ್ಕೂ 1000 ರೂಪಾಯಿಗಳು ರಾಯಲ್ಟಿ ಇದೆ. 300 ಡಾಲರ್‌ಗೆ ಮಾರುವಂತಹ ಗ್ರ್ಯಾನೈಟ್‌ಗೂ 1000 ರೂಪಾಯಿಗಳು ರಾಯಲ್ಟಿ ಇದೆ. ಅಲ್ಲಿ ವ್ಯತ್ಯಾಸವಾಗುತ್ತಿದೆ. Light granite ಎಂದು ಏನು ಹೇಳುತ್ತಾರೆ, ಅದರ ವ್ಯಾಪಾರ ಮಾಡುವವರಿಗೆ ತುಂಬಾ burden ಆಗುತ್ತಿದೆ. ಇವುಗಳನ್ನು ಸರಿಮಾಡಬೇಕಾಗಿದೆ. ಪಟ್ಟಾ ಭೂಮಿಯಲ್ಲಿ ಗಣಿಗಾರಿಕೆ ಮಾಡುವವರಿಗೆ bank guarantee/ deposit ತೆಗೆದುಕೊಳ್ಳುವುದು ಮತ್ತು ಸರ್ಕಾರಿ ಭೂಮಿಯಲ್ಲಿ ಗಣಿಗಾರಿಕೆಯನ್ನು ಮಾಡುವವರಿಗೂ same deposit ತೆಗೆದುಕೊಳ್ಳುವುದು. ಇದರಲ್ಲಿ ವ್ಯತ್ಯಾಸವಿದೆ. ಪಟ್ಟಾ ಲ್ಯಾಂಡ್‌ನಲ್ಲಿ ಗಣಿಗಾರಿಕೆ ಮಾಡುವವರು ಬಂಡವಾಳವನ್ನು ಹಾಕಿ ಗಣಿಗಾರಿಕೆಯನ್ನು ಮಾಡುತ್ತಿರುತ್ತಾರೆ. ಸರ್ಕಾರಿ ಭೂಮಿಯಲ್ಲಿ ಗಣಿಗಾರಿಕೆ ಮಾಡುವವರು ಬಂಡವಾಳವನ್ನು ಹಾಕಿರುವುದಿಲ್ಲ. ಅದರಲ್ಲಿ ಸ್ವಲ್ಪ ಬದಲಾವಣೆ ತರಬೇಕಾಗಿದೆ. ಇನ್ನು double taxation ಆಗುವಂತಹ ಪರಿಸ್ಥಿತಿಯು ಇದೆ. ಗಣಿಗಾರಿಕೆ ಮಾಡುವಲ್ಲಿಯು ರಾಯಲ್ಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳಲಾಗುತ್ತದೆ. Final bill ಆಗುವಾಗಲೂ ಕೆಲವು ಸಾರಿ ರಾಯಲ್ಟಿ ತೆಗೆದುಕೊಳ್ಳುತ್ತೇವೆ. ಈ ರೀತಿಯಿಂದ ಡಬಲ್ ಆಗುವ ಅವಕಾಶವಿರುತ್ತದೆ. ಇವೆಲ್ಲವನ್ನು ತಪ್ಪಿಸುವ ಸಲುವಾಗಿ New Mining Policy ಯಲ್ಲಿ ಹೊಸ ವಿಚಾರಗಳನ್ನು ಮತ್ತು ತಾವು ಕೊಟ್ಟಿರುವ ಸಲಹೆಗಳನ್ನು ಅದರಲ್ಲಿ ಸೇರಿಸಿ ತರಲಾಗುತ್ತದೆ. Mining Policy ಯಲ್ಲಿ license ತೆಗೆದುಕೊಳ್ಳಬೇಕಾದರೆ ಏನು harassment ಆಗುತ್ತದೆ ಅದನ್ನು ತಪ್ಪಿಸಲು ನಮ್ಮ ಇಲಾಖೆಯೇ ಗಣಿಗಾರಿಕೆ ಮಾಡುವವರ ಮನೆ ಬಾಗಿಲಿಗೆ ಹೋಗಬೇಕು ಎನ್ನುವ ಸಲುವಾಗಿ 4 ಡಿವಿಷನ್‌ಗಳಲ್ಲಿ Mining Adalath ಮಾಡುತ್ತಿದ್ದೇವೆ. 15 ದಿವಸಗಳಿಗೆ ಒಂದು ಸಾರಿ ನಾಲ್ಕು ಡಿವಿಷನ್‌ಗಳಲ್ಲಿ ಒಂದು ಮತ್ತು ಒಂದು ಕೋಸ್ಟಲ್ ಡಿವಿಷನ್‌ಗಾಗಿ ಮಂಗಳೂರಿನಲ್ಲಿ ಒಂದು ಕಡೆ ಒಟ್ಟು 5 ಕಡೆಗಳಲ್ಲಿ Mining Adalath ಮಾಡುವುದರಿಂದ ಅವರು ಮುಂಚಿತವಾಗಿಯೇ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ, ಕಂದಾಯ ಇಲಾಖೆಗೆ ಸಂಬಂಧಪಟ್ಟ, ಕೆಇಬಿ ಗೆ ಸಂಬಂಧಪಟ್ಟ, ಪರಿಸರ ಮಾಲಿನ್ಯ ನಿಯಂತ್ರಣ ಇಲಾಖೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಅಲ್ಲಿಯೇ distribute ಮಾಡಿ ಆ ಜಾಗದಲ್ಲಿಯೇ ಎಲ್ಲವನ್ನು ಇತ್ಯರ್ಥ ಮಾಡುವ ಕಡೆಗೆ ಗಮನ ಹರಿಸುತ್ತಿದ್ದೇವೆ. ಇದರಿಂದಲೂ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದ ಹಾಗೆ ಆಗುತ್ತದೆ. ಏಕೆ ಮಾಡುವುದಿಲ್ಲ ಎನ್ನುವುದಕ್ಕೆ ಅವರು ನೇರವಾಗಿಯೇ ನಮ್ಮ ಮುಂದೆ ಉತ್ತರವನ್ನು ಕೊಡಬೇಕು. ಆಗುವುದಿಲ್ಲ ಎಂದರೆ ಕಾರಣ ಹೇಳಬೇಕು. ಆಗುತ್ತದೆ ಎನ್ನುವುದಾದರೆ ಎಷ್ಟು ದಿನಗಳಲ್ಲಿ ಮಾಡುತ್ತಾರೆ ಎನ್ನುವುದನ್ನು ಹೇಳಬೇಕು. ಈ ರೀತಿ ಮಾಡುವುದರಿಂದಲೂ ಸಾಕಷ್ಟು ಭ್ರಷ್ಟಾಚಾರವನ್ನು ಕಂಟ್ರೋಲ್ ಮಾಡಲು ಸಾಧ್ಯವಾಗುತ್ತದೆ. ಇದರ ಜೊತೆಗೆ, Single Window System ಮಾಡುತ್ತಿದ್ದೇವೆ. 6-7 ಇಲಾಖೆಗಳು ಬರುತ್ತವೆ ಅವುಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ Industrial Department ನಲ್ಲಿ Single Window System ಮತ್ತು High Level Committee ಎಂದು ಮಾಡುತ್ತೇವೆ. ಕೆಲವೊಂದು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪ್ರತಿ ತಿಂಗಳು Single Window ವ್ಯವಸ್ಥೆ ಮಾಡುವುದು, ಈಗ ಇದೆ ಆದರೆ ಅದು ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ. ಅದಕ್ಕೆ fine tune up ಮಾಡಿ ಕಾನೂನನ್ನು ಸರಳೀಕರಣಗೊಳಿಸುವುದು ಮತ್ತು ಅದರಲ್ಲಿ ಜನಪ್ರತಿನಿಧಿಗಳನ್ನು ಸೇರಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಏಕೆಂದರೆ ಅದು effective ಆಗಿ ಮಾಡುತ್ತಿದ್ದೇವೆ. ಎಲ್ಲಾ ಇಲಾಖೆಗಳು ಒಂದೇ ಕಡೆ ಇದ್ದಾಗ ಪ್ರತಿಯೊಂದು ಇಲಾಖೆಗೆ ಹೋಗಿ ಎನ್.ಓ.ಸಿ. ಯನ್ನು ತರುವುದು ತಪ್ಪುತ್ತದೆ. ಇದನ್ನು ಕಾರ್ಯರೂಪಕ್ಕೆ ತರುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಯತ್ನವನ್ನು ಮಾಡುತ್ತಿದ್ದೇವೆ. ಗಣಿಗಾರಿಕೆ ಮಾಡಬೇಕಾದರೆ foreman ಬೇಕು, trained Manager ಬೇಕು, ಒಂದು ಅಥವಾ ಎರಡು ಎಕರೆಯಲ್ಲಿ ಗಣಿಗಾರಿಕೆ ಮಾಡುವವರಿಗೆ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತದೆ. ಅವರಿಗೆ affordable ಆಗುವುದಿಲ್ಲ. ಒಂದು ಎಕರೆಯಲ್ಲಿ ಗಣಿಗಾರಿಕೆ ಮಾಡಬೇಕಾದರೆ 25 ಲಕ್ಷ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಇಷ್ಟು ಖರ್ಚಾಗುತ್ತದೆ ಎನ್ನುವ ಸಲುವಾಗಿ ಎಲ್ಲವನ್ನು ಅಭ್ಯಾಸ ಮಾಡಿ ಕರ್ನಾಟಕ ರಾಜ್ಯದಲ್ಲಿ ಒಂದು Mining University ಯನ್ನು ಹಂತ-ಹಂತವಾಗಿ ಮಾಡಬೇಕು. ಈಗ ತಕ್ಷಣಕ್ಕೆ School of Mining ಮಾಡಬೇಕೆಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. School of Mining ಮಾಡುವುದರಿಂದ Certified Course in Mining ಎನ್ನುವುದು ಒಂದು ವಾರ, ಮೂರು ತಿಂಗಳು ಅಥವಾ ಒಂದು ವರ್ಷದ ತರಬೇತಿ ಇರಬಹುದು. Size of mining ಮೇಲೆ ಅವರಿಗೆ ತರಬೇತಿ ಕೊಡುವುದರಿಂದ ತಕ್ಷಣ trained workers ಸಿಗುತ್ತಾರೆ. ಹಾಗೇ ರಾಜ್ಯದಲ್ಲಿ ನಾಳೆಗೆ insist ಮಾಡಿದರೂ trained Manager ಸಿಗುವುದಿಲ್ಲ, foreman ಸಿಗುವುದಿಲ್ಲ. ಕೋಸ್ಟಲ್ ಏರಿಯಾದಲ್ಲಿ 160 ಗಣಿಗಾರಿಕೆಗೆ ಅನುಮತಿ ಕೊಟ್ಟರೆ ಆ 160 ಗಣಿಗಳಿಗೂ skilled workers for blasting ಸಿಗುವುದಿಲ್ಲ.

**(435)16-03-2021(05-40)ಬಿಎಸ್‌ಆರ್-ಬಿಎನ್‌ಎಸ್**

**ಶ್ರೀ ಮುರುಗೇಶ್ ಆರ್. ನಿರಾಣಿ (ಮುಂದು):-**

ಇದನ್ನು ಹಂತ-ಹಂತವಾಗಿ ಮಾಡಬೇಕಾಗಿದ್ದು, Mines and Geology Department ಬಹಳ challenging ಆಗಿದೆ. ಒಟ್ಟಾರೆ ಇದೆಲ್ಲವನ್ನು ಮಾಡಿಕೊಂಡು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೇವೆ. ಇವತ್ತಿನ mining ಬಗ್ಗೆ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರಿಗೆ ಹೇಳಿದ್ದು, ನಿಜವಾಗಿ ಬಹಳ ತೊಂದರೆ ಇದೆ. Mining ಮಾಡುವವರು ಐದತ್ತು ಕೋಟಿ ರೂಪಾಯಿಗಳನ್ನು ಹಾಕಿ crushers ಹಾಕುತ್ತಿದ್ದಾರೆ. ಈಗ ಅವರಿಗೆ ಒಂದು ತಿಂಗಳಿನಿಂದ ನಿಂತು ಹೋಗಿದ್ದು, ಮಾರ್ಚ್ ಕೊನೆಗೆ ಅವರು loan repayment ಮಾಡದಿದ್ದರೆ ಎಲ್ಲವೂ NPA (Non-Performing Asset) ಆಗಿಬಿಡುತ್ತದೆ. ಅಲ್ಲಿರುವ ತಿಂಡಿಇಜಡಿ ಗಳಿಗೆ payment ಮಾಡದಿದ್ದರೆ ಅದೊಂದು ಕಷ್ಟ ಶುರುವಾಗುತ್ತದೆ. ಇವೆರಡನ್ನೂ ಇಟ್ಟುಕೊಂಡು DGMS (Directorate General of Mines

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Safety) license ತೆಗೆದುಕೊಂಡ ಮೇಲೆ ಪ್ರಾರಂಭ ಮಾಡಬೇಕೆಂದರೆ ಟುಟುಟಣಾಟ three months ನಲ್ಲಿ ಅವರಿಗೆ license ಸಿಗುವುದಿಲ್ಲ. ಇದು ವಸ್ತುಸ್ಥಿತಿಯಾಗಿದ್ದು, ಸಾವಿರಾರು ಚಿ೦೦ಟುಭಿಚಿಣುಂಟ ಒಂದೇ ಸಾರಿ ಬರುತ್ತದೆ. ಅದನ್ನು ಸಹ online ನಲ್ಲಿಯೇ ಮಾಡಬೇಕಾಗಿದ್ದು, ಒಂದೆರಡು ಎಕರೆಗಳಿಗೆ online ನಲ್ಲಿ application ಸಹ inward ಆಗುವುದಿಲ್ಲ. ಇದು practical problem ಆಗಿದೆ. ಇವೆಲ್ಲವನ್ನು ಸರಳೀಕರಣಗೊಳಿಸಿ, new software adopt ಮಾಡಲು ಕಾಲಾವಕಾಶ ಸಿಗುತ್ತದೆ. ಇದೆಲ್ಲವನ್ನು ಮಾಡಲು 3 ತಿಂಗಳಲ್ಲಿ ಅವರು license ತೆಗೆದುಕೊಂಡು ಪ್ರಾರಂಭಿಸಿದರೆ, ಮುಂದಿನ rainy season ನಲ್ಲಿ 6 ತಿಂಗಳು ಸಮಯ ಹೋಗಿರುತ್ತದೆ. Entire revenue ಸ್ವಲ್ಪ ಹೆಚ್ಚು ಕಡಿಮೆ ಬಂದರೂ ಸರ್ಕಾರದ ಆದಾಯದ ಬಗ್ಗೆ ನಾನು ಮಾತನಾಡುತ್ತಿಲ್ಲ. ಆದರೆ ಒಟ್ಟಾರೆ ಇರುವ development work ಹಾಗೂ mine owner ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ. ಐದಾರು ಜನ ಸತ್ತರು ಬರೆದು ಹೇಳುತ್ತೇವೆ, ಆದರೆ mine owner ಗಳೇ ಸಾಯುವ ಪರಿಸ್ಥಿತಿ ಬರುತ್ತದೆ. ನಮ್ಮ ಬಾಗಲಕೋಟೆ ಜಿಲ್ಲೆ ಮಾಜಿ ಎಂಎಲ್ಎ ಆದ ಶ್ರೀ ಅಶೋಕ್ ಪಟ್ಟಣ ರವರ ಸಂಬಂಧಿಕರು suicide note ಬರೆದು suicide ಮಾಡಿಕೊಳ್ಳಲು ಪ್ರಯತ್ನ ಪಟ್ಟು, ಕೊನೆಗೆ ಉಳಿದರು. ಅಂದರೆ ಇಂತಹ ಸಮಸ್ಯೆಗಳು ಟುಟುಟಿ೦ ನಲ್ಲಿ ಆಗುತ್ತವೆ. ಈ ರೀತಿ ಜೀವಂತವಾಗಿ ಇರುವವರು ಜಜಿಚಿಣು ಟಿ೦ಣಜ ಬರೆದಿಟ್ಟು ಸಾಯುವ ಪರಿಸ್ಥಿತಿ mine owner ಗಳಿಗೆ ಇದೆ. ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು, ಸಮಾಜಕ್ಕೂ ಹಾನಿಯಾಗಿರಬಾರದು, ಸರ್ಕಾರಕ್ಕೂ revenue ಬರಬೇಕು, ಕಟ್ಟಕಡೆಯ ಮನುಷ್ಯನಿಗೆ ಕಡಿಮೆ ದರದಲ್ಲಿ sand ಇರಬಹುದು, ಜಲ್ಲಿ crusher ಇರಬಹುದು, ಇವೆಲ್ಲವೂ ಸಿಗುವ ಕಡೆ ಗಮನಹರಿಸಬೇಕಾದ್ದು ಸರ್ಕಾರದ ಕರ್ತವ್ಯವಾಗಿದ್ದು, ಈ ದಿಸೆಯಲ್ಲಿ ಒಂದು ಜಡಿಚಿಜಿಣ ನಲ್ಲಿ ಅದರ ಚಿಂತನೆ ನಡೆದಿದೆ. ಉದಾಹರಣೆಗೆ sand policy ಬಗ್ಗೆ ಹೇಳಬೇಕೆಂದರೆ 10 pa ಗಳನ್ನು ಇಲಾಖೆಯಿಂದ ತೆಗೆದುಕೊಂಡು more than ten ಅಥವಾ ಒಂದೊಂದು ಕಡೆ 100 ಲಾರಿಗಳು 10 ೩ಚಿ ಗಳ ಮೇಲೆ ನಡೆಯುತ್ತಿರುತ್ತವೆ. ಇವುಗಳನ್ನು ಸಾಕಷ್ಟು control ಮಾಡಿ, GPS ಹಾಕಿಸಿ, ಅವುಗಳನ್ನು software ಮಾಡಿ, tracking ಮಾಡುತ್ತಿದ್ದೇವೆ. ಅವುಗಳೆಲ್ಲವೂ ನಮ್ಮ Head Office ನಲ್ಲಿ online ನಲ್ಲಿ ಕಾಣಿಸಬೇಕು. ಅವುಗಳ view ಆಗಬೇಕೆಂದು ಪ್ರತ್ಯೇಕವಾಗಿ ಹಿರಿಯ ಅಧಿಕಾರಿಗಳ ಜೊತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಾಲೋಚಿಸಿ ಮಾಡುತ್ತಿದ್ದೇನೆ. ಇವೆಲ್ಲವುಗಳನ್ನು ಮಾಡಿದರೂ ಸರಳೀಕರಣ ಮಾಡಬೇಕು ಎನ್ನುವ ದೃಷ್ಟಿಯಲ್ಲಿ free sand policy ಜಾರಿಗೆ ತರಬೇಕೆಂಬ ಚಿಂತನೆ ನಡೆದಿದೆ. Free sand policy ಹೇಗೆಂದರೆ ಅವರು ಎಲ್ಲಿ ಬೇಕಾದರೂ sand ಒಯ್ಯಬಹುದು, ಅದು ಹಳ್ಳದ and ಇರಬಹುದು, river sand ಇರಬಹುದು ಅಥವಾ auction ಮಾಡುವ and ಇರಬಹುದು, ಇದನ್ನು ಸಾಗಿಸಿದ ಮೇಲೆ ಎಲ್ಲಿಲ್ಲಿ ಬಳಸಬಹುದು? Tender ಆಗಿರುವ ಇದನ್ನು ಸರ್ಕಾರಿ ಕಟ್ಟಡಗಳು, bridge, dam, ರಸ್ತೆಗಳಿಗೆ ಬಳಸಬಹುದು. Tender ಆಗಿರುವುದರಲ್ಲಿ volume ಗೊತ್ತಾಗುತ್ತದೆ, total quantity ಯಲ್ಲಿ and percentage ಎಷ್ಟಿದೆ ಎಂಬುದು ಗೊತ್ತಾಗುತ್ತದೆ. Royalty ಯನ್ನು ಸರ್ಕಾರದಿಂದ fix ಮಾಡಿ, ಅದನ್ನು final bill ಆಗುವುದರಲ್ಲಿ ಹಂತ-ಹಂತವಾಗಿ ಜಜಜಜಣಾಭಿಣ ಮಾಡುತ್ತಾ, ಸರ್ಕಾರದ Head of Account ಗೆ that amount ಬರುತ್ತದೆ. ಅಲ್ಲಿ ಒಂದು ರೂಪಾಯಿ ಹೆಚ್ಚು ಕಡಿಮೆ ಆಗುವುದಿಲ್ಲ. ಅಲ್ಲದೆ double royalty ಆಗುವುದಿಲ್ಲ ಹಾಗೂ ಯಾವುದೇ sand ಬಳಸಿದ್ದರೆ ಅದಕ್ಕೆ ಮಾತ್ರ royalty ತುಂಬುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿಃ-** ಮಾನ್ಯ ಸಭಾಪತಿಯವರೇ, sand ಗೆ ಅವರು royalty ಕಟ್ಟಬೇಕು ಹಾಗೂ ಸರ್ಕಾರಿ ದರದಲ್ಲಿ....... ಜಲ್ಲಿ ......

**ಶ್ರೀ ಮುರುಗೇಶ್ ಆರ್ ನಿರಾಣಿಃ-** ಕೆಲವೊಮ್ಮೆ double ಆಗುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿಃ-** ಇಲ್ಲಿಯವರೆಗೆ compulsory double ಆಗಿದೆ.

**ಶ್ರೀ ಮುರುಗೇಶ್ ಆರ್. ನಿರಾಣಿಃ-** ಈ ವಿಚಾರವನ್ನು ನಾನು ಹೇಳಿದ್ದು, double ಆಗಿರುವುದನ್ನು ಸರಳ ಮಾಡುವುದಕ್ಕೆ New Mining Policy ಅನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದ್ದೇವೆ. ಸರ್ಕಾರಿ contract ಮಾಡುವುದರಲ್ಲಿ ನಮಗೆ volume ಸಿಗುತ್ತದೆ, ನಾವು royalty collect ಮಾಡುತ್ತೇವೆ. ನಂತರ upto Rs.10 Lakhs ಬರುವಂತಹ ಕಟ್ಟಡಗಳು ಅಂದರೆ ಅದು ಆಶ್ರಯ ಮನೆ ಇರಬಹುದು, ಕಡು ಬಡವರ ಮನೆ ಇರಬಹುದು, ಯಾವುದೇ job ಮಾಡುವಂತಹವರ ಮನೆ ಅಥವಾ ರೈತರು ಅವರ ಹೊಲದಲ್ಲಿ ಮನೆ ಕಟ್ಟಿಸಿಕೊಳ್ಳಬಹುದು ಅಥವಾ ಬಿದ್ದ ಮನೆಗಳನ್ನು renovation ಮಾಡಿಸಿಕೊಳ್ಳುವವರಿಗೆ throwaway price, ಒಂದು ಟನ್‌ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೂರು ಅಥವಾ ಇನ್ನೂರು ರೂಪಾಯಿಗಳನ್ನು ...... ಗ್ರಾಮ ಪಂಚಾಯಿತಿ ಅಥವ ನಗರ ಸಭೆ ವ್ಯಾಪ್ತಿಯಲ್ಲಿ ಬರುವವರು collect ಮಾಡುತ್ತಾರೆ. ಅಂದರೆ almost free ಕೊಟ್ಟಂತೆ ಆಗುತ್ತದೆ. ಅದನ್ನು maintain ಮಾಡುವ ಸಲುವಾಗಿ nominal ದರದಲ್ಲಿ ಕೊಡುವುದರಿಂದ ಲಕ್ಷಾಂತರ ಮನೆಗಳಿಗೆ ಉಚಿತವಾಗಿ, ಚಿಟಿಜ ಕೊಟ್ಟಂತೆ ಆಗುತ್ತದೆ. ಇದರಿಂದ ಸರ್ಕಾರ ಮಾತ್ರವಲ್ಲದೇ ಎಲ್ಲರಿಗೂ ಒಳ್ಳೆಯ ಹೆಸರು ಬರುತ್ತದೆ. ಇದು No.2 ಆಗಿ ಜನಪ್ರತಿನಿಧಿಗಳು ಇರಬಹುದು, ಅಧಿಕಾರಿಗಳು ಇರಬಹುದು ಅಥವ ಮತ್ತೊಬ್ಬರ ಕಿಸೆಗೆ ಹೋಗುವ ದುಡ್ಡು ನೇರವಾಗಿ...... ರೂ.10 ಲಕ್ಷಗಳ ಒಳಗೆ ಕಟ್ಟಿಸುವ ಮನೆಗಳಿಗೆ ಉಚಿತವಾಗಿ sand ಸಿಗುವ ಕಡೆ ಚಿಂತನೆ ಮಾಡುತ್ತಿದ್ದೇವೆ. Above Rs.10 Lakhs ಬರುವ ಕಟ್ಟಡಗಳು, ಅದು private ಆಗಿರಬಹುದು, residential ಆಗಿರಬಹುದು, Government ಇರಬಹುದು, apartment ಇರಬಹುದು ಅಥವಾ ಯಾವುದೇ ಇದ್ದರೂ ಕಟ್ಟಡ ಪರವಾನಗಿ ತೆಗೆದುಕೊಳ್ಳುವ ಸಂದರ್ಭದಲ್ಲಿ per square feet ಸೇರಿದಂತೆ ಒಟ್ಟು ಕಟ್ಟಡ ಎಷ್ಟಿದೆ ಎಂದು ಪರವಾನಗಿ ತೆಗೆದುಕೊಂಡಿರುತ್ತಾರೆ. ಆ ಸಂದರ್ಭದಲ್ಲಿಯೇ 50% ಮೊದಲು ತುಂಬಿಸಿಕೊಂಡು final, ಮನೆ ಆಗುವ ಸಮಯದಲ್ಲಿ 50% volume ಪ್ರಕಾರ ಖಜಡಿ square feet basis ನಲ್ಲಿ royalty ತುಂಬಿಸಿಕೊಂಡರೆ, 90% sand mafia ನಲ್ಲಿ No.2 ಆಗುತ್ತದೆ ಎನ್ನುವುದು ಇದೆ, ಎಲ್ಲದಕ್ಕಿಂತ ಹೆಚ್ಚಾಗಿ ತಾಲ್ಲೂಕು ಮತ್ತು ಜಿಲ್ಲಾಡಳಿತದಲ್ಲಿ ಸ್ವಲ್ಪ ದುಡ್ಡು ಸಿಗುತ್ತದೆ ಎಂದ ಮೇಲೆ ಉಳಿದ ಯಾವುದೇ ಕೆಲಸ ಮಾಡದೇ ಅಲ್ಲಿ ಹೋಗಿ ನಿಂತುಬಿಡುತ್ತಾರೆ. ಬೇರೆ ಬೇರೆ ತಾಲ್ಲೂಕುಗಳಲ್ಲಿ ಊರ ಹೊರಗೆ ಉಸುಕು ಎರಡೆರಡು ಹೀಪ್ ಹಾಕಿಕೊಂಡು ನಿಂತಿರುತ್ತಾರೆ. ಪೊಲೀಸರು ಕೈಹಾಕಿ monthly ವಸೂಲಿ ಮಾಡುವುದು, Revenue Department, Police Department, ನಮ್ಮ ಇಲಾಖೆ ಎಲ್ಲರೂ ಸೇರಿ ವ್ಯವಹಾರ ಮಾಡುತ್ತಾರೆ. Totally free ಆಗಿಬಿಟ್ಟರೆ ಇವರೆಲ್ಲರೂ ಅವರ ಸಮಯವನ್ನು ಕೆಲಸದ ಸಲುವಾಗಿ utilise ಮಾಡಿಕೊಳ್ಳಬಹುದು. ಈ ಭ್ರಷ್ಟಾಚಾರವನ್ನು ತಪ್ಪಿಸಬಹುದು. ರೂ.10 ಲಕ್ಷಗಳ ಒಳಗಿನ ಮನೆಗಳಿಗೆ ಉಚಿತವಾಗಿ sand ಕೊಡುವ ವಿಚಾರ ಚರ್ಚೆಯಲ್ಲಿದೆ, ಇದು final ಅಲ್ಲ. ಇನ್ನೂ ಚರ್ಚೆಯಲ್ಲಿದೆ. ಇದರ ಬಗ್ಗೆ ವಿಚಾರ ಮಾಡುತ್ತಿದ್ದೇನೆ. ಎಲ್ಲಾ Deputy Commissioner ಗಳಿಗೆ ಪತ್ರ ಬರೆದು, ಸಾಧಕ-ಬಾಧಕಗಳನ್ನು ತಿಳಿಸಲು ಹೇಳಿದ್ದೇನೆ. ಇದರ ನಂತರ ಜಲ್ಲಿ crusher ಅನ್ನು ಬಂದ್ ಮಾಡಿದ್ದೇವೆ. ಮೂರು ತಿಂಗಳುಗಳಿಂದ ಪಕ್ಕದ ತಮಿಳುನಾಡು ಹಾಗೂ ಕೇರಳ border ನಿಂದ ಬಹಳ ದೊಡ್ಡ quantity ನಮ್ಮ ಕಡೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತಿದೆ. ದೊಡ್ಡ ದೊಡ್ಡ ಸಾವಿರಾರು tipper ಗಳಿಂದ ನಮ್ಮ ಕಡೆ ಬರುತ್ತಿದೆ. ಅದರ tax revenue ನಮಗೆ ಬರುವುದಿಲ್ಲ. ಇಲ್ಲಿ anti- dumping duty ಹಾಕಿದ ಮೇಲೆ ನ್ಯಾಯಾಲಯಕ್ಕೆ ಹೋಗಿ quash ಮಾಡಿಸಿದ್ದಾರೆ. ಅಂದರೆ ಅವರಿಗೆ ಯಾವ tax ಇಲ್ಲದೇ, ಬೇಕಾದಷ್ಟು quantity ತಂದು ಮಾರಬಹುದು. ಅಂದರೆ, ಬಿಲ್ ಇರುವುದನ್ನು ಮಾತ್ರ ಮಾಡಬಹುದು. ಇದರ advantage ಪಕ್ಕದ ರಾಜ್ಯಗಳಿಗೆ ಹೋಗುತ್ತಿದೆ. ಇದನ್ನು ಗಮನದಲ್ಲಿಟ್ಟುಕೊಳ್ಳುವುದು ಸೂಕ್ತವಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು New Mining Policy ತರಬೇಕೆಂದು ಉದ್ದೇಶಿಸಿದ್ದಾರೆ. Before he concludes ಒಂದೆರಡು ಅಂಶಗಳ ಬಗ್ಗೆ ಹೇಳಬಯಸುತ್ತೇನೆ. ಅಂತಿಮವಾಗಿ ಅದರ stake holders ಯಾರಿದ್ದಾರೋ, ಅವರ ಜೊತೆ ಚರ್ಚೆ ಮಾಡಬೇಕು. ಜಿಲ್ಲಾವಾರು ಚರ್ಚೆಯಾಗಿ ಜಿಟಚಿಟ ಆಗಿ ಬಿಲ್ ತರುವುದಕ್ಕಿಂತ ಮುಂಚೆ ಸಾಧಕ-ಬಾಧಕಗಳ ಬಗ್ಗೆ stake holder ಗಳ ಜೊತೆ ಚರ್ಚೆ ಮಾಡಬೇಕು. ಎರಡನೆಯದಾಗಿ mining ಆದನಂತರ ಪುನರ್‌ನಿರ್ಮಾಣ ಏನು ಮಾಡಬೇಕಾಗಿದೆ, ಎಲ್ಲಿ mining ಆಗಿರುತ್ತದೆ, ಆ ಜಾಗಗಳನ್ನು ಖುಲ್ಲಾ ಬಿಟ್ಟು ಏನು ಆಘಾತ ಆಗುತ್ತದೆ, ಅದನ್ನು ತಪ್ಪಿಸಲು ಹಾಗೂ environmental imbalance ಅನ್ನು ಸರಿಮಾಡಲು ತಾಲ್ಲೂಕು ಆಡಳಿತ ಕ್ರಮ ಜರುಗಿಸಬೇಕು. ಮಾನ್ಯ ಮಂತ್ರಿಯವರು single window ಬಗ್ಗೆ ಹೇಳುತ್ತಿದ್ದು, single window ಇದ್ದರೂ ಸಹಿತ ಅಧಿಕಾರಿಗಳು license ಕೊಡುವಾಗ ಕಿರುಕುಳ ತಪ್ಪಬೇಕು ಮತ್ತು ಸರಳೀಕರಣ ಆಗಬೇಕು. ಖಾಲಿ ಇರುವ ಹುದ್ದೆಗಳ ಬಗ್ಗೆ you will not be able to deliver . . . Department ಏಕೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಹುದ್ದೆಗಳು ಖಾಲಿ ಇರುವುದರಿಂದ ಇಲಾಖೆ effective ಆಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಒಟ್ಟಾರೆ mining Department ನಲ್ಲಿ improvement ಮಾಡಬೇಕೆಂದು ಮಾಡುತ್ತಿದ್ದು, ಎಷ್ಟು ಸಾಧ್ಯವೋ ಅಷ್ಟು ಬೇಗ ಸರಳೀಕರಣಗೊಳಿಸುವುದರ ಮೂಲಕ ಕಟ್ಟಕಡೆಯ ಮನುಷ್ಯ, ಅತ್ಯಂತ ಬಡವನಿಗೆ ಕಡಿಮೆ ದರದಲ್ಲಿ ಉಸುಕು ಸಿಗಬೇಕು. ಯಾವುದಾದರೂ royalty ತಪ್ಪಿಸಿ, ಬೇರೆಯವರ ಕಿಸೆಗೆ ದುಡ್ಡು ಹೋಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗೆ ಕೆಟ್ಟ ಹೆಸರು ಬರುವುದನ್ನು ತಪ್ಪಿಸುವ ದಿಸೆಯಲ್ಲಿ ಒಂದೇ ಕೈಯಲ್ಲಿ ಚಪ್ಪಾಳೆ ಬರುವುದಿಲ್ಲ. ದುಡ್ಡು ಕೊಡುವವನು ಕೊಡದಿದ್ದರೆ ತೆಗೆದುಕೊಳ್ಳುವವನಿಗೂ ಸಮಸ್ಯೆ ಬರುತ್ತದೆ. ಇವನಾಗಿ ದುಡ್ಡು ಕೊಟ್ಟಾಗ ತೆಗೆದುಕೊಳ್ಳುವವರು ಇದ್ದೇ ಇರುತ್ತಾರೆ. ಕೆಲವೊಬ್ಬರು ದುಡ್ಡು ತೆಗೆದುಕೊಳ್ಳುವುದಿಲ್ಲ, ಕೆಲಸವನ್ನೂ ಮಾಡುವುದಿಲ್ಲ, ಅಂತಹವರು ಇದ್ದಾರೆ. ಬಾಗಲಕೋಟೆಯಲ್ಲಿ ಒಬ್ಬರು Officer ಇದ್ದಾರೆ. ಒಬ್ಬ most corrupt ಆಗಿದ್ದು, ಆತನನ್ನು suspend ಮಾಡಲಾಗಿದೆ. ಇನ್ನೊಬ್ಬ most honest ಆಗಿದ್ದು, ಪೆನ್ನನ್ನೇ ತೆಗೆಯುವುದಿಲ್ಲ. ಇವತ್ತಿನವರೆಗೂ ಆತ ಬಂದು ಒಂದು ವರ್ಷ ಕಳೆದರೂ ಒಂದು file ಗೂ ಸಹಿ ಮಾಡಿಲ್ಲ. ಆತ " ಸರ್, ಕೈಮುಗಿಯುತ್ತೇನೆ, ಇಲ್ಲಿಂದ transfer ಮಾಡಿ" ಎಂದು ಹೇಳುತ್ತಾನೆ. ಅದಕ್ಕೆ ನಾನು " ನಮ್ಮಲ್ಲಿ ಇರುವುದಷ್ಟನ್ನೂ ಸರಿ ಮಾಡಿಕೊಟ್ಟು ಹೋಗು, ನೀನು ಎಲ್ಲಿ ಹೇಳುತ್ತೀಯೋ, ಅಲ್ಲಿಗೆ transfer ಮಾಡುತ್ತೇನೆ" ಎಂದು ಹೇಳಿದ್ದೇನೆ. ನಾನು ಈ ರೀತಿ ಹೇಳಿ ಎರಡು ತಿಂಗಳು ಆಗಿದೆ. ನನ್ನ ಸ್ವಂತ ಜಿಲ್ಲೆಯಲ್ಲಿಯೇ ಸಮಸ್ಯೆ ಇಟ್ಟುಕೊಂಡರೆ ಮತ್ತೊಂದು ಜಿಲ್ಲೆಗೆ ಹೋಗಿ ಹೇಗೆ ಮಾರ್ಗದರ್ಶನ ಮಾಡಲಿ? ಅವನಿಗೆ ಹೇಳಿದ್ದರೂ ಒಂದು file ಗೂ ಸಹಿ ಮಾಡಿಲ್ಲ. ಇಂತಹ ಅಧಿಕಾರಿಗಳು ನಮ್ಮ ಇಲಾಖೆಯಲ್ಲಿದ್ದಾರೆ. ಆತ transfer ಆಗುವ ಸಲುವಾಗಿ ಸಹಿ ಮಾಡುತ್ತಿಲ್ಲ. ಆತನಿಗೆ capacity ಸಹ ಇಲ್ಲ. ಆತ ಹತ್ತು ರೂಪಾಯಿ ದುಡ್ಡೂ ತೆಗೆದುಕೊಳ್ಳುವುದಿಲ್ಲ. ಶ್ರೀ ರೋಹಿತ್ ಎಂದು ಆತನ ಹೆಸರು. ಈ ರೀತಿಯ ಅಧಿಕಾರಿಗಳು ಇರುತ್ತಾರೆ. ಎಲ್ಲರೂ mines ಬಗ್ಗೆ ಹೇಳಿದ್ದಾರೆ. ಇವತ್ತು ಸುಮಾರು ರೂ.6 ಕೋಟಿಗಿಂತಲೂ ಹೆಚ್ಚು penalty ಹಾಕಿದ ದುಡ್ಡು ಇದೆ. ಅದು ಯಾವತ್ತೂ ಬರಲು ಸಾಧ್ಯವಿಲ್ಲ. ನಾನು ಒಬ್ಬೊಬ್ಬರನ್ನು ಕರೆದು ಮಾತನಾಡಿದೆ. ಉದಾಹರಣೆಗೆ mining ಮಾಡಿರುವ ಒಂದೂವರೆ ಎಕರೆ land ಒಂದು ಕಡೆ ಇದೆ. ಆ ಜಾಗದ Sub-Registrar value ಸುಮಾರು ರೂ.2-3 ಲಕ್ಷ ಇದೆ. ಅದರ ನಾಲ್ಕು ಪಟ್ಟು valuation ಮಾಡಿದರೂ ರೂ.15-20 ಲಕ್ಷ ಆಗುತ್ತದೆ. **(ಮುಂದು)**

**(436)/16.03.2021/5.50/ಹೆಚ್‌ವಿ:ಜಿಆರ್**

**ಶ್ರೀ ಮುರುಗೇಶ್ ಆರ್.ನಿರಾಣಿ(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಅದರಲ್ಲಿ ಎಷ್ಟೇ ಖನಿಜ ಸಂಪತ್ತು ಇದ್ದರು ಸಹ ಅದಕ್ಕೆ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ. ಆ ಒಂದೂವರೆ ಎಕರೆಗೆ ನಮ್ಮ ಅಧಿಕಾರಿಗಳು 80 ಕೋಟಿ ರೂಪಾಯಿಗಳ ದಂಡವನ್ನು ವಿಧಿಸಿದ್ದಾರೆ. ನಾನು ಕಡತಗಳನ್ನು ತೆಗೆದು ನೋಡಿದಾಗ, ಈ ರೀತಿಯಾಗಿರುವುದು ಕಂಡು ಬಂದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮಲ್ಲಿ ಜಲ್ಲಿ ಕ್ರಷ್ ಮಾಡುವ ಕಾರ್ಯ ಒಂದೂವರೆ ಎಕರೆ ಅಥವಾ ಎರಡು ಎಕರೆ ಪ್ರದೇಶದಲ್ಲಿ ನಡೆಯುತ್ತದೆ. ಯಾವ ಭೂಮಿಯಲ್ಲಿ ಏನೂ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ, ಅಂತಹ ಕಡೆಯಲ್ಲಿ ಜಲ್ಲಿ ಕ್ರಷ್ ಮಾಡುತ್ತಾರೆ. ಅತೀ ಹೆಚ್ಚು ಎಂದರೆ, ಬೆಂಗಳೂರಿನಂತಹ ನಗರದಲ್ಲಿ ಒಂದು ಎಕರೆಗೆ 40 ಲಕ್ಷ ರೂಪಾಯಿಗಳು ಸಿಗುತ್ತದೆ. ಬೇರೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಒಂದು ಎಕರೆಗೆ 15 ರಿಂದ 20 ಲಕ್ಷ ರೂಪಾಯಿಗಳು ಸಿಗುತ್ತದೆ. ಇಷ್ಟು ಕಡಿಮೆ ಆದಾಯ ಬರುವಂತಹ ಜಲ್ಲಿ ಕ್ರಷರ್‌ಗಳಿಗೆ ಒಂದು ಕೋಟಿ, ಎರಡು ಕೋಟಿ ರೂಪಾಯಿಗಳಷ್ಟು ದಂಡವನ್ನು ವಿಧಿಸಿದ್ದಾರೆ. ಕೆಲವೊಂದು ಪ್ರಕರಣಗಳಲ್ಲಿ 100 ಕೋಟಿ 200 ಕೋಟಿ ರೂಪಾಯಿಗಳಷ್ಟು ದಂಡ ಹಾಕಿದರೆ, ಅಷ್ಟು ದೊಡ್ಡ ಮೊತ್ತವನ್ನು ಅವರು ಎಲ್ಲಿಂದ ತಂದು ಕಟ್ಟುತ್ತಾರೆ? ಅಷ್ಟು ಮಾರ್ಜಿನ್ ಸಹ ಅವರಿಗೆ ಸಿಗುವುದಿಲ್ಲ. ಪಕ್ಷಾತೀತವಾಗಿ ಕೆಲವೊಂದು ಶಾಸಕರು ಇದರಲ್ಲಿ ಭಾಗಿಯಾಗಿದ್ದಾರೆ. ನಾವು ಏನಾದರೂ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹೋದಾಗ, ಎಲ್ಲರನ್ನು ಕರೆದುಕೊಂಡು ಬಂದು ನಮ್ಮ ಮೇಲೆ ಒತ್ತಡ ಹೇರುತ್ತಾರೆ. ಅವರೊಂದಿಗೆ ನಮ್ಮ ಸಂಬಂಧವನ್ನು ಉಳಿಸಿಕೊಳ್ಳಬೇಕಾಗಿರುವುದರಿಂದ ನಾವು ಅವರಿಗೆ ಬಾಗಬೇಕಾಗುತ್ತದೆ.

ಮತ್ತೊಂದು ಅಂಶವೇನೆಂದರೆ, ಅವರು ಮನವರಿಕೆ ಮಾಡಿಕೊಡುವ ಅಂಶಗಳನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಒಂದೂವರೆ ಎಕರೆ ಜಲ್ಲಿ ಕ್ರಷರ್ ಇರುವಂತಹ ಮಾಲೀಕನಿಗೆ '80 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ತುಂಬಿ' ಎಂದರೆ, ಆತ ಎಲ್ಲಿಂದ ತುಂಬುವುದಕ್ಕೆ ಸಾಧ್ಯವಾಗುತ್ತದೆ? ಈ ರೀತಿಯ ತೆರಿಗೆಯಿಂದಾಗಿ ನಮ್ಮ ಇಲಾಖೆಯಲ್ಲಿ ಸುಮಾರು 6 ಸಾವಿರ ಕೋಟಿ ರೂಪಾಯಿಗಳನ್ನು ಒಟ್ಟುಗೂಡಿಸಿದ್ದೇವೆ. ಆ ಜಿಲ್ಲೆಯ ಜನಪ್ರತಿನಿಧಿಗಳನ್ನು ಅಂದರೆ, ಜಿಲ್ಲಾ ಉಸ್ತುವಾರಿ ಸಚಿವರನ್ನೊಳಗೊಂಡಂತೆ ಆ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 'ಜಿಲ್ಲಾ ಮರಳು ಸಮಿತಿ'ಯನ್ನು ರಚನೆ ಮಾಡಲಾಗಿದೆ. 100 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಸಂಗ್ರಹ ಮಾಡುವ ಕಡೆ 5 ಕೋಟಿ, 10 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಸಂಗ್ರಹ ಮಾಡಿದ್ದಾರೆನ್ನುವ ಆರೋಪ ನಮ್ಮ ಇಲಾಖೆಯ ಮೇಲೆ ಬರಬಾರದು ಮತ್ತು ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕೆನ್ನುವ ಹಿನ್ನೆಲೆಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 'ಜಿಲ್ಲಾ ಮರಳು ಸಮಿತಿ' ಯನ್ನು ರಚನೆ ಮಾಡಲಾಗಿದೆ. ಈ ಕ್ಷೇತ್ರದಲ್ಲಿರುವ ಸಮಸ್ಯೆಯ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು, ಜನ ಪ್ರತಿನಿಧಿಗಳು ಮತ್ತು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಹಾರವನ್ನು ಕಂಡುಕೊಳ್ಳಬೇಕೆನ್ನುವ ಚಿಂತನೆಯನ್ನು ಮಾಡುತ್ತಿದ್ದೇನೆ. ಈಗ 5 ಪಟ್ಟು ತೆರಿಗೆಯನ್ನು ಹಾಕಲಾಗುತ್ತಿದೆ, ಅದನ್ನು one timeಗೆ ಇಳಿಸಿದರೆ ಕೊನೆಯ ಪಕ್ಷ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ತೆರಿಗೆ ಸಂಗ್ರಹವಾಗುತ್ತದೆ. ಈ ಹಣವನ್ನು ಅಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸಿಕೊಳ್ಳಬಹುದಾಗಿದೆ. ಈಗ ಇರುವಂತಹ ವ್ಯವಸ್ಥೆಯಲ್ಲಿ 5-6 ಪಟ್ಟು ತೆರಿಗೆ ವಿಧಿಸಿದರೆ ಅದು ಪೇಪರ್‌ನಲ್ಲಿಯೇ ಉಳಿಯುತ್ತದೆಯೇ ಹೊರತು, ಹಣದ ರೂಪದಲ್ಲಿ ತೆರಿಗೆಯನ್ನು ಸಂಗ್ರಹ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಅನಧಿಕೃತ ಮರಳು ಗಣಿಗಾರಿಕೆಯ ಬಗ್ಗೆ ವಿಚಾರಣೆ ನಡೆಸಲು ಸಿ.ಓ.ಡಿ., ಗೆ ಬದಲಾಗಿ ನಿವೃತ್ತ ಅಥವಾ ಹಾಲಿ ನ್ಯಾಯಾಧೀಶರನ್ನು ನೇಮಕ ಮಾಡಬೇಕೆಂದು ಮಾನ್ಯ ಸದಸ್ಯರುಗಳು ಒತ್ತಾಯ ಮಾಡಿದ್ದಾರೆ. 'ನಮ್ಮ ಪೊಲೀಸ್ ಇಲಾಖೆ ಅತ್ಯಂತ ದಕ್ಷ ಅಧಿಕಾರಿಗಳಿಂದ ಕೂಡಿದೆ' ಎನ್ನುವ ಮಾತುಗಳನ್ನು ಹಿಂದಿನ ಸರ್ಕಾರದವರು ಹೇಳಿದ್ದಾರೆ, ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಹೇಳಿದೆ, ಇವತ್ತು ನಾವೂ ಸಹ ಅದನ್ನೇ ಹೇಳುತ್ತಿದ್ದೇವೆ. ನಮ್ಮ ಅಧಿಕಾರಿಗಳ ಮೇಲೆ ನಮಗೆ ವಿಶ್ವಾಸ ಇಲ್ಲವೆಂದಾಗ ಮಾತ್ರ ಬೇರೆ ಸಂಸ್ಥೆಗೆ ವಹಿಸಿಕೊಡಬೇಕಾಗುತ್ತದೆ. ಹಿಂದೆ ನಮ್ಮ ಪೊಲೀಸ್ ಇಲಾಖೆಯ ಮೇಲೆ ಸಂಪೂರ್ಣವಾದ ವಿಶ್ವಾಸ ಅವರಿಗೂ ಇತ್ತು, ಈಗ ನಮಗೂ ಇದೆ, ಮುಂದೆ ಅವರಿಗೂ ಇರುತ್ತದೆ. ಏಕೆಂದರೆ, ಆಡಳಿತ ಪಕ್ಷದಲ್ಲಿರುವವರು ವಿರೋಧ ಪಕ್ಷಕ್ಕೆ ಬಂದು ಕೂಡಬಹುದು, ವಿರೋಧ ಪಕ್ಷದಲ್ಲಿರುವವರು ಆಡಳಿತ ಪಕ್ಷದಲ್ಲಿ ಕೂರಬಹುದು. ರಾಜಕೀಯ ಬದಲಾವಣೆಗಳು ಆಗುತ್ತಿರುತ್ತವೆ. ಅನಧಿಕೃತ ಪ್ರಕರಣಗಳನ್ನು ಸಿ.ಓ.ಡಿ., ಗೆ ವಹಿಸಿಕೊಟ್ಟಿರುವುದು ಸರಿಯಾದ ಕ್ರಮವಾಗಿದೆ. ಈ ದಿಕ್ಕಿನಲ್ಲಿ ವಿರೋಧ ಪಕ್ಷದವರಿಂದ ಸಹಕಾರ ಮತ್ತು ಸಲಹೆಗಳನ್ನು ನಿರೀಕ್ಷೆ ಮಾಡುತ್ತಿದ್ದೇನೆ. ತಪ್ಪಿತಸ್ಥರು ಯಾರೇ ಇದ್ದರೂ ಅವರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಇದರಲ್ಲಿ ಯಾವುದೇ ಮುಚ್ಚುಮರೆಯಿಲ್ಲ. ಮಾನ್ಯ ಸದಸ್ಯರುಗಳಿಗೆ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗದೇ ಇರುವ ವಿಚಾರವನ್ನು ಆಮೇಲೆ ನನಗೆ ಫೋನ್ ಮಾಡಿ ತಿಳಿಸುವುದು ಅಥವಾ ಒಂದು ಚೀಟಿ ಬರೆದು ಕಳುಹಿಸುವುದು ಅಥವಾ ತಮ್ಮ ಪಿ.ಎ.,ಗಳ ಮೂಲಕ ಕೇಳಿ ಕಳುಹಿಸಿದರೆ ಸಾಕು ಯಾರು ತಪ್ಪು ಮಾಡಿದ್ದಾರೆ ಅವರು ನಮ್ಮ ಪಕ್ಷದವರಾಗಿರಬಹುದು ಅಥವಾ ಬೇರೆ ಪಕ್ಷದವರಾಗಿರಬಹುದು ಅವರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು. ಮಾನ್ಯ ಸದಸ್ಯರುಗಳು ಮೇಲಿಂದಮೇಲೆ ಭ್ರಷ್ಟಾಚಾರ ನಡೆಯುತ್ತಿದೆಯೆಂದು ಹೇಳುತ್ತಿದ್ದಾರೆ. ಇದನ್ನು ಸರಿಪಡಿಸುವುದಕ್ಕೆ ನೂರಕ್ಕೆ ನೂರರಷ್ಟು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುತ್ತದೆ. ನೂರಕ್ಕೆ ನೂರರಷ್ಟು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭ್ರಷ್ಟಾಚಾರ ರಹಿತವಾಗಿ ಮಾಡುವುದಕ್ಕೆ ಸಾಧ್ಯವಾಗದಿದ್ದರೂ ಕಡಿಮೆ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತದೆ. ಈ ಕೆಲಸವನ್ನು ನಾವೆಲ್ಲರೂ ಸೇರಿ ಮಾಡೋಣ ಎನ್ನುವ ಮಾತನ್ನು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರ ಇಲಾಖೆಗೆ ಸಂಬಂಧಪಟ್ಟಂತೆ ಜನರಲ್ ಪಾಲಿಸಿಯ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನಾವು ಕೊಟ್ಟಿರುವ ಪ್ರಸ್ತಾವದಲ್ಲಿ ಉಲ್ಲೇಖ ಮಾಡಿರುವಂತೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಡೆದಿರುವ ಘಟನೆಗೆ ಸೀಮಿತವಾಗಿ ಉತ್ತರವನ್ನು ಮಾನ್ಯ ಸಚಿವರಿಂದ ನಿರೀಕ್ಷಿಸುತ್ತಿದ್ದೇವೆ.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಸನ್ಮಾನ್ಯ ಸಭಾಪತಿಯವರೇ, ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನಡೆದಿರುವ ಘಟನೆಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಸಿ.ಓ.ಡಿ., ತನಿಖೆ ನಡೆದಿದೆ. ಸಂಬಂಧಪಟ್ಟವರನ್ನು ಅರೆಸ್ಟ್ ಮಾಡಲಾಗಿದೆ. ಕೆಲವು ಅಧಿಕಾರಿಗಳನ್ನು ಸಹ ಸಸ್ಪೆಂಡ್ ಮಾಡಲಾಗಿದೆ. ಮಾಲೀಕರನ್ನು ಸಹ ಅರೆಸ್ಟ್ ಮಾಡಲಾಗಿದೆ. 'ಗಣಿ ಮಾಲೀಕರನ್ನು ಏತಕ್ಕೋಸ್ಕರ ಅರೆಸ್ಟ್ ಮಾಡಲಿಲ್ಲ' ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದರು. ಈ ಸದನದಲ್ಲಿರುವ ಪ್ರತಿಯೊಬ್ಬ ಸದಸ್ಯರು ಒಂದಲ್ಲ ಒಂದು ಉದ್ಯೋಗದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅದು ಟ್ರೇಡಿಂಗ್ ಇರಬಹುದು, ಕೈಗಾರಿಕೆ ಆಗಿರಬಹುದು ಅಥವಾ ಬೇರೆ ಯಾವುದೇ ಕ್ಷೇತ್ರವಾಗಿರಬಹುದು. ರಾಜಕಾರಣದಲ್ಲಿ ಇಲ್ಲದೆ ಇರುವವರು ಸಾಕಷ್ಟು ಜನರು ಕೈಗಾರಿಕೆಗಳನ್ನು ನಡೆಸುತ್ತಿರುತ್ತಾರೆ. ಕೈಗಾರಿಕೆಯಲ್ಲಿ ಎಲ್ಲಿಯೋ ಏನೋ ಒಂದು ಘಟನೆ ನಡೆದರೆ, ಅದರ ಮಾಲೀಕನನ್ನು ಅರೆಸ್ಟ್ ಮಾಡಬೇಕು ಎಂದರೆ ಹೇಗೆ? ಆ ಮಾಲೀಕ ಎಲ್ಲಿಯೋ ಏನೋ ಮಾಡುತ್ತಿರುತ್ತಾನೆ. ಕೆಲವೊಮ್ಮೆ ಆತನಿಗೆ ತಿಂಡಿ ಊಟವೇ ಸಿಗುವುದಿಲ್ಲ. ನನಗೆ ಅದರ ಅನುಭವವಿದೆ. ನಾನು 4–5 ಸಾವಿರ ಕೋಟಿ ರೂಪಾಯಿಗಳಷ್ಟು ಟರ್ನ್‌ಓವರ್ ಮಾಡುತ್ತಿದ್ದೇನೆ. ಸುಮಾರು 75 ಸಾವಿರ ಜನರಿಗೆ ಉದ್ಯೋಗವನ್ನು ನೀಡಿದ್ದೇನೆ. ಇಷ್ಟೆಲ್ಲ ಮಾಡಬೇಕಾದರೆ, ನನ್ನ ಜೀವನದ 10 ವರ್ಷಗಳಲ್ಲಿ ಎಂದೂ ಎರಡು ಹೊತ್ತಿನ ಊಟ, ಬೆಳಿಗ್ಗೆ ತಿಂಡಿಯನ್ನು ತಿಂದಿದ್ದೇ ಇಲ್ಲ. ರಾತ್ರಿ 8 ಗಂಟೆಗಳ ಕಾಲ ನಿದ್ದೆ ಮಾಡಿಲ್ಲ. ಇಷ್ಟೆಲ್ಲ ತ್ಯಾಗ ಮಾಡಿ ದುಡಿಯುವ ಮಾಲೀಕನನ್ನು ಅರೆಸ್ಟ್ ಮಾಡುವ ಪರಿಸ್ಥಿತಿ ಬಂದರೆ, ಏತಕ್ಕೋಸ್ಕರ ನಾವು ಉದ್ಯೋಗ ಸೃಷ್ಟಿ ಮಾಡಬೇಕು? ಏತಕ್ಕೋಸ್ಕರ ಸರ್ಕಾರಕ್ಕೆ ತೆರಿಗೆ ಕಟ್ಟಬೇಕು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಈ ರೀತಿ ಆಗದೇ ಇರುವಂತೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳೋಣ; ಆದರೆ, ಎಲ್ಲದಕ್ಕೂ ಮಾಲೀಕರನ್ನೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಕಳೆದ 20 ವರ್ಷಗಳಿಂದ ಕೈಗಾರಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದೇನೆ. ನಮ್ಮಲ್ಲಿಯೇ ಇಂತಹ ಘಟನೆ ನಡೆದಿದೆ. ಮಾನ್ಯ ಎಸ್.ಆರ್.ಪಾಟೀಲ್‌ರವರಿಗೂ ಇದರ ಬಗ್ಗೆ ಹೆಚ್ಚಿನ ಅನುಭವವಿದೆ. ಅವರ ಉದ್ಯಮಗಳಲ್ಲಿಯೂ ಸಹ ಇಂತಹ ಘಟನೆ ನಡೆದಿದೆ. ಆ ಘಟನೆ ನಡೆದಾಗ ನಾವು ಸ್ಥಳದಲ್ಲಿ ಇರುವುದಿಲ್ಲ. ಏನಾಗಿದೆ ಎನ್ನುವುದು ನಮಗೆ ಗೊತ್ತಿರುವುದಿಲ್ಲ. **(ಈ ಹಂತದಲ್ಲಿ ಆಫ್ ದಿ ರೆಕಾರ್ಡ್ ಮಾತನಾಡಿದರು)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನದಲ್ಲಿ ಆಫ್ ದಿ ರೆಕಾರ್ಡ್ ಹೇಳುತ್ತಿದ್ದಾರೆ. ಅವರು ಹೇಳಿರುವುದೆಲ್ಲವೂ ಆಫ್ ದಿ ರೆಕಾರ್ಡ್ ಆಗಿದೆಯೇ?

**ಶ್ರೀ ಮುರುಗೇಶ್ ಆರ್. ನಿರಾಣಿ:-** ಸನ್ಮಾನ್ಯ ಸಭಾಪತಿಯವರೇ, ಆ ಘಟನೆಯಲ್ಲ, ಈ ವಾಕ್ಯ ಮಾತ್ರ. ಉಳಿದಿರುವುದೆಲ್ಲ ರೆಕಾರ್ಡ್‌ಗೆ ಹೋಗಲಿ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವ ಮಾತನ್ನು ನಾನು ಒಪ್ಪುತ್ತೇನೆ. ಉದ್ದಿಮೆದಾರರು ಸಾವಿರಾರು ಜನರಿಗೆ ಉದ್ಯೋಗ ಸೃಷ್ಟಿ ಮಾಡಿಕೊಡುತ್ತಾರೆ ಎನ್ನುವ ಮಾತುಗಳನ್ನು ಒಪ್ಪುತ್ತೇವೆ. ಆದರೆ, ಕಾನೂನು ಪ್ರಕಾರವಾಗಿ ಕೆಲಸ ಮಾಡಬೇಕಾಗುತ್ತದೆ. ತಪ್ಪು ನಡೆದಂತಹ ಸಂದರ್ಭದಲ್ಲಿ ಇಡೀ ಮ್ಯಾನೇಜ್‌ಮೆಂಟ್ ಅನ್ನು ಅರೆಸ್ಟ್ ಮಾಡುವ ಸನ್ನಿವೇಶ ಇರುವುದಿಲ್ಲ. ಅಲ್ಲಿ ಒಬ್ಬರು ಡೈರೆಕ್ಟರ್ ಇರುತ್ತಾರೆ. He will take the bail. ಈ ಘಟನೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಫೆಬ್ರವರಿ 7ನೇ ತಾರೀಖಿನಂದು ಸಂಬಂಧಪಟ್ಟ ಪೊಲೀಸ್ ವರಿಷ್ಠಾಧಿಕಾರಿಯವರು ಮೆ॥ ಶ್ರೀ ಶಿರಡಿ ಸಾಯಿ ಅಗ್ರಿಗೇಟ್ ಎಂಬ ಹೆಸರಿನ ಕಲ್ಲುಗಣಿಗೆ ಭೇಟಿಯನ್ನು ನೀಡಿರುತ್ತಾರೆ. ಅಲ್ಲಿ ಸ್ಫೋಟಕಗಳು ಸಿಗುತ್ತವೆ. ಕೂಡಲೇ ಅವರ ಮೇಲೆ Explosive Substances Act ಅಡಿಯಲ್ಲಿ ಕೇಸ್ ರಿಜಿಸ್ಟರ್ ಮಾಡುತ್ತಾರೆ. ಇದಕ್ಕೆ ಮರಣದಂಡನೆಯ ಶಿಕ್ಷೆ ಇದೆ. ಮರಣ ದಂಡನೆ ಶಿಕ್ಷೆಯಡಿಯಲ್ಲಿ ಒಬ್ಬರು ಇಬ್ಬರನ್ನು ಅರೆಸ್ಟ್ ಮಾಡಿ ಕೇಸ್ ರಿಜಿಸ್ಟರ್ ಮಾಡಿದರೆ, ಮುಂದೆ ಇಂತಹ ಘಟನೆ ನಡೆಯುತ್ತಿರಲಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಕಾನೂನು ಬಾಹಿರವಾಗಿ ನಾನು ಯಾರನ್ನೂ ಅರೆಸ್ಟ್ ಮಾಡಿ ಎಂದು ಹೇಳುವುದಿಲ್ಲ. ಈ ದೇಶದ ಕಾನೂನು ನಮ್ಮೆಲ್ಲರಿಗೂ ಸರಿಸಮಾನವಾಗಿರಬೇಕಾಗುತ್ತದೆ. Nobody is above the law. May be the President of India, may be the Prime Minister, may be the Governor, may be the Chief Minister ಆ ಕಾನೂನಿಗೆ ಒಳಪಟ್ಟು ನಾವೆಲ್ಲರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬೇಕಾಗುತ್ತದೆ. ಆ ಕಾನೂನಿಗೆ ನಾವು ಗೌರವ ಕೊಡಬೇಕಾಗುತ್ತದೆ. ಕೈಗಾರಿಕೆಯ ಮಾಲೀಕರನ್ನು ಅರೆಸ್ಟ್ ಮಾಡುವುದು ಹೇಗೆ ಎಂದು ಹಿಂದುಮುಂದು ನೋಡಬಾರದು. ತಪ್ಪು ಮಾಡಿದವರ ಮೇಲೆ ಕ್ರಮ ಜರುಗಿಸಲೇಬೇಕಾಗುತ್ತದೆ. Industrialists are not above the law. They are amenable to the laws, may be a criminal jurisdiction or it may be a civil jurisdiction. ಮಾನ್ಯ ಮಂತ್ರಿಗಳು ಪಾರದರ್ಶಕವಾಗಿ ಕಾರ್ಯನಿರ್ವಹಿಸುವುದಕ್ಕೆ ಇಷ್ಟೆಲ್ಲ ಕ್ರಮಗಳನ್ನು ವಹಿಸುತ್ತಿರುವಾಗ, ಇದರ ಬಗ್ಗೆಯೂ ಜಾಗ್ರತೆ ವಹಿಸಬೇಕಾಗುತ್ತದೆ. ತಪ್ಪು ನಡೆದಾಗ ಇಡೀ ಮ್ಯಾನೇಜ್‌ಮೆಂಟ್ ಅನ್ನು ಅರೆಸ್ಟ್ ಮಾಡಬೇಕಾಗಿರುವ ಅವಶ್ಯಕತೆ ಇಲ್ಲ. ಅದಕ್ಕಾಗಿಯೇ ಒಬ್ಬ Director, specifically answerable ಇರುತ್ತಾರೆ. ಅವರ ಮೇಲೆ ಕಾನೂನಾತ್ಮಕ ಕ್ರಮವನ್ನು ಜರುಗಿಸದೇ ಕಾನೂನು ಮೀರಿ ಇವರಿಗೆ ರಕ್ಷಣೆ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳುವುದು ಸೂಕ್ತವಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಮುರುಗೇಶ್ ಆರ್.ನಿರಾಣಿಃ–** ಸನ್ಮಾನ್ಯ ಸಭಾಪತಿಯವರೇ, 'ಆ ಉದ್ಯಮದ ಮಾಲೀಕನನ್ನು ಅರೆಸ್ಟ್ ಮಾಡಬೇಕಾಗಿತ್ತು' ಎಂದು ತಾವುಗಳು ಕೇಳಿದ ಹಿನ್ನೆಲೆಯಲ್ಲಿ ನಾನು ಆ ಮಾತುಗಳನ್ನು ಹೇಳಿದ್ದೇನೆ.

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವ ಲಿಖಿತ ರೂಪದ ಉತ್ತರದಲ್ಲಿ 'ಉಪ ಖನಿಜಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಉಪಖನಿಜಗಳ ಗಣಿಗಾರಿಕೆಗಾಗಿ 517 ಕಲ್ಲುಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದೆ' ಎಂದು ಹೇಳಿದ್ದಾರೆ. ಇಲ್ಲಿ ಕಲ್ಲುಗಣಿಗಾರಿಕೆಗೆ ಮಾತ್ರ ಸೀಮಿತವಾಗಿರುವಂತೆ ಉತ್ತರವನ್ನು ಕೊಟ್ಟಿದ್ದಾರೆ. ಮುಂದುವರೆದು, ಇತ್ತೀಚಿನ ಮೂರು ವರ್ಷಗಳಲ್ಲಿ ಸುಮಾರು 1259 ಅನಧಿಕೃತ ಕಲ್ಲು ಗಣಿಗಾರಿಕೆಗಳ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ಎನ್ನುವ ಉತ್ತರವನ್ನು ನೀಡಿದ್ದಾರೆ. ಸುಮಾರು 517 ಕಲ್ಲು ಗಣಿಗಾರಿಕೆಗಳು ಅಧಿಕೃತವಾಗಿದೆ. ಇಲ್ಲಿ ಸುಮಾರು 2353 ಎಕರೆ ಪ್ರದೇಶದಲ್ಲಿ ಅಧಿಕೃತ ಗಣಿಗಾರಿಕೆ ನಡೆಯುತ್ತಿದೆ. ಸುಮಾರು 1259 ಅನಧಿಕೃತ ಪ್ರಕರಣಗಳನ್ನು ದಾಖಲು ಮಾಡಲಾಗಿದೆ, ಅದರಲ್ಲಿ ಎಷ್ಟು ಎಕರೆ ಜಮೀನಿನಲ್ಲಿ ಅನಧಿಕೃತ ಗಣಿಗಾರಿಕೆ ನಡೆಯುತ್ತಿತ್ತು ಎನ್ನುವುದರ ಮಾಹಿತಿಯನ್ನು ಮಾನ್ಯ ಸಚಿವರು ನೀಡಿಲ್ಲ. ಅದೇ ರೀತಿಯಲ್ಲಿ 1259 ಅನಧಿಕೃತ ಪ್ರಕರಣವನ್ನು ಪತ್ತೆ ಹಚ್ಚಿದ್ದರೂ ಸಹ ಕೇವಲ 324 ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಇವರಿಂದ ಸುಮಾರು 29 ಕೋಟಿ ರೂಪಾಯಿಗಳ ದಂಡವನ್ನು ವಸೂಲಿ ಮಾಡಲಾಗಿದೆ. 1259 ಅನಧಿಕೃತ ಗಣಿಗಾರಿಕೆಗಳ ಪೈಕಿ 324 ಅನಧಿಕೃತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಣಿಗಾರಿಕೆಗಳ ಮೇಲೆ ಮೊಕದ್ದಮೆಯನ್ನು ದಾಖಲು ಮಾಡಿದರೆ, ಉಳಿದ 980 ಅನಧಿಕೃತ ಗಣಿಗಾರಿಕೆಗಳು ನಡೆಯುತ್ತಿವೆ ಎಂದು ಅರ್ಥ. ಇವು ಪರಿಸರದ ಮೇಲೆ ಯಾವ ಪರಿಣಾಮವನ್ನು ಬೀರಿವೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ನಮ್ಮ ರಾಜ್ಯ ಪರಿಸರ ಮಾಲಿನ್ಯ ಮಂಡಳಿಯಿಂದ Consent for Establishment ತೆಗೆದುಕೊಳ್ಳಬೇಕಾಗುತ್ತದೆ. ಅನಂತರ Consent for Operation ತೆಗೆದುಕೊಳ್ಳಬೇಕಾಗುತ್ತದೆ. ಇದು ಯಾವುದನ್ನೂ ತೆಗೆದುಕೊಳ್ಳದೇ ಅನಧಿಕೃತವಾಗಿ ನಡೆಯುತ್ತಿರುವ ಗಣಿಗಾರಿಕೆಗಳು ಪರಿಸರದ ಮೇಲೆ ಯಾವ ಪ್ರಭಾವ ಬೀರುತ್ತಿದೆ ಎನ್ನುವುದನ್ನು ಅವರು ತಿಳಿಸಬೇಕಾಗಿದೆ. ಅನಧಿಕೃತ ಗಣಿಗಾರಿಕೆಗಳು ಎಷ್ಟು ನಡೆಯುತ್ತಿವೆ ಎನ್ನುವುದರ ಮಾಹಿತಿಯನ್ನು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಇಂತಹ ಅನಧಿಕೃತ ಗಣಿಗಾರಿಕೆಗಳ ಮೇಲೆ ಸರ್ಕಾರ ಇಲ್ಲಿಯವರೆಗೆ ಏತಕ್ಕೋಸ್ಕರ ಕ್ರಮ ತೆಗೆದುಕೊಂಡಿಲ್ಲವೆನ್ನುವುದು ಅಚ್ಚರಿಯ ಸಂಗತಿಯಾಗಿದೆ.

(ಮುಂದು)

(437) 16.3.2021 6.00 ಪಿಕೆ:ಜಿಆರ್

**ಶ್ರೀ ಮುರುಗೇಶ್ ಆರ್. ನಿರಾಣಿ:–** ಒಬ್ಬ ವ್ಯಕ್ತಿ ಒಂದು ಎಕರೆ ಅಥವಾ ಒಂದೂವರೆ ಎಕರೆ ಜಾಗದಲ್ಲಿ, ಕಲ್ಲಿನದ್ದಿರಬಹುದು ಅಥವಾ ಬೇರೆಯದ್ದಿರಬಹುದು ಮೈನಿಂಗ್ ಮಾಡುತ್ತಿರುತ್ತಾನೆ. ಆತ ಅಲ್ಲಿರಬಹುದಾದ ತನ್ನ ಎಲ್ಲಾ ಜಾಗಕ್ಕೆ ಸಂಬಂಧಪಟ್ಟಂತೆ N.A., ಮಾಡಿಸಿ, license ಮಾಡಿರುವುದಿಲ್ಲ. ಅದಕ್ಕೆ dead rent ತುಂಬುವುದಕ್ಕೆ ಬರುತ್ತದೆ ಎಂದು ತನ್ನ ಹಣಕಾಸಿನ ಇತಿಮಿತಿಯೊಳಗೆ ಒಂದು–ಒಂದೂವರೆ ಎಕರೆಗೆ ಅಷ್ಟೇ ಮಾಡಿರುತ್ತಾನೆ. ನಿರ್ದಿಷ್ಟ ಜಾಗದಲ್ಲಿ ಅವನಿಗೆ ಕಲ್ಲು ಸಿಗದೇ ಹೋದ್ದರೆ, ಆತ ಅರ್ಧ ಎಕರೆ ಮುಂದೆ ಬರುತ್ತಾನೆ. ಇದು ಉಲ್ಲಂಘನೆಯಾಗುತ್ತದೆ. ಇಂಥದ್ದಕ್ಕೆ ನೋಟೀಸ್ ಕೊಟ್ಟಿದ್ದೇವೆ.

**ಶ್ರೀ ಪಿ.ಆರ್.ರಮೇಶ:–** ಎಲ್ಲರಿಗೂ ನೀವು ನೋಟಿಸ್ ಕೊಟ್ಟಿಲ್ಲ.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಇಂಥದ್ದು ನನ್ನ ಗಮನಕ್ಕೆ ಎಷ್ಟು ಪ್ರಕರಣಗಳು ಬಂದಿವೆಯೋ ಅವೆಲ್ಲಕ್ಕೂ ನೋಟಿಸ್ ಕೊಟ್ಟು ದಂಡ ಹಾಕಿದ್ದರಿಂದ 6000 ಕೋಟಿ ರೂ.ಗಳ ದಂಡ ವಸೂಲಾಗಿದೆ. ಇದು ಬಹಳ ಚಿಕ್ಕ ಚಿಕ್ಕ ಪ್ರದೇಶವಾಗಿದ್ದು, ಯಾವುದೂ ಕೂಡ 5 ಎಕರೆಗೆ ಮೇಲ್ಪಟ್ಟು ಕಲ್ಲು ಗಣಿಗಾರಿಕೆ ಮಾಡುತ್ತಿಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಚಿವರೇ ತಾವು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೀರಿ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಾದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾತ್ರ ಹೇಳಿ. ಈ ಪ್ರಕರಣದಲ್ಲಿ ಏನು ಕ್ರಮ ಕೈಗೊಂಡಿದ್ದೀರಿ?

**ಶ್ರೀ ಮುರುಗೇಶ ಆರ್.ನಿರಾಣಿ:-** ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಘಟನೆ ನಡೆದ ಮೇಲೆ ಮೇಲ್ಮನೆ, ಕೆಳಮನೆಯ ಪ್ರತಿಪಕ್ಷದ ನಾಯಕರು ನನ್ನನ್ನು ಭೇಟಿಯಾದರು. ನಾನು ಅದೇ ದಿನ ರಾತ್ರಿ ಹೊತ್ತು ಆ ಪ್ರದೇಶಕ್ಕೆ ಹೋಗಿದ್ದೆ. ಜಿಲ್ಲಾಧಿಕಾರಿಗಳ ಜೊತೆಯಲ್ಲಾದ ಸಭೆಯಲ್ಲಿ ಎಲ್ಲಾ ವಿಚಾರಗಳು ಚರ್ಚೆಯಾಯಿತು. ಅಲ್ಲಿರುವ ಎಲ್ಲಾ ಅಧಿಕಾರಿಗಳನ್ನು ನಮ್ಮ ಚೇಂಬರ್‌ನಲ್ಲಿ ಕರೆಸಿ ಈ ಘಟನೆ ನಡೆಯುವುದಕ್ಕೆ ಕಾರಣವೇನಿರಬಹುದು ಎನ್ನುವ ನಿಟ್ಟಿನಲ್ಲಿ ಕಾರಣಗಳನ್ನು ಹುಡುಕುವಂಥದ್ದನ್ನು ಮಾಡಿದೆವು. ಈ ಪ್ರಕರಣದಲ್ಲಿ ಭಾಗಿಯಾಗಿರುವವರ ಮೇಲೆ ಕೇಸ್‌ಗಳನ್ನು ಹಾಕಿದ್ದೇವೆ, ಕೆಲವೊಬ್ಬರನ್ನು ಅರೆಸ್ಟ್ ಮಾಡಿದ್ದೇವೆ.

**ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ:-** ಇದು ರಾಜ್ಯದ ವಿಚಾರವಲ್ಲ. ಸ್ಪೆಸಿಫಿಕ್ ಆಗಿ ಈ ಪ್ರಕರಣದಲ್ಲಿ ಏನು ಕ್ರಮವಾಗಿದೆ ಎಂದು ಹೇಳಿದರೆ ಒಳ್ಳೆಯದಾಗುತ್ತದೆ.

**ಶ್ರೀ ಮುರುಗೇಶ ಆರ್.ನಿರಾಣಿ:-** ಶಿವಮೊಗ್ಗ ಆಗಿರಬಹುದು ಅಥವಾ ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಕರಣಗಳು ಆಗಿರಬಹುದು, ಇಲ್ಲಿನ ಪ್ರಕರಣ explosives blast ಆಗಿರುವುದಕ್ಕೆ ಸಂಬಂಧಪಟ್ಟಿದ್ದು ಅದು ಗೃಹ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಇದು ಗಣಿ ಮತ್ತು ಭೂವಿಜ್ಞಾನ ಇಲಾಖೆಯನ್ನು ಹೊರತುಪಡಿಸಿ ಆಗಿರುವಂಥದ್ದು. ಸ್ಫೋಟಕಗಳಿಗೆ ಸಂಬಂಧಪಟ್ಟಂತೆ ನಮ್ಮ ಇಲಾಖೆಯ ಅಡಿಯಲ್ಲಿ ಯಾವುದೂ ಬರುವುದಿಲ್ಲ. ಇಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರೆಕಮೆಂಡಿಂಗ್ ಅಥಾರಿಟಿ ಇದೆ. ಅದನ್ನು ಪೊಲೀಸ್‌ನವರು ನೋಡಿಕೊಳ್ಳುತ್ತಾರೆ. ಈಗಾಗಲೇ ಪೊಲೀಸ್ ಡಿಪಾರ್ಟ್‌ಮೆಂಟ್‌ನವರು ಒಬ್ಬ ಎಸ್.ಐ., ಅವರನ್ನು ಸಸ್ಪೆಂಡ್ ಮಾಡಿದ್ದಾರೆ. ಮತ್ತೆ, ಸದರಿ ಮೈನ್ಸ್ ಓನರ್ ಅವರನ್ನೂ ಅರೆಸ್ಟ್ ಮಾಡಿದ್ದಾರೆ. ಸ್ಫೋಟಕಗಳು ಆಂಧ್ರ ಪ್ರದೇಶದಿಂದ ಬರುತ್ತಿತ್ತು. ಮೂಲ ಎಲ್ಲಿಂದ ಬರುತ್ತಿತ್ತೋ ಅವರ ಮೇಲೂ ಎಫ್.ಐ.ಆರ್., ಆಗಿದೆ. Transport ಮಾಡುವವರು ದಾವಣಗೆರೆಯವರು. ಅವರ ವಾಹನ, ವಾಹನದ ಸಂಖ್ಯೆ ಮತ್ತು ಅದರ ಮಾಲೀಕರು ಸಿಕ್ಕಿರುವುದರಿಂದ ಎಫ್.ಐ.ಆರ್., ಹಾಕಿ ಅರೆಸ್ಟ್ ಮಾಡಲಾಗಿದೆ. ಸಪ್ಲೆ ಮಾಡಿರುವಂಥವರು, ಟ್ರಾನ್ಸ್‌ಪೋರ್ಟ್ ಮಾಡಿರುವಂಥವರು ಮತ್ತು ಮೈನ್ ಓನರ್‌ಗಳ ವಿವರಗಳು ಸಿಕ್ಕಿರುವುದರಿಂದ ಈ ಮೂರು ಮಂದಿಯ ಮೇಲೆ ಎಫ್.ಐ.ಆರ್., ಆಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೊಲೀಸ್ ಇಲಾಖೆಯ ಒಬ್ಬ ಅಧಿಕಾರಿಯನ್ನು ಸಸ್ಪೆಂಡ್ ಮಾಡಲಾಗಿದೆ, ಇದನ್ನು ಸರಿಯಾದ ರೀತಿಯಲ್ಲಿ ಮಾನಿಟರ್ ಮಾಡದೇ ಇರುವುದರಿಂದ ನಮ್ಮ ಇಲಾಖೆಯ ಅಧಿಕಾರಿಯ ಮೇಲೂ ಕ್ರಮ ಕೈಗೊಳ್ಳುತ್ತಿದ್ದೇವೆ. ಶಿವಮೊಗ್ಗದಲ್ಲಿ ಘಟನೆ ಆದನಂತರ, ನಾವು ನಮ್ಮಲ್ಲಿರುವ ಎಲ್ಲಾ ಇಲಾಖೆಗಳಿಗೆ ಸುತ್ತೋಲೆ ಕಳುಹಿಸಿ, ತಮ್ಮಲ್ಲಿರುವ ಸ್ಫೋಟಕಗಳಿಂದ ಮತ್ತೊಮ್ಮೆ ಇಂತಹ ಅನಾಹುತಗಳಾಗಬಾರದು, ಕಾನೂನುಬಾಹಿರವಾಗಿರುವಂತಹ ಸ್ಫೋಟಕಗಳಾದ gelatin sticks, detonators, ammonium nitrate - ಇವುಗಳನ್ನು ಒಂದು ಕಡೆ ದೊಡ್ಡ ಪ್ರಮಾಣದಲ್ಲಿ ಇಟ್ಟುಕೊಂಡಿರುತ್ತಾರೋ ಅವುಗಳನ್ನು ಸರೆಂಡರ್ ಮಾಡಿ ಎಂದು ಹೇಳಿದ್ದೇವೆ. ಕಂದಾಯ ಇಲಾಖೆ ಆಗಿರಬಹುದು, ಪೊಲೀಸ್ ಡಿಪಾರ್ಟ್‌ಮೆಂಟ್ ಅಥವಾ ನಮ್ಮ ಡಿಪಾರ್ಟ್‌ಮೆಂಟ್‌ಗೆ 8 ದಿವಸದ ಒಳಗೆ ತಂದು ಸರೆಂಡರ್ ಮಾಡಿದರೆ ನಿಮ್ಮ ಮೇಲೆ ಕೇಸ್ ಮಾಡುವುದಿಲ್ಲ ಎಂದು ಹೇಳಿದ್ದೇವೆ. ಹಿಂದೆ ಏನೋ ಒಂದು ತಪ್ಪಾಗಿದೆ. ಈಗ ಸ್ಫೋಟಕಗಳನ್ನು ತಂದು ಇಟ್ಟುಕೊಂಡಿದ್ದರೋ ಅಥವಾ ಒಂದು ವರ್ಷದ ಹಿಂದೆ ತಂದು ಸ್ಟಾಕ್ ಮಾಡಿದ್ದಾರೋ ಗೊತ್ತಿಲ್ಲ. ಆದರೆ ಇರುವಂಥದ್ದು ಸರೆಂಡರ್ ಮಾಡಿ ಎಂದು ಅವರಿಗೆ ಸೂಚನೆ ಕೊಟ್ಟಾಗ ಅವರು, ನಮ್ಮ ಲೈಸೆನ್ಸ್ ಸೀಜ್ ಮಾಡಿಬಿಟ್ಟರೆ ಅಥವಾ ನಮ್ಮನ್ನು ಅರೆಸ್ಟ್ ಮಾಡಬಹುದು ಎನ್ನುವ ಹಿನ್ನೆಲೆಯಲ್ಲಿ ಮೈನಿಂಗ್ ಪ್ರದೇಶದಿಂದ ಒಂದೆರಡು ಕಿಲೋ ಮೀಟರ್ ದೂರಕ್ಕೆ ಹೋಗಿ ಸ್ಫೋಟಕಗಳನ್ನು ಎಸೆದಿದ್ದರಿಂದ ಅಲ್ಲಿ ಬ್ಲಾಸ್ಟ್ ಆಗಿದೆ. ಮಾನ್ಯ ಸಭಾಪತಿಯವರೇ, ತಾಲ್ಲೂಕು ಮಟ್ಟದಲ್ಲಿ raid ಗೆ ಹೋದಾಗ ಇಂಥದ್ದು ಇನ್ನೂ ಸಾಕಷ್ಟು ಸಿಗುತ್ತಿದೆ. ಅವರು ಹೆದರಿ ಸರೆಂಡರ್ ಮಾಡುತ್ತಿಲ್ಲ. ಎಲ್ಲಾ ಜಿಲ್ಲೆಗಳಲ್ಲೂ ಸಹಿತ ನಮ್ಮ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ಡಿ.ಜಿ.ಎಂ.ಎಸ್., ಅವರ ಕಡೆಯಿಂದ 'ಒನ್ ಡೇ ವರ್ಕ್‌ಶಾಪ್' ಮಾಡುತ್ತಿದ್ದೇವೆ. ಈಗಾಗಲೇ ಈ ವರ್ಕ್‌ಶಾಪ್‌ಗಳು 15-20 ಜಿಲ್ಲೆಗಳಲ್ಲಿ ಪೂರ್ಣಗೊಂಡಿದೆ. ನಾಳೆ ಬೆಂಗಳೂರಿನ ಪ್ಯಾಲೆಸ್ ಗ್ರೌಂಡ್‌ನಲ್ಲಿ ಬೆಳಗ್ಗೆ 10.30ಕ್ಕೆ ಎಲ್ಲಾ ಮೈನಿಂಗ್ ಓನರ್‌ಗಳನ್ನು ಕರೆಸಿ ಒಂದು ದಿವಸದ ವರ್ಕ್‌ಶಾಪ್ ಮಾಡುತ್ತಿದ್ದೇವೆ. ಈ ರೀತಿ ಈ ತಿಂಗಳ ಒಳಗಾಗಿ 30 ಜಿಲ್ಲೆಗಳಲ್ಲಿ ತರಬೇತಿ ಕೊಡುವ ಕೆಲಸ ಮಾಡುತ್ತೇವೆ. ಇದರಲ್ಲಿ ಪ್ರಿಲಿಮಿನರಿ ಟೆಸ್ಟಿಂಗ್ ಮಾಡಲಾಗುತ್ತದೆ. ಗಣಿಗಾರಿಕೆಯ ಮಾಲೀಕರು ಯಾವರೀತಿ ಜಾಗೃತಿ ವಹಿಸಬೇಕು, ಯಾವರೀತಿ ಸ್ಟೋರ್ ಮಾಡಬೇಕು, ಯಾವರೀತಿ ಟ್ರಾನ್ಸ್‌ಪೋರ್ಟ್ ಮಾಡಬೇಕು, ಯಾವರೀತಿ ನಮ್ಮ ಅಧಿಕಾರಿಗಳಿಂದ ಪರವಾನಗಿಯನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ಕೊಡುವಂಥದ್ದು ಆಗುತ್ತಿದೆ. ಈಗಾಗಲೇ 15 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಈ ತರಬೇತಿ ಕಾರ್ಯಕ್ರಮವನ್ನು ನಡೆಸಿ ಕೊಡಲಾಗಿದೆ. ಬರುವ 30 ನೇ ತಾರೀಖಿನ ಒಳಗಾಗಿ ಎಲ್ಲರಿಗೂ ತರಬೇತಿ ಸಿಗುವ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸಭಾಪತಿಯವರೇ, ಇದು ಸಂಪೂರ್ಣವಾಗಿ ಗಣಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಭೂವಿಜ್ಞಾನ ಇಲಾಖೆಯಿಂದ ಆಗದೇ ಇರುವಂಥದ್ದಾಗಿದೆ. ಇದು ಪೊಲೀಸ್ ಇಲಾಖೆಯ ಜಥಿಠಿಟಥಿತಿಫ ನವರ ಕಡೆಯಿಂದಾಗಿದೆ, ಬೇರೆಯವರ ಕಡೆಯಿಂದಾಗಿದೆ ಎಂದು ಅವರ ಮೇಲೆ ಬ್ಲೇಮ್ ಮಾಡುತ್ತಿಲ್ಲ, ಜವಾಬ್ದಾರಿ ನಮ್ಮದೇ ಆಗಿರುತ್ತದೆ. ಮುಂಬರುವ ದಿವಸಗಳಲ್ಲಿ ಹೀಗೆ ಆಗಲಾರದ ಹಾಗೆ ಗಮನಹರಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ನನ್ನದೊಂದು ಸಲಹೆ ಇದೆ. ಮಾನ್ಯ ಸಚಿವರು ಒಂದು University of Mining ಅನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದರು. ತಮಗೆ ಗೊತ್ತಿರುವ ಹಾಗೆ, ಕೇಂದ್ರ ಸರ್ಕಾರದ Ministry of Coal ಅಡಿಯಲ್ಲಿ Indian School of Mines ಎಂಬುದು ಇದೆ. ಇದು ಇಂತಹ related activities ನೋಡಿಕೊಳ್ಳುವುದರಿಂದ ಅದರ ಒಂದು ಕಚೇರಿಯನ್ನು ಇಲ್ಲೂ ಓಪನ್ ಮಾಡುವುದಕ್ಕೆ ಪ್ರಯತ್ನ ಮಾಡಬಹುದು. ಮಾನ್ಯ ಸಚಿವರು ಮಾತನಾಡುತ್ತಾ, ಓನರ್‌ಗಳನ್ನು ಅರೆಸ್ಟ್ ಮಾಡುವುದು ಅಷ್ಟು ಸರಿಹೋಗುವುದಿಲ್ಲ ಎಂದು ಹೇಳಿದರು. ಯಾರೇ ಆಗಲಿ, condition of license violate ಮಾಡಿದ್ದರೆ ಅದರ ಪ್ರಕಾರ ಮಾಡಬೇಕಾಗುತ್ತದೆ. ನಿಮ್ಮ ಹೇಳಿಕೆ ಎನ್‌ಕ್ವೈರಿ ಆಫೀಸರ್‌ನ ಮೇಲೆ ಇನ್‌ಫ್ಲೂಯೆನ್ಸ್ ಮಾಡಬಾರದು. ದಯಮಾಡಿ ತಾವು ಅಷ್ಟರಮಟ್ಟಿಗೆ ಕಾಳಜಿ ವಹಿಸಿ.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಡುವಾಗ 6000 ಕೋಟಿ ರೂ.ಗಳು ರಾಜಸ್ವ ಇದೆ ಎಂದು ಹೇಳಿದರು. ಅವರು ಬಹಳ successful industrialist ಆಗಿದ್ದಾರೆ ಮತ್ತು ಮಂತ್ರಿಗಳು ಆಗಿದ್ದಾರೆ. ಅವರ ಬಗ್ಗೆ ಗೌರವ ಇದೆ. 6000 ಕೋಟಿ ರೂ.ಗಳೇನು ಹಣ ಉಳಿದಿದೆ, ಇದನ್ನು ಹಾಕಿದವರು ಯಾರು? ಅಧಿಕಾರಿಗಳು ಅಲ್ಲವೇ? ಅಧಿಕಾರಿಗಳು ಯಾವ ಆಧಾರದ ಮೇಲೆ ದಂಡ 6000 ಕೋಟಿ ರೂ.ಗಳನ್ನು ಹಾಕಿದರು? ಅಥವಾ ಅವರೇನಾದರೂ ಬೇಕು ಎಂತಲೇ ಹಾಕಿದರೇ? ಅಥವಾ ಅವರು ಎಷ್ಟು materials ತೆಗೆದಿದ್ದಾರೆ?

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಎಲ್ಲಿ ಮೈನಿಂಗ್ ಮಾಡುತ್ತಾರೋ ಅಲ್ಲಿ ಡ್ರೋನ್ ಮೂಲಕ ಸರ್ವೇ ಮಾಡಿ excavated portion ನಲ್ಲಿ total volume calculate ಮಾಡುತ್ತಾರೆ. ಅವರು entire excavated area zÀ volume ತೆಗೆದು ರಾಯಲ್ಟಿ ಹಾಕಿ multiplied by five times ಹಾಕಿ ಒಂದು ಫಿಗರ್‌ಗೆ ತಂದುಬಿಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವೇನು wastage ಬರುವುದನ್ನು overburden ಎಂದು ಕರೆಯುತ್ತೇವೆಯೋ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಅದು ಅವರವರಿಗೆ ಇರುವಂತಹ ಜುರಿಣಾಣಜ ಆಗಿದೆ. ಇವತ್ತು ಯಾವುದೇ ಒಂದು ಮೈನಿಂಗ್ ಎಂದು ಮಾಡಬೇಕಾದರೆ, ಕಲ್ಲಿನಲ್ಲಿ 10 ರಿಂದ 20 ಪರ್ಸೆಂಟ್ ಅಷ್ಟು ರೆಕವರಿ ಬರುತ್ತದೆ. ನಾನು ಒಂದು ಉದಾಹರಣೆ ಹೇಳಿದೆ. ಒಂದೂವರೆ ಎಕರೆಗೆ ಸಂಬಂಧಪಟ್ಟಂತೆ 80 ಕೋಟಿ ರೂ.ಗಳ ಪೆನಾಲ್ಟಿ ಹಾಕಿದ್ದಾರೆ. ಅಲ್ಲಿ volume ತೆಗೆದು ಏನೇನೋ ಮಾಡಿ ಹಾಗೆ ಮಾಡಿದ್ದಾರೆ, ಅದು ನನಗೆ ಅವೈಜ್ಞಾನಿಕ ಎನಿಸುತ್ತಿದೆ. ಸಾಗುವಳಿ ಜಮೀನನ್ನು ಪರಿಗಣಿಸಿ 5ರಷ್ಟು ಹೆಚ್ಚು ಮಾಡಲಿ ಮತ್ತು ಖನಿಜ ಸಂಪತ್ತಿನದೂ ಬೆಲೆ ನಿಗದಿ ಮಾಡಲಿ.

**ಶ್ರೀ ಎಸ್.ರವಿ:–** ಕೆಲಸ ಪ್ರಾರಂಭವಾದ ಮೇಲೆ ಏನು ಕಂಡೀಷನ್ ಇತ್ತೋ ಅದನ್ನು ಡ್ರೋನ್ ಮೂಲಕ ಸರ್ವೇ ಮಾಡಲಾಗಿದೆ. ಆದರೆ, ಕೆಲಸ ಮಾಡುವುದಕ್ಕೆ ಮುಂಚೆ geographical condition ಏನಿತ್ತೋ ಅದರ ಚಿತ್ರಣ ಇಲ್ಲ, ಒಂದು ಫೋಟೋ ಕೂಡ ಇಲ್ಲ. ಅದು ಒಂದು ಇಮ್ಯಾಜಿನೇಷನ್ ಅಷ್ಟೆ. ಇವತ್ತು, 100 ಅಡಿ ಆಳಕ್ಕೆ ಹೋಗಿ ಕೆಲಸ ಮಾಡಿದ್ದಾರೆ ಎಂದು ಅದಕ್ಕಿಷ್ಟು ದಂಡ ಹಾಕುತ್ತಾರೆ ಅಷ್ಟೆ. ಅದಕ್ಕೆ ಮುಂಚೆ, ಮೊದಲೇ 100 ಅಡಿ ಆಳ ಇತ್ತೋ ಇಲ್ಲವೋ ಎಂದು ಡ್ರೋನ್ ಮೂಲಕ ಸರ್ವೆ ಮಾಡಲಾಗಿದೆಯೇ? ಇಲ್ಲ. ಹಾಗಾಗಿ ಅದು ವಾಸ್ತವಾಂಶ ಅಲ್ಲ. 6000 ಕೋಟಿ ರೂ.ಗಳ ದಂಡದ ಮೊತ್ತ ಏನಿದೆ ಅದು ವಾಸ್ತವ ದಂಡದ ಮೊತ್ತವಲ್ಲ.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಮತ್ತು ಗಣಿ ಮಾಲೀಕರು ಶಾಮೀಲಾಗಿರುವುದರಿಂದ ಇವರಿಗೆ ನೋಟಿಸ್ ಕೊಡುವುದಾಗಲಿ, ಮೆಷರ್‌ಮೆಂಟ್ ಮಾಡುವುದಾಗಲಿ ಮಾಡಿಲ್ಲ. ಸ್ಟ್ರಿಕ್ಟ್ ಮಾಡುವ ತನಕವೂ ಇದು ಹೀಗೆ ನಡೆದುಕೊಂಡು ಬಂದಿದೆ. ನಾವು ಸ್ಟ್ರಿಕ್ಟ್ ಮಾಡಲು ಪ್ರಾರಂಭಿಸಿದಾಗ ಇಂತಹ ಸಮಸ್ಯೆಗಳು ಉಂಟಾಗಿವೆ.

**ಶ್ರೀ ಎನ್.ಅಪ್ಪಾಜಿಗೌಡ:–** ನನ್ನದು ಇನ್ನೊಂದು ಪ್ರಶ್ನೆ ಇದೆ.

**ಉಪಸಭಾಪತಿಯವರು:–** ನಿಮ್ಮ ಪ್ರಶ್ನೆಯನ್ನು ಒಂದೇ ಸಲ ಕೇಳಿಬಿಡಿ. ಈಗ ಸಮಯ ಎಷ್ಟಾಗಿದೆ ಎಂದು ದಯವಿಟ್ಟು ನೋಡಿ. ನಿಯಮ 68ರ ಅಡಿಯಲ್ಲಿ ಯಾರು 8 ಜನ ಮಾತನಾಡುವುದಕ್ಕೆ ಹೆಸರು ಕೊಟ್ಟಿದ್ದರೋ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಇದು ಕೇವಲ ಚಿಕ್ಕಬಳ್ಳಾಪುರ ಜಿಲ್ಲೆಗೆ ಮಾತ್ರ ಸೀಮಿತವಾಗಿರುವಂತಹ ವಿಷಯವಲ್ಲ. ಇಡೀ ರಾಜ್ಯಕ್ಕೆ ಅನ್ವಯಿಸುತ್ತದೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಸರ್ಕಾರದ ಕೆಲಸಕ್ಕೋಸ್ಕರ ಕ್ವಾರಿಯನ್ನು ಅಲಾಟ್ ಮಾಡಿದರು. ಆಗ ಗುತ್ತಿಗೆದಾರರು ಕಲ್ಲು, ಎಂ–ಸ್ಯಾಂಡ್ ಎಲ್ಲವನ್ನೂ ತೆಗೆದರು. ಬೇರೆ ಬೇರೆ ಕಡೆ ಮಾರಾಟ ಮಾಡಿದರು. ಅದೇ ಕಲ್ಲನ್ನು, ಎಂ–ಸ್ಯಾಂಡನ್ನು ಸರ್ಕಾರದ ಬೇರೆ ಕಾಮಗಾರಿಗಳಿಗೆ ಉಪಯೋಗಿಸಿಕೊಂಡರು. ಆಗ entire Government machinery ಒಂದಾಯಿತು. ಇಂತಹ ಜ್ವಲಂತ ಸಮಸ್ಯೆಗಳೂ ಇವೆ. ಈ ಶೆಲ್ಟರ್‌ನಲ್ಲಿ ಮೈನಿಂಗ್ ಓನರ್‌ಗಳು ಪ್ರಾಮಾಣಿಕವಾಗಿ ದಂಡವನ್ನು ಕಟ್ಟಿರಬಹುದು. ಆದರೆ ಅದನ್ನೇ ಮೆಜಾರಿಟಿಗೆ ಹೋಲಿಕೆ ಮಾಡುವುದು ತಪ್ಪು ಎನ್ನುವುದು ನನ್ನ ಭಾವನೆಯಾಗಿದೆ.

**(ಮುಂದು)**

**(438) 16–03–2021 6.10 ಡಿಎಸ್:ಎಂಡಿ**

**ಶ್ರೀ ಅಪ್ಪಾಜಿಗೌಡ (ಮುಂದು):–**

ನಾವೇ ಆ ವಿಷಯಕ್ಕೆ ಬೇರೆ ಬೇರೆ ಕಡೆ ದೂರನ್ನು ನೀಡಿದೆವು. ಯಾರಿಗೆ ಸರ್ಕಾರಿ ಕ್ವಾರಿ allot ಆಯಿತೋ ಅವನು ಬೇರೆಯವರಿಗೆ ಮಾರಾಟ ಮಾಡಿದ್ದಾನೆ. ಈಗಲೂ ಸಹ ನಮ್ಮ ತಾಲ್ಲೂಕಿನಲ್ಲಿ ಟನ್‌ಗಟ್ಟಲೆ ದೊಡ್ಡ ದೊಡ್ಡ ಬೆಟ್ಟದಷ್ಟು ಅವರು stock ಮಾಡಿದ್ದಾರೆ. ಇದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಈ ರೀತಿ ಅಕ್ರಮ ಮಾಡಲಿಕ್ಕೆ ಅವಕಾಶವಿದೆಯೇ?

**ಶ್ರೀ ಸುನೀಲ್ ವಲ್ಯಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೆ, ಸಚಿವರು ಈಗಾಗಲೇ ಜಲ್ಲಿ ಕಲ್ಲಿನ ಬಗ್ಗೆ, minor minerals and major mineral ಬಗ್ಗೆ ಹೇಳಿದ್ದಾರೆ. ಕಲ್ಬುರ್ಗಿ ಜಿಲ್ಲೆಯಲ್ಲಿ Shabad Stone ಬಹಳ ಮುಖ್ಯವಾದುದು. ಈ Shabad Stone ಬಗ್ಗೆ ಮಾನ್ಯ ಸಚಿವರು ಸ್ವಲ್ಪ ಗಮನ ಹರಿಸಬೇಕು. Shabad Stone ಗೆ ಸಂಬಂಧಿಸಿದಂತೆ ಮಾತ್ರ ಈಗ manually ಕೆಲಸ ಮಾಡತಕ್ಕಂಥಾದ್ದು. ಉಳಿದಿದ್ದೆಲ್ಲಾ machinery ಬಳಸಿ ಕೆಲಸ ಮಾಡಲಾಗುತ್ತಿದೆ. ಈ ಕಸುಬನ್ನು ನಂಬಿಕೊಂಡಿರುವವರು ಈ ವಡ್ಡರ ಭೋವಿ ಜನಾಂಗದವರು. ಇವತ್ತಿನ ಅವರ ಪರಿಸ್ಥಿತಿ ಏನಾಗಿದೆ ಎಂದರೆ, ಅವರೆಲ್ಲರೂ ಇಲ್ಲಿ ಬೆಂಗಳೂರಿಗೆ ಬಂದು ಕೂಲಿ ಕೆಲಸ ಮಾಡಿಕೊಂಡು settle ಆಗಿದ್ದಾರೆ. Shabad Stone ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಿಸಿದಂತೆ ಅಲ್ಲಿರುವ ಗಣಿಗಾರಿಕೆ ಬಂದ್ ಆಗಿರುವುದರಿಂದ ಅವರೆಲ್ಲಾ ಇಲ್ಲಿಗೆ ಬರುತ್ತಿದ್ದಾರೆ. Drone camera ಸಮೀಕ್ಷೆಯನ್ನು ಗಮನಿಸಿದಾಗ ಅಲ್ಲಿ ಒಬ್ಬೊಬ್ಬರಿಗೆ ಒಂದು ಎಕರೆ, ಅರ್ಧ ಎಕರೆ ಕ್ವಾರಿ ಇದೆ. ಅಂತಹವರಿಗೆ 20 ಲಕ್ಷ ರೂ., 30 ಲಕ್ಷ ರೂ. royalty ಯನ್ನು ಹಾಕಿದ್ದಾರೆ ಮತ್ತು ಅದರ ಮೇಲೆ ದಂಡವನ್ನು ಸಹ ವಿಧಿಸಿದ್ದಾರೆ. Drone camera ದಿಂದ ಸರ್ವೇ ಮಾಡಿ manually ತೆಗೆಯುವಾಗ ನಿಜವಾದ quantity ಬರುವುದು ಸುಮಾರು ಶೇಕಡ 80 ರಷ್ಟು wastage ಬರುತ್ತದೆ. ಅದರಲ್ಲಿ ಶೇಕಡ 20 ರಷ್ಟು ಮಾತ್ರ ರಾಜಧನ ಕಟ್ಟತಕ್ಕಂಥ ಕಲ್ಲು ಬರುತ್ತದೆ. ಅದರ ಬಗ್ಗೆಯೂ ಸಹ ಇವತ್ತಿನ ದಿವಸ ಸರ್ಕಾರ ಗಮನವನ್ನು ಹರಿಸಬೇಕು. Shabad Stone ಮತ್ತು ಅಲ್ಲಿರತಕ್ಕಂಥ ಕಾರ್ಮಿಕರ ಬಗ್ಗೆಯೂ ಸಹ ಚಿಂತನೆಯನ್ನು ಮಾಡಬೇಕು. MDF (Mineral Development Fund) grant ನಾವು ಗಣಿಗಾರಿಕೆ ಪ್ರದೇಶದಲ್ಲಿ ಏನು ಕಟ್ಟುತ್ತಿದ್ದೇವೆ, ಆ ಏರಿಯಾ ಬಿಟ್ಟು ಗಣಿಗಾರಿಕೆ ಎಲ್ಲಿ ನಡೆಯುತ್ತಿದೆ, ಆ ಏರಿಯಾದಲ್ಲಿ ಮಾತ್ರ ಕೊಡಬೇಕು. ಅದನ್ನು ಬಿಟ್ಟು ನಾವು ನಗರ ಪ್ರದೇಶದಲ್ಲಿ MDF grant ಕೊಡುತ್ತೇವೆಂದರೆ ಇದು ಯಾವ ನ್ಯಾಯ? ಹಾಗಾಗಿ ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕೆಂದು ತಮ್ಮ ಮುಖಾಂತರ ನಾವು ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ.

**ಡಾ|| ತೇಜಸ್ವಿನಿಗೌಡ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನಗೆ ಎರಡು ಸ್ಪಷ್ಟೀಕರಣ ಬೇಕು. ಬೆಳಿಗ್ಗೆ ನಮ್ಮ ಸಹೋದರಿಯಾದಂಥ ಶ್ರೀಮತಿ ವೀಣಾ ಅಚ್ಚಯ್ಯನವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಈಗಾಗಲೇ ಇರತಕ್ಕಂಥ ನಿಧಿಯಲ್ಲಿ developmental works ಗೆ ಸರ್ಕಾರ allocate ಮಾಡಿದೆ. ಅತಿ ಹೆಚ್ಚು ಮಳೆಯಾಗತಕ್ಕಂಥ ಮಲೆನಾಡು ಹಾಗೂ ಇತರೆ ಪ್ರದೇಶಗಳಲ್ಲಿ ನಿಗದಿತ ಸಮಯದಲ್ಲಿಯೇ ಕಾಮಗಾರಿಗಳನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಬೇಕಾದಂಥ ಕಚ್ಚಾ ವಸ್ತುಗಳನ್ನು, ವಿಶೇಷವಾಗಿ ರಸ್ತೆ, ಕಟ್ಟಡ ಸಾಮಗ್ರಿಗಳನ್ನು ಪೂರೈಕೆ ಮಾಡಬೇಕಾಗುತ್ತದೆ. ನಮ್ಮ ಸಚಿವರು ಕೊಟ್ಟಿರುವ ಉತ್ತರದಲ್ಲಿ ಚಿಕ್ಕಬಳ್ಳಾಪುರ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈ ಘಟನೆ ನಡೆದ ಹಿನ್ನೆಲೆಯಲ್ಲಿ ಗಣಿಗಾರಿಕೆಯನ್ನು ಸ್ಥಗಿತ ಮಾಡಲಾಗಿರುತ್ತದೆ ಎನ್ನಲಾಗಿದೆ. ನಡೆದಿರತಕ್ಕಂಥ ಘಟನೆ accidental ಆಗಿದೆಯೇ ಅಥವಾ ಅಕ್ರಮವಾಗಿ ಆರೋಪಿಗಳನ್ನಾಗಿ ಏನು ಮಾಡಿದ್ದಾರೆಂಬುದನ್ನು clarify ಮಾಡಿ. ಆ ಘಟನೆಗೆ ಸಂಬಂಧಪಟ್ಟ ಹಾಗೆ ಈಗಾಗಲೇ ಮಾಲೀಕರ ವಿರುದ್ಧ ಕೇಸ್ ದಾಖಲು ಮಾಡಿದ್ದಾರೆ. ಅಲ್ಲಿ ಕೆಲಸವನ್ನು ಪ್ರಾರಂಭ ಮಾಡದೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋದರೆ, if it is legally allocated, ಇದು ಒಂದು accident ಎನ್ನುವುದಾದರೆ ಅದಕ್ಕೆ ಕಾನೂನಿನ ಕ್ರಮಗಳು ಬೇರೆ ತೆಗೆದುಕೊಳ್ಳೋಣ. ಅಲ್ಲಿ ಉತ್ಪನ್ನ ಏನಿದೆ, ಆ ಸಾಮಗ್ರಿಗಳನ್ನು ಬಳಸಲು ಅವರಿಗೆ ಅವಕಾಶ ಮಾಡಿಕೊಡದೇ ಹೋದರೆ ಒಂದು ಕಡೆ ಉದ್ಯೋಗಾವಕಾಶಗಳು ಕಡಿಮೆಯಾಗುತ್ತವೆ, ಮತ್ತೊಂದು ಕಡೆ ರಾಜ್ಯದ ಅಭಿವೃದ್ಧಿ ಕೆಲಸಗಳು ಸಹ ಕುಂಠಿತವಾಗುತ್ತದೆ. ಆದ್ದರಿಂದ ಬಗ್ಗೆ ಸರ್ಕಾರದಿಂದ clarity ಬೇಕಾಗುತ್ತದೆ. ತಾವೇ ಹೇಳಿದ ಹಾಗೆ ಮಾಲೀಕರ ಬಗ್ಗೆ concern ಒಳ್ಳೆಯದು. At the same time, DGMS (Director General of Mines Safety) mines safety ಬಗ್ಗೆ ಜಾಗೃತಿಯನ್ನು ಮೂಡಿಸಬೇಕಾಗಿದೆ. ಅದನ್ನು ಅವರು violate ಮಾಡಿದ್ದರೆ ಅದಕ್ಕೆ ಕಾನೂನು ಕ್ರಮ ನಿರ್ಧಾರಿತವಾಗಿ ಆಗಲೇಬೇಕು. ಅವರು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದೇ ರೀತಿ ತಕ್ಷಣವೇ ಅದನ್ನು ಪ್ರಾರಂಭ ಮಾಡಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟೀಕರಣ ಬೇಕು.

**ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಶಿವಮೊಗ್ಗದಲ್ಲಿ ನಡೆದ ದುರಂತದ ಬಗ್ಗೆ ಪರಿಹಾರ ಕೊಡುವುದರ ಬಗ್ಗೆಯೂ ಸಹ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕು.

**ಶ್ರೀ ಕೆ.ಹರೀಶ್ ಕುಮಾರ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅನಧಿಕೃತ ಕಲ್ಲು ಗಣಿಗಾರಿಕೆಯನ್ನು ಪತ್ತೆ ಹಚ್ಚಿದ ಪ್ರಕರಣಗಳು ಮೂರು ವರ್ಷಗಳಲ್ಲಿ 1259, ದಾಖಲಿಸಿದ ಪ್ರಕರಣಗಳು 324 ಅಂದರೆ 935 ಪ್ರಕರಣಗಳು ಏಕೆ ದಾಖಲಾಗಿಲ್ಲ? ಉತ್ತರದಲ್ಲಿ ಅನಧಿಕೃತ ಕಲ್ಲು ಗಣಿಗಾರಿಕೆ ಪತ್ತೆ ಹಚ್ಚಿದ ಪ್ರಕರಣಗಳು ಎಂದು ಕೊಟ್ಟಿದ್ದೀರಿ. ಆದರೆ 935 ಪ್ರಕರಣಗಳು ದಾಖಲಾಗಿಲ್ಲ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸುನೀಲ್ ವಲ್ಯಾಪುರೆರವರು Shabad Stone ಬಗ್ಗೆ ವಿವರಣೆಯನ್ನು ಕೇಳಿದ್ದಾರೆ. ನಾವು new mining policy ಮಾಡುವಂಥ ಸಂದರ್ಭದಲ್ಲಿ Shabad Stone ಬಗ್ಗೆ ಒಂದು chapter include ಮಾಡುತ್ತಿದ್ದೇವೆ. ಅಲ್ಲಿರುವಂಥ ಕೆಲಸಗಾರರಿಗೆ ತೊಂದರೆಯಾಗದಂತೆ ನಾವು ಗಮನ ಹರಿಸುತ್ತೇವೆ. ಮಾನ್ಯ ಸದಸ್ಯರು ತಿಳಿಸಿದ ಹಾಗೆ ಏನು ಮಳೆಗಾಲ ಪ್ರಾರಂಭವಾಗುತ್ತದೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಘಟನೆಯ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಎಲ್ಲಾ ಗಣಿಗಾರಿಕೆಗಳು ಸ್ಥಗಿತಗೊಂಡಿವೆ. ಗಡಿಯಲ್ಲಿರುವಂಥ ಅಕ್ಕಪಕ್ಕದ ರಾಜ್ಯದವರು ಕಡಿಮೆ ದರದಲ್ಲಿ material ಗಳನ್ನು ತಂದು ಇಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

stock ಮಾಡುವುದರಿಂದ ನಮಗೆ ರಾಜಸ್ವವು ಕಡಿಮೆಯಾಗುತ್ತದೆ ಮತ್ತು ನಮ್ಮಲ್ಲಿರುವಂಥ ಉದ್ಯೋಗಾವಕಾಶ ಮತ್ತು ಗಣಿ ಮಾಲೀಕರಿಗೂ ಸಹ ತೊಂದರೆಯಾಗುತ್ತಿದೆ. ತಾವುಗಳೆಲ್ಲರೂ ಒಪ್ಪುವುದಾದರೆ 60 ದಿನಗಳಲ್ಲಿ ಗಣಿ ಮಾಲೀಕರಿಂದ undertaking ತೆಗೆದುಕೊಂಡು LIN (Labour Identification Number) license, explosive license ಗೆ ಚಿಂಿಂಟಥಿ ಮಾಡಿರುವಂಥ copy ಯನ್ನು ತೆಗೆದುಕೊಂಡು, ಈಗಾಗಲೇ ಕಡಿಮೆ ಜನರ ಕಡೆ ಪರವಾನಗಿ ಇದೆ, ಅವರ ಜೊತೆಗೆ ಅಗ್ರಿಮೆಂಟ್ ಮಾಡಿಕೊಂಡು 60 ದಿನಗಳಲ್ಲಿ ಪರವಾನಗಿಯನ್ನು ಕೊಡಬೇಕೆಂಬುದು ನನ್ನ ವೈಯಕ್ತಿಕವಾದ ವಿಚಾರವಾಗಿದೆ. ನೀವೆಲ್ಲರೂ ಒಪ್ಪುವುದಾದರೆ ನಾನು ನಾಳೆಯಿಂದಲೇ crushers ನ್ನು ಪ್ರಾರಂಭ ಮಾಡಿಸುತ್ತೇನೆ. 60 ದಿನಗಳಲ್ಲಿ ಅವರು strict ಆಗಿ ಪರವಾನಗಿಯನ್ನು ಪಡೆದುಕೊಳ್ಳಲೇಬೇಕು. This is a small relief for them. ಇನ್ನೊಂದು ವಿಚಾರ ಏನು ಮಾಡಿದೆ ಎಂದರೆ, ಕರ್ನಾಟಕ ರಾಜ್ಯದಲ್ಲಿ ಮಂಗಳೂರಿನಲ್ಲಿ ಮಾತ್ರ explosive license ಕೊಡುವಂಥ ಸಾಧ್ಯತೆ ಇದೆ. ನಿನ್ನೆಯ ದಿವಸ ಬೆಳಗಾವಿಗೆ ಹೋದಾಗ, ಅಲ್ಲಿ ಸುಮಾರು 300 ಗಣಿಗಾರಿಕೆ ಇದೆ. ಒಂದೇ ಬಾರಿಗೆ 300 ಗಣಿಗಳ ಅರ್ಜಿಗಳು ಹೋದರೆ ಅವರು 300 ಗಣಿಗಳನ್ನು attend ಮಾಡುವುದಕ್ಕಾಗುವುದಿಲ್ಲ. ಉದಾಹರಣೆಗೆ ಮಂಗಳೂರಿನ ಅಧಿಕಾರಿಯನ್ನೇ ಬೆಳಗಾವಿಗೆ ಕರೆಸಿಬಿಟ್ಟರೆ, ಅವರು ಎಲ್ಲವರು scrutiny ಮಾಡಿ random ಆಗಿ 10-20 ಕಡೆ ಭೇಟಿ ಮಾಡಿ ಪರವಾನಗಿಯನ್ನು ಕೊಟ್ಟರೆ, ಕಡಿಮೆ ಅವಧಿಯಲ್ಲಿ ಪರವಾನಗಿಯನ್ನು ಕೊಟ್ಟ ಹಾಗೆ ಆಗುತ್ತದೆ. ಅದನ್ನೆಲ್ಲಾ ಮಾಡಿ ಸರಿಯಾದ ರೀತಿಯಲ್ಲಿ checklist ಮಾಡಿ ಅದರ ಪ್ರಕಾರ ಎಲ್ಲಾ ದಾಖಲೆಗಳನ್ನು ಹೊಂದಿಸಿಟ್ಟುಕೊಂಡರೆ ಕಡಿಮೆ ಸಮಯದಲ್ಲಿ ಪರವಾನಗಿಯನ್ನು ಕೊಡಬಹುದು. ಅಲ್ಲಿ ಅಧಿಕಾರಿಗಳು ಬಹಳ ಕಡಿಮೆ ಇದ್ದಾರೆ. ಅಧಿಕಾರಿಗೆ ಸಹಾಯ ಮಾಡಲು ಬೇಕಾದರೆ ಬೇರೆ ಇಲಾಖೆಯಿಂದಲೂ ಸಿಬ್ಬಂದಿಗಳನ್ನು ಕೊಟ್ಟು ಸರಿ ಮಾಡಿಸುವಂಥಾದ್ದಿದೆ. ಅವರಿಗೆ undertaking ಕೊಟ್ಟು ಕೆಲಸ ಪ್ರಾರಂಭ ಮಾಡಿಸುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ. ತಾವು ಒಪ್ಪುವುದಾದರೆ ನಾಳೆಯಿಂದಲೇ ಕೆಲಸವನ್ನು ಪ್ರಾರಂಭ ಮಾಡಿಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಒಂದು ಸಲಹೆ ನೀಡುತ್ತೇನೆ. ಹಿಂದೆ acid attack ಘಟನೆಗಳು ಆದಂಥ ಸಂದರ್ಭದಲ್ಲಿ acid ತೆಗೆದುಕೊಂಡು ಹೋದರೆ ಅವರು ಒಂದು register maintain ಮಾಡಬೇಕು. ಅದನ್ನು ಎಲ್ಲಿ

use ಮಾಡುತ್ತಾರೆ, end user ಯಾರು ಮತ್ತು ತೆಗೆದುಕೊಂಡು ಹೋದವರು ಯಾರು ಎನ್ನುವ ಲೆಕ್ಕ ಸರ್ಕಾರದಲ್ಲಿ ಇರುತ್ತದೆ. ಅದೇ ತರಹ ಈ gelatin and explosives ಗೆ ಒಂದು register maintain ಮಾಡಿ, ಅದನ್ನು ತೆಗೆದುಕೊಳ್ಳುವವರು ಯಾರು, end user ಯಾರು, ಅದನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ ಎನ್ನುವ ಬಗ್ಗೆ ಒಂದು register maintain ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, NOC (No Objection Certificate) ತೆಗೆದುಕೊಳ್ಳಬೇಕಾದರೆ ಅಧಿಕಾರಿಗಳಿಂದ ಸುಲಿಗೆ ಆಗುತ್ತಿದೆ. ಕಂದಾಯ, ಅರಣ್ಯ, ಪೊಲೀಸ್ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿಎ ಗಳಿಂದ ವಸೂಲಿ ಪ್ರಾರಂಭವಾಗುತ್ತದೆ, ಅಧಿಕೃತವಾಗಿ ಗಣಿ ನಡೆಸುವವರ ಬಗ್ಗೆಯೂ ಸಹ ಸರ್ಕಾರ ಗಮನ ಹರಿಸಬೇಕು. ಏಕೆಂದರೆ, ಈಗಾಗಲೆ crusher ಗೆ c-form issue ಮಾಡಲಾಗಿರುತ್ತದೆ. ಅದಲ್ಲದೇ 20 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನೀಡಲಾಗಿರುತ್ತದೆ. ಅವೆಲ್ಲವೂ ಸಹ ಸರ್ವೆಯಾಗಿ, ಒಂದು ಇಂಚು ಸಹ ಅನಧಿಕೃತವಾಗಿ ಮಾಡುವುದಕ್ಕಾಗುವುದಿಲ್ಲ. NOC ಯನ್ನು liberal ಆಗಿ, ಅಧಿಕೃತವಾಗಿ ಕೊಡಲಿ, ಅನಧಿಕೃತವಾಗಿ ಕೊಡುವುದು ಬೇಡ. NOC ಪಡೆದುಕೊಳ್ಳಲು ಎಲ್ಲಿಯೂ ವಸೂಲಿ ಆಗದೇ ಇದ್ದ ಹಾಗೆ, ಅದೊಂದು ಹಿಂಸೆ ಆಗಬಾರದು. ಇದನ್ನು liberal ಆಗಿ ಮಾಡಲು ವಿಶೇಷವಾಗಿ ಈ ಬಗ್ಗೆ ಕಂದಾಯ ಇಲಾಖೆ ಮತ್ತು ಪೊಲೀಸ್ ಇಲಾಖೆಯವರಿಗೆ instructions ಕೊಟ್ಟುಬಿಡಿ. Civil works ಮಾಡುವುದಕ್ಕೆ crusher ಗಳಿಗೆ ತೊಂದರೆಯಾಗಬಾರದು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು);-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಸಕಾರಾತ್ಮಕವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಅವರು ತಮ್ಮ ಇಲಾಖೆಯಲ್ಲಿ ಕೇವಲ ಶೇಕಡ 60ರಷ್ಟು ಮಾತ್ರ ಸಿಬ್ಬಂದಿಗಳಿದ್ದಾರೆ, ಶೇಕಡ 40 ರಷ್ಟು ಹುದ್ದೆಗಳು ಖಾಲಿ ಇದೆ ಎಂದು ಹೇಳಿದರು. ಮಾನ್ಯ ಸಚಿವರು ತ್ವರಿತವಾಗಿ ಏನು ಶೇಕಡ 40ರಷ್ಟು ಹುದ್ದೆಗಳು ಏನು ಖಾಲಿ ಇವೆ, ಅವುಗಳನ್ನು ಭರ್ತಿ ಮಾಡಿ. ಎಷ್ಟು ಸಾಧ್ಯವಿದೆಯೋ ಅಷ್ಟು ಬೇಗನೇ ಹುದ್ದೆಗಳನ್ನು ತುಂಬುವಂಥ ಕೆಲಸವಾಗಲಿ. ಏಕೆಂದರೆ ಇದು ಮಹತ್ವದ ಇಲಾಖೆಯಾಗಿದೆ. ಎಲ್ಲಾ ಅಧಿಕಾರಿಗಳು ತಮ್ಮ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುರ್ಚಿಯಲ್ಲಿದ್ದರೆ ನಾವು ಕೆಲಸವನ್ನು expect ಮಾಡಬಹುದಾಗಿದೆ. ಅಧಿಕಾರಿಗಳು ಕಡಿಮೆ ಇರುವಾಗ ಅವರಿಂದ ನೀವು ಕೆಲಸವನ್ನು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಇನ್ನೊಂದು ಬಹಳ ಸಂತೋಷದ ಸಂಗತಿ ಎಂದರೆ, ಈ ಹಫ್ತಾ ವಸೂಲಿಗೆ, 'I will put an end' ಎಂದು ಹೇಳಿದ್ದೀರಿ. However higher position he or she may be having, ಅವರು ಎಷ್ಟೇ ಉನ್ನತ ಸ್ಥಾನದಲ್ಲಿರಲಿ, ಎಷ್ಟೇ ದೊಡ್ಡವರಾಗಿರಲಿ ಅವರು ಕಾನೂನಿಗಿಂತ ದೊಡ್ಡವರಲ್ಲ. ಹಫ್ತಾ ವಸೂಲಿಯನ್ನು ನಿಶ್ಚಿತವಾಗಿ ತಡೆ ಹಿಡಿಯುತ್ತೇನೆ, ಇದು ಆಗದಂತೆ ನೋಡಿಕೊಳ್ಳುತ್ತೇನೆ ಎಂದು, you have made a statement on the floor of this House. ನಾನು ಅದನ್ನು ಸ್ವಾಗತ ಮಾಡುತ್ತೇನೆ. *ಅದು ಇರುವುದರಿಂದಲೇ ಇಷ್ಟೆಲ್ಲಾ ಅವ್ಯವಹಾರಗಳು, ಅನಾಹುತಗಳುಗಳಾಗುತ್ತವೆ. ಇದರಿಂದ ಅನೇಕ* ಮುಗ್ಧರು ಪ್ರಾಣವನ್ನು ಕಳೆದುಕೊಳ್ಳುತ್ತಿದ್ದರು. ಇದನ್ನು ತಡೆ ಹಿಡಿದರೆ as a Minister it is a major work done by you. ಬಹಳಷ್ಟು ಚಿಂತನೆಗಳನ್ನು ಮಾನ್ಯ ಸಚಿವರು ಹೇಳಿದ್ದಾರೆ.

**(ಮುಂದು)**

**(439) 16–03–2021/6–20/ಬಿಕೆ.ಪಿ–ಎಂ.ಡಿ**

**ಶ್ರೀ ಎಸ್.ಆರ್. ಪಾಟೀಲ್(ಮುಂದು):**

ನಿಮ್ಮಲ್ಲಿ ಬಹಳ coordination ಇರುವಂತಹ ಐದಾರು ಇಲಾಖೆಗಳಿವೆ. ಅವುಗಳನ್ನೆಲ್ಲಾ ಕ್ರೋಢೀಕರಣ ಮಾಡಿ ಸಮನ್ವಯ ಸಾಧಿಸುವಂತಹ ಜವಾಬ್ದಾರಿ ಕೂಡ ನಿಮ್ಮ ಮೇಲಿದೆ. ಒಂದು 'New Mining Policy' ತರುತ್ತೇನೆ ಎಂದು ಹೇಳಿದ್ದೀರಿ. ಅದು ಒಳ್ಳೆಯ ವಿಚಾರವಾಗಿದೆ. 5 ವರ್ಷಗಳ ಮಟ್ಟಿಗೆ ಒಂದು 'New Mining Policy' ತಂದರೆ ಅದು ಹೇಗೆ Industrial Sector ಗೆ ಹೊಸ ಪಾಲಿಸಿ ಬರುತ್ತದೆಯೋ ಆ ರೀತಿ ಮೈನಿಂಗ್ ವಿಷಯದಲ್ಲಿ ಹೊಸ ಪಾಲಿಸಿ ತರುವಂತಹದ್ದು ಒಳ್ಳೆಯ tradition ಆಗಿದೆ. I welcome it. ಆಮೇಲೆ ಈ ಲೈಸೆನ್ಸ್ ತೆಗೆದುಕೊಳ್ಳುವುದಕ್ಕೆ ಸರಳೀಕರಣ ಮಾಡುವುದು ಬಹಳ ಮಹತ್ವದ್ದು. ಈ ಲೈಸೆನ್ಸ್ ತೆಗೆದುಕೊಳ್ಳುವುದರಲ್ಲಿಯೇ ಎಷ್ಟೋ ಮಂದಿ ಹಾಳಾಗಿ ಮುಂದೆ ಇದರ ಉಸಾಬರಿ ಬೇಡವೇ ಬೇಡವೆಂದು ಬಹಳಷ್ಟು ಜನರು ಅದರ ಗೋಜಿಗೇ ಹೋಗುವುದಿಲ್ಲ. ಅಲ್ಲಿ no objection ತೆಗೆದುಕೊಂಡು ಬಾ, ಇಲ್ಲಿ ತೆಗೆದುಕೊಂಡು ಬಾ ಎಂದು ಇಲಾಖೆಗಳಲ್ಲಿ ಅಡ್ಡಾಡಿ ಆ ಮೈನಿಂಗ್ ಮಾಡಬೇಕು ಎಂಬಂತಹ ವ್ಯಕ್ತಿ ಆ ಗೋಜಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರ...

ಹೋಗಲಾರದೇ illegal mining ಗೆ ಹೋಗುತ್ತಾನೆ. ಅದನ್ನು ನೀವು ಸರಳೀಕರಣಗೊಳಿಸಿದರೆ ಬೇಗನೇ ಅವರಿಗೆ ಲೈಸೆನ್ಸ್ ಸಿಗುವಂತಹ ವ್ಯವಸ್ಥೆ ಆಗುತ್ತದೆ. ಈಗ ನೀವು ಹೇಳಿದ್ದೀರಿ, ಮಂಗಳೂರಿನಲ್ಲಿ ಒಬ್ಬನೇ ಇದ್ದಾನೆ. Ask him to delegate powers to the concerned Deputy Commissioner. ಅಂದರೆ ಆ ಜಿಲ್ಲಾಧಿಕಾರಿ ಹಾಗೂ Superintendent of Police ಗೆ power delegate ಮಾಡುವಂತಹ ಒಂದು ವ್ಯವಸ್ಥೆ ಮಾಡಿ, ಅದು ಸರಳೀಕರಣವಾಗುತ್ತದೆ. ನೋಡಿ ನೀವು ಯಾವುದು ಸರಿ ಎನಿಸುತ್ತದೆ ನೋಡಿ. ಆಮೇಲೆ ನಿಮ್ಮ ಚಿಂತನೆ 'Single Window Agency' ಮಾಡುವಂತಹದ್ದು, it is also good work. ಆಮೇಲೆ 5 'Mining Adalat' ಮಾಡುತ್ತೇವೆಂದು ಹೇಳುತ್ತಾರೆ. 5 'Mining Adalat' ಮಾಡಿದರೆ division-wise ಮಾಡಬೇಕು. ಒಂದು coastal line ನವರಿಗೆ ನಮ್ಮ ಸಭಾನಾಯಕರು ಜಿಲ್ಲೆಗೆ ಸಂಬಂಧಪಟ್ಟಂತೆ ವಿಶೇಷವಾಗಿ ಮಾಡಿಕೊಡುತ್ತೇನೆ ಎಂದಿದ್ದೀರಿ, ಒಳ್ಳೆಯದು. ನಾವೂ ಕೂಡ ಅದನ್ನು ಸ್ವಾಗತ ಮಾಡುತ್ತೇವೆ. It is a Joint Venture.

**ಉಪ ಸಭಾಪತಿಯವರು:** ಅದರ ಜೊತೆಗೆ Joint Constituency ಮತ್ತು ಇಬ್ಬರೂ ಬಾರಿ ಆತ್ಮೀಯರು, ಬಾರೀ friend.

**ಶ್ರೀ ಎಸ್.ಆರ್.ಪಾಟೀಲ್:** ಆಮೇಲೆ School of Mining ಬಗ್ಗೆ ಹೇಳಿದರು. Mining University ಮಾಡುವ ಬಗ್ಗೆ ಹೋದ ಸಲ ಸಹ ನೀವು ಹೇಳಿದ್ದೀರಿ. ಮತ್ತೆ ಈ ಬಾರಿ Mining University ಮಾಡುವುದಕ್ಕಿಂತ ಮೊದಲು School of Mining ಮಾಡುತ್ತೇವೆಂದು ಹೇಳಿದ್ದೀರಿ. ಆಗ ಇವು quick ಆಗಿ implement ಆಗುವುದಕ್ಕೆ ಅನುಕೂಲವಾಯಿತು. School of Mining ಆದ ನಂತರ Mining University ಆಗುತ್ತದೆ. ಆಮೇಲೆ online licensing system introduce ಮಾಡಿದರು. ಮತ್ತೆ 10 ಲಕ್ಷ ರೂಪಾಯಿಗಳಿಗಿಂತ ಕಡಿಮೆ ವೆಚ್ಚದ ಮನೆ ಕಟ್ಟಿಸಿಕೊಳ್ಳುವಂತಹ ಜನರಿಗೆ ಉಚಿತವಾಗಿ ಉಸುಕು ಕೊಡುವಂತಹದ್ದನ್ನು, you are going to implement it. ಇದು ನಿಮ್ಮ ಚಿಂತನೆಯಲ್ಲಿದೆ. ಚಿಂತನೆಗಳು ಬಹಳ ಸುಂದರವಾಗಿವೆ, ಬಹಳ attractive ಆಗಿ ಇವೆ. ಇವೆಲ್ಲದಕ್ಕಿಂತ ಒಂದು commitment ಏನಿದೆ ಎಂದರೆ; ನೀವು ಹೇಳಿದ್ದೀರಲ್ಲಾ, ಭ್ರಷ್ಟಾಚಾರಕ್ಕೆ ಹೊಣೆಯಾಗುತ್ತೇನೆ ಎಂದು ಏನು ಹೇಳಿದ್ದೀರಲ್ಲಾ, ಅದನ್ನು ನಾನಂತೂ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈಯುಕ್ತಿಕವಾಗಿ ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ. ನಿಮ್ಮ ಎಲ್ಲಾ ಚಿಂತನೆಗಳು ಅತ್ಯುತ್ತಮವಾದಂತಹ ಚಿಂತನೆಗಳಾಗಿವೆ, ನಿಮ್ಮ ಇಲಾಖೆಗೆ ಹೆಸರು ಬರುವಂತಹ ಚಿಂತನೆಗಳಾಗಿವೆ. Legal mining ಮಾಡುವಂತಹವರಿಗೆ ಕೂಡ ಅನುಕೂಲವಾಗುವಂತಹದ್ದು ಹಾಗೂ end user ಗೆ ಬೇಗನೇ ಕಡಿಮೆ ಬೆಲೆಯಲ್ಲಿ ಈ mining material ಅಂದರೆ ಜೆಲ್ಲಿಯಿರಬಹುದು, ಉಸುಕು ಇರಬಹುದು, ಇಂತಹ ವಿಚಾರಗಳಲ್ಲಿ ನೀವು ಬಹಳ ಚಿಂತನೆ ಮಾಡಿದ್ದೀರಿ. ಅದಕ್ಕೆ ನಾನು ಸ್ವಾಗತ ಮಾಡುತ್ತೇನೆ.

ಕೊನೆಗೆ ಸದನದಲ್ಲಿ ಒಂದೇ ಒಂದು ಮಾತನ್ನು ಹೇಳಬಯಸುತ್ತೇನೆ. ಸದನದಲ್ಲಿ off the record or on the record ಇರುವುದಿಲ್ಲ. Whatever you speak, it will go on record. ಇಲ್ಲದಿದ್ದರೆ ಅವರು ಕೇಳಿಬಿಡುತ್ತಾರೆ. ನಾಳೆ ಎಲ್ಲಿಯೋ ಪ್ರೆಸ್‌ಗೆ ಹೋದಾಗ off the record ಎನ್ನಬಹುದು. ಅದಕ್ಕೆ ನಿಮಗೆ ಒಂದು ಸಲಹೆ ಕೊಟ್ಟಿದ್ದೇನೆ.

ಮಾನ್ಯ ಸಭಾಪತಿಯವರೆ, ಈ 6 ಸಾವಿರ ಕೋಟಿ ರೂಪಾಯಿಗಳ ದಂಡ ಏನಿದೆ, ಅದನ್ನು ನೀವು ವೈಜ್ಞಾನಿಕವಾಗಿ ಕಾನೂನುಬದ್ಧವಾಗಿ ಮನ್ನಾ ಮಾಡುವಂತಹ ವಿಚಾರವಿದೆ. It should not be a political decision. ಅದು ಎಲ್ಲರಿಗೂ ನ್ಯಾಯಸಮ್ಮತವಾಗಿ ಅದರ ಲಾಭ ಸಿಗಬೇಕು. ಈಗ ನೀವು ಹೇಳಿದ್ದೀರಿ. Drone Camera ನಿಂದ ಸರ್ವೆ ಮಾಡುತ್ತಾರೆ, ಎಷ್ಟು excavated material ಇದೆ, ಅಲ್ಲಿ volume calculate ಮಾಡಿ ಅದರಲ್ಲಿ waste material ಇರಬಹುದು, useful material ಇರಬಹುದು, ಆಮೇಲೆ unnecessary ಯಾಗಿ ಒಂದು ಎಕರೆಗೆ ರೂ.80 ಕೋಟಿ penalty ಹಾಕುವುದು, is it reasonable? It is most unscientific. ಅಂತಹದ್ದಕ್ಕೆ ಹೆಚ್ಚುವರಿ ದಂಡ ಹಾಕಿ ಏನೋ ಒಂದು ದುರುದ್ದೇಶದಿಂದಲೂ ಆಗಿರಬಹುದು. ಅವರ ಮಾತುಕತೆಯಲ್ಲಿ ವಿಫಲವಾಗಿದ್ದು ಕೂಡ ಆಗಿರಬಹುದು, ಅದಕ್ಕೆ ನೀವು ಏನು 6 ಸಾವಿರ ಕೋಟಿ ರೂಪಾಯಿಗಳನ್ನು ಮನ್ನಾ ಮಾಡುವಂತಹ ವಿಚಾರದಲ್ಲಿ ನೀವು ವೈಜ್ಞಾನಿಕವಾಗಿ ಕಾನೂನುಬದ್ಧವಾಗಿ ಎಲ್ಲರಿಗೆ ಸರಿಸಮಾನವಾಗಿ ಅದರ ಲಾಭ ತಲುಪುವಂತೆ ಮಾಡಬೇಕು. Unnecessary ಯಾಗಿ ಏನು implicate ಮಾಡಿರುತ್ತಾರೆ, excess penalty impose ಮಾಡಿರುತ್ತಾರೆ, ಅದು ಆಗಲಾರದ ಹಾಗೆ ನ್ಯಾಯಬದ್ಧವಾಗಿ reasonable ಆಗಿ ಅದನ್ನು ನೀವು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನ್ನಾ ಮಾಡುವಂತಹ ವಿಚಾರ ಇಟ್ಟುಕೊಳ್ಳಬೇಕು ಎಂದು ಅವರು ಹೇಳುವುದಕ್ಕೆ ಹೊರಟಿದ್ದಾರೆ. ಮಾನ್ಯ ಸುನೀಲ್ ವಲ್ಯಾಪುರೆರವರು shabad stone ಬಗ್ಗೆ ಮತ್ತು ಅಲ್ಲಿ ಕೆಲಸ ಮಾಡುವಂತಹ ಜನಾಂಗದ ಬಗ್ಗೆ ಹೇಳಿದರು. ಆ ಜನಾಂಗದವರು ಬಹಳ ಆತ್ಮೀಯರು. ನನಗೂ ಕೂಡ ಅಂತಹ ಮನವಿಗಳು ಬಹಳ ಕಡೆಗಳಲ್ಲಿ ಬಂದಿವೆ. ಇವತ್ತು ಉದ್ಯೋಗ ನಿಂತು ಹೋಗಿದೆ. ಶ್ರಮಸಂಸ್ಕೃತಿಯಿಂದ ಬಂದಂತಹವರು ನೀವು. ಆ ಕಲ್ಲಿನ ಜೊತೆಗೆ ಹೋರಾಟ ಮಾಡುವಂತಹವರು, ಅಂತಿಂತಹವರಿಗೆ ನೀಗುವುದಿಲ್ಲ. ಅಂತಹವರ ಬಗ್ಗೆ ಸಹಾನುಭೂತಿ ಇರಲಿ. ಅವರಿಗೆ ಏನಾದರೂ provision ಮಾಡಿ ಎಂದು ಏನು ಹೇಳಿದ್ದಾರೆ, ಅದಕ್ಕೆ ನಾನು ಧ್ವನಿಗೂಡಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:** ಈಗ ಆಯವ್ಯಯ ಅಂದಾಜುಗಳ ಮೇಲೆ ಚರ್ಚೆ ಪ್ರಾರಂಭವಾಗುತದೆ. ಈಗ ನನಗೆ ಚೀಟಿ ಕೊಟ್ಟವರೆಲ್ಲಾ ಬೆಳಗ್ಗೆ ಮಾತನಾಡುತ್ತೇನೆ ಎಂದು ಹೇಳಿದರೆ ಹೇಗೆ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಇವತ್ತು ಬೆಳಿಗ್ಗೆ 10.30 ಗಂಟೆಗೆ ಸದನ ಪ್ರಾರಂಭವಾಗಿದೆ. ಅದಕ್ಕೆ ದಯವಿಟ್ಟು ಆಯವ್ಯಯದ ಮೇಲಿನ ಚರ್ಚೆಯನ್ನು ನಾಳೆ ಬೆಳಿಗ್ಗೆ ಪ್ರಾರಂಭ ಮಾಡಿದರೆ ಒಳ್ಳೆಯದು ಎಂಬುದು ನನ್ನ ಭಾವನೆಯಾಗಿದೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೆ, School of Mining, Mining University ಮಾಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ ಕಲ್ಲು ಒಡೆಯುವವರು, ಕಾರ್ಮಿಕರು ಈಗಾಗಲೇ ಊರು ಬಿಟ್ಟು ಅವರ ಜಾಗಗಳನ್ನು ಬಿಟ್ಟು ವಲಸೆ ಹೋಗುತ್ತಿದ್ದಾರೆ. ಅವರ ಬಗ್ಗೆ ಕೂಡ ಮಾನ್ಯ ಸಚಿವರು ಚಿಂತನೆ ಮಾಡಬೇಕಾಗಿದೆ ಎಂದು ತಮ್ಮ ಮುಖಾಂತರ ಹೇಳುತ್ತೇನೆ.

**ಉಪ ಸಭಾಪತಿಯವರು:** ಈಗ ಬಜೆಟ್ ಮೇಲೆ ಚರ್ಚೆಯೇ ಆಗಿಲ್ಲ. ಕೇವಲ ಮೂವರು ಸದಸ್ಯರಷ್ಟೇ ಚರ್ಚೆ ಮಾಡಿದ್ದಾರೆ.

**ಶ್ರೀ ಸುನೀಲ್ ವಲ್ಯಾಪುರ್:-** ಸಚಿವರು ಉತ್ತರವನ್ನೇ ಕೊಟ್ಟಿಲ್ಲ.

**ಉಪ ಸಭಾಪತಿಯವರು :** ವಿರೋಧ ಪಕ್ಷದ ನಾಯಕರೇ ನಿಮ್ಮ ಬಗ್ಗೆ ಅವರಿಗೆ ಖಾತ್ರಿ ಕೊಟ್ಟಿದ್ದಾರೆ. ನೀವು ಅವರಿಗೆ ಇನ್ನು ಏನು ಹೇಳುವ ಅವಶ್ಯಕತೆಯಿದೆ ಎಂದು ನನಗೆ ಅನಿಸುತ್ತಿಲ್ಲ. ಹಾಗಾಗಿ ನಾನು ಹೇಳುತ್ತಿರುವುದು ಇಷ್ಟೆ, ಪ್ರತಿಯೊಬ್ಬರೂ ನಿಮಗೆ ಅಭಿನಂದನೆ ಹೇಳಿಬಿಟ್ಟಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:** ಶಿವಮೊಗ್ಗದಲ್ಲಿ damages ಆಗಿದ್ದವಲ್ಲಾ; ಅದಕ್ಕೆ ಪರಿಹಾರ ಕೊಡುವ ಬಗ್ಗೆಯೂ ಸಹಿತ ನಿಮ್ಮ ಉತ್ತರದಲ್ಲಿ ಹೇಳಿಬಿಡಿ.

**ಶ್ರೀ ಮುರುಗೇಶ್ ಆರ್.ನಿರಾಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಶಾಸಕರುಗಳು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಹೇಳುತ್ತೇನೆ. ಮಾನ್ಯ ಹರೀಶ್ ಕುಮಾರ್ ಸರ್‌ರವರು ಕೇಳಿದ್ದಕ್ಕೆ ಹೇಳುತ್ತೇನೆ. ಈಗಾಗಲೇ 1,253 ಪ್ರಕರಣಗಳ ಬಗ್ಗೆ ತೆಗೆದುಕೊಂಡಿದ್ದಾರೆ. 324 ಪ್ರಕರಣಗಳು ಅಂದರೆ ಉಳಿದಿರುವಂತಹ 935 ಪ್ರಕರಣಗಳಿಗೆ **ರೂ.2,903** ಲಕ್ಷಗಳ ದಂಡವನ್ನು ಅವರಿಗೆ ಹಾಕಿದ್ದೇವೆ. ಅದು ಸಹ ಇದರಲ್ಲಿ ಬಂದಿದೆ ಅವರಿಗೆ ಪೆನಾಲ್ಟಿ ಹಾಕಿದ್ದೇವೆ. ಭ್ರಷ್ಟಾಚಾರದ ಬಗ್ಗೆ ನನಗೇ ಬಹಳ ಬೇಜಾರು ಆಗಿರುವುದರಿಂದ ದಯವಿಟ್ಟು ತಾವು ಹೋದಾಗ ತಮ್ಮ ತಮ್ಮ ಜಿಲ್ಲೆಗಳಲ್ಲಿ Mining Association, Sand Association ಏನಿವೆಯೆಲ್ಲಾ, ಅವರ ಅಧ್ಯಕ್ಷರುಗಳನ್ನು ನಾನು ಕರೆಸಿದ್ದೇನೆ, ನಾನೇ ಖುದ್ದಾಗಿ ಫೋನ್ ಮಾಡಿ ಹೇಳಿದ್ದೇನೆ. ದಯವಿಟ್ಟು ಇವರೇ ಅಲ್ಲಿ ಲಂಚ ಕೊಡಲಾರದ ಹಾಗೆ ನೋಡಿಕೊಂಡರೆ ನಾನು ಬೇಕಾದರೆ ನೇರವಾಗಿ ನನ್ನ ಮೊಬೈಲ್ ನಂಬರ್ ಕೊಡುತ್ತೇನೆ. ನನ್ನ ಮೊಬೈಲ್ ನಂಬರ್ ಸಿಗಲಿಲ್ಲವೆಂದರೆ ಇನ್ನೊ ಎರಡು ನಂಬರ್ ಕೊಡುತ್ತೇನೆ. ನಮ್ಮ ಆಫೀಸ್‌ನಲ್ಲಿ full time Help Desk ನಲ್ಲಿ ಅವರು ಕುಳಿತಿರುತ್ತಾರೆ. ನಿಮ್ಮ ಅಧಿಕಾರಿಗಳು ಇಂತಿಂತಹ ಕೆಲಸದ ಸಲುವಾಗಿ ಇಂತಿಷ್ಟು ದುಡ್ಡು ಕೇಳುತ್ತಿದ್ದಾರೆ ಎಂದು ಅವರು ಹೇಳಿದ ತಕ್ಷಣ immediate ಆಗಿ ಅವರಿಗೆ warning ಮಾಡಿ ಅವರ ಮೇಲೆ ಕ್ರಮ ತೆಗೆದುಕೊಂಡು ಸಂಬಂಧಪಟ್ಟವರಿಗೆ ಫೋನ್ ಮಾಡಿ ಹೇಳುವಂತಹದ್ದನ್ನು ಮಾಡುತ್ತೇವೆ. ಇದರಿಂದ ತಮ್ಮಿಂದ ಕೂಡ ಸಹಾಯವಾಗುತ್ತದೆ. ಮತ್ತೆ ಇನ್ನೊಂದು DMF (District Mineral Fund) ಸಲುವಾಗಿ ಈಗ ಬೆಳಗ್ಗೆ ತಾವು ಮಾತನಾಡುವಾಗ ಹೇಳಿದ್ದೀರಿ. ನಮ್ಮ  ವಿಧಾನ ಪರಿಷತ್‌ನ ಸದಸ್ಯರುಗಳಿಗೆ ಎಲ್ಲೆಲ್ಲಿ ಯಾವ್ಯಾವ ಜಿಲ್ಲೆಗಳಲ್ಲಿ representation ಇರುತ್ತದೆ, ಅವರೆಲ್ಲರಿಗೂ ಕೊಡಬೇಕೆಂದು ಹೇಳಿದ್ದಾರೆ. ಅದನ್ನು ನಾನು ಸೇರಿಸುತ್ತೇನೆ. ಹೊಸದಾಗಿ ತಿದ್ದುಪಡಿ ಮಾಡುವಂತಹದ್ದರಲ್ಲಿ ಸೇರಿಸುತ್ತೇನೆ. ನೀವಾದರೂ ಸಹಿತ ಆ ಜಿಲ್ಲೆಗೆ ಕರೆಸಿ ಮಾಡಬೇಕಾಗುತ್ತದೆ. ಉಳಿದಂತಹ ಶಾಸಕರು ಆದರೂ ಕೂಡ ಅಲ್ಲಿಯೇ ಮಾಡುತ್ತಾರೆ. ಅದರಲ್ಲಿ ಇನ್ನೊಂದು ಲೈನ್ ನಿಮ್ಮದು ಒಂದು ಸೇರಿಸಿದರೆ ಅದು ನಮಗೆ ಏನೂ ಕಷ್ಟವಾಗುವುದಿಲ್ಲ. ಅದನ್ನು ಬರುವಂತಹ ದಿನಗಳಲ್ಲಿ ನಾನು ಮಾಡಿಸುತ್ತೇನೆ. ಎರಡನೆಯದಾಗಿ,_ ಸರ್ ಹೇಳಿದ ಹಾಗೆ ಶಿವಮೊಗ್ಗದಲ್ಲಿ ಬಿರುಕು ಬಿಟ್ಟಂತಹ ಮನೆಗಳಿಗೆ ಆ District Mineral Fund ಅನ್ನು ಅದಕ್ಕೆ ಉಪಯೋಗ ಮಾಡುವುದಕ್ಕೆ ಬರುವುದಿಲ್ಲ. ನಾನು ಚೆಕ್ ಮಾಡುತ್ತೇನೆ. ಅದಕ್ಕೇ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಂತಹ guidelines ಇದೆ. ಯಾವ್ಯಾವ ಕೆಲಸಕ್ಕೆ District Mineral Fund ಉಪಯೋಗ ಮಾಡಬೇಕು ಎನ್ನುವಂತಹದ್ದು ಇದೆ. ಅದನ್ನು revise ಮಾಡಿ ಇದನ್ನು ಒಂದನ್ನು ಸೇರಿಸುವುದಕ್ಕೆ ಆ ಕಮಿಟಿಗೆ ಸಾಧ್ಯವಾಗುತ್ತದೆ ಎಂದರೆ, ನಾನು ಅದನ್ನು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡುತ್ತೇನೆ. ಇನ್ನೊಂದು ವಿಶೇಷವೇನೆಂದರೆ, District Mineral Fund ನಲ್ಲಿ ಈ ಹಿಂದೆ ಮಾಡಿದ್ದರಲ್ಲಿ Mines and Geology Minister ಹೆಸರೇ ಇಲ್ಲ, ಅದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿರುತ್ತಾರೆ, ಎಲ್ಲಾ ಶಾಸಕರು ಅದಕ್ಕೆ ಸದಸ್ಯರಿರುತ್ತಾರೆ, Deputy Commissioner and Superintendent of Police ಯವರು ಸಹ ಇದರಲ್ಲಿ ಇರುತ್ತಾರೆ. ಇನ್ನೊಂದು ತಮ್ಮದನ್ನೂ ಸೇರಿಸಿ major minerals ನವರು ಒಬ್ಬರು ಹಾಗೂ minor minerals ನವರು ಒಬ್ಬರು ಅವರೂ ಸಹಿತ ಆ ಜಿಲ್ಲೆಯವರಾಗಿದ್ದು ಅವರೂ ಸಹಿತ ಆ ಕಮಿಟಿಗೆ ಸದಸ್ಯರಾಗಬೇಕು, ಏಕೆಂದರೆ, ಅವರ ಕಡೆಯಿಂದಲೇ royalty ಬಂದಿರುತ್ತದೆ. ಅವರು ಒಂದು ಸಲಹೆ ಕೊಟ್ಟರು ಎಂದರೆ, ಇಲ್ಲಿ ರಸ್ತೆ damage ಆಗಿರುವಂತಹದ್ದು ಇರಬಹುದು, ಕುಡಿಯುವ ನೀರಿನದಿರಬಹುದು ಅಥವಾ ಶಾಲೆಯದಿರಬಹುದು, ಅದನ್ನು ನಾನು ಹೇಳಿಕೊಳ್ಳುವುದಾಗುವುದಿಲ್ಲ. ಅದನ್ನು ಈ ರೀತಿಯಾಗಿ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ನೀವು ನಮ್ಮನ್ನು ಸೇರಿಸುತ್ತಿದ್ದೀರಿ, ಅದರಲ್ಲಿ ನಿಮ್ಮನ್ನು ಸೇರಿಸಿಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಅವರು ಜಿಲ್ಲಾ ಉಸ್ತುವಾರಿ ಮಾಡಿರುವುದರಿಂದ ಅಷ್ಟು ಕಡಿಮೆ ಕೆಲಸವಾಗುತ್ತದೆ. ಮತ್ತೊಂದು ಕೆಲಸ ಮಾಡುವುದಕ್ಕೆ ಅವಕಾಶ ಸಿಗುತ್ತದೆ. 30 ಜಿಲ್ಲೆಗಳಿಗೆ ನಾನು ಅಧ್ಯಕ್ಷನಾಗಿದ್ದೇನೆ ಎಂದರೆ, 30 ಜಿಲ್ಲೆಗಳಿಗೆ ಹೋಗಬೇಕಾಗುತ್ತದೆ.

(ಗೊಂದಲ)

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ನೀವು Honorary Chairman ಆದರೂ ಆಗಿರಬೇಕು. ನಿಮ್ಮ knowledge ಗೇ ಬರಬೇಕಲ್ಲವೇ? ನೀವೇ ಸಚಿವರಾಗಿ DMF fund ಯಾವುದಕ್ಕೆ ಖರ್ಚಾಗಿದೆ ಎಂದು ಗೊತ್ತಾಗದಿದ್ದರೆ ಹೇಗೆ ಆಗುತ್ತದೆ? ಅದಕ್ಕೆ atleast Honorary Chairman ಎಂದಾದರೂ ಮಾಡಿಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರುಗೇಶ್ ಆರ್.ನಿರಾಣಿ:-** ನಾನೇ ಇಲಾಖೆಯಲ್ಲಿರುವುದರಿಂದ ನಾನು Chairman ಆಗಿ Co-chairman ಎಂದು ಉಸ್ತುವಾರಿ ಮಂತ್ರಿ ಮಾಡಬಹುದು. ನಾಲ್ಕು ವರ್ಷದಲ್ಲಿ ರೂ.1,700 ಕೋಟಿಗಳು ಉಳಿದಿದೆ. Atleast ಮಾರ್ಚ್‌ನಲ್ಲಿ ಒಂದು ಟೆಂಡರ್ ಆಯಿತು ಎಂದರೆ ಅಷ್ಟು ವರ್ಕ್ ಅಂದರೆ ಆ ಜಿಲ್ಲೆಯಲ್ಲಿ ಅಷ್ಟು ಕೆಲಸ ನಡೆಯುತ್ತದೆ. ಸರ್ ಇನ್ನೊಂದು ಬಹಳ ಮಹತ್ವದ್ದು ಹೇಳುತ್ತೇನೆ. ರೂ.18,000 ಕೋಟಿಗಳು ನಮ್ಮ ಇಲಾಖೆಯಿಂದ royalty collect ಆಗುತ್ತದೆ.

**(440) 16.03.2021 06.30 ಎಸ್‌ವಿ-ಎಕೆ**

**ಶ್ರೀ ಮುರುಗೇಶ್ ಆರ್. ನಿರಾಣಿ (ಮುಂದು):-**

ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರಿನಲ್ಲಿ ಸಂಗ್ರಹವಾದಂತಹ ಸುಮಾರು ರೂ.18,000 ಕೋಟಿಯ ವಿಷಯ ಸರ್ವೋಚ್ಚ ನ್ಯಾಯಾಲಯದಲ್ಲಿದೆ. ಇದರ ಸಲುವಾಗಿ ಈಗಾಗಲೇ ನಾನು ಎರಡು ಬಾರಿ ದೆಹಲಿಗೆ ಹೋಗಿ ಬಂದಿದ್ದು, ಹಿರಿಯ ವಕೀಲರಿಗೆ ಈ ಪ್ರಕರಣದಲ್ಲಿ attend ಮಾಡುವಂತೆ ಹೇಳಿದ್ದೇನೆ. ನಮ್ಮ ರಾಜ್ಯದ ಅಡ್ವೊಕೇಟ್ ಜನರಲ್‌ರವರ ಹಾಗೂ ಕೇಂದ್ರ ಸಚಿವರ ಸಹಾಯವನ್ನು ಪಡೆದಿದ್ದೇನೆ. ಆ ಹಣವು ಇನ್ನು ಮೂರ್ನಾಲ್ಕು ತಿಂಗಳುಗಳಲ್ಲಿ ಬಂದರೆ ರೂ.25,000 ಕೋಟಿಗಳ ಕ್ರಿಯಾ ಯೋಜನೆಯನ್ನು ರೂಪಿಸಲಾಗುವುದು. ಪ್ರತ್ಯೇಕವಾಗಿ ಈ ವಿಷಯವನ್ನು follow-up ಮಾಡಲು ಒಬ್ಬ ಅಧಿಕಾರಿಗೆ ಹೇಳಿದ್ದೇನೆ. ರೂ.18,000 ಕೋಟಿಗಳು implement ಆಗಬೇಕಾದರೆ ಕನಿಷ್ಟ ಮೂರರಿಂದ ನಾಲ್ಕು ವರ್ಷ ಬೇಕು. ರೂ.18,000 ಕೋಟಿಗಳಿಗೆ ಬಡ್ಡಿ ಎಲ್ಲಾ ಸೇರಿ ರೂ.25,000 ಕೋಟಿ ಆಗುತ್ತದೆ. ಅದು ನಮ್ಮದೇ ಹಣ. ಅದು ಸರ್ವೋಚ್ಚ ನ್ಯಾಯಾಲಯದಲ್ಲಿ ಬೇರೆ ಬೇರೆ ರೀತಿಯಿಂದ struck up ಆಗಿದೆ. ನಾವು ಸರಿಯಾದ ರೀತಿಯಿಂದ reply ನೀಡಿದರೆ ಆ ಹಣ ಬಿಡುಗಡೆಯಾಗುತ್ತದೆ. ಬಳ್ಳಾರಿ, ಚಿತ್ರದುರ್ಗ, ತುಮಕೂರು ಜಿಲ್ಲೆಗಳೊಂದಿಗೆ ಬಾಗಲಕೋಟೆ ಜಿಲ್ಲೆಯೂ ಸೇರಿದೆ. ಇದರಿಂದಾಗಿ ಈ ನಾಲ್ಕೈದು ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಅದನ್ನು ನಾವು ಖಂಡಿತ ಮಾಡುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್‌ರವರೇ, ಮೂರು-ಮೂರೂವರೆ ಗಂಟೆಗಳ ಸುದೀರ್ಘ ಕಾಲ ಆರೋಗ್ಯಕರವಾದಂತಹ ಚರ್ಚೆಯಾಗಿದೆ. ಕೊನೆಯದಾಗಿ ತಾವು ಮಾತನಾಡಿ ಮುಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶಿವಮೊಗ್ಗದಲ್ಲಿ ಅಕ್ರಮ ಗಣಿಗಾರಿಕೆ ನಡೆಸುವವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ? ಅಲ್ಲಿ ಇದುವರೆವಿಗೂ ಏನೂ ಕ್ರಮವಾಗಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಇಲಾಖೆ ತೆಗೆದುಕೊಂಡಿರುವುದರ ಬಗ್ಗೆ ನಮಗೆ ತಿಳಿದು ಬಂದಿಲ್ಲ. ಒಬ್ಬ ಪೊಲೀಸ್ ಅಧಿಕಾರಿಯು ತನ್ನ ಸ್ಟೇಷನ್ ಒಳಗೆ ಆ ಸ್ಫೋಟಕಗಳನ್ನು ಇಟ್ಟುಕೊಂಡಿದ್ದು, ಆತ ಅಪರಾಧಿಗಳನ್ನು ಬಿಟ್ಟು ಕಳುಹಿಸಿದ್ದನು ಎಂಬ ವಿಷಯವನ್ನು ಪ್ರಸ್ತಾಪ ಮಾಡಲಾಗಿತ್ತು. ಆ ಪೊಲೀಸ್ ಅಧಿಕಾರಿಯ ಮೇಲೆ ಏನೂ ಕ್ರಮವಾಗಿಲ್ಲ. ಒಂದು ಸ್ಫೋಟ ಅಷ್ಟು ಗಾಢ ಪರಿಣಾಮವನ್ನು ಬೀರಿ ಇಡೀ ರಾಜ್ಯವನ್ನು ನಡುಗಿಸಿರಬೇಕಾದರೆ ಆದರೂ ಗಣಿ ಇಲಾಖೆಯನ್ನು ಇನ್ನೂ ನಡುಗಿಸಿಲ್ಲವೇ ಎನ್ನುವ ಆತಂಕ ನನಗಿದೆ. ಅಲ್ಲಿರುವಂತಹ ಅಧಿಕಾರಿಗಳ ವಿರುದ್ಧ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಅಲ್ಲಿರುವ ವ್ಯಕ್ತಿ ಯಾರು ಎಂಬುದನ್ನು ನಾನು ಮಾನ್ಯ ಸಚಿವರಿಗೆ ಫೋಟೋ ಸಮೇತ ಕಳುಹಿಸಿ ಕೊಟ್ಟಿದ್ದೆನು. ಸದನದಲ್ಲಿ ಈ ವಿಷಯ ಪ್ರಸ್ತಾಪಗೊಂಡು ಇಷ್ಟು ಚರ್ಚೆಯಾದರೂ ಕೂಡ ಏನೂ ಆಗುವುದಿಲ್ಲ ಎನ್ನುವುದಾದರೆ ನಾವು ಇನ್ನು ಚರ್ಚೆ ಮಾಡದಿರುವುದು ಒಳ್ಳೆಯದೇನೋ, ಅವರು ಈ ಸದನಕ್ಕಿಂತ ಬಲಾಢ್ಯರೇನೋ ಎನ್ನುವ ಒಂದು ಸಂಶಯ ನನಗೆ ಬರುತ್ತಿದೆ. ಕೊಡಬೇಕಾದ ಪರಿಹಾರವನ್ನು ಕೊಡಲಿ. ಬಾಕಿ ಕ್ರಮಗಳನ್ನು ಮಾನ್ಯ ಸಚಿವರು ತೆಗೆದುಕೊಳ್ಳಲಿ. ತಪ್ಪು ಮಾಡಿದವರಿಗೆ ದಂಡನೆಯನ್ನು ವಿಧಿಸದಿದ್ದರೆ ಈ ರೀತಿಯ ಮತ್ತೊಂದು ಪ್ರಕರಣ ಮರುಕಳಿಸುತ್ತದೆ. ಹಾಗಾಗಿ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ? ಕ್ರಮ ತೆಗೆದುಕೊಳ್ಳದಿದ್ದರೆ ಯಾವಾಗ ತೆಗೆದುಕೊಳ್ಳಲಾಗುತ್ತದೆ ಎಂಬುದನ್ನು, ಶಿಜಖಿಜಿಖಿ ಆಗಿ ಉತ್ತರಿಸಬೇಕೆಂದು ಮಾನ್ಯ ಸಚಿವರನ್ನು ಕೋರುತ್ತೇನೆ.

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ಶಹಾಬಾದ್ ಕಲ್ಲಿನ ಬಗ್ಗೆ ಮಾನ್ಯ ಸಚಿವರು ಸ್ಪಷ್ಟನೆ ನೀಡಲಿಲ್ಲ. ಶಹಾಬಾದ್ ಕಲ್ಲು ಮತ್ತು ರಾಜಧನದ ಬಗ್ಗೆ ಕೂಡ ಹೇಳಲಿಲ್ಲ. ಇದು ಅತ್ಯಂತ ಕಡು ಬಡವರ ಸಮಸ್ಯೆ. ಶ್ರೀಮಂತರು ಯಾರೋ ಪಾಟೀಲರು, ಕುಲಕರ್ಣಿಯವರು ನಡೆಸುತ್ತಾರೆ. ಕ್ರಷರ್ ಅನ್ನೂ ನಡೆಸುತ್ತಾರೆ. ಗ್ರಾನೈಟ್ ಕ್ವಾರಿಯನ್ನೂ ನಡೆಸುತ್ತಾರೆ. ಅದನ್ನು ಕೂಲಿ ಕಾರ್ಮಿಕರಿಂದಲೇ ನಡೆಸಬೇಕು. ಆ ಕೂಲಿ ಕಾರ್ಮಿಕರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. Minor Minerals ನಲ್ಲಿ ಶಹಾಬಾದ್ ಕಲ್ಲನ್ನೂ ಸೇರಿಸಿದ್ದಾರೆ. Minor Minerals ನಲ್ಲಿ ಗ್ರಾನೈಟ್‌ನೊಂದಿಗೆ ಶಹಾಬಾದ್ ಕಲ್ಲು ಕೂಡ ಬರುತ್ತದೆ. ಶಹಾಬಾದ್ ಕಲ್ಲು ರೂ.10ಕ್ಕೆ ಸಿಕ್ಕಿದರೆ, ಗ್ರಾನೈಟ್ ರೂ.1000ಕ್ಕೆ ದೊರೆಯುತ್ತದೆ. ಇವೆರಡಕ್ಕೂ ವ್ಯತ್ಯಾಸವಿದೆ. ಅದಕ್ಕೂ ಅಷ್ಟೇ ರಾಜಧನ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೂ ಅಷ್ಟೇ ರಾಜಧನ. ಟೆಂಡರ್‌ಗಳನ್ನು ಕರೆದು ಕೇವಲ ಸಿವಿಲ್ ಕಾಮಗಾರಿಗಳಿಗೆ ನೀಡುವುದಲ್ಲ. DMF (District Mineral Foundation) ನಲ್ಲಿ ಕೂಲಿ ಕಾರ್ಮಿಕರಿಗೆ ಹೆಚ್ಚಿನ ಅನುದಾನವನ್ನು ನೀಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸುನೀಲ್ ವಲ್ಯಾಪುರ್ ಅವರೇ, ತಾವು ಮಾನ್ಯ ಭಾರತಿ ಶೆಟ್ಟಿಯವರ ಬಳಿಗೆ ತೆರಳಿ ಮಾತನಾಡುತ್ತಿದ್ದಾಗ ಮಾನ್ಯ ಸಚಿವರು ಉತ್ತರವನ್ನು ಕೊಟ್ಟರು. ಮಾನ್ಯ ಸಭಾಪತಿಯವರು ತಮ್ಮನ್ನು ಕರೆದು, ನಿಮ್ಮ ಪ್ರಶ್ನೆಗೆ ಉತ್ತರ ಕೊಡುತ್ತಿದ್ದಾರೆಂದು ಹೇಳಿದರು.

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ ಹಾಗೂ ಮಾನ್ಯ ವಿರೋಧಪಕ್ಷದ ನಾಯಕರೇ, ನೀವು ಒಪ್ಪಿಗೆಯನ್ನು ನೀಡಿದರೆ ಬಜೆಟ್ ಮೇಲಿನ ಚರ್ಚೆಯನ್ನು ಪ್ರಾರಂಭಿಸೋಣ. ಏಳು ಗಂಟೆಯವರೆಗೆ ಸದನವನ್ನು ನಡೆಸಬೇಕೆಂದು ಇದೆ. ನಿಮ್ಮ ಅಭಿಪ್ರಾಯಗಳೇನು?

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಸದನ ಹೆಚ್ಚು ಕಾಲ ನಡೆಯಲಿ ಎಂದು ಹೇಳುತ್ತೇವೆ. ಆದರೆ ಅನೇಕ ಸದಸ್ಯರ ಅಭಿಪ್ರಾಯಗಳು ಸಕಾರಾತ್ಮಕವಾಗಿ ಇಲ್ಲ. ಕಾರ್ಯಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ಏಳು ಗಂಟೆಯವರೆಗೆ ಸದನವನ್ನು ನಡೆಸುವುದು ಎಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. You take a decision.

**ಉಪ ಸಭಾಪತಿಯವರು:-** ಸರಿ. ಮಾನ್ಯ ಪ್ರತಾಪ ಸಿಂಹ ನಾಯಕ್ ಅವರೇ, ಮಾತನಾಡಿ.

**ಶ್ರೀ ಪ್ರತಾಪ ಸಿಂಹ ನಾಯಕ್:-** ಮಾನ್ಯ ಸಭಾಪತಿಯವರೇ, ನಾಳೆ ಮಾತನಾಡುತ್ತೇನೆ.

**ಉಪ ಸಭಾಪತಿಯವರು:-** ಎಲ್ಲರೂ ಹೀಗೆಯೇ ಹೇಳಿದರೆ ಮತ್ತೇನು ಮಾಡುವುದು? ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 35 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ 17ನೇ ಮಾರ್ಚ್ 2021ರ ಬುಧವಾರದಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)**

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"